ಶ್ರೀ ಸಿದ್ಧಾಂತಶಿಖಾಮಣಿ ಪರಾಮರ್ಶೆ

ಗ್ರಂಥಕರ್ತರು :

ವಿದ್ಯಾವಾಚಸ್ಪತಿ
ಶ್ರೀಮತ್ ಕಾಶೀಜ್ಞಾನಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು
ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು
ಜಂಗಮವಾಡಿಮಠ, ವಾರಣಾಸಿ

ಮನಗೂಳಿ ಪಟ್ಟೀಕಂಥಿ ಹಿರೇಮಠದ ಪಟ್ಟಾಧ್ಯಕ್ಷರಾದ
ಷ.ಬ್ರ.ಶ್ರೀ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳ
ಪಟ್ಟಾಧಿಕಾರ ರಜತ ಮಹೋತ್ಸವ ಸವಿನೆನಪಿನ ಪ್ರಕಟಣೆ

ಪ್ರಕಾಶನ
ಷ.ಬ್ರ.ಶ್ರೀ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳವರ
ಪಟ್ಟಾಧಿಕಾರ ರಜತ ಮಹೋತ್ಸವ ಸಮಿತಿ
ಪಟ್ಟೀಕಂಥಿ ಹಿರೇಮಠ, ಮನಗೂಳಿ, ವಿಜಯಪುರ ಜಿಲ್ಲಾ
೨೦೧೭

Sree Siddhantashikhaamani Paraamarshe : Written by : His Holiness Jagadguru Dr. Chandrashekhara Shivacharya Mahaswamiji, Kashi Jnanasimhasana Peeth, Jangamawadi Math, Varanasi. Published by : Sha. Bra. Sri Dr. Mahantalinga Shivacharya Swamigalavara Pattaadhikara Rajata Mahotsava Samiti, Pattikanthi Hirematha, Managuli, Vijayapura District.

First Impression : 2017

Pages : xii + 184

Price : ₹ 125/-

Paper Used : 70 G.S.M Maplitho

Book Size : Demy 1/8

No. of Copies : 1000

Printed at :

Sathyasri Printers Pvt. Ltd.
16/1, 3rd Cross, 2nd Main Road
Kasturiba Nagar, Mysore Road
Bengaluru -560 026
Tel : 080-2674 8811
E-mail : satyasriprn@gmail.com

ಲೇಖಕರ ನುಡಿ

ಶ್ರೀ ಸಿದ್ಧಾಂತಶಿಖಾಮಣಿ ಪರಾಮರ್ಶೆ ಇದು ಕನ್ನಡಿಗರಿಗಾಗಿ ತಯಾರಿಸಿದ ಶ್ರೀ ಸಿದ್ಧಾಂತಶಿಖಾಮಣಿಯ ಸಿದ್ಧರಸಾಯನ. ಸಂಸ್ಕೃತ ಬಾರದೇ ಇರುವ ಪ್ರತಿಯೊಬ್ಬರೂ ಈ ಗ್ರಂಥದ ಅಧ್ಯಯನದಿಂದ ಶ್ರೀ ಸಿದ್ಧಾಂತಶಿಖಾಮಣಿಯ ಸರ್ವಸ್ವವನ್ನು ಸಹಜವಾಗಿ ಅರಿಯಬಹುದು. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಅಗಸ್ತ್ಯ ಮಹರ್ಷಿಗೆ ಬೋಧಿಸಿದ ಶಿವಾದ್ವೈತ ಸಿದ್ಧಾಂತವು ಈ ಗ್ರಂಥದಲ್ಲಿ ಪ್ರತಿಪಾದಿತವಾಗಿದೆ. ನಿಗಮಾಗಮಗಳ ಮರ್ಮಜ್ಞರೂ, ಶಿವಯೋಗ ಸಿದ್ಧರೂ ಆದ ಶ್ರೀ ಶಿವಯೋಗಿ ಶಿವಾಚಾರ್ಯರು ಈ ಗ್ರಂಥವನ್ನು ರಚಿಸಿದ್ದಾರೆ. ಕಾಮಿಕಾದಿ ವಾತುಲಾಂತಗಳಾದ ೨೮ ಶಿವಾಗಮಗಳಿಗೆ ಸಿದ್ಧಾಂತಾಗಮಗಳೆಂದು ಕರೆಯುತ್ತಾರೆ. ಈ ಆಗಮಗಳ ಕೊನೆಯ ನಿರ್ಣಯವು ಇದರಲ್ಲಿ ಪ್ರತಿಪಾದಿತವಾಗಿದೆ ಮತ್ತು ಇದರ ಮೇಲೆ ಬೇರೆ ಯಾವುದೇ ಸಿದ್ಧಾಂತವು ಇರುವುದಿಲ್ಲ. ಇದುವೇ ಎಲ್ಲ ಸಿದ್ಧಾಂತಗಳ ಶಿಖಾಮಣಿ ಸ್ಥಾನದಲ್ಲಿರುವುದರಿಂದ ಈ ಗ್ರಂಥಕ್ಕೆ ಸಿದ್ಧಾಂತಶಿಖಾಮಣಿ ಎಂದು ಕರೆಯಲಾಗಿದೆ. ಈ ಗ್ರಂಥದ ಸ್ವಾಧ್ಯಾಯ ಹಾಗೂ ಪಾರಾಯಣಗಳನ್ನು ಭಕ್ತಿಯಿಂದ ಮಾಡುವುದರಿಂದ ಇಹಲೋಕದ ಭೋಗಭಾಗ್ಯ ಮತ್ತು ಲಿಂಗಾಂಗ ಸಾಮರಸ್ಯ ರೂಪವಾದ "ಶ್ರೀ" ಅಂದರೆ ಸಂಪತ್ತು ಸರ್ವರಿಗೂ ದೊರೆಯುವುದರಿಂದ ಇದು "ಶ್ರೀ ಸಿದ್ಧಾಂತ ಶಿಖಾಮಣಿ" ಎಂಬುದಾಗಿ ಶ್ರೀ ಶಿವಯೋಗಿ ಶಿವಾಚಾರ್ಯರೇ ಈ ಗ್ರಂಥಕ್ಕೆ ನಾಮಕರಣವನ್ನು ಮಾಡಿದ್ದಾರೆ.

ನಾಲ್ಕು ವೇದ, ಇಪ್ಪತ್ತೆಂಟು ಆಗಮ ಮತ್ತು ಶೈವಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಶ್ರೀ ಶಿವಯೋಗಿ ಶಿವಾಚಾರ್ಯರು ವಿರಚಿಸಿದ ಅಪೂರ್ವ ಕೃತಿ ಇದು. ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರತಿಪಾದಿಸಿದ ಪಂಚಸೂತ್ರಗಳ ತರುವಾಯ ವೀರಶೈವ ಧರ್ಮ–ದರ್ಶನಗಳನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸುವ ಆದ್ಯ ಗ್ರಂಥವೇ ಶ್ರೀ ಸಿದ್ಧಾಂತಶಿಖಾಮಣಿಯು.

ಇಂದು ಪ್ರಕಟಗೊಳ್ಳುವ ಈ "ಶ್ರೀ ಸಿದ್ಧಾಂತಶಿಖಾಮಣಿ ಪರಾಮರ್ಶೆ" ಗ್ರಂಥದ ಮೊದಲನೇ ಅಧ್ಯಾಯದಲ್ಲಿ ಗ್ರಂಥನಾಮ ರಹಸ್ಯ, ಗ್ರಂಥಕಾರರ ದೇಶ ಕಾಲ, ಅಗಸ್ತ್ಯರ ಐತಿಹ್ಯ ಮೊದಲಾದ ವಿಷಯಗಳ ಕುರಿತು ಚರ್ಚೆ ಮಾಡಲಾಗಿದೆ. ಎರಡನೇ ಅಧ್ಯಾಯದಲ್ಲಿ ಸಾಧಕನಿಗೆ ಅಂಗರೂಪಗಳಾದ ಅಷ್ಟಾವರಣಗಳನ್ನು ವಿಶ್ಲೇಷಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಸಾಧಕನ ಪ್ರಾಣದಂತಿರುವ ಪಂಚಾಚಾರಗಳನ್ನು ನಿರೂಪಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಜೀವ, ಈಶ್ವರ, ಜಗತ್ತು, ಬಂಧ ಮತ್ತು ಮೋಕ್ಷಗಳೆಂಬ ಜಾಗತಿಕ ದಾರ್ಶನಿಕ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಐದನೇ ಅಧ್ಯಾಯದಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರಿಂದ ಪ್ರಪ್ರಥಮವಾಗಿ ಪ್ರತಿಪಾದಿಸಲ್ಪಟ್ಟ ಏಕೋತ್ತರಶತಸ್ಥಲಗಳನ್ನು ಸಾರರೂಪವಾಗಿ ನಿರೂಪಿಸಲಾಗಿದೆ. ಆರನೇ ಅಧ್ಯಾಯವು ಉಪಸಂಹಾರ ರೂಪವಾಗಿದ್ದು ಇದರಲ್ಲಿ ಪ್ರಮುಖ ವಿಷಯಗಳನ್ನು ಪುನರಾವಲೋಕನ ಮಾಡಲಾಗಿದೆ.

ಹೀಗೆ ಶ್ರೀ ಸಿದ್ಧಾಂತಶಿಖಾಮಣಿಯ ಸಿದ್ಧರಸಾಯನದಂತಿರುವ ಮತ್ತು ಕನ್ನಡಿಗರಿಗೆ ಅತ್ಯಂತ ಉಪಯುಕ್ತವಾದ ಈ ಗ್ರಂಥವನ್ನು ಮನಗೂಳಿಯ ಪಟ್ಟೇಕಂಥಿ ಹಿರೇಮಠದ ಮಠಾಧ್ಯಕ್ಷರಾದ ಶ್ರೀ ಷ.ಬ್ರ.ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ ಪಟ್ಟಾಭಿಷೇಕದ ರಜತ ಮಹೋತ್ಸವದ ನೆನಪಿನ ಕೃತಿಯಾಗಿ ಪ್ರಕಟಗೊಳ್ಳುತ್ತಿರುವುದು ಸಂತೋಷದ ಸಂಗತಿ. ಡಾ. ಮಹಾಂತಲಿಂಗ ಶಿವಾಚಾರ್ಯರು ಬಾಲ್ಯದಿಂದಲೇ ಪ್ರತಿಭಾ ಸಂಪನ್ನರು. ಇವರ ಬಾಲ್ಯ ಪ್ರತಿಭೆಯನ್ನು ಕಂಡೇ ಬೆಂಗಳೂರು ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದ ಲಿಂ. ಶ್ರೀ ಷ.ಬ್ರ. ಸುವರ್ಣಲಿಂಗಶಿವಾಚಾರ್ಯ ಸ್ವಾಮೀಜಿ ಅವರು ಇವರನ್ನು ತಮ್ಮ ಮಠದ ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸಿ ತಮ್ಮ ಕರಕಮಲ ಗಳಿಂದಲೇ ಪಟ್ಟಾಭಿಷೇಕವನ್ನು ಮಾಡಿ ಇದ್ದಾಗಲೇ ಸಂತೋಷಪಟ್ಟರು. ಉಚ್ಚ ವಿದ್ಯಾ ವಿಭೂಷಿತರಾದ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಇಂದು ವಿಭೂತಿಪುರಮಠದ ಪರಿಸರವನ್ನು ಜನಕಲ್ಯಾಣದ ಬಹುದೊಡ್ಡ ಕೇಂದ್ರವನ್ನಾಗಿ ಪರಿವರ್ತಿಸಿದ್ದಾರೆ. ಶಿಕ್ಷಣವು ವ್ಯಾಪಾರೀಕರಣಗೊಂಡ ಈ ದಿನಮಾನದಲ್ಲಿ ನಾಡಿನ ಬಡ ಹಾಗೂ ಬುದ್ಧಿವಂತರಾದ ೫ ರಿಂದ ೧೦ನೇ ವರ್ಗದ ಮಕ್ಕಳಿಗೆ ಊಟ ವಸತಿಯೊಂದಿಗೆ ಆಂಗ್ಲ ಮಾಧ್ಯಮ ಶಿಕ್ಷಣವನ್ನು ಉಚಿತವಾಗಿ ನೀಡುತ್ತಿರುವುದು ಆದರ್ಶವಾದ ಕಾರ್ಯ. ಜೊತೆಗೆ ಉಚಿತ ಸ್ವಾಸ್ಥ್ಯ ಸೇವೆಯನ್ನೂ ಒದಗಿಸುವ ಸಲುವಾಗಿ ಒಂದು ಬೃಹತ್ ಪ್ರಮಾಣದ ಸ್ವಾಸ್ಥ್ಯ ಕೇಂದ್ರದ ಕಾರ್ಯ ಮಠದ ಪರಿಸರದಲ್ಲಿ ಭರದಿಂದ ಸಾಗಿರುವುದು ಸಂತೋಷದ ಸಂಗತಿ. ಇದು ಅಲ್ಲದೇ ಗ್ರಾಮೀಣ ಭಾಗವಾದ ಮನಗೂಳಿಯಲ್ಲಿಯೂ ಶ್ರೀಗಳು ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದ್ದಾರೆ.

ಸದ್ಯಃ ಮನಗೂಳಿ ಗ್ರಾಮದ ಪಟ್ಟೀಕಂಥಿ ಹಿರೇಮಠದ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ ಶಿಷ್ಯ ಮಂಡಳಿಯು ಶ್ರೀಗಳ ಪಟ್ಟಾಭಿಷೇಕದ ೨೫ನೇ ವರ್ಷದ ರಜತ ಮಹೋತ್ಸವವನ್ನು ವಿವಿಧ ರಚನಾತ್ಮಕ ಮತ್ತು ಜನಕಲ್ಯಾಣ ಕಾರ್ಯಗಳೊಂದಿಗೆ ಆಚರಿಸುತ್ತಿರುವುದು ಸರ್ವರಿಗೂ ಸಂತೋಷವನ್ನು ತಂದಿದೆ. ಇದೇ ಸಂದರ್ಭದಲ್ಲಿ ಈ ರಜತ ಮಹೋತ್ಸವದ ಸವಿನೆನಪಿನ ಪ್ರಕಟನಾ ರೂಪವಾಗಿ "ಶ್ರೀ ಸಿದ್ಧಾಂತಶಿಖಾಮಣಿ ಪರಾಮರ್ಶೆ" ಯನ್ನು ಪ್ರಕಟಿಸುತ್ತಿರುವುದು ಶ್ರೀ ಸನ್ನಿಧಿಗೆ ಸಂತೋಷವನ್ನು ತಂದಿದೆ. ಜಿಜ್ಞಾಸು ಆಸಕ್ತರು ಇದರ ಸಮುಚಿತ ಪ್ರಯೋಜನವನ್ನು ಪಡೆದುಕೊಂಡರೆ ಪ್ರಕಾಶಕರ ಮತ್ತು ಲೇಖಕರ ಪರಿಶ್ರಮವು ಸಾರ್ಥಕವಾಗುವುದು.

ಈ ಸಂದರ್ಭದಲ್ಲಿ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಅವರ ಪಟ್ಟಾಭಿಷೇಕದ ರಜತ ಮಹೋತ್ಸವದ ಪ್ರಯುಕ್ತ ಅನಂತ ಮಂಗಲಾಶೀರ್ವಾದಗಳು. ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದ ದಿಂದ ತಮ್ಮ ಪಟ್ಟಾಭಿಷೇಕದ ಸುವರ್ಣ ವಜ್ರ ಅಮೃತ ಮಹೋತ್ಸವಾದಿಗಳನ್ನು ಆಚರಿಸಿಕೊಳ್ಳುವ ಸುಯೋಗವು ಪ್ರಾಪ್ತವಾಗಲಿ. ಈ ಗ್ರಂಥದ ಲೇಖನ ಕಾರ್ಯದಲ್ಲಿ ಸಹಕರಿಸಿದ ಬಬಲೇಶ್ವರ ಮಠದ ಶ್ರೀ ಷ.ಬ್ರ. ಡಾ. ಮಹದೇವ ಶಿವಾಚಾರ್ಯ ಸ್ವಾಮಿಗಳವರಿಗೆ ಮಂಗಲಾಶೀರ್ವಾದಗಳು. ಸಂಸ್ಕೃತದ ಘನ ವಿದ್ವಾಂಸರೂ ಹಾಗೂ ಈ ಗ್ರಂಥದ ಸಂಪಾದಕರೂ ಆದ ಡಾ. ಸಿ. ಶಿವಕುಮಾರಸ್ವಾಮಿ ಅವರಿಗೂ ಹಾಗೂ ಅವರ ಪರಿವಾರಕ್ಕೂ ಅನಂತ ಮಂಗಲಾಶೀರ್ವಾದಗಳು. ಇವರಿಂದ ಇನ್ನೂ ಹೆಚ್ಚಿನ ಸಾಹಿತ್ಯ ಕೃಷಿ ಆಗುವಂತೆ ಶ್ರೀ ಜಗದ್ಗುರು ಪಂಚಾಚಾರ್ಯರು ಅನುಗ್ರಹಿಸಲಿ. ಸರ್ವರಿಗೂ ಅನಂತ ಮಂಗಲಾಶೀರ್ವಾದಗಳು.

ಇತ್ಯನಂತಶಿವಾಶಿಷಃ

ಪ್ರಕಾಶಕರ ನುಡಿ

ಶ್ರೀ ಶಿವಯೋಗಿ ಶಿವಾಚಾರ್ಯ ವಿರಚಿತ ಶ್ರೀ ಸಿದ್ಧಾಂತಶಿಖಾಮಣಿಯು ಎಲ್ಲ ಸಿದ್ಧಾಂತಗಳಿಗೂ ಶಿಖಾಮಣಿಯಂತಿದ್ದು, ಇದರ ಅಧ್ಯಯನ–ಅಧ್ಯಾಪನಗಳು ನಿರಂತರವಾಗಿ ನಡೆಯುತ್ತಾ ಬಂದಿರುವುದು ಸರ್ವವೇದ್ಯವಾದ ಸಂಗತಿ. ಈ ಗ್ರಂಥಕ್ಕೆ ಕ್ರಿ.ಶ. ೧೫ನೇ ಶತಮಾನದ ಉಜ್ಜನೀಶ, ಸೋಸಲೆ ರೇವಣಾರಾಧ್ಯ ಮೊದಲಾದ ಮಹಾ ವಿದ್ವಾಂಸರುಗಳು ಕನ್ನಡದಲ್ಲಿ ವ್ಯಾಖ್ಯಾನಗಳನ್ನು ರಚಿಸಿದ್ದು, ಕ್ರಿ.ಶ. ೧೭ನೇ ಶತಮಾನದ ಶ್ರೀ ಮರಿತೋಂಟದಾರ್ಯರು ಸಂಸ್ಕೃತದಲ್ಲಿ 'ತತ್ತ್ವ ಪ್ರದೀಪಿಕಾ' ಎಂಬ ಹೆಸರಿನಲ್ಲಿ ಟೀಕು ರಚಿಸಿದ್ದಾರೆ. ಇದಲ್ಲದೆ ಆಧುನಿಕ ಜಗತ್ತಿನಲ್ಲಿಯೂ ಈ ಗ್ರಂಥ ಕುರಿತು ಅಧ್ಯಯನ, ಅಧ್ಯಾಪನ, ಸಂಶೋಧನೆಗಳು ಭರತಖಂಡದಾದ್ಯಂತ ನಡೆಯುತ್ತಿರುವುದರಿಂದ ಈ ಗ್ರಂಥವು ಪ್ರಾಂತೀಯ ಭಾಷೆಗಳಿಗೆ ಅನುವಾದವನ್ನು ಅಪೇಕ್ಷಿಸುವಂತಾಯಿತು. ಈ ಅಂಶವನ್ನು ಮನಗಂಡ ಕಾಶೀಜ್ಞಾನಸಿಂಹಾಸನ ಪೀಠವನ್ನಲಂಕರಿಸಿರುವ ಪರಮಪೂಜ್ಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರು ಎಲ್ಲ ಭಾರತೀಯ ಭಾಷೆಗಳಿಗೆ ಮಾತ್ರವಲ್ಲದೆ ನೇಪಾಳಿ, ರೂಸ್, ಜರ್ಮನ್ ಮೊದಲಾದ ವಿದೇಶಿ ಭಾಷೆಗಳಿಗೂ ಆಯಾ ಭಾಷಿಕ ವಿದ್ವಾಂಸರುಗಳಿಂದ ಈ ಗ್ರಂಥವನ್ನು ಅನುವಾದಿಸಿ ತಮ್ಮ ಶ್ರೀಪೀಠದಿಂದ ಪ್ರಕಟಿಸಿದ್ದಾರೆ.

ಸಂಸ್ಕೃತ, ಕನ್ನಡ, ಹಿಂದಿ, ಮರಾಠಿ–ಈ ನಾಲ್ಕು ಭಾಷೆಗಳಲ್ಲಿ ಪ್ರಕಾಂಡ ಪಾಂಡಿತ್ಯವನ್ನು ಪಡೆದಿರುವ ಶ್ರೀಸನ್ನಿಧಿಯವರು 'ಶ್ರೀ ಸಿದ್ಧಾಂತಶಿಖಾಮಣಿ ಸಮೀಕ್ಷಾ' (ಸಂಸ್ಕೃತ), ಶ್ರೀ ಸಿದ್ಧಾಂತಶಿಖಾಮಣಿ ಪ್ರವಚನ ಪ್ರಭೆ (೨ ಸಂಪುಟಗಳಲ್ಲಿ ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ) ರಚಿಸಿ ಪ್ರಕಟಿಸಿ ಜನ ಸಾಮಾನ್ಯರಿಗೆ ಸಿದ್ಧಾಂತಶಿಖಾಮಣಿಯ ಔತಣವನ್ನು ಉಣಬಡಿಸಿದ್ದಾರೆ. ಇಂತಹ ಮಹಾಜ್ಞಾನಿಗಳಾದ ಪರಮಪೂಜ್ಯರು ಹಲವು ವರ್ಷಗಳ ಹಿಂದೆ ಗದ್ಯರೂಪದಲ್ಲಿ 'ಶ್ರೀ ಸಿದ್ಧಾಂತಶಿಖಾಮಣಿ ಪರಾಮರ್ಶೆ' ಎಂಬ ಹೆಸರಿನಲ್ಲಿ ಈ ಗ್ರಂಥವನ್ನು

ರಚಿಸಿದ್ದು, ಇದು ನಮ್ಮ ಪಟ್ಟಾಧಿಕಾರ ರಜತ ಮಹೋತ್ಸವ ಸಮಾರಂಭದ ಸವಿನೆನಪಿಗಾಗಿ ಪ್ರಕಟವಾಗುತ್ತಿರುವುದು ನಮಗೆ ಅತ್ಯಂತ ಸಂತೋಷವನ್ನು ತಂದಿದೆ. ಈ ಗ್ರಂಥವನ್ನು ನಮ್ಮ ಶ್ರೀಮಠದಿಂದ ಪ್ರಕಟಿಸಲು ಅನುಮತಿಸಿದ ಕಾಶೀ ಮಹಾ ಸನ್ನಿಧಿಯವರಿಗೆ ಅನಂತಾನಂತ ಪ್ರಣಾಮಗಳನ್ನು ಸಲ್ಲಿಸುತ್ತೇವೆ. ಈ ಗ್ರಂಥದ ಪ್ರಕಟಣೆ ಮಾಡಬೇಕೆಂದು ಸೂಚಿಸಿದವರು ನಮ್ಮ ಪಿಎಚ್.ಡಿ ಅಧ್ಯಯನದ ಮಾರ್ಗದರ್ಶಕರೂ, ಹೆಸರಾಂತ ಸಂಸ್ಕೃತ ವಿದ್ವಾಂಸರೂ, ಬೆಂಗಳೂರಿನ ಬಸವೇಶ್ವರ ಕಾಲೇಜಿನ ಪ್ರಾಚಾರ್ಯರೂ ಆಗಿರುವ ಡಾ. ಸಿ. ಶಿವಕುಮಾರಸ್ವಾಮಿ ಅವರು. ಶ್ರೀಯುತರು ಈ ಗ್ರಂಥದ ಹಸ್ತಪ್ರತಿ ಪರಿಶೀಲನೆಯಿಂದ ಮೊದಲ್ಗೊಂಡು ಮುದ್ರಣದ ಸಮಸ್ತ ಜವಾಬ್ದಾರಿಯನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ನಿರ್ವಹಿಸಿದ್ದಾರೆ. ವಿದ್ವಾಂಸರಾದ ಡಾ. ಶಿವಕುಮಾರಸ್ವಾಮಿಗಳವರಿಗೆ ಮಂಗಲಾಶೀರ್ವಾದಗಳು. ಈ ಗ್ರಂಥವನ್ನು ಅಲ್ಪ ಕಾಲದಲ್ಲಿ ಸರ್ವಾಂಗ ಸುಂದರವಾಗಿ ಮುದ್ರಿಸಿದ ಬೆಂಗಳೂರಿನ ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ. ನ ಮಾಲೀಕರಾದ ಶ್ರೀ ಎಲ್. ಲಿಂಗಪ್ಪನವರಿಗೂ ಹಾಗೂ ಅವರ ಎಲ್ಲ ಸಿಬ್ಬಂದಿ ವರ್ಗದವರಿಗೆ ಶುಭಾಶೀರ್ವಾದಗಳು. ಸದ್ಭಕ್ತರು ಹಾಗೂ ಧರ್ಮಬಂಧುಗಳು ಈ ಗ್ರಂಥದ ಪ್ರಯೋಜನವನ್ನು ಮುಕ್ತ ಮನಸ್ಸಿನಿಂದ ಪಡೆಯಲೆಂದು ಆಶಿಸುತ್ತೇವೆ.

ದಿನಾಂಕ ೨೪-೦೪-೨೦೧೭ **ಷ.ಬ್ರ.ಶ್ರೀ ಡಾ. ಮಹಾಂತಲಿಂಗ ಶಿವಾಚಾರ್ಯ ಸ್ವಾಮಿಗಳು**

ಪಟ್ಟೀಕಂಥಿ ಹಿರೇಮಠ, ಮನಗೂಳಿ

ವಿಜಯಪುರ ಜಿಲ್ಲಾ

ವಿಷಯಾನುಕ್ರಮಣಿಕೆ

ಪಂಚವಿಧಗಳಾದ ಕಾಯಶೋಧನೆಯ ಶೀಲಗಳು(೬೧); ಮೂವತ್ತೈದು ವಿಧಗಳಾದ ಮಾನಸಿಕ ಶೀಲಗಳು(೬೨); ೫) ಭೃತ್ಯಾಚಾರ(೬೫); ಆಚಾರದ ವೈಜ್ಞಾನಿಕತೆ(೬೬).

ಚತುರ್ಥ ಅಧ್ಯಾಯ : ಶ್ರೀಸಿದ್ಧಾಂತಶಿಖಾಮಣಿಯ ದಾರ್ಶನಿಕ ವಿಚಾರಧಾರೆ:

ಪರಶಿವಸ್ವರೂಪ(೬೯), ಶಕ್ತಿಯ ಸ್ವರೂಪ(೭೦), ಶಿವ-ಶಕ್ತಿಯರ ಸಂಬಂಧ, ಶಕ್ತಿಯ ಭೇದಗಳು(೭೨); ಮಹೇಶ್ವರನ ಕರ್ತವ್ಯ(೭೪); ಸೃಷ್ಟಿಯು ಶಿವನ ಲೀಲೆಯು(೭೬); ಶಿವನು ಪಕ್ಷಪಾತಿಯಲ್ಲ(೭೭); ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಜೀವಸ್ವರೂಪ(೮೦), ಜೀವಾತ್ಮನ ಅಣು ಪರಿಮಾಣತ್ವ(೮೧), ಜೀವಾತ್ಮರ ಬಹುತ್ವ(೮೨); ಜೀವಾತ್ಮ-ಪರಮಾತ್ಮರಲ್ಲಿರುವ ಭೇದಾಭೇದ(೮೬); ಜೀವನ ಮೂರು ಅವಸ್ಥೆಗಳು(೮೭); ಶ್ರೀಸಿದ್ಧಾಂತಶಿಖಾಮಣಿಯಲ್ಲಿಯ ಸೃಷ್ಟಿಮೀಮಾಂಸೆ(೮೯); ಸೃಷ್ಟಿಗೆ ಶಿವನು ಅಭಿನ್ನನಿಮಿತ್ತೋಪಾದಾನಕಾರಣನು(೯೨); ಷಟ್‌ತ್ರಿಂಶತ್ ತತ್ತ್ವಗಳು(೯೩); ಶ್ರೀಸಿದ್ಧಾಂತಶಿಖಾಮಣಿಯಲ್ಲಿಯ ಬಂಧ-ಮೋಕ್ಷ ವಿಮರ್ಶೆ(೯೫); ಮೋಕ್ಷದ ಪರ್ಯಾಯ ನಾಮಗಳು(೯೬); ಬಂಧ(ಮಲ)ಸ್ವರೂಪ(೯೭); ದೀಕ್ಷೆಯಿಂದ ಬಂಧನಿವೃತ್ತಿ(೯೮); ಜ್ಞಾನಕರ್ಮಗಳ ಸಮಸಮುಚ್ಚಯ(೧೦೦), ಪತಿಕರ್ಮ ಮತ್ತು ಪಶುಕರ್ಮ(೧೦೧); ಶಿವಾನುಗ್ರಹದಿಂದ ಮೋಕ್ಷ ಪ್ರಾಪ್ತಿ(೧೦೨); ಜ್ಞಾನಿಗೆ ನಿತ್ಯಕರ್ಮದ ಅವಶ್ಯಕತೆ(೧೦೩).

ಪಂಚಮ ಅಧ್ಯಾಯ : ಶ್ರೀಸಿದ್ಧಾಂತಶಿಖಾಮಣಿಯಲ್ಲಿಯ ಏಕೋತ್ತರ ಶತಸ್ಥಲಗಳು; ಅಂಗಷಟ್‌ಸ್ಥಲಾಂತರ್ಗತ ನಾಲ್ವತ್ನಾಲ್ಕು ಅವಾಂತರ ಸ್ಥಲಗಳು(೧೦೭), **ಭಕ್ತಸ್ಥಲ,** ೧) ಪಿಂಡಸ್ಥಲ(೧೦೭), ೨) ಪಿಂಡಜ್ಞಾನಸ್ಥಲ, ೩) ಸಂಸಾರಹೇಯಸ್ಥಲ, ೪) ಗುರುಕಾರುಣ್ಯಸ್ಥಲ(೧೦೮), ೫) ಲಿಂಗಧಾರಣಸ್ಥಲ, ೬) ಭಸ್ಮಧಾರಣಸ್ಥಲ, ೭) ರುದ್ರಾಕ್ಷಿಧಾರಣಸ್ಥಲ(೧೦೯), ೮) ಪಂಚಾಕ್ಷರಜಪಸ್ಥಲ(೧೧೦), ೯) ಭಕ್ತಮಾರ್ಗಕ್ರಿಯಾಸ್ಥಲ(೧೧೧), ೧೦) ಉಭಯಸ್ಥಲ(೧೧೨), ೧೧)

ತ್ರಿವಿಧಸಂಪತ್ತಿಸ್ಥಲ, ೧೨) ಚತುರ್ವಿಧ ಸಾರಾಯಸ್ಥಲ(೧೧೩), ೧೩) ಸೋಪಾಧಿದಾನಸ್ಥಲ, ೧೪) ನಿರುಪಾಧಿದಾನಸ್ಥಲ, ೧೫) ಸಹಜದಾನಸ್ಥಲ(೧೧೪), **ಮಾಹೇಶ್ವರಸ್ಥಲ(೧೧೫)** – ೧೬) ಮಾಹೇಶ್ವರ ಪ್ರಶಂಸಾಸ್ಥಲ(೧೧೫), ೧೭) ಲಿಂಗನಿಷ್ಠಾಸ್ಥಲ, ೧೮) ಪೂರ್ವಾಶ್ರಯನಿರಸನಸ್ಥಲ(೧೧೬), ೧೯) ಸರ್ವಾದ್ವೈತನಿರಸನಸ್ಥಲ, ೨೦) ಆಹ್ವಾನನಿರಸನಸ್ಥಲ(೧೧೭), ೨೧) ಅಷ್ಟಮೂರ್ತಿನಿರಸನಸ್ಥಲ, ೨೨) ಸರ್ವಗತ್ವನಿರಸನಸ್ಥಲ(೧೧೮), ೨೩) ಶಿವಜಗನ್ಮಯಸ್ಥಲ, ೨೪) ಭಕ್ತದೇಹಿಕಲಿಂಗಸ್ಥಲ(೧೧೯), **ಪ್ರಸಾದಿಸ್ಥಲ(೧೨೦)** – ೨೫) ಪ್ರಸಾದಿಸ್ಥಲ(೧೨೧); ೨೬) ಗುರುಮಹಾತ್ಮ್ಯಸ್ಥಲ, ೨೭) ಲಿಂಗಮಹಾತ್ಮ್ಯಸ್ಥಲ(೧೨೨), ೨೮) ಜಂಗಮಮಹಾತ್ಮ್ಯಸ್ಥಲ(೧೨೩), ೨೯) ಭಕ್ತಮಹಾತ್ಮ್ಯಸ್ಥಲ(೧೨೪), ೩೦) ಶರಣಮಹಾತ್ಮ್ಯಸ್ಥಲ(೧೨೫); ೩೧) ಪ್ರಸಾದಿಮಹಾತ್ಮ್ಯಸ್ಥಲ(೧೨೬); **ಪ್ರಾಣಲಿಂಗಿಸ್ಥಲ(೧೨೭)** – ೩೨) ಪ್ರಾಣಲಿಂಗಿಸ್ಥಲ; ೩೩) ಪ್ರಾಣಲಿಂಗಾರ್ಚನಸ್ಥಲ(೧೨೮); ೩೪) ಶಿವಯೋಗಸಮಾಧಿಸ್ಥಲ(೧೨೯), ೩೫) ಲಿಂಗನಿಜಸ್ಥಲ; ೩೬) ಅಂಗಲಿಂಗಸ್ಥಲ(೧೩೦); **ಶರಣಸ್ಥಲ(೧೩೧)**– ೩೭) ಶರಣಸ್ಥಲ, ೩೮) ತಾಮಸನಿರಸನಸ್ಥಲ(೧೩೨), ೩೯) ನಿರ್ದೇಶಸ್ಥಲ(೧೩೩), ೪೦) ಶೀಲಸಂಪಾದನಸ್ಥಲ(೧೩೪); **ಐಕ್ಯಸ್ಥಲ(೧೩೪)** – ೪೧) ಐಕ್ಯಸ್ಥಲ(೧೩೫); ೪೨) ಆಚಾರಸಂಪತ್ತಿಸ್ಥಲ(೧೩೬); ೪೩) ಏಕಭಾಜನಸ್ಥಲ(೧೩೭); ೪೪) ಸಹಭೋಜನಸ್ಥಲ(೧೩೮); **ಲಿಂಗಷಟ್‌ಸ್ಥಲಗಳು: ಭಕ್ತಸ್ಥಲ** – ೪೫) ದೀಕ್ಷಾಗುರುಸ್ಥಲ(೧೩೯); ೪೬) ಶಿಕ್ಷಾಗುರುಸ್ಥಲ; ೪೭) ಜ್ಞಾನಗುರುಸ್ಥಲ(೧೪೦); ೪೮) ಕ್ರಿಯಾಲಿಂಗಸ್ಥಲ; ೪೯) ಭಾವಲಿಂಗಸ್ಥಲ(೧೪೧); ೫೦) ಜ್ಞಾನಲಿಂಗಸ್ಥಲ, ೫೧) ಸ್ವಯಸ್ಥಲ(೧೪೨), ೫೨) ಚರಸ್ಥಲ; ೫೩) ಪರಸ್ಥಲ(೧೪೩); **ಮಾಹೇಶ್ವರಸ್ಥಲ,** ೫೪) ಕ್ರಿಯಾಗಮಸ್ಥಲ(೧೪೪), ೫೫) ಭಾವಾಗಮಸ್ಥಲ(೧೪೫), ೫೬) ಜ್ಞಾನಾಗಮಸ್ಥಲ(೧೪೫), ೫೭) ಸಕಾಯಸ್ಥಲ(೧೪೬), ೫೮) ಅಕಾಯಸ್ಥಲ(೧೪೭), ೫೯) ಪರಕಾಯಸ್ಥಲ(೧೪೮), ೬೦) ಧರ್ಮಾಚಾರಸ್ಥಲ(೧೪೯), ೬೧)

ಪ್ರಥಮ ಅಧ್ಯಾಯ

ಶ್ರೀ ಸಿದ್ಧಾಂತಶಿಖಾಮಣಿಯ ಪರಿಚಯ

ಪೀಠಿಕೆ :

ಈ ನಮ್ಮ ಭಾರತ ದೇಶವು ಅನೇಕ ಧರ್ಮ ದರ್ಶನಗಳ ಉಗಮ ಸ್ಥಾನವಾಗಿದೆ. ಇಲ್ಲಿಯ ಸನಾತನ ಧರ್ಮಗಳಲ್ಲಿ ಒಂದು ಪ್ರಮುಖವಾದ ಧರ್ಮವೇ ವೀರಶೈವ ಧರ್ಮವು. ಶಿವನ ಆದೇಶದ ಮೇರೆಗೆ ಶ್ರೀ ರೇಣುಕ, ಶ್ರೀದಾರುಕ, ಶ್ರೀ ಘಂಟಾಕರ್ಣ, ಶ್ರೀ ಧೇನುಕರ್ಣ ಮತ್ತು ಶ್ರೀ ವಿಶ್ವಕರ್ಣರೆಂಬ ಗಣಾಧೀಶ್ವರರು ಭೂಲೋಕದಲ್ಲಿ ಲಿಂಗೋದ್ಭವರಾಗಿ ಅವತರಿಸಿ ವೀರಶೈವ ಧರ್ಮವನ್ನು ಸಂಸ್ಥಾಪಿಸಿದರೆಂಬ ವಿಷಯವು ಶಿವಾಗಮಗಳಲ್ಲಿ ಸುಪ್ರಸಿದ್ಧವಾಗಿದೆ. ಶಿವಗಣರೇ ಕ್ರಮವಾಗಿ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ ಮತ್ತು ದೂರ್ವಾಸ ಮಹರ್ಷಿಗಳಿಗೆ ಈ ವೀರಶೈವ ಧರ್ಮವನ್ನು ಬೋಧಿಸಿ ಭೂಲೋಕದಲ್ಲಿ ಪ್ರಪ್ರಥಮವಾಗಿ ಸಂಸ್ಥಾಪಿಸಿದರು. ಈ ಗಣಾಧೀಶ್ವರಿಗೇನೇ ಶ್ರೀ ಜಗದ್ಗುರು ಪಂಚಾಚಾರ್ಯರೆಂಬುದಾಗಿ ಕರೆಯಲಾಗುತ್ತದೆ. ಇವರು ಸಂಸ್ಥಾಪಿಸಿದ ಪಂಚಪೀಠಗಳು ಕ್ರಮವಾಗಿ ಶ್ರೀ ಬಾಳೇಹೊನ್ನೂರು, ಶ್ರೀ ಉಜ್ಜಯಿನಿ, ಶ್ರೀ ಹಿಮವತ್ಕೇದಾರ, ಶ್ರೀ ಶ್ರೀಶೈಲ ಮತ್ತು ಶ್ರೀ ಕಾಶೀಕ್ಷೇತ್ರಗಳಲ್ಲಿ ಅನಾದಿ ಕಾಲದಿಂದಲೂ ಸುಪ್ರಸಿದ್ಧಗಳಾಗಿರುತ್ತವೆ. ಈ ಪಂಚಪೀಠಗಳಿಗೆ ಕ್ರಮವಾಗಿ ಶ್ರೀ ವೀರಸಿಂಹಾಸನಪೀಠ, ಶ್ರೀ ಸದ್ಧರ್ಮ ಸಿಂಹಾಸನಪೀಠ, ಶ್ರೀ ವೈರಾಗ್ಯಸಿಂಹಾಸನಪೀಠ, ಶ್ರೀ ಸೂರ್ಯಸಿಂಹಾಸನ ಪೀಠ ಮತ್ತು ಶ್ರೀ ಜ್ಞಾನಸಿಂಹಾಸನಪೀಠವೆಂಬುದಾಗಿ ಕರೆಯಲಾಗುತ್ತದೆ. ಈ ಪ್ರತಿಯೊಂದು ಪೀಠಗಳಲ್ಲಿ ಆಯಾ ಪೀಠ ಪರಂಪರೆಯ ಐತಿಹಾಸಿಕ ದಾಖಲೆಗಳನ್ನು ಇಂದಿಗೂ ಪ್ರತಿಯೊಂದು ಪೀಠಗಳಲ್ಲಿ ಕಾಣಬಹುದು.

ಹೀಗೆ ಶ್ರೀ ಜಗದ್ಗುರು ಪಂಚಾಚಾರ್ಯರಿಂದ ಸಂಸ್ಥಾಪಿತವಾದ ಈ ವೀರಶೈವ ಧರ್ಮದ ವ್ಯಾಪ್ತಿಯು ಸಂಪೂರ್ಣ ಭಾರತದೇಶವನ್ನೊಳಗೊಂಡಿದೆ. ಈ ದೇಶದ

ಪ್ರತಿಯೊಂದು ಪ್ರಾಂತಗಳಲ್ಲಿಯೂ ವೀರಶೈವರನ್ನು ಹೆಚ್ಚುಕಡಿಮೆ ಸಂಖ್ಯೆಗಳಲ್ಲಿ ಕಾಣಬಹುದಾಗಿದೆ. ಆಯಾ ಪ್ರಾಂತಗಳಲ್ಲಿರುವ ವೀರಶೈವರು ಮೂಲತಃ ಆ ಪ್ರಾಂತದವರೇ ಆಗಿದ್ದು ಈ ಧರ್ಮ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಭಾರತದ ಪ್ರತಿಯೊಂದು ಪ್ರಾಂತಗಳಲ್ಲಿಯ ವೀರಶೈವರ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ ಕರ್ನಾಟಕ ಪ್ರಾಂತದಲ್ಲಿ ಉಳಿದೆಲ್ಲ ಪ್ರಾಂತಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿರುವುದು ಕಂಡುಬರುತ್ತದೆ.

ವೀರಶೈವ ಧರ್ಮದಲ್ಲಿಯ ಸನಾತನವಾದ ಆಚಾರ್ಯ ಪರಂಪರೆಯ ನಂತರ ಸಂತ–ಶರಣರ ಪರಂಪರೆಯೂ ಸಹ ಇಲ್ಲಿ ನಡೆದುಕೊಂಡು ಬಂದಿದೆ. ಕರ್ನಾಟಕದಲ್ಲಿ ಶ್ರೀ ಮಹಾತ್ಮ ಬಸವೇಶ್ವರ ಮುಂತಾದವರು, ಆಂಧ್ರಪ್ರದೇಶದಲ್ಲಿ ಪಾಲ್ಕುರಿಕೆ ಸೋಮನಾಥ ಮೊದಲಾದವರು, ಮಹಾರಾಷ್ಟ್ರದಲ್ಲಿ ಶ್ರೀ ಮನ್ಮಥಸ್ವಾಮಿ ಮೊದಲಾದವರು ಈ ಸಂತ–ಶರಣ ಪರಂಪರೆಯಲ್ಲಿ ಪ್ರಮುಖರಾಗಿ ಪರಿಗಣಿಸಲ್ಪಟ್ಟಿದ್ದಾರೆ. ಇವರು ತಮ್ಮ ತಮ್ಮ ಕಾಲದಲ್ಲಿ ವೀರಶೈವ ಧರ್ಮದ ವಿಕಾಸಕ್ಕಾಗಿ ಮಾಡಿದ ಪರಿಶ್ರಮವು ಗಣನೀಯವಾದುದು. ಅಂತೆಯೇ ಕರ್ನಾಟಕ ಪ್ರಾಂತದ ದೃಷ್ಟಿಯಿಂದ ವಿಚಾರಿಸಲಾಗಿ ಶ್ರೀ ಮಹಾತ್ಮ ಬಸವೇಶ್ವರರನ್ನು ವೀರಶೈವ ಧರ್ಮದ ಉದ್ಧಾರಕರೆಂಬುದಾಗಿ ಹೇಳಲಾಗುವುದು. ಹೀಗೆ ವೀರಶೈವ ಧರ್ಮದ ಸ್ಥಾಪನೆಯ ವಿಷಯದಲ್ಲಿ ಸಮನ್ವಯ ದೃಷ್ಟಿಯನ್ನಿರಿಸಿಕೊಳ್ಳುವುದು ಒಂದು ಒಳ್ಳೆಯ ಬೆಳವಣಿಗೆಯೆಂದು ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ.

ವೀರಶೈವ ಸಾಹಿತ್ಯವು ಮೂಲತಃ ಸಂಸ್ಕೃತ ಭಾಷೆಯಲ್ಲಿರುವಂಥದ್ದಾಗಿದೆ. ನಮ್ಮ ದೇಶದ ಪ್ರಾಚೀನವಾದ ಶಿವಾಗಮ ವಾಙ್ಮಯವೇ ವೀರಶೈವ ಧರ್ಮದ ಮೂಲಶ್ರೋತವು. ಈ ವಿಷಯವನ್ನು ಶ್ರೀ ಶಿವಯೋಗಿ ಶಿವಾಚಾರ್ಯರು –

ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ ।
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಮತಂ ಪರಮ್ ॥

(ಸಿ.ಶಿ., ೫–೧೪)

ಎಂದು ಸ್ಪಷ್ಟಪಡಿಸಿದ್ದಾರೆ. ತಾತ್ಪರ್ಯವೇನೆಂದರೆ ಸಿದ್ಧಾಂತಾಗಮಗಳೆಂದು ಸುಪ್ರಸಿದ್ಧಗಳಾದ ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳ ಉತ್ತರ ಭಾಗದಲ್ಲಿ ವೀರಶೈವ ಸಿದ್ಧಾಂತವು ಪ್ರತಿಪಾದಿಸಲ್ಪಟ್ಟಿರುತ್ತದೆ. ಆದ್ದರಿಂದ ಈ ಇಪ್ಪತ್ತೆಂಟು ಶಿವಾಗಮಗಳೇ ವೀರಶೈವ ಧರ್ಮ–ದರ್ಶನದ ಮೂಲಗಳೆಂಬುದಾಗಿ ಹೇಳುವಲ್ಲಿ ಅದಾವ ಸಂಶಯವಿರುವುದಿಲ್ಲ. ಈ ಶಿವಾಗಮಗಳ ನಂತರ ವೀರಶೈವ ಸಿದ್ಧಾಂತವನ್ನು ಸಂಸ್ಕೃತ ಭಾಷೆಯಲ್ಲಿ ಪ್ರತಿಪಾದಿಸಿದ ಪ್ರಥಮ ಗ್ರಂಥವೆಂದರೆ

ಶ್ರೀಸಿದ್ಧಾಂತಶಿಖಾಮಣಿಯೇ ಆಗಿರುತ್ತದೆ. ಶ್ರೀಸಿದ್ಧಾಂತಶಿಖಾಮಣಿಯ ನಂತರ ಶ್ರೀಕರಭಾಷ್ಯ, ಲಿಂಗಧಾರಣಚಂದ್ರಿಕಾ, ವೀರಶೈವಾನಂದಚಂದ್ರಿಕಾ, ಶಿವಾದ್ವೈತ ಮಂಜರಿ, ಶಿವಾದ್ವೈತದರ್ಪಣ, ಅನುಭವಸೂತ್ರ, ಕೈವಲ್ಯಸಾರ ಮತ್ತು ಉಪನಿಷತ್ ವೀರಶೈವಭಾಷ್ಯಗಳು ಮುಂತಾದ ವಿಪುಲವಾದ ವೀರಶೈವ ಸಂಸ್ಕೃತ ಸಾಹಿತ್ಯವು ಬೆಳೆದು ಬಂದುದನ್ನು ಕಾಣಬಹುದು.

ಇಪ್ಪತ್ತೆಂಟು ಶಿವಾಗಮಗಳನ್ನು ಹೊರತುಪಡಿಸಿ ಇರುವ ಸಮಗ್ರ ವೀರಶೈವ ಸಾಹಿತ್ಯದಲ್ಲಿ ಶ್ರೀಸಿದ್ಧಾಂತಶಿಖಾಮಣಿಯೇ ಪ್ರಥಮ ಹಾಗೂ ಪ್ರಾಮಾಣಿಕ ಗ್ರಂಥವಾಗಿರುತ್ತದೆ .

ಗ್ರಂಥ ಪರಿಚಯ :

ಯಾವುದೊಂದು ಗ್ರಂಥದ ನಾಮಾವಲೋಕನವನ್ನು ಮಾಡಿದಾಗ ಇದು ಯಾವ ಧರ್ಮದ ಗ್ರಂಥವು? ಯಾರಿಂದ ರಚಿಸಲ್ಪಟ್ಟಿತು? ಗ್ರಂಥಕಾರನ ಇತಿಹಾಸವೇನು? ಮತ್ತು ಈ ಗ್ರಂಥದಲ್ಲಿ ಬರುವ ಸಿದ್ಧಾಂತವಾವುದು? ಮುಂತಾದ ಅನೇಕ ಪ್ರಶ್ನೆಗಳು ಜಿಜ್ಞಾಸುಗಳ ಮನದಲ್ಲಿ ಮೂಡುವುದು ಸಹಜ. ಅಂತೆಯೇ ಶ್ರೀಸಿದ್ಧಾಂತಶಿಖಾಮಣಿಯ ಬಗೆಗೆ ಉಂಟಾಗುವ ಈ ಎಲ್ಲ ಜಿಜ್ಞಾಸೆಗಳ ಸಮಾಧಾನ ವನ್ನಿಲ್ಲಿ ಮಾಡಲಾಗುವುದು.

ಶ್ರೀಸಿದ್ಧಾಂತಶಿಖಾಮಣಿಯು ವೀರಶೈವ ಧರ್ಮ–ದರ್ಶನಗಳನ್ನು ಸಾಂಗವಾಗಿ ನಿರೂಪಿಸುವ ಒಂದು ಪ್ರಾಮಾಣಿಕವಾದ ಮತ್ತು ಪ್ರಾಚೀನವಾದ ಸಂಸ್ಕೃತ ಗ್ರಂಥವಾಗಿರುತ್ತದೆ. ಇದು ಶ್ರೀ ಜಗದ್ಗುರು ರೇಣುಕರ ಹಾಗೂ ಅಗಸ್ತ್ಯ ಮಹರ್ಷಿಗಳ ಸಂವಾದ ರೂಪವಾಗಿದ್ದು ಪದ್ಯರೂಪವಾದ ಗ್ರಂಥವಾಗಿರುತ್ತದೆ. ಈ ಸೈದ್ಧಾಂತಿಕ ಗ್ರಂಥವನ್ನು ಕಾವ್ಯರೂಪದಲ್ಲಿ ವಿರಚಿಸಿದ ಶಿವಕವಿಯೇ ಶ್ರೀ ಶಿವಯೋಗಿ ಶಿವಾಚಾರ್ಯರು. ಶ್ರೀ ಕೃಷ್ಣಾರ್ಜುನರ ಸಂವಾದವನ್ನು ವ್ಯಾಸಮಹರ್ಷಿಗಳು ಶ್ರೀಮದ್ಭಗವದ್ಗೀತೆಯ ರೂಪದಲ್ಲಿ ಬರೆದಿರಿಸುವಂತೆ ಶ್ರೀ ಶಿವಯೋಗಿ ಶಿವಾಚಾರ್ಯರು ಶ್ರೀ ರೇಣುಕಾಗಸ್ತ್ಯ ಸಂವಾದವನ್ನು ಶ್ರೀಸಿದ್ಧಾಂತಶಿಖಾಮಣಿಯ ಗ್ರಂಥರೂಪದಲ್ಲಿ ಮನುಕುಲಕ್ಕೆ ಕೊಟ್ಟ ಮಹಾನ್ ಕೊಡುಗೆಯಾಗಿರುತ್ತದೆ. ಈ ಎರಡೂ ಗ್ರಂಥಗಳಲ್ಲಿ ಕೆಲವೊಂದು ಸಾಮ್ಯತೆಯನ್ನು ಕಂಡುಕೊಳ್ಳಬಹುದಾಗಿದೆ. ಶ್ರೀಮದ್ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯದಲ್ಲಿ ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ವಿಶ್ವರೂಪದರ್ಶನವನ್ನು ಮಾಡಿಸಿರುವಂತೆ, ಶ್ರೀಸಿದ್ಧಾಂತಶಿಖಾಮಣಿಯ ಇಪ್ಪತ್ತೊಂದನೆಯ ಪರಿಚ್ಛೇದದಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ರಾವಣನ ಸಂಕಲ್ಪಪೂರ್ತಿಗಾಗಿ ವಿಭೀಷಣನ ಪ್ರಾರ್ಥನೆಯ ಮೇರೆಗೆ ಮೂರು ಕೋಟಿ

ಗುರುರೂಪವನ್ನು ಧರಿಸಿ ತ್ರಿಕೋಟಿ ಶಿವಲಿಂಗಗಳನ್ನು ಸಂಸ್ಥಾಪಿಸುವ ಮೂಲಕ ವಿಶ್ವರೂಪದರ್ಶನವನ್ನು ಮಾಡಿದ್ದನ್ನಿಲ್ಲಿ ಕಾಣಬಹುದು.

ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಒಟ್ಟು ಇಪ್ಪತ್ತೊಂದು ಪರಿಚ್ಛೇದಗಳಿದ್ದು ಇವುಗಳಲ್ಲಿ ಮೊದಲನೆಯ ಪರಿಚ್ಛೇದದಿಂದ ನಾಲ್ಕನೆಯ ಪರಿಚ್ಛೇದದವರೆಗೆ ಹಾಗೂ ಇಪ್ಪತ್ತೊಂದನೆಯ ಪರಿಚ್ಛೇದದಲ್ಲಿ ಚಾರಿತ್ರಿಕ ವಿಷಯಗಳು ನಿರೂಪಿಸಲ್ಪಟ್ಟಿರುತ್ತವೆ. ಇನ್ನು ಉಳಿದ ಗ್ರಂಥಭಾಗದಲ್ಲಿ ಅಂದರೆ ಐದನೆಯ ಪರಿಚ್ಛೇದದಿಂದ ಇಪ್ಪತ್ತನೆಯ ಪರಿಚ್ಛೇದದವರೆಗೆ ಪ್ರಮುಖವಾದ ವೀರಶೈವ ಷಟ್‌ಸ್ಥಲ ಸಿದ್ಧಾಂತವು ವಿಸ್ತಾರವಾಗಿ ಪ್ರತಿಪಾದಿತವಾಗಿದೆ. ಇದಕ್ಕೆ ರೇಣುಕಾಗಸ್ತ್ಯಸಂವಾದ, ವೀರಶೈವ ಮಹಾತಂತ್ರ ಮತ್ತು ಶ್ರೀಸಿದ್ಧಾಂತಶಿಖಾಮಣಿ ಎಂಬ ಪರ್ಯಾಯ ನಾಮಗಳುಂಟು. ಆದರೂ ಶ್ರೀಸಿದ್ಧಾಂತಶಿಖಾಮಣಿಯೆಂಬುದೇ ಈ ಗ್ರಂಥದ ಸೂಕ್ತ ಹಾಗೂ ಪ್ರಮುಖವಾದ ಅಧಿಕೃತವಾದ ನಾಮವಾಗಿದೆ. ಶ್ರೀ ಶಿವಯೋಗಿ ಶಿವಾಚಾರ್ಯರು ಈ ಗ್ರಂಥದ ಹೆಸರು ಶ್ರೀಸಿದ್ಧಾಂತಶಿಖಾಮಣಿ ಎಂಬ ವಿಷಯವನ್ನು

ಶ್ರೀವೇದಾಗಮವೀರಶೈವಸರಣಿಂ ಶ್ರೀಷಟ್‌ಸ್ಥಲೋದ್ಯನ್ಮಣಿಂ
ಶ್ರೀಜೀವೇಶ್ವರಯೋಗಪದ್ಮತರಣಿಂ ಶ್ರೀಗೋಪ್ಯಚಿಂತಾಮಣಿಮ್ ।
ಶ್ರೀಸಿದ್ಧಾಂತಶಿಖಾಮಣಿಂ ಲಿಖಯಿತಾ ಯಸ್ತಂ ಲಿಖಿತ್ವಾ ಪರಾ
ಶೃತ್ವಾ ಶ್ರಾವಯಿತಾ ಸ ಯಾತಿ ವಿಮಲಾಂ ಭುಕ್ತಿಂ ಚ ಮುಕ್ತಿಂ ಪರಾಮ್ ॥

(ಸಿ.ಶಿ., ೨೧-೫೪)

ಎಂದು ಸಮರ್ಥಿಸಿದ್ದಾರೆ. ತಾತ್ಪರ್ಯವೇನೆಂದರೆ ವೇದಾಗಮಗಳಲ್ಲಿ ಪ್ರತಿಪಾದಿಸಲ್ಪಟ್ಟ ವೀರಶೈವ ತತ್ತ್ವ ಪದ್ಧತಿಯನ್ನು ಅನುಸರಿಸುತ್ತಿರುವಂತಹ, ಷಟ್‌ಸ್ಥಲಗಳೆಂಬ ಶ್ರೇಷ್ಠ ರತ್ನಗಳಿಂದೊಡಗೂಡಿದ, ಲಿಂಗಾಂಗಸಾಮರಸ್ಯ ಸಿದ್ಧಾಂತವನ್ನು ಸವಿಸ್ತಾರವಾಗಿ ಪ್ರತಿಪಾದಿಸುವ ಶಿವರಹಸ್ಯಕ್ಕೆ ಚಿಂತಾಮಣಿಯಂತಿರುವ ಈ ಶ್ರೀಸಿದ್ಧಾಂತ ಶಿಖಾಮಣಿಯನ್ನು ಯಾರು ಪ್ರೀತಿಯಿಂದ ಬರೆಯುವರೋ ಮತ್ತು ಅನ್ಯರಿಂದ ಬರೆಯಿಸುವರೋ, ಯಾರು ಇದನ್ನು ಶ್ರದ್ಧೆಯಿಂದ ಶ್ರವಣ ಮಾಡುವರೋ ಹಾಗೂ ಅನ್ಯರಿಗೆ ಶ್ರವಣ ಮಾಡಿಸುವರೋ ಅವರು ಇಹಲೋಕದಲ್ಲಿ ನಿರ್ಮಲವಾದ ಭೋಗಭಾಗ್ಯವನ್ನು ಪಡೆದು ಕೊನೆಗೆ ಸರ್ವಶ್ರೇಷ್ಠವಾದ ಮೋಕ್ಷವನ್ನು ಪಡೆಯುವರು.

ಶ್ರೀ ಶಿವಯೋಗಿ ಶಿವಾಚಾರ್ಯರು ಈ ಗ್ರಂಥದ ಕೊನೆಯ ಭಾಗದಲ್ಲಿ ಗ್ರಂಥ ಮಹಿಮೆಯನ್ನು ವಿವರಿಸುತ್ತ ಗ್ರಂಥನಾಮೋಲ್ಲೇಖವನ್ನು ಮಾಡಿರುವುದನ್ನು

ನೋಡಿದಾಗ 'ಶ್ರೀಸಿದ್ಧಾಂತಶಿಖಾಮಣಿ'ಯೆಂಬುದು ಈ ಗ್ರಂಥದ ಅಧಿಕೃತ ನಾಮವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಅಂತೆಯೇ ತಾಡೋಲೆಯ ಪ್ರತಿಗಳನ್ನು ಮೊದಲುಗೊಂಡು ಇಲ್ಲಿಯವರೆಗೆ ಅಚ್ಚುಗೊಂಡಿರುವ ಎಲ್ಲ ಪ್ರತಿಗಳಲ್ಲಿ ಶ್ರೀಸಿದ್ಧಾಂತ ಶಿಖಾಮಣಿ ಎಂಬ ನಾಮವೇ ಬಳಕೆಯಲ್ಲಿ ಬಂದಿದೆ.

ಗ್ರಂಥನಾಮ ರಹಸ್ಯ :

ಶ್ರೀ ಶಿವಯೋಗಿ ಶಿವಾಚಾರ್ಯರು ತಾವು ಬರೆದ ಈ ಗ್ರಂಥಕ್ಕೆ ಶ್ರೀ ಸಿದ್ಧಾಂತಶಿಖಾಮಣಿ ಎಂಬ ನಾಮಕರಣ ಮಾಡುವಲ್ಲಿಯೂ ಒಂದು ಶಾಸ್ತ್ರೀಯವಾದ ರಹಸ್ಯವು ಅಡಕವಾಗಿರುತ್ತದೆ. ಅದೇನೆಂದರೆ ಈ ಪೂರ್ವದಲ್ಲಿ ಹೇಳಿದಂತೆ ಶಿವೋಪದಿಷ್ಟಗಳಾದ ಕಾಮಿಕಾದಿ ವಾತುಲಾಂತಗಳೆಂಬ ಇಪ್ಪತ್ತೆಂಟು ಶಿವಾಗಮಗಳಿಗೆ ಸಿದ್ಧಾಂತಾಗಮಗಳೆಂದು ಕರೆಯಲಾಗಿದೆ. ಈ ಸಿದ್ಧಾಂತಾಗಮಗಳ ಕೊನೆಯ ಭಾಗದಲ್ಲಿ ನಿರೂಪಿಸಲ್ಪಟ್ಟ ವೀರಶೈವ ಸಿದ್ಧಾಂತವನ್ನು ಈ ಗ್ರಂಥದಲ್ಲಿ ಸಂಗ್ರಹಿಸಿರುವುದರಿಂದ ಈ ಗ್ರಂಥೋಕ್ತ ವಿಷಯವು ಸಿದ್ಧಾಂತಗಳ ಶಿಖಾಮಣಿ ಯಂತಿರುತ್ತದೆ. ಈ ಸಿದ್ಧಾಂತದ ಮೇಲೆ ಬೇರೆ ಒಂದು ಸಿದ್ಧಾಂತವಿಲ್ಲದಿರುವುದರಿಂದ ಈ ಸಿದ್ಧಾಂತವೇ ಶಿಖಾಮಣಿರೂಪವಾದ ಸಿದ್ಧಾಂತವು. ಇದನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು

> **ಸರ್ವೇಷಾಂ ಶೈವತಂತ್ರಾಣಾಮುತ್ತರತ್ವಾನ್ನಿರುತ್ತರಮ್ ।**
> **ನಾಮ್ನಾ ಪ್ರತೀಯತೇ ಲೋಕೇ ಯತ್ ಸಿದ್ಧಾಂತಶಿಖಾಮಣಿಃ ॥**
>
> (ಸಿ.ಶಿ., ೨೧-೩೧)

ಎಂದು ಸಮರ್ಥಿಸಿದ್ದಾರೆ. ಅಂದರೆ ಎಲ್ಲ ಶೈವಾಗಮಗಳ ಉತ್ತರ ಭಾಗದಲ್ಲಿ ನಿರೂಪಿಸಲ್ಪಟ್ಟ ಮತ್ತು ಇದಕ್ಕೆ ಉತ್ತರದಲ್ಲಿ ಬೇರಾವ ಸಿದ್ಧಾಂತವು ಇಲ್ಲದಿರುವುದರಿಂದ ಇದುವೇ ಶಿಖಾಮಣಿರೂಪವಾದ ಸಿದ್ಧಾಂತವು. ಇಂತಹ ಸಿದ್ಧಾಂತವನ್ನು ಪ್ರತಿಪಾದಿಸಿರುವ ಕಾರಣದಿಂದಾಗಿ ಈ ಗ್ರಂಥಕ್ಕೆ ಶ್ರೀಸಿದ್ಧಾಂತಶಿಖಾಮಣಿ ಎಂಬುದಾಗಿ ಹೆಸರಿಸಲಾಗಿದೆ.

ಈ ಸಿದ್ಧಾಂತವನ್ನು ಪೂರ್ವದಲ್ಲಿ ಶಿವನು ದೇವಿಗೆ, ಷಣ್ಮುಖನಿಗೆ ಹಾಗೂ ತನ್ನ ಗಣರಿಗೆ ಉಪದೇಶಿಸಿದ್ದನು. ಶಿವೋಪದಿಷ್ಟವಾದ ಈ ಸಿದ್ಧಾಂತವು ಪ್ರಪ್ರಥಮವಾಗಿ ಈ ಪೂರ್ವದಲ್ಲಿ ಹೇಳಿದ ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ, ಮತ್ತು ವಿಶ್ವಕರ್ಣರೆಂಬ ಶಿವಗಣಗಳಿಂದ ಭೂಲೋಕದಲ್ಲಿ ಅಗಸ್ತ್ಯಾದಿ ಮಹರ್ಷಿಗಳಿಗೆ ಉಪದೇಶಿಸಲ್ಪಟ್ಟಿತು. ಹೀಗೆ ಶಿವಗಣರಲ್ಲಿ ಪ್ರಖ್ಯಾತರಾದ ಶ್ರೀ ಜಗದ್ಗುರು ರೇಣುಕರು ಮಹರ್ಷಿಯಾದ ಅಗಸ್ತ್ಯನಿಗೆ ಉಪದೇಶ ಮಾಡಿದ ಆ ದಿವ್ಯ ತತ್ತ್ವೋಪದೇಶವನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು ಈ ಶ್ರೀಸಿದ್ಧಾಂತಶಿಖಾಮಣಿಯಲ್ಲಿ

ಸಂಗ್ರಹಿಸಿದ್ದಾರೆ. ಹೀಗೆ ಈ ಎಲ್ಲ ದೃಷ್ಟಿಯಿಂದ ಈ ಗ್ರಂಥಕ್ಕೆ ಶ್ರೀಸಿದ್ಧಾಂತಶಿಖಾಮಣಿ ಎಂಬ ನಾಮವು ಸೂಕ್ತವಾದುದೆಂದು ತಿಳಿದುಬರುತ್ತದೆ.

ಶ್ರೀ ಶಿವಯೋಗಿ ಶಿವಾಚಾರ್ಯರ ದೇಶ ಮತ್ತು ಕಾಲ:

ಶ್ರೀ ಶಿವಯೋಗಿ ಶಿವಾಚಾರ್ಯರು ಗ್ರಂಥದ ಪ್ರಥಮ ಪರಿಚ್ಛೇದದಲ್ಲಿ ಹದಿಮೂರನೆಯ ಶ್ಲೋಕದಿಂದ ಇಪ್ಪತ್ಮೂರನೆಯ ಶ್ಲೋಕದವರೆಗೆ ತಮ್ಮ ವಂಶವರ್ಣನೆಯನ್ನು ಮಾಡಿದ್ದಾರೆ. ಅದಷ್ಟರಿಂದ ಅವರ ದೇಶ–ಕಾಲಾದಿಗಳನ್ನು ನಿರ್ಧರಿಸುವುದು ಕಷ್ಟಸಾಧ್ಯವಾಗುತ್ತದೆ. ಆದರೆ ಪ್ರಾಚೀನ ಗ್ರಂಥಗಳಲ್ಲಿ ಬಂದಿರುವ ಶ್ರೀಸಿದ್ಧಾಂತಶಿಖಾಮಣಿಯ ಉಲ್ಲೇಖಗಳ ಆಧಾರದ ಮೇಲೆ ಈತನ ದೇಶಕಾಲಾದಿಗಳನ್ನು ವಿದ್ವಾಂಸರು ನಿರ್ಧರಿಸಿದ್ದಾರೆ. ಅದನ್ನೇ ಇಲ್ಲಿ ಅತಿ ಸಂಕ್ಷಿಪ್ತವಾಗಿ ತಿಳಿಸಲಾಗುವುದು.

ಶ್ರೀ ಶಿವಯೋಗಿ ಶಿವಾಚಾರ್ಯರು ವಿವರಿಸಿದ ವಂಶವರ್ಣನೆಯ ಮೇರೆಗೆ ಈತನ ತಂದೆಯ ಹೆಸರು ಸಿದ್ಧನಾಥ, ಅಜ್ಜನ ಹೆಸರು ಮುದ್ದದೇವ ಮತ್ತು ಮುತ್ತಜ್ಜನ ಹೆಸರು ಶಿವಯೋಗಿಯೆಂಬುದು ತಿಳಿದು ಬರುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅಜ್ಜ ಮುತ್ತಜ್ಜನ ಹೆಸರುಗಳನ್ನು ತಮ್ಮ ಸಂತಾನಕ್ಕೆ ಇಡುವ ಪದ್ಧತಿಯು ರೂಢಿಯಲ್ಲಿದೆ. ಅದೇ ಪ್ರಕಾರವಾಗಿ ಗ್ರಂಥಕರ್ತೃವಾದ ಶ್ರೀ ಶಿವಯೋಗಿ ಶಿವಾಚಾರ್ಯನು ತನ್ನ ಮುತ್ತಜ್ಜನ ಹೆಸರನ್ನು ಹೊಂದಿದ್ದನೆಂಬುದು ತಿಳಿದುಬರುತ್ತದೆ.

ಶ್ರೀಸಿದ್ಧಾಂತಶಿಖಾಮಣಿಗೆ ಹದಿನೇಳನೆಯ ಶತಮಾನದವರಾದ ಶ್ರೀ ಮರಿತೋಂಟದಾರ್ಯರು "ತತ್ತ್ವಪ್ರದೀಪಿಕಾ" ಎಂಬ ಸಂಸ್ಕೃತ ವ್ಯಾಖ್ಯಾನವನ್ನು ವಿರಚಿಸಿದ್ದಾರೆ. ಅವರು ಈ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆಯುವಾಗ ಅವತರಣಿಕೆಯಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರನ್ನು ಶ್ರೀ ಸಿದ್ಧರಾಮೇಶ್ವರ ಸಂಪ್ರದಾಯಸ್ಥರೆಂಬುದಾಗಿ ಹೇಳಿದ್ದಾರೆ. ಇವರ ಈ ಹೇಳುವಿಕೆಗೆ ಕಾರಣವೇನೆಂದರೆ ಶಿವಾಚಾರ್ಯರ ವಂಶವರ್ಣನೆಯಲ್ಲಿ ಬರುವ ಮುದ್ದದೇವ ಮತ್ತು ಸಿದ್ಧನಾಥನೆಂಬ ನಾಮಸಾಮ್ಯತೆಯೇ ಆಗಿರುತ್ತದೆ. ಶ್ರೀ ರೇವಣಸಿದ್ಧೇಶ್ವರರ ಕೃಪಾಶೀರ್ವಾದದಿಂದ ಜನಿಸಿದ ಸೊನ್ನಲಗಿಯ ಶ್ರೀ ಸಿದ್ಧರಾಮೇಶ್ವರರ ತಂದೆಯ ಹೆಸರು ಮುದ್ದಗೌಡ ಎಂಬುದಾಗಿರುತ್ತದೆ. ಶ್ರೀ ಮರಿತೋಂಟದಾರ್ಯರು ಮುದ್ದಗೌಡನನ್ನು ಮುದ್ದದೇವನೆಂಬುದಾಗಿ ಭಾವಿಸಿ ಸಿದ್ಧನಾಥನನ್ನು ಸಿದ್ಧರಾಮನೆಂಬುದಾಗಿ ತಿಳಿದು ಕಿಂಚಿತ್ ನಾಮಸಾಮ್ಯತೆಯ ಆಧಾರದಿಂದ ಶ್ರೀ ಶಿವಯೋಗಿ ಶಿವಾಚಾರ್ಯರನ್ನು ಸೊನ್ನಲಗಿಯ ಸಿದ್ಧರಾಮೇಶ್ವರರ ಸಂಪ್ರದಾಯಸ್ಥನೆಂದು ಹೇಳಿರುವುದು

ಸೂಕ್ತವಾಗಿರುವುದಿಲ್ಲ. ಈ ಗ್ರಂಥಕ್ಕೆ 'ತಾತ್ಪರ್ಯದೀಪಿಕಾ' ಎಂಬ ಕನ್ನಡ ವ್ಯಾಖ್ಯಾನವನ್ನು ಬರೆದಿರುವ ಆಸ್ಥಾನ ವಿದ್ವಾನ್ ಶ್ರೀ ಎನ್.ಆರ್. ಕರಿಬಸವಶಾಸ್ತ್ರಿಗಳವರು ಈ ವಿಚಾರವನ್ನು ತಮ್ಮ ಪ್ರಸ್ತಾವನೆಯಲ್ಲಿ ಅಲ್ಲಗಳೆದಿದ್ದಾರೆ. ಇದೂ ಅಲ್ಲದೆ ಡಾ॥ ಜ.ಚ.ನಿ. ಯವರು ಸಹ ಇದನ್ನು ಅಲ್ಲಗಳೆದದ್ದನ್ನು ಕಾಣಬಹುದು.

ಇಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳುವುದಾದರೆ ಶ್ರೀ ಶಿವಯೋಗಿ ಶಿವಾಚಾರ್ಯರು ತಮ್ಮ ವಂಶವರ್ಣನೆಯಲ್ಲಿ ತಂದೆ ಹಾಗೂ ಅಜ್ಜ ಮುಂತಾದವರ ಹೆಸರುಗಳನ್ನು ಹೇಳದಿರುವುದರಿಂದ ಇವರ ಈ ವಂಶವು ಗೃಹಸ್ಥ ಪರಂಪರೆಯದಾಗಿರದೇ ವೀರಶೈವ ಪರಂಪರೆಯಲ್ಲಿ ಬರುವ ಪುತ್ರವರ್ಗದ ಗುರು ಪರಂಪರೆಯಾಗಿ ಕಂಡುಬರುತ್ತದೆ. ಅಂತೆಯೇ ಇವರಿಗೆಲ್ಲ ಶಿವಾಚಾರ್ಯರೆಂಬ ಉಪಾಧಿಯೂ ಉಲ್ಲೇಖಿಸಲ್ಪಟ್ಟಿದೆ. ಈ ದೃಷ್ಟಿಯಿಂದ ಪ್ರಾಚೀನ ಕಾಲದ ಶಿವಯೋಗಿ ಶಿವಾಚಾರ್ಯನ ಶಿಷ್ಯನು ಮುದ್ದದೇವ ಶಿವಾಚಾರ್ಯನು. ಆ ಮುದ್ದದೇವ ಶಿವಾಚಾರ್ಯನ ಶಿಷ್ಯನು ಸಿದ್ಧನಾಥ ಶಿವಾಚಾರ್ಯನು. ಸಿದ್ಧನಾಥ ಶಿವಾಚಾರ್ಯನ ಶಿಷ್ಯನೇ ಈ ಶಿವಯೋಗಿ ಶಿವಾಚಾರ್ಯನೆಂಬುದಾಗಿ ತಿಳಿದುಕೊಳ್ಳಬೇಕು.

ಕ್ರಿ.ಶ. ೧೦೬೦ ರ ಶ್ರೀಕರಭಾಷ್ಯದಲ್ಲಿ ಶ್ರೀಸಿದ್ಧಾಂತಶಿಖಾಮಣಿಯ ಸ್ಪಷ್ಟವಾದ ಉಲ್ಲೇಖಗಳು ಕಂಡುಬರುವುದರಿಂದ ಇದನ್ನು ಶ್ರೀಕರಭಾಷ್ಯಕ್ಕಿಂತ ಪ್ರಾಚೀನವೆಂದು ಹೇಳುವಲ್ಲಿ ಯಾವ ಸಂಶಯವೂ ಇರುವುದಿಲ್ಲ. ಇದೂ ಅಲ್ಲದೇ ಹತ್ತನೆಯ ಶತಮಾನದ್ದೆಂದು ಸುಪ್ರಸಿದ್ಧವಾಗಿರುವ ಶ್ರೀಕಂಠಭಾಷ್ಯದಲ್ಲಿಯೂ "ಅವಿಭಾಗೇನ ದೃಷ್ಟತ್ವಾತ್" (ಬ್ರಹ್ಮಸೂತ್ರ., ೪-೪-೪) ಎಂಬ ಸೂತ್ರದ ಭಾಷ್ಯವನ್ನು ಬರೆಯುವಾಗ ಶ್ರೀಕಂಠಶಿವಾಚಾರ್ಯರು – "ಮುಕ್ತಃ ಶಿವಸಮೋ ಭವೇತ್" (ಸಿ.ಶಿ.) ಎಂಬ ಶ್ರೀಸಿದ್ಧಾಂತಶಿಖಾಮಣಿಯ ಶ್ಲೋಕಾಂಶವನ್ನು ಉದ್ಧರಿಸಿದ್ದನ್ನು ನೋಡಿದರೆ ಇದು ಹತ್ತನೆಯ ಶತಮಾನಕ್ಕಿಂತಲೂ ಪ್ರಾಚೀನವೆಂಬುದು ತಿಳಿದು ಬರುತ್ತದೆ. ಅನೇಕ ಜನ ವಿದ್ವಾಂಸರು ಉಪಲಬ್ಧವಿರುವ ಆಧಾರಗಳ ಮೇಲಿಂದ ಶ್ರೀಸಿದ್ಧಾಂತ ಶಿಖಾಮಣಿಯ ಕಾಲವನ್ನು ಎಂಟನೆಯ ಶತಮಾನಕ್ಕಿಂತಲೂ ಪ್ರಾಚೀನವೆಂಬುದಾಗಿ ಒಪ್ಪಿಕೊಂಡಿದ್ದಾರೆ. ಈ ವಿಷಯಕವಾದ ವಿಸ್ತೃತವಾದ ವಿವೇಚನೆಯನ್ನು "ಸಿದ್ಧಾಂತ ಶಿಖಾಮಣಿಸಮೀಕ್ಷಾ" ಎಂಬ ನಮ್ಮ ಸಂಸ್ಕೃತ ಶೋಧ ಪ್ರಬಂಧದಲ್ಲಿ ಅವಲೋಕಿಸಬಹುದು. ಇದೂ ಅಲ್ಲದೇ –

ಯೇನ ರಕ್ಷಾವತೀ ಜಾತಾ ಶಿವಭಕ್ತಿಃ ಸನಾತನೀ ।
ಬೌದ್ಧಾದಿಪ್ರತಿಸಿದ್ಧಾಂತಮಹಾಧ್ವಾಂತಾಂಶುಮಾಲಿನಾ ॥

(ಸಿ.ಶಿ., ೧-೨೨)

ಎಂಬ ಶ್ರೀಸಿದ್ಧಾಂತಶಿಖಾಮಣಿಯಲ್ಲಿಯ ಈ ಶ್ಲೋಕದಿಂದ ತಿಳಿದುಬರುವುದೇನೆಂದರೆ ನಮ್ಮೀ ದೇಶದಲ್ಲಿ ಬೌದ್ಧಮತದ ಪ್ರಬಲ ಪ್ರಚಾರವಿರುವ ಕಾಲದಲ್ಲಿ ಅಂದರೆ ಇಂದಿಗೆ ಸುಮಾರು ಎರಡು ಸಾವಿರ ವರ್ಷ ಪೂರ್ವದಲ್ಲಿ ಶಿವಭಕ್ತಿಯನ್ನು ಸಂರಕ್ಷಿಸುವ ದೃಷ್ಟಿಯಿಂದ ಶ್ರೀ ಶಿವಯೋಗಿ ಶಿವಾಚಾರ್ಯರು ಈ ಗ್ರಂಥವನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಇದರ ಆಧಾರದಿಂದ ಗ್ರಂಥಕರ್ತೃವಾದ ಶ್ರೀ ಶಿವಯೋಗಿ ಶಿವಾಚಾರ್ಯರು ಎರಡು ಸಾವಿರ ವರ್ಷ ಪೂರ್ವದಲ್ಲಿ ಇದ್ದರೆಂಬ ವಿಚಾರವನ್ನು ಲಿಂ. ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಭಗವತ್ಪಾದರು (ಸಿದ್ಧಾಂತಶಿಖಾಮಣಿ ಸತ್ಯಾರ್ಥಪ್ರಕಾಶ, ಪು. ೨) ಮತ್ತು ನಾಗನೂರು ಬೃಹನ್ಮಠಾಧ್ಯಕ್ಷರಾದ ಲಿಂ. ವೇ.ಪಂ. ಕಾಶೀನಾಥಶಾಸ್ತ್ರಿಗಳು (ಸಿದ್ಧಾಂತಶಿಖಾಮಣಿ, ಪ್ರಸ್ತಾವನಾ. ಪುಟ. ೫) ಪ್ರತಿಪಾದಿಸಿದ್ದಾರೆ. ಇವರ ಈ ವಿಚಾರವೂ ಸಹ ಆದರಣೀಯವಾದುದಾಗಿದೆ.

ಶ್ರೀ ಶಿವಯೋಗಿ ಶಿವಾಚಾರ್ಯರು ತಮ್ಮ ದೇಶನಾಮವನ್ನು ಎಲ್ಲಿಯೂ ಉಲ್ಲೇಖಿಸಿರದೇ ಇದ್ದರೂ ಅಲ್ಲಿ ಬಂದಿರುವ ಮುದ್ದದೇವ ಮುಂತಾದ ಹೆಸರುಗಳ ಆಧಾರದ ಮೇಲೆ ಇವರು ಕರ್ನಾಟಕ ಪ್ರಾಂತದವರಾಗಿದ್ದರೆಂಬುದನ್ನು ಡಾ. ಜ.ಚ.ನಿ.ಯವರು ಹಾಗೂ ಪಂ. ಕಾಶೀನಾಥಶಾಸ್ತ್ರಿಗಳವರು ಪ್ರತಿಪಾದಿಸಿದ್ದಾರೆ. ಡಾ. ಜ.ಚ.ನಿ. ಯವರ ಅಭಿಪ್ರಾಯದಂತೆ ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ಸಾಲೂಟಗಿ ಗ್ರಾಮವು ಇವರ ನಿವಾಸಭೂಮಿಯಾಗಿದ್ದು ಅಲ್ಲಿ ಒಂದು ಸಂಸ್ಕೃತ ವಿದ್ಯಾಪೀಠವಿದ್ದು, ಅದಕ್ಕೆ ಶ್ರೀ ಶಿವಯೋಗಿ ಶಿವಾಚಾರ್ಯರು ಕುಲಪತಿಗಳಾಗಿದ್ದರೆಂದು ಪ್ರತಿಪಾದಿಸಿದ್ದಾರೆ. ಈ ವಿಷಯದಲ್ಲಿ ಇನ್ನಷ್ಟು ಸಂಶೋಧನೆಯು ಅವಶ್ಯಕವೆಂಬುದಾಗಿ ನಮಗೆ ತಿಳಿದುಬರುತ್ತದೆ.

ಶ್ರೀ ಅಗಸ್ತ್ಯ ಮಹರ್ಷಿ :

ಶ್ರೀಸಿದ್ಧಾಂತಶಿಖಾಮಣಿಯು ರೇಣುಕಾಗಸ್ತ್ಯ ಸಂವಾದ ರೂಪವಾದುದಾಗಿದೆ. ಇಲ್ಲಿ ರೇಣುಕರು ಉಪದೇಶಕರಾದರೆ ಅಗಸ್ತ್ಯನು ಉಪದೇಶ್ಯನು ಅರ್ಥಾತ್ ಶ್ರೋತೃವು. ಈತನ ಚರಿತ್ರೆ ಹಾಗೂ ಮಹಿಮೆಯ ಬಗ್ಗೆಯೂ ಅನೇಕ ಕಡೆಗಳಲ್ಲಿ ಉಲ್ಲೇಖವಿರುವುದುಂಟು. ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಬರುವ ಆತನ ಮಹಿಮಾ ವರ್ಣನೆಯ ಪ್ರಕಾರ ವಿಂಧ್ಯನ ನಿರೋಧ, ನಹುಷನಿಗೆ ಶಾಪ, ಸಪ್ತಸಾಗರಪಾನ ಮತ್ತು ವಾತಾಪಿ–ಇಲ್ವಲರೆಂಬ ರಾಕ್ಷಸರ ಸಂಹಾರದ ಘಟನೆಗಳು (ಸಿ.ಶಿ., ೪. ೩೯–೪೦) ಮುಖ್ಯವಾದವುಗಳಾಗಿವೆ. ಉಪರೋಕ್ತ ಘಟನಾ ಸಂಬಂಧಿಗಳಾದ ಕಥೆಗಳು ಸರ್ವಜನ ವೇದ್ಯವಾದವುಗಳಾಗಿವೆ. ಇಂತಹ ಮಹಿಮಾ ಸಂಪನ್ನನಾದ ಅಗಸ್ತ್ಯನಿಗೆ ಕುಂಭೋದ್ಭವ, ಕಲಶಸಂಭವ ಎಂಬ ಪರ್ಯಾಯ ನಾಮಗಳೂ

ಸಹ ರೂಢಿಯಲ್ಲಿವೆ. ಈ ನಾಮಗಳ ಅರ್ಥವನ್ನು ವಿಶ್ಲೇಷಿಸಿದಾಗ ಈತನು ಕುಂಭ ಇಲ್ಲವೆ ಕಲಶದಲ್ಲಿ ಜನಿಸಿದವನು ಎಂದರ್ಥವಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಸಧ್ಯದ ರಂಭಾಪುರೀಪೀಠದ ಸಮೀಪದಲ್ಲಿ ಕಲಶವೆಂಬ ಹೆಸರಿನ ಗ್ರಾಮವಿರುವುದರಿಂದ ಅಲ್ಲಿಯೇ ಇವನ ಜನ್ಮವಾಗಿರಬಹುದೆಂಬುದು ಶ್ರೀ ಫ.ಗು. ಹಳಕಟ್ಟಿಯವರ ಅಭಿಪ್ರಾಯವಾಗಿದೆ. ಶ್ರೀ ಜ.ಸಿ. ಗಾಂಗುಲಿಯವರು ಅಗಸ್ತ್ಯನನ್ನು ಮೂಲತಃ ಕಾಶಿನಿವಾಸಿಯನ್ನಾಗಿ ಒಪ್ಪಿಕೊಳ್ಳುತ್ತಾರೆ. ಕಾಶೀ ಕ್ಷೇತ್ರದಲ್ಲಿಯೂ ಅಗಸ್ತ್ಯ ಕುಂಡವೆಂಬ ಸ್ಥಾನವು ಸುಪ್ರಸಿದ್ಧವಾಗಿದೆ. ಈ ಈರ್ವರು ವಿದ್ವಾಂಸರ ವಿಚಾರಗಳನ್ನು ಸಮನ್ವಯವಾಗಿ ಮಾಡುವುದಾದರೆ. ಚಿಕ್ಕಮಗಳೂರು ಜಿಲ್ಲೆಯ ಕಲಶ ಗ್ರಾಮದಲ್ಲಿ ಜನಿಸಿದ ಅಗಸ್ತ್ಯನು ಕಾಶೀಕ್ಷೇತ್ರದಲ್ಲಿ ನಿವಾಸಿಸಿ, ವಿದ್ಯಾಧ್ಯಯನವನ್ನು ಮಾಡಿರಬಹುದು. ಸಕಲಶಾಸ್ತ್ರಗಳಲ್ಲಿ ಪಾರಂಗತೆಯನ್ನು ಪಡೆದ ನಂತರ ಪುನಃ ಚಿಕ್ಕಮಗಳೂರು ಜಿಲ್ಲೆಯ ಕಲಶ ಗ್ರಾಮದ ಸಮೀಪ ಮಲಯಪರ್ವತದಲ್ಲಿ ಆಶ್ರಮವನ್ನು ನಿರ್ಮಿಸಿಕೊಂಡು ಶಿಷ್ಯ ಪ್ರಶಿಷ್ಯರಿಗೆ ಶಾಸ್ತ್ರೋಪದೇಶವನ್ನು ಮಾಡುತ್ತಿರಬಹುದೆಂದು ಪರಿಗಣಿಸಿದರೆ ಸೂಕ್ತವೆನಿಸಬಹುದಾಗಿದೆ.

ಶ್ರೀ ಅಗಸ್ತ್ಯ ಮಹರ್ಷಿಯ ದೇಶ ಮತ್ತು ಕಾಲ ಸಂಬಂಧದ ವಿಷಯದಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಯು ಅವಶ್ಯಕವಾದುದಾಗಿದೆ. ಪಂಜಾಬ ರಾಜ್ಯದಲ್ಲಿಯ ಜಗರಾವೋ (ಜಿಲ್ಲಾ ಲುದಿಯಾನಾ) ಎಂಬ ಗ್ರಾಮದಲ್ಲಿ ಪಂಜಾಬ ಸಂಸ್ಕೃತ ಅಕಾಡೆಮಿ ವತಿಯಿಂದ ಅಗಸ್ತ್ಯನ ಸಾಹಿತ್ಯಿಕ ವಿಷಯವಾದ ಸಂಶೋಧನೆಯು ಪ್ರಾರಂಭವಾಗಿದೆ. ಆದ್ದರಿಂದ ಈತನ ಚರಿತ್ರೆ ಮತ್ತು ಸಾಹಿತ್ಯ ವಿಷಯಕವಾದ ಹೆಚ್ಚಿನ ವಿಚಾರಗಳು ಈ ಅಕಾಡೆಮಿಯಿಂದ ಹೊರಬರುವ ನಿರೀಕ್ಷೆಯಿದೆ. ನಮ್ಮ ದೃಷ್ಟಿಯಿಂದ ವಿಚಾರಿಸಲಾಗಿ ಅಗಸ್ತ್ಯನು ಶ್ರೀ ಜಗದ್ಗುರು ರೇಣುಕಾಚಾರ್ಯರ ಪ್ರಥಮ ಶಿಷ್ಯನಾಗಿದ್ದನು. ಅವರಿಂದ ಶಿವಾದ್ವೈತ ಸಿದ್ಧಾಂತದ ಉಪದೇಶವನ್ನು ಪಡೆದ ಈತನು ವೀರಶೈವತತ್ತ್ವಸಿದ್ಧಾಂತದ ಪ್ರಚಾರದಲ್ಲಿ ಬಹುದೊಡ್ಡ ಪಾತ್ರವನ್ನು ನಿರ್ವಹಿಸಿದ್ದಾನೆ. ವ್ಯಾಸ ಮಹರ್ಷಿಗಳ ಬ್ರಹ್ಮಸೂತ್ರಕ್ಕೆ ವೀರಶೈವಸಿದ್ಧಾಂತ ಪರವಾದ ವೃತ್ತಿಯನ್ನು ಈತನು ಬರೆದು ಪ್ರಸಿದ್ಧ ಪಡೆಸಿದ್ದಾನೆ. ಆ 'ಅಗಸ್ತ್ಯವೃತ್ತಿ'ಯನ್ನು ಆಧಾರವಾಗಿಟ್ಟುಕೊಂಡೇ ಶ್ರೀಪತಿಪಂಡಿತಾರಾಧ್ಯರು ಶ್ರೀಕರಭಾಷ್ಯವನ್ನು ವಿರಚಿಸಿದ್ದಾರೆಂಬುದು ಅವರೇ ಬರೆದ ಭಾಷ್ಯಾರಂಭದಲ್ಲಿಯ

ಅಗಸ್ತ್ಯಮುನಿಚಂದ್ರೇಣ ಕೃತಾಂ ವೈಯಾಸಿಕೀಂ ಶುಭಾಮ್ ।
ಸೂತ್ರವೃತ್ತಿಂ ಸಮಾಲೋಕ್ಯ ಕೃತಂ ಭಾಷ್ಯಂ ಶಿವಂಕರಮ್ ॥

ಎಂಬ ಶ್ಲೋಕದಿಂದ ತಿಳಿದುಬರುತ್ತದೆ.

ಶ್ರೀ ಅಗಸ್ತ್ಯ ಮಹರ್ಷಿಯು ಅನೇಕ ಶಾಸ್ತ್ರಗಳನ್ನು ಬಲ್ಲವನಾಗಿದ್ದರೂ

ದ್ವೈತಾದ್ವೈತ ವಿಷಯಕವಾದ ಸಂಶಯವು ಅವನನ್ನು ಕಾಡುತ್ತಿತ್ತು. ಅಂತೆಯೇ ತನ್ನ ಆಶ್ರಮಕ್ಕೆ ದಯಮಾಡಿಸಿದ ರೇಣುಕರನ್ನು ಕುರಿತು –

ಉತ್ತ್ವಾ ಭವಾನ್ ಸಕಲಲೋಕಮಹೋಪಕಾರಂ
ಸಿದ್ಧಾಂತಸಂಗ್ರಹಮನಾದೃತಬಾಹ್ಯತಂತ್ರಮ್ ।
ಸದ್ಯಃ ಕೃತಾರ್ಥಯಿತುಮರ್ಹತಿ ದಿವ್ಯಯೋಗಿನ್
ನಾನಾಗಮಶ್ರವಣವರ್ತಿತಸಂಶಯಂ ಮಾಮ್ ॥ (ಸಿ.ಶಿ., ೪–೫೪)

ಈ ವಿಧವಾಗಿ ಪ್ರಾರ್ಥಿಸಿಕೊಂಡಿದ್ದಾನೆ. ತಾತ್ಪರ್ಯವೇನೆಂದರೆ ದಿವ್ಯ ಶಿವಯೋಗಿಯಾದ ರೇಣುಕನೇ! ನಾನು ಅನೇಕ ಆಗಮಗಳನ್ನು ಅಭ್ಯಸಿಸಿ ಅವೆಲ್ಲವುಗಳ ತಾತ್ಪರ್ಯವನ್ನು ನಿರ್ಣಯಿಸುವುದರಲ್ಲಿ ಅಸಮರ್ಥನಾಗಿ ಸಂಶಯಕ್ಕೊಳಗಾಗಿದ್ದೇನೆ. ಆದ್ದರಿಂದ ಜಗತ್ತಿನ ಸಕಲ ಮಾನವರಿಗೆ ಉಪಕಾರವಾಗು ವಂತಹ ಸಿದ್ಧಾಂತ ಸಮ್ಮತವಾದ ಉಪದೇಶವನ್ನು ಮಾಡಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು.

ಅಗಸ್ತ್ಯ ಮಹರ್ಷಿಗಳ ಈ ಪ್ರಾರ್ಥನೆಯನ್ನು ನಿಮಿತ್ತ ಮಾಡಿಕೊಂಡೇ ಈ ಗ್ರಂಥಸ್ಥ ವಿಷಯವು ಪ್ರಾರಂಭವಾಗಿರುವುದರಿಂದ ಇಲ್ಲಿರುವ ಈ ಸಿದ್ಧಾಂತವು ವೇದಾಗಮ ಸಮ್ಮತವೂ, ದ್ವೈತಾದ್ವೈತ ಸಮನ್ವಯಾತ್ಮಕವೂ, ಸರ್ವಜೀವಿಗಳ ಕಲ್ಯಾಣಕಾರಕವೂ ಆಗಿರುವುದೆಂಬುದಾಗಿ ನಿರ್ಣಯಿಸಬಹುದಾಗಿದೆ. ಇದರಿಂದ ಈ ಶ್ರೀಸಿದ್ಧಾಂತಶಿಖಾಮಣಿಯನ್ನು ಕೇವಲ ವೀರಶೈವ ಧರ್ಮಗ್ರಂಥವೆಂದು ಹೇಳದೇ ಸರ್ವಮಾನವರನ್ನು ಕುರಿತು ಉಪದೇಶ ಮಾಡಿದ ಮಾನವತಾವಾದಿ ದಿವ್ಯ ಗ್ರಂಥವೆಂಬುದಾಗಿ ಕರೆಯುವುದೇ ಉಚಿತವೆಂದು ತೋರುತ್ತದೆ. ಈ ಗ್ರಂಥದಲ್ಲಿ ಒಬ್ಬ ಮನುಷ್ಯನು ಕ್ರಮವಾಗಿ ತನ್ನ ಮಾನಸಿಕ ವಿಕಾಸವನ್ನು ಸಾಧಿಸಿಕೊಂಡು ನೂರೊಂದು ಸ್ಥಲಗಳ ದಿವ್ಯ ಮಾರ್ಗದಲ್ಲಿ ನಡೆದು, ಕೊನೆಗೆ ಮಹಾದೇವನೊಂದಿಗೆ ಸಮರಸವಾಗುವ ಉತ್ಕೃಷ್ಟ ವಿಚಾರವು ಪ್ರತಿಪಾದಿಸಲ್ಪಟ್ಟಿದೆ.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು :

ಶ್ರೀಸಿದ್ಧಾಂತಶಿಖಾಮಣಿಯು ಶ್ರೀ ಜಗದ್ಗುರು ರೇಣುಕ ಭಗವತ್ಪಾದರಿಂದ ಉಪದೇಶಿಸಲ್ಪಟ್ಟ ದಿವ್ಯ ಗ್ರಂಥವಾಗಿರುತ್ತದೆ. ಅಂದಾಗ ಈ ರೇಣುಕ ಭಗವತ್ಪಾದರ ಬಗ್ಗೆಯೂ ತಿಳಿದುಕೊಳ್ಳುವುದು ಪರಮಾವಶ್ಯಕವಾಗಿರುತ್ತದೆ. ಈ ಪೂರ್ವದಲ್ಲಿ ಹೇಳಿರುವಂತೆ ಶಿವನ ಅನೇಕ ಗಣಗಳಲ್ಲಿ ಪ್ರಖ್ಯಾತರಾಗಿರುವ ಪಂಚಗಣಾಧೀಶ್ವರರಲ್ಲಿ ಇವರು ಒಬ್ಬರಾಗಿರುತ್ತಾರೆ. ವೀರಶೈವ ಪಂಚಪೀಠಗಳಲ್ಲೊಂದಾದ ರಂಭಾಪುರಿ ಮಹಾಪೀಠದ ದ್ವಾಪರಯುಗದ ಮಹಾಚಾರ್ಯರು. ಶಿವನ ಅಣತಿಯ ಮೇರೆಗೆ ಉಳಿದ ನಾಲ್ಕು ಜನ ಆಚಾರ್ಯರಂತೆ ಇವರೂ ಸಹ ಭೂಲೋಕದಲ್ಲಿ ಅವತರಿಸಿ

ವೀರಶೈವ ಧರ್ಮವನ್ನು ಸಂಸ್ಥಾಪಿಸಿದ್ದಾರೆ. ಶ್ರೀ ಜಗದ್ಗುರು ಪಂಚಾಚಾರ್ಯರು ಸರ್ವ ಮಾನವರಂತೆ ಮಾತಾಪಿತೃಗಳ ಉದರದಿಂದ ಜನಿಸಿ ಬಂದವರಲ್ಲ. ಶಿವನಷ್ಟೇ ಸಾಮರ್ಥ್ಯಶಾಲಿಗಳಾದ ಇವರು ಭೂಲೋಕದಲ್ಲಿ ಲಿಂಗೋದ್ಭವರಾಗಿ ಅವತರಿಸಿದುದನ್ನು ಶಿವಾಗಮಗಳು, ಸಿದ್ಧಾಂತಶಿಖಾಮಣಿ ಮತ್ತು ಶರಣರ ವಚನಗಳು ಸಹ ಸಾರಿರುವುದನ್ನು ಕಾಣಬಹುದು. ಈ ಎಲ್ಲಾ ಪ್ರಮಾಣಗಳ ಆಧಾರದಿಂದ ಶ್ರೀ ರೇಣುಕರು ಆಂಧ್ರಪ್ರದೇಶದ ಕೊಲ್ಲಿಪಾಕಿಯ ಸೋಮೇಶ್ವರಲಿಂಗದಿಂದ, ಶ್ರೀ ದಾರುಕರು ಮಧ್ಯಪ್ರದೇಶದಲ್ಲಿಯ ಅವಂತಿಕಾ (ಉಜ್ಜಯಿನಿ) ನಗರದಲ್ಲಿಯ ವಟಕ್ಷೇತ್ರ ಸಿದ್ಧೇಶ್ವರಲಿಂಗದಿಂದ, ಶ್ರೀ ಘಂಟಾಕರ್ಣರು ಆಂಧ್ರಪ್ರದೇಶದ ದ್ರಾಕ್ಷಾರಾಮ ಕ್ಷೇತ್ರದ ಭೀಮನಾಥಲಿಂಗದಿಂದ, ಶ್ರೀ ಧೇನುಕರ್ಣರು ಆಂಧ್ರಪ್ರದೇಶದ ಶ್ರೀಶೈಲ ಕ್ಷೇತ್ರದ ಮಲ್ಲಿಕಾರ್ಜುನ ಜ್ಯೋತಿರ್ಲಿಂಗದಿಂದ ಮತ್ತು ಶ್ರೀ ವಿಶ್ವಕರ್ಣರು ಉತ್ತರಪ್ರದೇಶದ ಕಾಶೀಕ್ಷೇತ್ರದಲ್ಲಿಯ ಶ್ರೀ ವಿಶ್ವೇಶ್ವರ ಜ್ಯೋತಿರ್ಲಿಂಗದಿಂದ ಆವಿರ್ಭೂತರಾಗಿ ರುತ್ತಾರೆಂಬುದು ತಿಳಿದು ಬರುತ್ತದೆ. ಶ್ರೀ ಜಗದ್ಗುರು ಪಂಚಾಚಾರ್ಯರ ಈ ಲಿಂಗಾವಿರ್ಭಾವ ಲೀಲೆಯನ್ನು ಶ್ರೀ ಅಕ್ಕಮಹಾದೇವಿಯು –

ಲಿಂಗದಿಂದುದಯಿಸಿ ಅಂಗವಿಡಿದಿಪ್ಪ ಪುರಾತನರ
ಇಂಗಿತವನೇನೆಂದು ಬೆಸಗೊಂಬಿರಯ್ಯ
ಅವರ ನಡೆಯೇ ಆಗಮ, ಅವರ ನುಡಿಯೇ ವೇದ
ಅವರ ಲೋಕದ ಮಾನವರೆಂದೆನ್ನಬಹುದೇ ಅದೆಂತೆಂದೊಡೆ–
ವೃಕ್ಷಾದ್ಭವಂತಿ ಬೀಜಾನಿ ತದ್ ವೃಕ್ಷೇ ಲೀಯತೇ ಪುನಃ ।
ರುದ್ರಲೋಕಂ ಪರಿತ್ಯಜ್ಯ ಶಿವಲೋಕೇ ಭವಿಷ್ಯತಿ ॥
ಎಂಬುದಾಗಿ
ಅಂಕೋಲೆಯ ಬೀಜದಿಂದಾಯಿತ್ತು ವೃಕ್ಷವು
ಆ ವೃಕ್ಷವು ಮರಳಿ ಬೀಜದೊಳಡಗಿತ್ತು
ಆ ಪ್ರಕಾರದಿ ಲಿಂಗದೊಳಗಿದ್ದ ಪುರಾತನರು
ಆ ಲಿಂಗದೊಳಗೆ ಬೆರಸಿದರು ನೋಡಿರಯ್ಯ
ಇಂತಪ್ಪ ಪುರಾತನರಿಗೆ ನಾನು ಶರಣೆಂದು
ಹುಟ್ಟುಗೆಟ್ಟನಯ್ಯ ಚನ್ನಮಲ್ಲಿಕಾರ್ಜುನಾ !

ಈ ರೀತಿಯಾಗಿ ವಿವರಿಸಿದ್ದಾಳೆ. ಲಿಂಗದಿಂದ ಆವಿರ್ಭೂತರಾದ ಪಂಚಾಚಾರ್ಯರು ತಮ್ಮ ಆವಿರ್ಭಾವದ ಪ್ರಯೋಜನೆಯು ಪೂರ್ಣವಾದ ನಂತರ ಪುನಃ ಆ ಲಿಂಗದಲ್ಲಿಯೇ ಅಡಗಿದರೆಂಬ ವಿಷಯವನ್ನು ಬೀಜವೃಕ್ಷನ್ಯಾಯದಿಂದ ಸಮರ್ಥಿಸಿದ್ದನ್ನು ಇಲ್ಲಿ ಕಾಣಬಹುದು. ಬೀಜದಿಂದ ಒಂದು ವೃಕ್ಷವು ಉದಯಿಸುವುದಲ್ಲದೇ ಆ ವೃಕ್ಷವೇ ಪುನಃ ಬೀಜದಲ್ಲಿ ಅಂಕುರರೂಪವಾಗಿ ಅಡಗಿರುವ

ಪ್ರಾಕೃತಿಕ ಸತ್ಯವು ಸರ್ವಾನುಭವಸಿದ್ಧವಾದುದು. ಅದೇ ಪ್ರಕಾರವಾಗಿ ಈ ಶ್ರೀ ಜಗದ್ಗುರು ಪಂಚಾಚಾರ್ಯರು ಸಹ ಪೂರ್ವದಲ್ಲಿ ಹೇಳಿದ ಲಿಂಗಗಳಿಂದ ಆವಿರ್ಭವಿಸಿ ಪುನಃ ಆ ಲಿಂಗಗಳಲ್ಲಿಯೇ ಅಡಗಿದರೆಂಬ ವಿಷಯದಲ್ಲಿ ಸಂಶಯಕ್ಕೆ ಆಸ್ಪದವಿಲ್ಲ.

ಇನ್ನೋರ್ವ ವಚನಕಾರರಾದ ಶ್ರೀ ಅನಾದಿ ತೋಂಟದ ಸಿದ್ಧಲಿಂಗೇಶ್ವರರು–

ಆದಿಯಲ್ಲಿ ಶಿವತತ್ವದಲ್ಲಿ ರೇಣುಕನುದಯನಾಗದಿದ್ದರೆ
ಇಲ್ಲಿ ಶಿವಲಿಂಗದಲ್ಲಿ ಉದಯವಾದ ಪರಿಯಂತೋ
ಆ ಶಿವನಲ್ಲಿಯೇ ಹುಟ್ಟಿ ಶಿವನಲ್ಲಿಯೇ ಲಯವಾದ
ರೇವಣಸಿದ್ಧೇಶ್ವರನು ಅನಾದಿ ಮುಕ್ತನಲ್ಲ
ಅವಾಂತರ ಮುಕ್ತನೆಂಬ ಅಜ್ಞಾನಿಗಳಿಗೆ
ನಾಯಕ ನರಕ ತಪ್ಪದು.

ಎಂಬ ತಮ್ಮೀ ವಚನದಲ್ಲಿ ಶ್ರೀ ರೇಣುಕರ ಲಿಂಗಾವತಾರವನ್ನು ಸ್ಪಷ್ಟವಾಗಿ ಹೇಳಿ ಇಂತಹ ಮಹಿಮಾಶಾಲಿಗಳ ಬಗ್ಗೆ ಅಲ್ಲ ಸಲ್ಲದ ಮಾತುಗಳನ್ನಾಡುವವರಿಗೆ ರೌರವ ನರಕವು ಪ್ರಾಪ್ತವಾಗುವುದೆಂದು ದೃಢವಾಗಿ ಪ್ರತಿಪಾದಿಸಿದ್ದಾರೆ. ಇದೂ ಅಲ್ಲದೆ ಸುಪ್ರಭೇದಾಗಮ, ಸ್ವಾಯಂಭುವಾಗಮ, ವೀರಲೈಂಗ್ಯೋಪನಿಷತ್ ಮುಂತಾದ ಪ್ರಾಚೀನ ಆಗಮೋಪನಿಷತ್ತುಗಳಲ್ಲಿಯೂ ಜಗದ್ಗುರು ಪಂಚಾಚಾರ್ಯರ ಲಿಂಗಾವಿರ್ಭಾವತೆಯು ಪ್ರತಿಪಾದಿಸಲ್ಪಟ್ಟಿರುವುದರಿಂದ ಈ ಲಿಂಗಾವಿರ್ಭಾವವು ಕೇವಲ ಪೌರಾಣಿಕ ಕಲ್ಪನೆಯಾಗಿರದೇ ಶಾಸ್ತ್ರೀಯವೂ, ವೈಜ್ಞಾನಿಕವೂ ಮತ್ತು ಯೌಗಿಕವೂ ಆಗಿದೆಯೆಂಬುದಾಗಿ ತಿಳಿದುಕೊಳ್ಳಬೇಕು.

ಯೋಗಶಾಸ್ತ್ರಕಾರರಾದ ಪತಂಜಲಿ ಮಹರ್ಷಿಗಳು ಯೋಗಸಿದ್ಧಿಯನ್ನು ಪಡೆದ ಒಬ್ಬ ಯೋಗಿಯು ಪಂಚಮಹಾಭೂತಗಳನ್ನು ತನ್ನ ಅಂಕಿತದಲ್ಲಿ ಇಟ್ಟುಕೊಳ್ಳು ತ್ತಾನೆಂಬುದಾಗಿ (ಯೋ.ಸೂ., ೩–೪೫) ಪ್ರತಿಪಾದಿಸಿದ್ದಾರೆ. ಯೋಗಿಯಾದವನು ತನ್ನ ಯೋಗ ಸಾಮರ್ಥ್ಯದಿಂದ ಅತಿ ಕಠಿಣಗಳಾದ ವಜ್ರಾದಿಗಳನ್ನು ಸಹ ಭೇದಿಸಿ ಅದರೊಳಗೆ ಪ್ರವೇಶಿಸಬಲ್ಲನೆಂಬ ವಿಷಯವನ್ನು ಶ್ರೀ ವಿವೇಕಾನಂದರು – "The Yogees and Saints of India can enter into diamond also by their Phanlasts Power of Yoga" ಈ ರೀತಿಯಾಗಿ ಸಮರ್ಥಿಸಿದ್ದನ್ನು ಕಾಣಬಹುದು.

ಪರಮಾತ್ಮನು ಈ ಸೃಷ್ಟಿಯಲ್ಲಿ ಎಲ್ಲ ಜೀವಿಗಳನ್ನು ಒಂದೇ ವಿಧವಾಗಿ ಹುಟ್ಟಿಸಿರುವುದಿಲ್ಲ. ಸಸ್ಯಗಳು ಭೂಮಿಯನ್ನು ಬಿರಿದು ಬಂದು ಉದ್ಭಿಜವೆಂಬುದಾಗಿ; ಪಕ್ಷಿಸರ್ಪಾದಿಗಳು ತತ್ತಿಯನ್ನು ಒಡೆದು ಬಂದು ಅಂಡಜವೆಂಬುದಾಗಿ; ಕೂರೆ,

ಹೇನು ಮುಂತಾದವುಗಳು ದೇಹದ ಬೆವರಿನಿಂದ ಜನಿಸಿ ಬಂದು ಸ್ವೇದಜವೆಂಬುದಾಗಿ ಮತ್ತು ಪಶು ಮನುಷ್ಯಾದಿ ಜೀವಿಗಳು ಮಾತೆಯ ಉದರದೊಳಗಿನ ಜರಾಯು ಎಂಬ ಚೀಲದಿಂದ ಹೊರಬಂದು ಜರಾಯುಜವೆಂಬುದಾಗಿ ಕರೆಯಿಸಿಕೊಳ್ಳುತ್ತವೆ. ಹೀಗೆ ಸೃಷ್ಟಿಯಲ್ಲಿರುವ ವೈವಿಧ್ಯತೆಯು ಜೀವಿಗಳ ಉತ್ಪತ್ತಿಯ ವಿಭಿನ್ನತೆಯನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ಎಲ್ಲರೂ ಒಂದೇ ರೀತಿಯಾಗಿ ಹುಟ್ಟಿ ಬರಬೇಕೆಂಬ ನಿಯಮವೇನೂ ಇರುವುದಿಲ್ಲ. ಈ ಸೃಷ್ಟಿಯಲ್ಲಿ ಜಡದಿಂದ ಚೇತನ ಹಾಗೂ ಚೇತನದಿಂದ ಜಡದ ಉತ್ಪತ್ತಿಯಾಗುವುದನ್ನು ಸಹ ಕಾಣುತ್ತಿರುತ್ತೇವೆ. ಇದೊಂದು ಪ್ರಾಕೃತಿಕವಾಗಿರುವ ಘಟನೆಯಾಗಿರುವುದರಿಂದ ಆಶ್ಚರ್ಯಕ್ಕೆ ಅವಕಾಶವಿರುವುದಿಲ್ಲ. ಪ್ರಕೃತಿಯಲ್ಲಿಯೇ ಅಲೌಕಿಕ ಶಕ್ತಿಯಿರುವಾಗ ಈ ಪ್ರಕೃತಿಗೆ ಒಡೆಯನಾಗಿರುವ ಶಿವನಲ್ಲಿ ಮತ್ತು ಶಿವನಿಗೆ ಸಮಾನರಾಗಿರುವ ಶಿವಗಣಗಳಲ್ಲಿ ಅದೆಂತಹ ಶಕ್ತಿಯೂ ಅಡಗಿರುವುದೆಂಬುದನ್ನು ಊಹಿಸಬಹುದಾಗಿದೆ. ಆದ್ದರಿಂದ ರೇಣುಕಾದಿ ಪಂಚಾಚಾರ್ಯರ ಲಿಂಗಾವತಾರವನ್ನು ಸರ್ವರೂ ಆದರಪೂರ್ವಕವಾಗಿ ಒಪ್ಪಿಕೊಳ್ಳಬೇಕು. ಪ್ರಹ್ಲಾದನಿಗಾಗಿ ವಿಷ್ಣು ಭಗವಂತನು ಕಂಬದಿಂದ ಪ್ರಕಟವಾದಂತೆ, ಮಾರ್ಕಂಡೇಯನಿಗಾಗಿ ಪರಮಾತ್ಮನು ಲಿಂಗದಿಂದ ಆವಿರ್ಭವಿಸಿದಂತೆ ಈ ಆಚಾರ್ಯರು ಶಿವನ ಆಣತಿಯ ಮೇರೆಗೆ ಭೂಲೋಕದಲ್ಲಿಯ ಶಿವಲಿಂಗಗಳಿಂದ ಆವಿರ್ಭವಿಸಿರುತ್ತಾರೆ.

ಶ್ರೀಸಿದ್ಧಾಂತಶಿಖಾಮಣಿಯ ಚತುರ್ಥ ಪರಿಚ್ಛೇದದಲ್ಲಿ ಶ್ರೀ ಜಗದ್ಗುರು ರೇಣುಕರ ಲಿಂಗಾವತಾರವು –

ಅಥ ತ್ರಿಲಿಂಗವಿಷಯೇ ಕೊಲ್ಲಿಪಾಕ್ಯಾಭಿದೇ ಪುರೇ ।
ಸೋಮೇಶ್ವರಮಹಾಲಿಂಗಾತ್ ಪ್ರಾದುರಾಸೀತ್ ಸ ರೇಣುಕಃ ॥ (ಸಿ.ಶಿ., ೪–೧)

ಎಂದು ವರ್ಣಿಸಲ್ಪಟ್ಟಿದೆ. ತಾತ್ಪರ್ಯವೇನೆಂದರೆ ಆಂಧ್ರಪ್ರದೇಶದಲ್ಲಿ ಸುಪ್ರಸಿದ್ಧ ವಾಗಿರುವ ಕೊಲ್ಲಿಪಾಕಿಯೆಂಬ ಪುರದಲ್ಲಿ 'ಸೋಮೇಶ್ವರ' ವೆಂಬ ಮಹಾಲಿಂಗದಿಂದ ಶ್ರೀ ಜಗದ್ಗುರು ರೇಣುಕರು ಆವಿರ್ಭವಿಸಿದರು. ಇವರ ಈ ಲಿಂಗಾವಿರ್ಭಾವವನ್ನು ಕಂಡು ಮಂದಿರದೊಳಗಿನ ಜನರು ಆಶ್ಚರ್ಯಗೊಂಡಾಗ ರೇಣುಕರು ತಮ್ಮ ಪರಿಚಯವನ್ನು ಹೇಳಿ ತಮ್ಮ ಅವತಾರದ ಪ್ರಯೋಜನದ ಪೂರ್ತಿಗಾಗಿ ಮಲಯಾದ್ರಿಯಲ್ಲಿ ವಾಸವಾಗಿರುವ ಅಗಸ್ತ್ಯನ ಬಳಿಗೆ ಹೋಗುವುದಾಗಿ ತಿಳಿಸಿ ಆಕಾಶಮಾರ್ಗವಾಗಿ ಮಲಯ ಪರ್ವತಕ್ಕೆ ಬಂದು ಅಲ್ಲಿ ಅಗಸ್ತ್ಯ ಮಹರ್ಷಿ ಮತ್ತು ಲೋಪಾಮುದ್ರೆಯರಿಂದ ಆತಿಥ್ಯವನ್ನು ಸ್ವೀಕರಿಸಿ ಕುಶಲವಾರ್ತೆಯಾದ ನಂತರ ಅಗಸ್ತ್ಯನ ಸಂಶಯವನ್ನು ದೂರಮಾಡಲೋಸುಗ ಶಿವಾದ್ವೈತ ಸಿದ್ಧಾಂತವನ್ನು

ಉಪದೇಶ ಮಾಡುತ್ತಾರೆ. ಅವರು ಮಾಡಿದ ಆ ಉಪದೇಶವನ್ನೇ ಶ್ರೀ ಶಿವಯೋಗಿ ಶಿವಾಚಾರ್ಯರು ಮತ್ತಷ್ಟು ವಿಸ್ತರಿಸಿ ನಮ್ಮೆಲ್ಲರ ಕೈಗೆ ಶ್ರೀಸಿದ್ಧಾಂತಶಿಖಾಮಣಿಯ ರೂಪದಲ್ಲಿ ತಂದೊದಗಿಸಿದ್ದಾರೆ.

ಶ್ರೀ ಜಗದ್ಗುರು ರೇಣುಕರ ಸಮನ್ವಯ ಸಿದ್ಧಾಂತೋಪದೇಶ :

ಶ್ರೀ ಅಗಸ್ತ್ಯ ಮಹರ್ಷಿಯ ಭಿನ್ನಪವನುಲಿಸಿದ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಒಂದು ಕ್ಷಣಕಾಲ ಸಾಂಬಶಿವನನ್ನು ಧ್ಯಾನಿಸಿ ಏಕಾಗ್ರಚಿತ್ತರಾಗಿ ಅಗಸ್ತ್ಯ ಮಹರ್ಷಿಯನ್ನು ಕುರಿತು ಉಪದೇಶಿಸತೊಡಗಿದರು – ಹೇ ಮುನಿಶ್ರೇಷ್ಠನಾದ ಅಗಸ್ತ್ಯನೇ! ನೀನು ಸಮಸ್ತ ನಿಗಮಾಗಮಗಳನ್ನು ಬಲ್ಲವನಾಗಿರುವೆ. ಆದರೂ ನಿನ್ನಲ್ಲಿ ಸಂಶಯವು ಉದಯವಾಗಿರುವುದರಿಂದ ಶಿವಜ್ಞಾನವನ್ನುಂಟುಮಾಡುವ ಸಿದ್ಧಾಂತವನ್ನು ಉಪದೇಶಿಸುವೆನು. ಆದರಪೂರ್ವಕವಾಗಿ ಶ್ರವಣಮಾಡು. ಈ ಜಗತ್ತಿನಲ್ಲಿರುವ ಜನರ ಅಭಿರುಚಿಯ ಮೇರೆಗೆ ಅನೇಕ ಸಿದ್ಧಾಂತಗಳು ಪ್ರಚಲಿತದಲ್ಲಿವೆ. ಅವುಗಳೇ ಸಾಂಖ್ಯ, ಯೋಗ, ಪಾಂಚರಾತ್ರ ಮತ್ತು ಪಾಶುಪತ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತವೆ. ಇವೆಲ್ಲವುಗಳು ಭಿನ್ನ ಭಿನ್ನ ಆಚಾರ–ವಿಚಾರಗಳನ್ನು ನಿರೂಪಿಸುವಂಥವುಗಳಾಗಿರುತ್ತವೆ. ಇವೆಲ್ಲ ಶಾಸ್ತ್ರಗಳು ಪ್ರಾಮಾಣಿಕ ಗಳಾಗಿರುವುದರಿಂದ ಯುಕ್ತಿ – ಪ್ರಯುಕ್ತಿಗಳ ಮೂಲಕ ಇವುಗಳನ್ನಾರೂ ಖಂಡಿಸಕೂಡದು.

ಈ ಮೇಲೆ ಹೇಳಿದ ಸಾಂಖ್ಯಾದಿ ಶಾಸ್ತ್ರಗಳಿಗೆ ವೇದವೇ ಆಧಾರ ವಾಗಿರುವುದರಿಂದ ವೇದಮಾರ್ಗವನ್ನು ಅನುಸರಿಸುತ್ತಿರುತ್ತವೆ. ಆದ್ದರಿಂದ ಇವುಗಳನ್ನು ಪ್ರಾಮಾಣಿಕಗಳೆಂಬುದಾಗಿ ಕರೆಯಲಾಗಿದೆ. ಆದರೂ ಪಾಂಚರಾತ್ರ ಮತ್ತು ಸಾಂಖ್ಯಾದಿ ಶಾಸ್ತ್ರಗಳು ವೇದದ ಏಕದೇಶಿಗಳಾಗಿದ್ದು ಶೈವಸಿದ್ಧಾಂತವು ಮಾತ್ರ ಸಂಪೂರ್ಣವಾಗಿ ವೇದ ಸಮ್ಮತವಾಗಿರುತ್ತದೆ. ಆದ್ದರಿಂದ ವೇದೈಕದೇಶವರ್ತಿ ಗಳಾದ ಉಳಿದೆಲ್ಲ ಶಾಸ್ತ್ರಗಳಿಗಿಂತಲೂ ಸಿದ್ಧಾಂತ ಸಂಜ್ಞಕವಾದ ಶೈವತಂತ್ರವು ವಿಶಿಷ್ಟವಾಗಿರುತ್ತದೆ.

ಶಿವನಿಂದ ಉಪದೇಶಿಸಲ್ಪಟ್ಟ ಆಗಮಗಳು ಶೈವ, ಪಾಶುಪತ, ಸೋಮ ಮತ್ತು ಲಾಕುಲಗಳೆಂಬ ಹೆಸರಿನಿಂದ ಅನೇಕ ಪ್ರಕಾರಗಳಾಗಿರುತ್ತವೆ. ಈ ಎಲ್ಲ ಆಗಮಗಳಲ್ಲಿ ಶೈವಾಗಮವು ವಾಮ, ದಕ್ಷಿಣ, ಮಿಶ್ರ ಮತ್ತು ಸಿದ್ಧಾಂತವೆಂಬುದಾಗಿ ನಾಲ್ಕು ಪ್ರಕಾರದ್ದಾಗಿರುತ್ತದೆ. ಶಕ್ತಿಯ ಆರಾಧನೆಯನ್ನು ಪ್ರಧಾನವಾಗಿ ಉಪದೇಶಿಸುವ ವಾಮಾಗಮವೆಂತಲೂ, ಭೈರವನ ಉಪಾಸನೆಯನ್ನು ನಿರೂಪಿಸುವ ಆಗಮಗಳಿಗೆ ದಕ್ಷಿಣಾಗಮವೆಂತಲೂ, ಸಪ್ತಮಾತೃಕೆಯರ ಉಪಾಸನೆಯನ್ನು ಪ್ರತಿಪಾದಿಸುವ ಆಗಮ ಗಳಿಗೆ ಮಿಶ್ರಾಗಮಗಳೆಂತಲೂ ಕರೆಯುತ್ತಾರೆ. ಸಿದ್ಧಾಂತಾಗಮಗಳು ಮಾತ್ರ

ಸಂಪೂರ್ಣವಾಗಿ ವೇದ ಸಮ್ಮತಗಳಾಗಿರುತ್ತವೆ. ಆದರೆ ವೇದಸಮ್ಮತಗಳಾದ ಆಗಮಗಳಿಗೆ ಸಿದ್ಧಾಂತಾಗಮಗಳೆಂದು ಕರೆಯುತ್ತಾರೆ. ಆದ್ದರಿಂದ ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಸಿದ್ಧಾಂತ ಶೈವಾಗಮಗಳು ವೇದದಷ್ಟೇ ಪ್ರಮಾಣ ಭೂತಗಳಾಗಿರುತ್ತವೆಂಬುದಾಗಿ ತಿಳಿದುಕೊಳ್ಳಬೇಕು. ಈ ಇಪ್ಪತ್ತೆಂಟು ಸಿದ್ಧಾಂತ ಶೈವಾಗಮಗಳ ಉತ್ತರಭಾಗದಲ್ಲಿ ವೀರಶೈವ ಮಹಾಮತವು ನಿರೂಪಿಸಲ್ಪಟ್ಟಿರುತ್ತದೆ. ಆದ್ದರಿಂದ ವೀರಶೈವಸಿದ್ಧಾಂತವು ನಿಗಮಾಗಮ ಸಮ್ಮತವೆಂಬುದಾಗಿ ತಿಳಿದುಕೊಳ್ಳಬೇಕು.

ವೀರಶೈವ ಶಬ್ದಾರ್ಥ ನಿರೂಪಣೆ :

ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಅಗಸ್ತ್ಯ ಮಹರ್ಷಿಯನ್ನು ಕುರಿತು –

ವಿದ್ಯಾಯಾಂ ಶಿವರೂಪಾಯಾಂ ವಿಶೇಷಾದ್ರಮಣಂ ಯತಃ ।
ತಸ್ಮಾದೇತೇ ಮಹಾಭಾಗಾ ವೀರಶೈವಾ ಇತಿ ಸ್ಮೃತಾಃ ॥

ವೀ ಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿಕಾ ।
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ ॥

ವೇದಾಂತಜನ್ಯಂ ಯಜ್ ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ ।
ವಿದ್ಯಾಯಾಂ ರಮತೇ ತಸ್ಯಾಂ ವೀರ ಇತ್ಯಭಿಧೀಯತೇ ॥

(ಸಿ.ಶಿ., ೫. ೧೫–೧೬, ೧೮)

ಎಂದು ವೀರಶೈವ ಶಬ್ದಾರ್ಥವನ್ನು ವಿಶ್ಲೇಷಿಸಿದ್ದಾರೆ. ತಾತ್ಪರ್ಯವೇನೆಂದರೆ, ಶಿವರೂಪವಾದ ವಿದ್ಯೆಯಲ್ಲಿ ವಿಶೇಷವಾಗಿ ರಮಿಸುತ್ತಿರುವ ಶಿವಭಕ್ತನೇ ವೀರಶೈವನು. ಇಲ್ಲಿ ಬಂದಿರುವ 'ವೀರ' ಎಂಬ ಎರಡಕ್ಷರಗಳಲ್ಲಿ 'ವೀ' ಎಂದರೆ ಶಿವ ಮತ್ತು ಜೀವರ ಅಭೇದ ಬೋಧನೆಯನ್ನು ಮಾಡುವ ವಿದ್ಯೆ ಯೆಂದರ್ಥ. ಇನ್ನು 'ರ' ಎಂದರೆ ಆ ವಿದ್ಯೆಯಲ್ಲಿ ರಮಿಸುವುದು ಎಂದರ್ಥ. ಹೀಗೆ ಶಿವಜೀವೈಕ್ಯ ಬೋಧರೂಪವಾದ ವಿದ್ಯೆಯಲ್ಲಿ ಸದಾ ಆನಂದಿಸುತ್ತಿರುವ ಶಿವಭಕ್ತನಿಗೆ ವೀರಶೈವನೆಂದು ಕರೆಯಲಾಗುವುದು. ಇದೇ ಪ್ರಕಾರ "ವೇದಾಂತವಾಕ್ಯಜಾವಿದ್ಯಾ" ಎಂಬ ಸೂತಗೀತೆಯ ಉಕ್ತಿಗನುಸಾರವಾಗಿ ವೇದಾಂತವಾಕ್ಯಗಳಿಂದ ಉತ್ಪನ್ನವಾದ ಜ್ಞಾನಕ್ಕೂ ವಿದ್ಯೆ ಎಂಬುದಾಗಿ ಕರೆಯುವರು. ಆ ವಿದ್ಯೆಯಲ್ಲಿ ರಮಿಸುವವನೇ ಅರ್ಥಾತ್ ಆನಂದಿಸುವವನೇ ವೀರನು. ಇಂತಹ ವೀರನಾದ ಶಿವಭಕ್ತನಿಗೆ ವೀರಶೈವನೆಂದು ಕರೆಯಲಾಗುವುದು. ಇದು ವೀರಶೈವ ಶಬ್ದದ ದಾರ್ಶನಿಕ ವಿಶ್ಲೇಷಣೆಯು. ಈ ವಿಶ್ಲೇಷಣೆಯನ್ನು ನೋಡಿದಾಗ ಇಂತಹ ವಿದ್ಯೆಯಲ್ಲಿ ಅದ್ವೈತ

ವೇದಾಂತಿಗಳೂ ಆನಂದಿಸುವುದರಿಂದ ಅವರನ್ನೂ ಸಹ ವೀರಶೈವರೆಂದು ಕರೆಯಬೇಕಾಗುವದು. ಹೀಗೆ ವೀರಶೈವರಲ್ಲದವರಲ್ಲಿ ವೀರಶೈವ ಲಕ್ಷಣವು ಅತಿವ್ಯಾಪ್ತವಾಗುವುದರಿಂದ ಇದನ್ನು ನಿರ್ದುಷ್ಟಲಕ್ಷಣವೆಂದು ಹೇಗೆ ಕರೆಯಬಹುದು? ಎಂಬ ಸಂಶಯವು ಲಕ್ಷಣ ಶಾಸ್ತ್ರಜ್ಞರ ಮನಸ್ಸಿನಲ್ಲಿ ಮೂಡುವುದು ಸಹಜವಾಗಿದೆ. ಇದರ ನಿವಾರಣೆಗಾಗಿ ಶ್ರೀಪತಿಪಂಡಿತಾರಾಧ್ಯರು "ಅಥಾಽತೋ ಬ್ರಹ್ಮಜಿಜ್ಞಾಸಾ" (ಬ್ರ.ಸೂ., ೧-೧-೧) ಎಂಬ ಈ ಸೂತ್ರದ ಭಾಷ್ಯದಲ್ಲಿ 'ಅಥ' ಶಬ್ದದ ಅರ್ಥವನ್ನು "ಲಿಂಗಧಾರಣಾತ್ಮಕಪಾಶುಪತದೀಕ್ಷಾನಂತರ್ಯಮಿತ್ಯಥ ಶಬ್ದಾರ್ಥೋ ನಿರ್ಣೀಯತೇ" ಎಂಬುದಾಗಿ ಹೇಳಿದ್ದಾರೆ. ತಾತ್ಪರ್ಯವೇನೆಂದರೆ ಶಿವಜೀವೈಕ್ಯಬೋಧಕವಾದ ವಿದ್ಯೆಯನ್ನು ಪಡೆಯುವ ಪೂರ್ವದಲ್ಲಿ ಸಾಧಕನು ಇಷ್ಟಲಿಂಗಧಾರಣಾರೂಪವಾದ ದೀಕ್ಷಾ ಸಂಸ್ಕಾರವನ್ನು ಪಡೆಯಬೇಕಾಗುವುದು. ಹೀಗೆ ದೀಕ್ಷಾಸಂಪನ್ನನಾದ ಸಾಧಕನೇ ಈ ವಿದ್ಯೆಗೆ ಅಧಿಕಾರಿಯಾಗಿರುವುದರಿಂದ ಇಷ್ಟಲಿಂಗಧಾರಿಯಾಗಿದ್ದು ಶಿವ-ಜೀವರ ಐಕ್ಯ ಬೋಧಕವಾದ ವಿದ್ಯೆಯಲ್ಲಿ ರಮಿಸುವವನೇ ವೀರಶೈವನೆಂಬುದಾಗಿ ತಿಳಿದುಕೊಳ್ಳಬೇಕು ಅಂದಾಗ ಇಲ್ಲಿ ಯಾವ ದೋಷವೂ ಕಂಡುಬರುವುದಿಲ್ಲ.

ವೀರಶೈವ ಸಾಧಕನು ಧರಿಸುವ ಇಷ್ಟಲಿಂಗಧಾರಣೆ ಹಾಗೂ ಅದರ ನಿತ್ಯ ಪೂಜೆಗೆ ವೀರವ್ರತವೆಂದು ಕರೆಯುತ್ತಾರೆ. ಈ ವ್ರತವನ್ನು ಅತ್ಯಂತ ಭಕ್ತಿಯಿಂದ ಪರಿಪಾಲಿಸುವ ಶಿವಭಕ್ತನಿಗೆ ವೀರಶೈವನೆಂದು ಕರೆಯಬೇಕೆಂಬುದಾಗಿ ಚಂದ್ರಜ್ಞಾನಾಗಮದಲ್ಲಿ-

ಇಷ್ಟಲಿಂಗವಿಯೋಗೇ ವಾ ವ್ರತಾನಾಂ ವಾ ಪರಿಚ್ಯುತೌ ।
ತೃಣವತ್ಪ್ರಾಣಸಂತ್ಯಾಗ ಇತಿ ವೀರವ್ರತಂ ಮತಮ್ ॥

ಭಕ್ತ್ಯುತ್ಸಾಹ ವಿಶೇಷೋಽಪಿ ವೀರತ್ವಮಿತಿ ಕಥ್ಯತೇ ।
ವೀರವ್ರತಸಮಾಯೋಗಾದ್ವೀರಶೈವಂ ಪ್ರಕೀರ್ತಿತಮ್ ॥

(ಕ್ರಿಯಾಪದ., ೧೦. ೩೩-೩೪)

ಎಂದು ಹೇಳಲಾಗಿದೆ. ತಾತ್ಪರ್ಯವೇನೆಂದರೆ, ದೀಕ್ಷಾಸಮಯದಲ್ಲಿ ಸದ್ಗುರುವಿನಿಂದ ಪ್ರಾಪ್ತವಾದ ಇಷ್ಟಲಿಂಗವು ಶರೀರದಿಂದ ಕಳಚಿಬಿದ್ದರೆ ಅಥವಾ ಅದರ ಪೂಜಾರೂಪವಾದ ನಿತ್ಯ ಕರ್ಮದಲ್ಲಿ ವ್ಯತ್ಯಯ ಉಂಟಾದರೆ ಸಾಧಕನು ತನ್ನ ಪ್ರಾಣವನ್ನು ತ್ಯಜಿಸುವೆನೆಂಬ ದೃಢವಾದ ಸಂಕಲ್ಪವನ್ನು ಮಾಡಿ ಹಾಗೆ ಆಚರಿಸುವುದಕ್ಕೆ ವೀರವ್ರತವೆಂದು ಕರೆಯುತ್ತಾರೆ. ಇದೊಂದು ಭಕ್ತಿಯ ಉತ್ಸಾಹವು. ಇಂತಹ ಉತ್ಸಾಹಭರಿತನಾಗಿ ವೀರವ್ರತವನ್ನು ಪರಿಪಾಲಿಸುವ ಸಾಧಕನಿಗೆ ವೀರಶೈವನೆಂಬುದಾಗಿ ಕರೆಯಲಾಗಿದೆ.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರೂ ಸಹ ಈ ವೀರವ್ರತದ ಸ್ವರೂಪವನ್ನು ಈ ಪೂರ್ವದಲ್ಲಿ ಹೇಳಿದ ಆಗಮೋಕ್ತಿಗನುಸಾರವಾಗಿಯೇ –

ಪ್ರಾಣವದ್ಧಾರಣೀಯಂ ತತ್ಪ್ರಾಣಲಿಂಗಮಿದಂ ತವ ।
ಕದಾಚಿತ್ಕುತ್ರಚಿದ್ವಾಪಿ ನ ವಿಯೋಜಯ ದೇಹತಃ ॥

ಯದಿ ಪ್ರಮಾದಾತ್ಪತಿತೇ ಲಿಂಗೇ ದೇಹಾನ್ಮಹೀತಲೇ ।
ಪ್ರಾಣಾನ್ ವಿಮುಂಚ ಸಹಸಾ ಪ್ರಾಪ್ತಯೇ ಮೋಕ್ಷಸಂಪದಃ ॥

ಇತಿ ಸಂಬೋಧಿತಃ ಶಿಷ್ಯೋ ಗುರುಣಾ ಶಾಸ್ತ್ರವೇದಿನಾ ।
ಧಾರಯೇಚ್ಛಾಂಕರಂ ಲಿಂಗಂ ಶರೀರೇ ಪ್ರಾಣಯೋಗತಃ

(ಸಿ.ಶಿ., ೬. ೨೬–೨೮)

ಎಂದು ವಿವರಿಸಿದ್ದಾರೆ. ತಾತ್ಪರ್ಯವೇನೆಂದರೆ ದೀಕ್ಷಾ ಸಂಸ್ಕಾರ ಪೂರ್ವಕವಾಗಿ ಪ್ರಾಪ್ತವಾದ ಇಷ್ಟಲಿಂಗವು ಆ ಸಾಧಕನ ಪ್ರಾಣಲಿಂಗವಿದ್ದಂತೆ. ಆದ್ದರಿಂದ ಸಾಧಕನು ಅದನ್ನು ತನ್ನ ಪ್ರಾಣದೋಪಾದಿಯಲ್ಲಿ ದೇಹದ ಮೇಲೆ ಧರಿಸಿಕೊಂಡಿರಬೇಕು. ಎಂದೂ ಎಲ್ಲಿಯೂ ಅದನ್ನು ದೇಹದಿಂದ ಅಗಲಿಸಕೂಡದು. ಒಂದು ವೇಳೆ ಅನವಧಾನತೆಯಿಂದ ಆ ಲಿಂಗವು ಭೂಮಿಯ ಮೇಲೆ ಬಿದ್ದರೆ ತತ್‌ಕ್ಷಣದಲ್ಲಿಯೇ ತನ್ನ ಪ್ರಾಣವನ್ನೂ ಸಹ ಬಿಟ್ಟುಬಿಡಬೇಕು. ಹೀಗೆ ಪ್ರಾಣವನ್ನು ತ್ಯಜಿಸಿದವನಿಗೆ ಮುಕ್ತಿಯೇ ಪ್ರಾಪ್ತವಾಗುವುದು ಎಂಬುದಾಗಿ ಗುರುವಿನಿಂದ ಬೋಧಿಸಲ್ಪಟ್ಟ ಶಿಷ್ಯನು ತನ್ನ ಶರೀರದ ಮೇಲೆ ಇಷ್ಟಲಿಂಗವನ್ನು ತನ್ನ ಪ್ರಾಣದಷ್ಟೇ ಪ್ರೀತಿಸಿ ಧರಿಸಿಕೊಳ್ಳಬೇಕು.

ಇದರಿಂದ ದೇಹದ ಮೇಲೆ ಇಷ್ಟಲಿಂಗವನ್ನು ಧರಿಸುವುದು, ಅದನ್ನು ಅತ್ಯಾದರದಿಂದ ಪೂಜಿಸುವುದು ವೀರಶೈವನ ಅಸಾಧಾರಣ ಲಕ್ಷಣವಾಗಿ ಕಂಡುಬರುವುದು. ಮಹರ್ಷಿಯಾದ ವ್ಯಾಸನು ಸ್ಕಾಂದಮಹಾಪುರಾಣದಲ್ಲಿ –

ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ
ವಿನ್ಯಸ್ಯ ತಲ್ಲೀನಮನಃ ಪ್ರಚಾರ ः ॥

ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ
ಸಂಪೂಜಯತ್ಯಂಗ ಸ ವೀರಶೈವಃ ॥

ಎಂಬುದಾಗಿ ಹೇಳಿ ವಾಮಹಸ್ತಪೀಠದಲ್ಲಿ ತನ್ನ ಇಷ್ಟಲಿಂಗವನ್ನಿರಿಸಿಕೊಂಡು ಏಕಾಗ್ರವಾದ ಮನಸ್ಸಿನಿಂದ ಅದನ್ನು ಪೂಜಿಸುತ್ತ ನಿಸ್ಪೃಹ ವೃತ್ತಿಯವನಾದ ಶಿವಭಕ್ತನೇ ವೀರಶೈವನೆಂಬುದಾಗಿ ಅಸಾಧಾರಣವಾದ ಲಕ್ಷಣವೆಂಬುದಾಗಿ ತಿಳಿಯಪಡಿಸಿದ್ದಾನೆ. ಮೇಲಿನ ಎಲ್ಲ ವಿವರಣೆಗಳಿಂದ ತಿಳಿದುಬರುವುದೇನೆಂದರೆ ದೇಹದ ಮೇಲೆ ಸದಾ ಇಷ್ಟಲಿಂಗವನ್ನು ಧರಿಸಿಕೊಂಡು ಪ್ರತಿನಿತ್ಯವೂ ಅದನ್ನು ಮನಸಾರೆ ಪೂಜಿಸುತ್ತ

ಶಿವ ಹಾಗೂ ಜೀವರ ಐಕ್ಯಬೋಧಕವಾದ ವಿದ್ಯೆಯಲ್ಲಿ ಯಾರು ಆನಂದವನ್ನು ಅನುಭವಿಸುವರೋ ಅವರೇ ವೀರಶೈವರೆಂಬುದಾಗಿ ತಿಳಿದು ಬರುತ್ತದೆ.

ವೀರಶೈವ ಪ್ರಭೇದಗಳು :

ಸೂಕ್ಷ್ಮಾಗಮದ ಪ್ರಕಾರವಾಗಿ ಸಾಮಾನ್ಯ ವೀರಶೈವ, ವಿಶೇಷ ವೀರಶೈವ ಮತ್ತು ನಿರಾಭಾರಿ ವೀರಶೈವ ಎಂಬುದಾಗಿ ಮೂರು ಪ್ರಕಾರವಾಗಿ ವೀರಶೈವ ಪ್ರಭೇದವನ್ನು ಹೇಳಲಾಗಿದೆ. ವೀರಶೈವ ಧರ್ಮದಲ್ಲಿ ಬೋಧಿಸಿದ ಇಷ್ಟಲಿಂಗಪೂಜೆ, ಗುರು ಮತ್ತು ಜಂಗಮರ ಸೇವಾರೂಪಗಳಾದ ಸಾಮಾನ್ಯ ನಿಯಮಗಳನ್ನು ಪರಿಪಾಲಿಸುವವನು ಸಾಮಾನ್ಯ ವೀರಶೈವನೆಂಬುದಾಗಿ ಕರೆಯಲ್ಪಡುವನು. ಇನ್ನು ವೀರಶೈವ ಶಾಸ್ತ್ರೋಕ್ತಗಳಾದ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಗಳೆಂಬ ಷಟ್‌ಸ್ಥಲಸಿದ್ಧಾಂತವನ್ನು ಚೆನ್ನಾಗಿ ಅರಿತು ಅದನ್ನು ಆಚರಿಸುವವನಿಗೆ ವಿಶಿಷ್ಟವೀರಶೈವನೆಂಬುದಾಗಿ ಕರೆಯಲಾಗುವುದು. ಇದೇ ಪ್ರಕಾರವಾಗಿ ಯಾವಾಗ ಸಾಧಕನು ತನ್ನ ಸರ್ವಕರ್ತವ್ಯಗಳಿಂದ ಕೃತಕೃತ್ಯನಾಗಿ ಅರ್ಥಾತ್ ಜೀವನ್ಮುಕ್ತನಾಗಿ ನಿಸ್ಪೃಹತೆಯಿಂದ ಜೀವನವನ್ನು ಸಾಗಿಸುವನೋ ಅವನೇ ನಿರಾಭಾರಿವೀರಶೈವನೆನಿಸಿಕೊಳ್ಳುವನು. (ಸೂಕ್ಷ್ಮಾಗಮ., ಕ್ರಿಯಾಪದ., ೭. ೨೯–೬೪)

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಈ ಆಗಮೋಕ್ತವಾದ ವಿಶೇಷ ವೀರಶೈವವನ್ನು ಆಧರಿಸಿಕೊಂಡು ಸ್ಥಲಧರ್ಮದ ಪ್ರಕಾರವಾಗಿ ವಿಂಗಡಿಸಿದ್ದನ್ನು ಕಾಣಬಹುದು. ಈ ವೀರಶೈವನು ಅಷ್ಟಾವರಣ ಸಂಪನ್ನನಾಗಿ, ಪಂಚಾಚಾರ ಪಾರಾಯಣನಾಗಿ ಮತ್ತು ಷಟ್‌ಸ್ಥಲಮಾರ್ಗದಲ್ಲಿ ನಡೆದು ಲಿಂಗಾಂಗಸಾಮರಸ್ಯವನ್ನು ಪಡೆದು ಜೀವನ್ಮುಕ್ತನಾಗುವನು. ಆದ್ದರಿಂದ ಇವನ ಈ ಸಾಧನೆಗೆ ಅನುಕೂಲವಾಗುವ ಆವರಣಗಳ ಬಗೆಗೆ ಇನ್ನು ಮುಂದೆ ವಿವೇಚಿಸೋಣ.

ದ್ವಿತೀಯ ಅಧ್ಯಾಯ

ಶ್ರೀಸಿದ್ಧಾಂತಶಿಖಾಮಣಿಯಲ್ಲಿಯ ಆವರಣ ವಿಜ್ಞಾನ

"ಆವ್ರಿಯತೇ ದೇಹಾದಿಕಂ ಯೇನ ತದಾವರಣಮ್" ಎಂಬ ವ್ಯುತ್ಪತ್ತಿಗನು ಸಾರವಾಗಿ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳನ್ನು ಆವರಿಸಿ ಅವುಗಳನ್ನು ರಕ್ಷಿಸುವ ರಕ್ಷಾಕವಚಕ್ಕೆ ಇಲ್ಲಿ ಆವರಣವೆಂದು ಕರೆಯಲಾಗಿದೆ. ವೀರಶೈವ ಸಿದ್ಧಾಂತದಲ್ಲಿ ಸಾಧಕನ ಸಂರಕ್ಷಣೆಗಾಗಿ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ, ರುದ್ರಾಕ್ಷ ಮತ್ತು ಮಂತ್ರ ಎಂಬುದಾಗಿ ಎಂಟು ಪ್ರಕಾರದ ಆವರಣಗಳು ಸ್ವೀಕರಿಸಲ್ಪಟ್ಟಿವೆ. (ಚಂದ್ರಜ್ಞಾನಾಗಮ., ಕ್ರಿ. ಪಾ., ೨–೧). ಈ ಅಷ್ಟಾವರಣಗಳು ಸಾಧಕನ ಅಂಗಗಳೆಂದು ಕರೆಯಲ್ಪಟ್ಟಿವೆ. ಅಂದರೆ ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲಮಾರ್ಗದಲ್ಲಿ ಗಮಿಸುವ ಸಾಧಕನೇ ಲಿಂಗಾಂಗ ಸಾಮರಸ್ಯರೂಪವಾದ ಕೈವಲ್ಯವನ್ನು ಪಡೆದುಕೊಳ್ಳುವನು. ಆದ್ದರಿಂದ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಈ ಅಷ್ಟಾವರಣಗಳ ವಿಚಾರವನ್ನು ಕ್ರಮವಾಗಿ ಇಲ್ಲಿ ಮಾಡಲಾಗುವುದು.

೧) ಶ್ರೀಗುರು :

ಪೂರ್ವದಲ್ಲಿ ಹೇಳಿದ ಅಷ್ಟಾವರಣಗಳಲ್ಲಿ ಮೊದಲನೆಯ ಆವರಣವೇ ಅರ್ಥಾತ್ ರಕ್ಷಾಕವಚವೇ ಗುರು. ವೀರಶೈವಸಿದ್ಧಾಂತದಲ್ಲಿ ಶಿವನ ಪಂಚಮುಖಗಳಿಂದ ಆವಿರ್ಭವಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರೇ ಮೂಲ ಗುರುಗಳು. ಇವರ ಗೋತ್ರ ಪರಂಪರೆಯಲ್ಲಿ ಬರುವ ಪಟ್ಟಾಧ್ಯಕ್ಷರು ಅರ್ಥಾತ್ ಶಿವಾಚಾರ್ಯರು ಈ ಪೀಠಾಚಾರ್ಯರ ಆದೇಶಾನುಸಾರವಾಗಿ ತಮ್ಮ ಶಿಷ್ಯರಿಗೆ ಶಿಕ್ಷೆ – ದೀಕ್ಷೆಗಳನ್ನನುಗ್ರಹಿಸುತ್ತ ಅವರನ್ನು ಸಂರಕ್ಷಿಸುತ್ತಾರೆ. ಅಂತೆಯೇ ಶ್ರೀ ಶಿವಾಚಾರ್ಯರಿಗೆ ಗುರು ಎಂಬುದಾಗಿ ಕರೆದರೆ, ಮಹಾಚಾರ್ಯರಿಗೆ ಜಗದ್ಗುರು ಎಂಬುದಾಗಿ ಕರೆಯುತ್ತಾರೆ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀಸಿದ್ಧಾಂತ ಶಿಖಾಮಣಿಯಲ್ಲಿ ಗುರುವಿನ ಸ್ವರೂಪವನ್ನು ವಿವರಿಸುತ್ತ –

ಗುಣಾತೀತಂ ಗುವರ್ಣಂ ಚ ರೂಪಾತೀತಂ ರುವರ್ಣಕಮ್ ।
ಗುಣಾತೀತಮರೂಪಂ ಚ ಯೋ ದದ್ಯಾತ್ ಸ ಗುರುಃ ಸ್ಮೃತಃ ॥

(ಸಿ.ಶಿ., ೧೫–೮)

ಎಂದು ಹೇಳಿದ್ದಾರೆ. ಅಂದರೆ ಪ್ರಾಕೃತ ಅರ್ಥಾತ್ ಪ್ರಕೃತಿ ಸಂಬಂಧವಾದ ಸತ್ವಾದಿ ತ್ರಿಗುಣಾತೀತನೂ ಮತ್ತು ಅಶುದ್ಧಮಾಯಾರೂಪಾತೀತನೂ ಆದ ಅಂದರೆ ನಿರ್ಗುಣ ನಿರಾಕಾರನಾದ ಮಹಾಲಿಂಗ ಸ್ವರೂಪವನ್ನು ಯಾರು ಉಪದೇಶಿಸುತ್ತಾರೆಯೋ ಅವರಿಗೆ ಗುರುವೆಂದು ಕರೆಯಲಾಗುತ್ತದೆ. ಈ ಗುರುವಿಗೆ ಆಚಾರ್ಯನೆಂತಲೂ ಕರೆಯುವರು. ಶಾಸ್ತ್ರಗಳ ಅಭ್ಯಾಸವನ್ನು ಮಾಡಿ ಅವುಗಳಲ್ಲಿ ಹೇಳಲ್ಪಟ್ಟ ಆಚರಣೆಗಳನ್ನು ನಿತ್ಯ ಅನುಷ್ಠಾನದಲ್ಲಿ ತರೋಣದರಿಂದ ಇವನಿಗೆ ಆಚಾರ್ಯನೆಂದು ಕರೆಯುತ್ತಾರೆ. (ಸಿ.ಶಿ., ೧೫–೯)

ಪರಶಿವನು ಮಾಯಾಶಕ್ತಿ ವಿಶಿಷ್ಟನಾಗಿರುವುದರಿಂದ ಅವನು ಯಾರಿಗೂ ಗೋಚರನಾಗುವುದಿಲ್ಲ. ಆದರೆ ಅವನೇ ಜ್ಞಾನಶಕ್ತಿಯುಕ್ತನಾಗಿ ಗುರುವಾಗಿ ಅವತರಿಸಿ ಪ್ರತ್ಯಕ್ಷವಾಗಿ ತೋರುತ್ತಿರುತ್ತಾನೆ. (ಸಿ.ಶಿ., ೯–೫೩) ಇಂತಹ ಗುರುವು ಆತ್ಮಜ್ಞಾನಿಯೂ, ವಿಷಯಾಸಕ್ತರಹಿತನೂ, ಶಿವಸಿದ್ಧಾಂತವನ್ನು ಬಲ್ಲವನೂ, ಸಂದೇಹರಹಿತನೂ, ಅರವತ್ನಾಲ್ಕು ಕಲೆಗಳನ್ನು ಬಲ್ಲವನೂ, ಧಾರ್ಮಿಕನೂ, ಸತ್ಯವಾದಿಯೂ, ವೀರ ಮಾಹೇಶ್ವರ ವಂಶಸಂಭೂತನೂ, ಕುಮಾರವರ್ಜಿತನೂ, ಶಿವಧ್ಯಾನ ತತ್ಪರನೂ, ಶಾಂತನೂ, ಶಿವತತ್ತ್ವವಿವೇಕಿಯೂ, ಭಸ್ಮ ತತ್ತ್ವ ವಿವೇಕಿಯೂ, ಭಸ್ಮೋದ್ಧೂಳನ ನಿಷ್ಣಾತನೂ, ತ್ರಿಪುಂಡ್ರ–ರುದ್ರಾಕ್ಷಧಾರಿಯೂ, ಲಿಂಗಧಾರಕನೂ, ಲಿಂಗಪೂಜಾ ಪರಾಯಣನೂ, ಲಿಂಗಾಂಗಸ್ಥಲಗಳನ್ನೆಲ್ಲ ಅರಿತವನೂ ಆಗಿರಬೇಕೆಂಬುದಾಗಿ ಶ್ರೀ ಜಗದ್ಗುರು ರೇಣುಕರು ಗುರುವಿನ ಯೋಗ್ಯತೆಯನ್ನು ಕುರಿತು ಬಹು ವಿಸ್ತಾರವಾಗಿ (ಸಿ.ಶಿ., ೬. ೧–೭) ಪ್ರತಿಪಾದಿಸಿದ್ದಾರೆ.

ದೀಕ್ಷೆ ಹಾಗೂ ಶಕ್ತಿಪಾತ :

ಇಂತಹ ಲಕ್ಷಣ ಸಂಪನ್ನನಾದ ಶಿವಾಚಾರ್ಯನು ತನ್ನೆಡೆಗೆ ಶಿವದೀಕ್ಷೆಗಾಗಿ ಬಂದ ಶಿಷ್ಯನಲ್ಲಿರುವ ಶಕ್ತಿಪಾತ ಚಿಹ್ನೆಗಳನ್ನು ಪರೀಕ್ಷಿಸಿ ಅವನಿಗೆ ಶಿವದೀಕ್ಷೆಯನ್ನು ಮಾಡುತ್ತಾನೆ. ಅಂತೆಯೇ ರೇಣುಕ ಭಗವತ್ಪಾದರು "ಶಕ್ತಿಪಾತಂ ಸಮಾಲೋಕ್ಯ ದೀಕ್ಷಯಾ ಯೋಜಯೇದಮುಮ್" (ಸಿ.ಶಿ., ೬–೧೧) ಎಂಬುದಾಗಿ ಉಪದೇಶಿಸಿದ್ದಾರೆ. ದೀಕ್ಷೆಯ ಪೂರ್ವದಲ್ಲಿ ಗುರುವು ಶಿಷ್ಯನ ಮಲಪರಿಪಾಕ ಹಾಗೂ ಶಕ್ತಿಪಾತಗಳನ್ನು ಪರೀಕ್ಷಿಸಬೇಕಾಗುವುದು. ಈ ಜಗತ್ತಿನಲ್ಲಿ ಜನ್ಮ ತಾಳಿದ ಪ್ರತಿಯೊಬ್ಬ ಜೀವಿಯು ಆಣವ, ಮಾಯಾ ಮತ್ತು ಕಾರ್ಮಿಕಗಳೆಂಬ

ಮಲತ್ರಯಗಳಿಂದ ಆವೃತನಾಗಿರುತ್ತಾನೆ. ಆತ್ಮದ ವ್ಯಾಪಕ ಸ್ವರೂಪವನ್ನು ಮರೆಯಿಸಿ ಅಣುಭಾವವನ್ನು ಅರ್ಥಾತ್ ಸಾಕು–ಬೇಕು ಭಾವವನ್ನು ಉಂಟುಮಾಡುವ ಮಲವೇ ಆಣವಮಲವು. ಇನ್ನು ಪರಸ್ಪರರಲ್ಲಿ ಭೇದ ಬುದ್ಧಿಯನ್ನು ಹುಟ್ಟಿಸುವ ಮಲಕ್ಕೆ ಮಾಯೀಯ ಮಲವೆಂದು ಕರೆಯುತ್ತಾರೆ. ಇದೇ ಪ್ರಕಾರವಾಗಿ ಜೀವಿಗಳಿಂದ ಆಚರಿಸಲ್ಪಟ್ಟ ಶುಭಾಶುಭ ಕರ್ಮಗಳ ವಾಸನೆಗೆ ಅರ್ಥಾತ್ ಸಂಸ್ಕಾರಕ್ಕೆ ಕಾರ್ಮಿಕ ಮಲವೆಂದು ಕರೆಯಲಾಗುತ್ತದೆ. ಈ ಮಲತ್ರಯಗಳ ಪರಿಪಾಕವಾದಾಗ ಈಶ್ವರನ ಅನುಗ್ರಹರೂವಾದ ಶಕ್ತಿಪಾತವು ಉಂಟಾಗುವುದು. ಶಾಸ್ತ್ರಕಾರರೂ ಮೇಲಿನ ಈ ಮಲತ್ರಯಗಳನ್ನು ಆಮಮಲ ಮತ್ತು ಪಕ್ವಮಲವೆಂಬುದಾಗಿ ಎರಡು ವಿಧವಾಗಿ ವಿಭಾಗಿಸಿದ್ದಾರೆ. ತಪೋನುಷ್ಠಾನಗಳಿಂದ ಕ್ಷೀಣಗೊಂಡ ಮಲಕ್ಕೆ ಪಕ್ವಮಲವೆಂತಲೂ, ಅದಕ್ಕೆ ವಿಪರೀತವಾದದ್ದು ಆಮಮಲವೆಂತಲೂ ಕರೆಯುವುದುಂಟು. ಇದನ್ನೇ ಪೂಜ್ಯಪಾದರು–

ಅತಪ್ತತನುರಜ್ಞೋ ವೈ ಆಮಃ ಸಂಸ್ಕಾರವರ್ಜಿತಃ ।
ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಮ್ ॥

(ಸಿ.ಶಿ., ೬–೬೧)

ಎಂದಿದ್ದಾರೆ. ತಾತ್ಪರ್ಯವೇನೆಂದರೆ ತಪಸ್ಸನ್ನಾಚರಿಸದ, ಅಜ್ಞನಾದ ಅಂತೆಯೇ ಆಮಮಲವುಳ್ಳ, ಸಂಸ್ಕಾರ ಹೀನನಾದ, ದೀಕ್ಷೆಯನ್ನು ಪಡೆಯದಿರುವ ವ್ಯಕ್ತಿಯು ಲಿಂಗಧಾರಣೆಗೆ ಅನರ್ಹನಾಗಿರುತ್ತಾರೆ. ಅಂದರೆ ಸದ್ಗುರುವಿನ ಅನುಗ್ರಹರೂಪವಾದ ದೀಕ್ಷೆಯನ್ನು ಪಡೆಯುವ ಪೂರ್ವದಲ್ಲಿ ತನ್ನ ಮಲಪರಿಪಾಕವನ್ನು ಮಾಡಿಕೊಳ್ಳಬೇಕೆಂಬುದು ತಿಳಿದುಬರುತ್ತದೆ. ಅನೇಕ ಜನ್ಮ ಜನ್ಮಾಂತರಗಳಲ್ಲಿ ಮಾಡಿದ ತಪೋನುಷ್ಠಾನದಿಂದ ಮಲಗಳು ಪಾಕಗೊಂಡು ಕ್ಷೀಣಿಸುತ್ತವೆ. ಆಗ ಶಿವಪ್ರಸಾದ ರೂಪವಾದ ಶಕ್ತಿಪಾತವು ಅವನ ಮೇಲೆ ಉಂಟಾಗಲು ಅವನಲ್ಲಿ ಶಿವನ ಬಗ್ಗೆ ಅತ್ಯುತ್ಕಟವಾದ ಭಕ್ತಿಯು ಉತ್ಪನ್ನವಾಗುವುದು. ಹೀಗೆ ಸಾಧಕನ ಮನಸ್ಸಿನಲ್ಲಿ ಭಕ್ತಿಯ ವರ್ಧನೆಗೆ ಕಾರಣೀಭೂತಗಳಾದ ಲಕ್ಷಣಗಳೇ ಶಕ್ತಿಪಾತದ ಚಿಹ್ನೆಗಳು.

ಶಿವಪೂಜೆ, ಶಿವಕಥಾಶ್ರವಣ ಮುಂತಾದ ಧಾರ್ಮಿಕ ಆಚರಣೆಗಳನ್ನು ಆಚರಿಸುವಾಗ ಕಂಪನ, ರೋಮಾಂಚನ ಮತ್ತು ಅಶ್ರುಪಾತ ಮುಂತಾದ ಲಕ್ಷಣಗಳೇ ಶಕ್ತಿಪಾತದ ಪ್ರತೀಕಗಳು (ಕ್ರಿಯಾಸಾರ., ಭಾಗ–೨, ಪುಟ. ೧೯೫). ಸಾಧಕನು ತಾನು ಮಾಡಿದ ಪ್ರಾರಂಭಿಕವಾದ ಭಕ್ತಿಯಿಂದ ಅವನ ಮೇಲೆ ಶಿವಾನುಗ್ರಹ ರೂಪವಾದ ಶಕ್ತಿಪಾತವು ಉಂಟಾಗುವುದು. ಈ ಶಕ್ತಿಪಾತದಿಂದ ಅವನಲ್ಲಿಯ ಭಕ್ತಿಯು ಇನ್ನಷ್ಟು ಹೆಚ್ಚುವುದು. ಹೀಗೆ ಶಿವಾನುಗ್ರಹ ಹಾಗೂ ಶಿವಭಕ್ತಿಗಳು ಬೀಜಾಂಕುರ

ನ್ಯಾಯದಂತೆ (ಸಿ.ಶಿ., ೯–೧೧) ಪರಸ್ಪರ ಪೂರಕಗಳಾಗಿರುತ್ತವೆ. ಈ ವಿಧವಾಗಿ ಶಿಷ್ಯನಲ್ಲುಂಟಾದ ಶಕ್ತಿಪಾತ ಚಿಹ್ನೆಗಳನ್ನು ಪರೀಕ್ಷಿಸಿ ಸದ್ಗುರುವು ದೀಕ್ಷಾ ಸಂಸ್ಕಾರವನ್ನು ಮಾಡುತ್ತಾನೆ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ದೀಕ್ಷೆಯ ವಿಷಯಕವಾಗಿ ಪ್ರತಿಪಾದಿಸುತ್ತಾ –

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್ ।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ ॥

(ಸಿ.ಶಿ., ೬–೧೧)

ಎಂಬ ಆಚಾರ್ಯೋಕ್ತಿಗನುಸಾರವಾಗಿ ಸದ್ಗುರುವಾದ ಶಿವಾಚಾರ್ಯನು ಶಿಷ್ಯನ ಮಸ್ತಕದ ಮೇಲೆ ಕರಕಮಲವನ್ನಿರಿಸಿ ಕೃಪಾಕಟಾಕ್ಷವನ್ನು ಬೀರುತ್ತ "ನೀನು ಶಿವಸ್ವರೂಪನಾಗಿರುವೆ" ಎಂಬುದಾಗಿ ಬೋಧಿಸಿ ಶಿಷ್ಯನ ಮನಸ್ಸಿನಲ್ಲಿ 'ಶಿವೋऽಹಂ' ಭಾವನೆಯನ್ನು ಮೂಡಿಸುವುದೇ ವೇಧಾದೀಕ್ಷೆ. ಇಲ್ಲಿ ಉಪದೇಶಿಸಿದ 'ಶಿವೋऽಹಂ' ಭಾವನೆಯೇ ಭಾವಲಿಂಗವೆಂಬುದಾಗಿ ಕರೆಯಲ್ಪಡುತ್ತದೆ. ಕಾರಣಾಗಮದ ಕ್ರಿಯಾಪಾದದಲ್ಲಿ (೧. ೯೬–೯೭) ಈ ವೇಧಾದೀಕ್ಷೆಯ ಅತಿಸೂಕ್ಷ್ಮಗಳಾದ ಸಪ್ತವಿಧ ಸಂಸ್ಕಾರಗಳು ಬೋಧಿಸಲ್ಪಟ್ಟಿವೆ.

"ಮಾಂತ್ರೀ ದೀಕ್ಷೇತಿ ಸಾ ಪ್ರೋಕ್ತಾ ಮಂತ್ರಮಾತ್ರೋಪದೇಶಿನಿ" (ಸಿ.ಶಿ., ೬–೧೪) ಎಂಬ ಆಚಾರ್ಯೋಕ್ತಿಗನುಸಾರವಾಗಿ ಶಿಷ್ಯನ ಬಲಗಿವಿಯಲ್ಲಿ ಪಂಚಾಕ್ಷರೀ ಮಹಾಮಂತ್ರವನ್ನು ಗೂಢವಾಗಿ ಉಪದೇಶಿಸುವುದೇ ಮಾಂತ್ರೀದೀಕ್ಷೆಯು. ಈ ದೀಕ್ಷೆಯಲ್ಲಿಯೂ ಚಿತ್ತೈಕಾಗ್ರತಾ ಮುಂತಾದ ಸಪ್ತ ವಿಧೋಪದೇಶಗಳು ಕಾರಣಾಗಮದ ಕ್ರಿಯಾಪಾದದಲ್ಲಿ (೧. ೧೧೨–೧೧೮) ಪ್ರತಿಪಾದಿಸಲ್ಪಟ್ಟಿವೆ. ಇನ್ನು ಶುಭಮುಹೂರ್ತದಲ್ಲಿ ಮಂಟಪವನ್ನು ರಚಿಸಿ, ಆ ಮಂಟಪದಲ್ಲಿ ಪಂಚಾಚಾರ್ಯಪ್ರತೀಕಗಳಾದ ಪಂಚಕಲಶಗಳನ್ನು ಸ್ಥಾಪಿಸಿ, ಆ ಕಲಶಗಳಲ್ಲಿ ಮೂಲ ಪಂಚಾಚಾರ್ಯರನ್ನು ಆಹ್ವಾನಿಸಿ ಪೂಜಿಸಿ ಅವುಗಳ ಎದುರಿನಲ್ಲಿ ಸ್ನಾನಾದಿಗಳಿಂದ ಶುಚಿರ್ಭೂತನಾದ ಶಿಷ್ಯನನ್ನು ಉತ್ತರ ಇಲ್ಲವೆ ಪೂರ್ವಮುಖವಾಗಿ ಕುಳ್ಳಿರಿಸಿ ಅವರ ಅಂಗ ಹಾಗೂ ಲಿಂಗಕ್ಕೆ ಅಭಿಷೇಕಾದಿಗಳಿಂದ ಸಂಸ್ಕಾರವನ್ನು ಮಾಡಿ ಆತನ ವಾಮಹಸ್ತಪೀಠದಲ್ಲಿ ಅರ್ಥಾತ್ ಎಡ ಅಂಗೈಯಲ್ಲಿ ಇಷ್ಟಲಿಂಗವನ್ನಿರಿಸಿ ಆತನ ಬಲಗಿವಿಯಲ್ಲಿ ಪಂಚಾಕ್ಷರ ಮಹಾಮಂತ್ರವನ್ನು ಉಪದೇಶಿಸಿ ಆ ಮಂತ್ರದ ದೇವತೆ, ಋಷಿ, ಛಂದಸ್ಸು ಮತ್ತು ನ್ಯಾಸಾದಿ ಪದ್ಧತಿಗಳನ್ನು ತಿಳಿಸಿಕೊಡುವುದಕ್ಕೆ ಕ್ರಿಯಾದೀಕ್ಷಾ ಎಂದು ಕರೆಯುತ್ತಾರೆ. ಈ ಕ್ರಿಯಾದೀಕ್ಷೆಯಲ್ಲಿಯೂ ಆಜ್ಞಾದೀಕ್ಷಾ ಮುಂತಾದ ಸಪ್ತವಿಧ ಸಂಸ್ಕಾರಗಳು ಕಾರಣಾಗಮದ ಕ್ರಿಯಾಪಾದದಲ್ಲಿ (೧. ೪೩–೯೫) ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿವೆ.

ಈ ದೀಕ್ಷೆಯನ್ನು ಮಾಡುವಾಗ ಸಂಬಂಧಪಟ್ಟ ದೇವತೆಗಳಿಗೆ ಹವಿಸ್ಸನ್ನು ಕೊಡುವ ಉದ್ದೇಶದಿಂದ ಹೋಮವಿಧಿಯನ್ನೂ ಸಹ ಮಾಡಬೇಕೆಂಬುದಾಗಿ (ಸಿ.ಶಿ., ೬. ೧೫–೨೧) ಉಪದೇಶಿಸಲಾಗಿದೆ. ಹೀಗೆ ಮೂರುವಿಧಗಳಾದ ದೀಕ್ಷೆಗಳಿಂದ ಶಿಷ್ಯನ ಆಣವಾದಿ ಮಲತ್ರಯಗಳನ್ನು ದೂರಮಾಡಿ ತ್ರಿವಿಧ ಲಿಂಗಗಳ ಸ್ವರೂಪವನ್ನು ಬೋಧಿಸುವದಕ್ಕೇನೇ ಗುರುಕಾರುಣ್ಯವೆಂದು ಕರೆಯಲಾಗಿದೆ.

ಈ ವಿಧವಾದ ಗುರುಕರುಣೆಯಿಂದ ಶಿಷ್ಯನಿಗೆ ಇಷ್ಟಲಿಂಗ, ಪ್ರಾಣಲಿಂಗ ಹಾಗೂ ಭಾವಲಿಂಗಗಳ ಪ್ರಾಪ್ತಿಯೊಂದಿಗೆ ಮಹಾಮಂತ್ರವು ಲಭಿಸುವುದು.

೨) ಲಿಂಗ :

ಶ್ರೀಸಿದ್ಧಾಂತಶಿಖಾಮಣಿಯ ಲಿಂಗಧಾರಣಸ್ಥಲದಲ್ಲಿ ಇಷ್ಟ, ಪ್ರಾಣ ಹಾಗೂ ಭಾವಲಿಂಗಗಳ ಸ್ವರೂಪಗಳ ಬಗ್ಗೆ ಪ್ರತಿಪಾದಿಸುವುದರ ಜೊತೆಗೆ ಅವುಗಳ ಧಾರಣೆಯ ವಿಧಿ ಹಾಗೂ ಲಿಂಗಧಾರಣೆಯ ಪ್ರಾಚೀನತೆಯೂ ಸಹ ವಿವರಿಸಲಾಗಿದೆ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು–

ಲಯಂ ಗಚ್ಛತಿ ಯತ್ರೈವ ಜಗದೇತಚ್ಚರಾಚರಮ್ ।
ಪುನಃ ಪುನಃ ಸಮುತ್ಪತ್ತಿಂ ತಲ್ಲಿಂಗಂ ಬ್ರಹ್ಮ ಶಾಶ್ವತಮ್ ॥

(ಸಿ.ಶಿ., ೬–೩೭)

ಈ ವಿಧವಾಗಿ ಲಿಂಗ ಶಬ್ದದ ವ್ಯಾಖ್ಯೆಯನ್ನು ಮಾಡಿದ್ದಾರೆ. ತಾತ್ಪರ್ಯವೇ ನೆಂದರೆ ಈ ಚರಾಚರಾತ್ಮಕವಾದ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಕಾರಣೀಭೂತವಾದ ಶಾಶ್ವತವಾದ ತತ್ತ್ವವೇ ಲಿಂಗವೆಂದೆನಿಸಿಕೊಳ್ಳುವುದು. ಈ ವ್ಯಾಪಕವಾದ ಲಿಂಗತತ್ತ್ವವೇ ವೀರಶೈವಸಿದ್ಧಾಂತದಲ್ಲಿ ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗವೆಂಬುದಾಗಿ ಪೂಜೆಗೊಳ್ಳುವುದು.

ಇಷ್ಟಲಿಂಗ :

"ಇಷ್ಟಲಿಂಗಮಿದಂ ಸ್ಥೂಲಂ ಯದ್ಬಾಹ್ಯೇ ಧಾರ್ಯತೇ ತನೌ" (ಸಿ.ಶಿ., ೬–೪೯) ಎಂಬ ಶ್ರೀ ಜಗದ್ಗುರು ರೇಣುಕರ ಉಕ್ತಿಯಂತೆ ಕ್ರಿಯಾದೀಕ್ಷೆಯಲ್ಲಿ ಕೊಡಲ್ಪಟ್ಟು ಸದಾ ಸ್ಥೂಲಶರೀರದ ಮಸ್ತಕ, ಕಂಠ, ಪಕ್ಕೆ, ಎದೆ, ಹೊಟ್ಟೆ ಮತ್ತು ಅಂಗೈಗಳಲ್ಲಿ ಧರಿಸಲ್ಪಡುವ ಲಿಂಗವೇ ಇಷ್ಟಲಿಂಗವು. (ಸಿ.ಶಿ., ೬–೫೨) ಈ ಲಿಂಗವನ್ನು ಜಡೆಯ ತುದಿಯಲ್ಲಿ ಅಥವಾ ನೆತ್ತಿಯ ತುದಿಯ ಮೇಲೆ, ಬೆನ್ನ ಮೇಲೆ ಮತ್ತು ನಾಭಿಯ ಕೆಳಗೆ ಎಂದೂ ಧರಿಸಕೂಡದು. (ಸಿ.ಶಿ., ೬–೫೩) ಹೀಗೆ ಇಷ್ಟಲಿಂಗ ಧಾರಿಯಾದ ಸಾಧಕನು ಸದಾ ಪರಿಶುದ್ಧನಾಗಿರುವನು. ಅವನು

ಆ ಲಿಂಗವನ್ನು ತನ್ನ ಎಡಗೈ ಅಂಗೈಯಲ್ಲಿಟ್ಟುಕೊಂಡು ಏಕಾಗ್ರಚಿತ್ತನಾಗಿ ಪೂಜಿಸಬೇಕು. ಹೊರಗಿನ ಪೀಠದಲ್ಲಿರಿಸಿ ಪೂಜಿಸುವುದಕ್ಕಿಂತಲೂ ಕರಪೀಠದಲ್ಲಿರಿಸಿ ಪೂಜಿಸುವುದೇ ಶ್ರೇಷ್ಠವಾದುದು. ಇದುವೇ ವೀರಶೈವರಿಂದ ಆಚರಿಸಲ್ಪಡಬೇಕೆಂಬುದು ಪೂಜ್ಯರ ಆದೇಶವಾಗಿರುತ್ತದೆ. (ಸಿ.ಶಿ., ೬. ೫೪-೫೫)

ಇಷ್ಟಲಿಂಗ ಶಬ್ದಾರ್ಥ ನಿರೂಪಣೆ :

ಸರ್ವ ಇಷ್ಟಾರ್ಥವನ್ನು ದಯಪಾಲಿಸುವ ಮತ್ತು ಅನಿಷ್ಟಗಳನ್ನೆಲ್ಲ ದೂರಮಾಡುವ ಲಿಂಗವೇ ಇಷ್ಟಲಿಂಗವು. ಅಂತೆಯೇ ಇದನ್ನು ಯಾವಾಗಲೂ ಶರೀರದ ಮೇಲೆ ಧರಿಸಬೇಕೆಂಬುದಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು (ಸಿ.ಶಿ., ೬-೫೧) ಆದೇಶಿಸಿದ್ದಾರೆ. ಶ್ರೀ ಮೊಗ್ಗೆಯ ಮಾಯಿದೇವರು-

ಇಷ್ಟಿಃ ಪೂಜಾ ತಯಾ ನಿತ್ಯಮಿಷ್ಟಂ ಪೂಜಿತಮಾದರಾತ್ ।
ಇಷ್ಟಲಿಂಗಮಿತಿ ಪ್ರೋಕ್ತಮಾಚಾರ್ಯೈರ್ಲಿಂಗಪೂಜಕೈಃ ॥
ಇಷ್ಟಮರ್ಥಂ ಸ್ವಭಕ್ತಾನಾಮನುಯಚ್ಛತಿ ಸರ್ವದಾ ।

(ಅನುಭವಸೂತ್ರ., ૩. ೯-೧೦)

ಈ ವಿಧವಾಗಿ ಇಷ್ಟಲಿಂಗ ಶಬ್ದದ ಅರ್ಥವನ್ನು ನಿರೂಪಿಸಿದ್ದಾರೆ. ಇವರ ಈ ನಿರೂಪಣೆಯ ಪ್ರಕಾರ - "ಇಷ್ಟ್ಯಾ ಇಷ್ಟಂ ಲಿಂಗಂ=ಇಷ್ಟಲಿಂಗಮ್ ಎಂಬುದು. ಇಷ್ಟಲಿಂಗ ಶಬ್ದದ ವ್ಯುತ್ಪತ್ತಿಯು. ಅಂದರೆ ಪ್ರತಿನಿತ್ಯ ಆದರಪೂರ್ವಕವಾಗಿ ಪೂಜಿಸಲ್ಪಡುವ ಲಿಂಗವೇ ಇಷ್ಟಲಿಂಗವು. ಇದು ಇಷ್ಟಾರ್ಥವನ್ನು ದಯಪಾಲಿಸುವುದರ ಜೊತೆಗೆ ಅನಿಷ್ಟವನ್ನೂ ಸಹ ದೂರಮಾಡುತ್ತದೆ. ಕೇವಲ ಇಷ್ಟಾರ್ಥವನ್ನು ಕೊಡುವ ಲಿಂಗವೇ ಇಷ್ಟಲಿಂಗವೆಂದು ಅರ್ಥೈಸಿದರೆ ಬಾಹ್ಯ ದೇವಸ್ಥಾನಾದಿಗಳಲ್ಲಿ ಸ್ಥಾಪಿಸಲ್ಪಟ್ಟ ಲಿಂಗಗಳ ಪೂಜೆಯಿಂದಲೂ ಸಹ ಭಕ್ತರು ಇಷ್ಟಾರ್ಥವನ್ನು ಪಡೆದುಕೊಳ್ಳುತ್ತಿರುವುದು ಸರ್ವಾನುಭವಸಿದ್ಧವಾದ ವಿಷಯವು. ಆದರೆ ಆ ದೇವಾಲಯಗಳಲ್ಲಿಯ ಲಿಂಗಗಳನ್ನು ದಿನಾಲೂ ಒಬ್ಬ ವ್ಯಕ್ತಿಯಿಂದ ತಪ್ಪದೇ ಪೂಜಿಸಲು ಆಗುವುದಿಲ್ಲ. ಆ ದೇವರ ಪೂಜೆಗಾಗಿಯೇ ನೇಮಿಸಿದ ಪೂಜಾರಿಯಾಗಿಯೂ ಸಹ ಒಮ್ಮೊಮ್ಮೆ ತನ್ನ ಬದಲಾಗಿ ಅನ್ಯರನ್ನು ಪೂಜೆಗೆ ಕಳಿಸುವ ಪದ್ಧತಿಯನ್ನು ಸರ್ವತ್ರ ಕಾಣುತ್ತೇವೆ. ಆದ್ದರಿಂದ ಮೊಗ್ಗೆಯ ಮಾಯಿದೇವರು ಪ್ರತಿನಿತ್ಯ ಆದರದಿಂದ ತಪ್ಪದೇ ಪೂಜಿಸಲ್ಪಡುವ ಲಿಂಗವೇ ಇಷ್ಟಲಿಂಗವೆಂಬುದಾಗಿ ಇಷ್ಟಲಿಂಗ ಶಬ್ದದ ಬಹುಮಾರ್ಮಿಕವಾದ ಮತ್ತು ಸೂಕ್ತವಾದ ಅರ್ಥವನ್ನಿಲ್ಲಿ ವಿವರಿಸಿದ್ದನ್ನು ಕಾಣುತ್ತೇವೆ.

ವೀರಶೈವರು ಸದಾ ಲಿಂಗಧಾರಿಗಳಾಗಿರುವುದರಿಂದ ಅವರು ಎಲ್ಲಿಯೇ ಹೋದರೂ ಆ ಲಿಂಗವನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುವುದರಿಂದ

ಅವರು ಮಾಡುವ ನಿತ್ಯಪೂಜೆಗೆ ಯಾವ ಬಾಧೆಯೂ ಉಂಟಾಗುವುದಿಲ್ಲ. ಆದ್ದರಿಂದ ದೇಹದ ಮೇಲೆ ಸದಾ ಧರಿಸಲ್ಪಟ್ಟಿದ್ದು ಪ್ರತಿನಿತ್ಯ ಆದರದಿಂದ ವಾಮಹಸ್ತಪೀಠದಲ್ಲಿರಿಸಿ ಪೂಜಿಸಲ್ಪಡುವ ಸರ್ವ ಅನಿಷ್ಟಗಳನ್ನು ದೂರುಮಾಡುವ ಮತ್ತು ಸಕಲ ಇಷ್ಟಾರ್ಥಗಳನ್ನು ಅನುಗ್ರಹಿಸುವ ಲಿಂಗವೇ ಇಷ್ಟಲಿಂಗವೆಂಬುದಾಗಿ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು.

ಲಿಂಗ ನಿರ್ಮಾಣದ ದ್ರವ್ಯಗಳು :

ಗರುಡಪುರಾಣದಲ್ಲಿ ಗಂಧ, ಪುಷ್ಪ, ಗೋಮಯ, ಉಪ್ಪು, ಭಸ್ಮ, ಬೆಲ್ಲ, ಸಕ್ಕರೆ ಮುಂತಾದ ಮೂವತ್ತಾರು ದ್ರವ್ಯಗಳಿಂದ ಪ್ರತ್ಯೇಕ ದ್ರವ್ಯದಲ್ಲಿ ಲಿಂಗ ನಿರ್ಮಿಸಿ ಪೂಜಿಸುವ ವಿಧಾನವು ಪ್ರತಿಪಾದಿಸಲ್ಪಟ್ಟಿದೆ. (ಶಿವಾಂಕ., ಪುಟ. ೧೫೦) ಇದೇ ಪ್ರಕಾರವಾಗಿ ಲಿಂಗಪುರಾಣದಲ್ಲಿ "ಷಡ್‌ವಿಧಂ ಲಿಂಗಮಿತ್ಯಾಹುರ್ದ್ರವ್ಯಾಣಾಂ ಚ ಪ್ರಭೇದತಃ" (೭೪-೧೩) ಎಂಬುದಾಗಿ ಹೇಳಿ ಶೈಲಜ, ರತ್ನಜ, ಧಾತುಜ, ದಾರುಜ, ಮೃಣ್ಮಯ ಮತ್ತು ಕ್ಷಣಿಕ ಎಂದು ಆರು ಪ್ರಕಾರವಾಗಿ ವಿಂಗಡಿಸಲಾಗಿದೆ. ಈ ಎಲ್ಲ ವಿಶ್ಲೇಷಣೆಗಳನ್ನು ನೋಡಿದಾಗ ಜಗತ್ತಿನ ಪ್ರತಿಯೊಂದು ಪದಾರ್ಥದಿಂದಲೂ ಲಿಂಗವನ್ನು ಮಾಡಿ ಪೂಜಿಸಬಹುದೆಂಬುದು ತಿಳಿದುಬರುತ್ತದೆ.

ಇಷ್ಟಲಿಂಗದ ನಿರ್ಮಾಣ :

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು–

ಸ್ಫಾಟಿಕಂ ಶೈಲಜಂ ವಾಪಿ ಚಂದ್ರಕಾಂತಮಯಂ ತು ವಾ।
ಬಾಣಂ ವಾ ಸೂರ್ಯಕಾಂತಂ ವಾ ಲಿಂಗಮೇಕಂ ಸಮಾಹರೇತ್ ॥

(ಸಿ.ಶಿ., ೬-೨೨)

ಎಂಬುದಾಗಿ ಹೇಳಿ ಇಷ್ಟಲಿಂಗ ನಿರ್ಮಾಣಕ್ಕೆ ಸ್ಫಟಿಕ, ಶಿಲೆ, ನರ್ಮದಾಬಾಣ, ಚಂದ್ರಕಾಂತ ಶಿಲೆ ಮತ್ತು ಸೂರ್ಯಕಾಂತ ಶಿಲೆಗಳಲ್ಲಿ ಯಾವುದಾದರೊಂದನ್ನು ಉಪಯೋಗಿಸಬೇಕೆಂಬುದಾಗಿ ಆದೇಶಿಸಿದ್ದಾರೆ. ಇಂದಿನ ದಿನಮಾನಗಳಲ್ಲಿ ಸ್ಫಟಿಕ, ಶಿಲೆ ಮತ್ತು ನರ್ಮದಾ ನದಿಯಲ್ಲಿ ದೊರೆಯುವ ಬಾಣಲಿಂಗಗಳನ್ನು ಇಷ್ಟಲಿಂಗಕ್ಕಾಗಿ ಉಪಯೋಗಿಸುತ್ತಿದ್ದಾರೆ. ಅದರಲ್ಲೂ ಶಿಲಾ ನಿರ್ಮಿತಗಳಾದ ಪಂಚಸೂತ್ರಲಿಂಗಗಳನ್ನು ಬಳಸುವುದೇ ಹೆಚ್ಚು.

ಲಿಂಗವೃತ್ತಸಮಂ ಪೀಠಂ ದೈರ್ಘ್ಯಂ ವಿಸ್ತಾರ ಏವ ಚ ।
ತದರ್ಧಂ ಗೋಮುಖಂ ಚೈವ ಪ್ರೋಕ್ತಂ ಲಿಂಗಸ್ಯ ಲಕ್ಷಣಮ್ ॥

(ಸಿ.ಶಿ., ೬-೨೨)

ಎಂಬುದಾಗಿ ಶ್ರೀ ನೀಲಕಂಠ ಶಿವಾಚಾರ್ಯರು ಪಂಚಸೂತ್ರಪ್ರಕ್ರಿಯೆಯನ್ನು ವಿವರಿಸಿದ್ದಾರೆ. ಲಿಂಗದ ಬಾಣದ ಸುತ್ತಳತೆ, ಪೀಠದ ಅಗಲ ಮತ್ತು ಎತ್ತರಗಳು ಸಮಾನವಾಗಿದ್ದು ಅದರ ಅರ್ಧದಷ್ಟು ಗೋಮುಖವಿರಬೇಕೆಂಬುದೇ ಪಂಚಸೂತ್ರ ಪ್ರಮಾಣವು. ಇಂಥ ಈ ಪಂಚಸೂತ್ರದ ಪೀಠಿಕಾಲಿಂಗವನ್ನು ಅಭಿಷೇಕಾದಿಗಳಿಂದ ಶುದ್ಧೀಕರಿಸಿ ಮಂತ್ರಪೂತವಾದ ಆ ಲಿಂಗದಲ್ಲಿ ಶಿವಕಲೆಯನ್ನು ಗುರುವು ಸಂಯೋಜಿಸುತ್ತಾನೆ. ಇದೂ ಅಲ್ಲದೆ ಆ ಲಿಂಗದಲ್ಲಿ ಶಿಷ್ಯನ ಪ್ರಾಣವನ್ನೂ ಸಹ ಸಂಬಂಧಗೊಳಿಸಿ ಅದನ್ನು ಶಿಷ್ಯನ ವಾಮಹಸ್ತಪೀಠದಲ್ಲಿರಿಸಿ ಗುರುವು ಶಿಷ್ಯನನ್ನು ಕುರಿತು – "ಇದು ನಿನ್ನ ಪ್ರಾಣಲಿಂಗವು. ಪ್ರಾಣದೋಪಾದಿಯಲ್ಲಿ ಇದನ್ನು ಧರಿಸಿಕೊಂಡಿರು. ದೇಹದಿಂದ ಎಂದೂ ಅಗಲಿಸಬೇಡ. ಒಂದು ವೇಳೆ ಅಜಾಗರೂಕತೆಯಿಂದ ಈ ಲಿಂಗವು ದೇಹದಿಂದ ಅಗಲಿದರೆ ನೀನು ಪ್ರಾಣವನ್ನೇ ತ್ಯಜಿಸಬೇಕು. ಇಂತಹ ಈ ನಿನ್ನ ಲಿಂಗನಿಷ್ಠೆಯು ನಿನಗೆ ಮೋಕ್ಷವನ್ನು ಒದಗಿಸುವುದು" (ಸಿ.ಶಿ., ೬. ೨೨–೨೮) ಹೀಗೆ ಪಂಚಸೂತ್ರ ಪ್ರಕ್ರಿಯೆಯಿಂದ ನಿರ್ಮಿಸಿದ ಮತ್ತು ಅಭಿಷೇಕಾದಿಗಳಿಂದ ಶುದ್ಧಗೊಳಿಸಿ ಶಿಷ್ಯನಿಗೆ ದೀಕ್ಷಾಪೂರ್ವಕವಾಗಿ ಅನುಗ್ರಹಿಸಿದ ಲಿಂಗವೇ ಇಷ್ಟಲಿಂಗವು.

ಲಿಂಗಧಾರಣೆಯ ಪ್ರಮಾದದಲ್ಲಿ ಪ್ರಾಯಶ್ಚಿತ್ತ ವಿಚಾರ :

ದೇಹದಿಂದ ಇಷ್ಟಲಿಂಗದ ವಿಯೋಗವಾದರೆ ಪ್ರಾಣವನ್ನೇ ತ್ಯಜಿಸಬೇಕೆಂಬುದು ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಆದೇಶವಾಗಿದೆ. ಇದೂ ಅಲ್ಲದೆ ಪಾರಮೇಶ್ವರಾಗಮ (ಪಟಲ ೨. ೧೦೨–೧೦೩), ಪರಮರಹಸ್ಯ (೩–೨), ವಾತುಲಶುದ್ಧಾಖ್ಯತಂತ್ರ (ಪಟಲ ೧೦; ೫೧–೫೨), ಈ ಎಲ್ಲ ಆಗಮಗಳಲ್ಲಿಯೂ ಸಹ ಶಿವನು ಇದೇ ರೀತಿಯಾಗಿ ಉಪದೇಶಿಸಿದ್ದಾನೆ. ಇಷ್ಟಲಿಂಗಧಾರಿಗಳಾದ ವೀರಶೈವರಿಗೆ ಲಿಂಗ ಕಳಚಿದರೆ (ಬಿದ್ದರೆ) ಪ್ರಾಣತ್ಯಾಗದ ಹೊರತು ಬೇರೊಂದು ಪ್ರಾಯಶ್ಚಿತ್ತವಿಲ್ಲವೆಂಬುದು ತಿಳಿದುಬರುತ್ತದೆ. ಅಂತೆಯೇ ನೀಲಕಂಠ ಶಿವಾಚಾರ್ಯರೂ ಸಹ ಕ್ರಿಯಾಸಾರದಲ್ಲಿ – "ವಿಕಲ್ಪರಹಿತಂ ಶೈವಂ ವೀರಶೈವಂ ಪ್ರಚಕ್ಷತೇ (ಭಾಗ–೧, ಪುಟ. ೧೧) ಎಂಬುದಾಗಿ ಹೇಳಿ ದೇಹದಿಂದ ಇಷ್ಟಲಿಂಗ ವಿಯೋಗವಾದರೆ ಪ್ರಾಣವನ್ನು ತ್ಯಜಿಸಬೇಕೋ ಬೇಡವೋ ಎಂಬ ವಿಕಲ್ಪಕ್ಕೆ ಇಲ್ಲಿ ಅವಕಾಶವಿಲ್ಲವೆಂಬುದಾಗಿ ಹೇಳಿ ಪ್ರಾಣತ್ಯಾಗವನ್ನೇ ಸಮರ್ಥಿಸಿದ್ದಾರೆಯೇ ವಿನಹ ಬೇರೊಂದು ಪ್ರಾಯಶ್ಚಿತ್ತ ಕರ್ಮಕ್ಕೆ ಅವಕಾಶವನ್ನು ಕೊಟ್ಟಿಲ್ಲ.

ಮೇಲೆ ಉದಾಹರಿಸಿದ ಗ್ರಂಥಗಳಲ್ಲಿ ಪ್ರಾಯಶ್ಚಿತ್ತವನ್ನು ಹೇಳದೇ ಇದ್ದರೂ ಕಾರಣಾಗಮದ ಕ್ರಿಯಾಪಾದದಲ್ಲಿ ಶಿವನು ದೇವಿಯನ್ನು ಕುರಿತು ಕೆಲವೊಂದು

ಪ್ರಾಯಶ್ಚಿತ್ತಗಳನ್ನು ಉಪದೇಶಿಸಿರುವುದು ತಿಳಿದುಬರುತ್ತದೆ. ಶಿವನ ಉಪದೇಶದ ಪ್ರಕಾರ ಅಕಸ್ಮಾತ್ ಪ್ರಮಾದದಿಂದ ಇಷ್ಟಲಿಂಗವು ತನ್ನ ಕೈಯಿಂದ ಕೆಳಗೆ ಬಿದ್ದರೆ ಆ ಲಿಂಗವನ್ನು ಪುನಃ ತೆಗೆದುಕೊಂಡು ಅದನ್ನು ಪೂಜಿಸಿ ಪಂಚಾಕ್ಷರ ಮಹಾಮಂತ್ರವನ್ನು ಒಂದುನೂರಾ ಎಂಟು ಸಾರೆ ಜಪಿಸಬೇಕು. ಗುರುವಿನಿಂದ ಪ್ರದತ್ತವಾದ ಇಷ್ಟಲಿಂಗವು ಕೈಯಿಂದ ಬಿದ್ದು ಭಗ್ನವಾದರೆ ಆ ಲಿಂಗದ ಅಂಶಗಳನ್ನು ಜೋಡಿಸಿ ಅದನ್ನು ರಾಳದಿಂದ (ಉದಾ: ಫೆವಿಕಾಲ್) ಅಂಟಿಸಿ ಅದರಲ್ಲಿ ಪುನಃ ಶಿವಕಲೆಯನ್ನು ಗುರುವಿನಿಂದ ಸಂಯೋಜಿಸಿಕೊಂಡು ಪೂಜಿಸಬೇಕು. ಒಂದು ವೇಳೆ ಲಿಂಗವು ಕೂಡಿಸಲಿಕ್ಕೆ ಬಾರದಷ್ಟು ಛಿನ್ನ–ಭಿನ್ನವಾಗಿದ್ದರೆ ಗುರುವಿನಿಂದ ಬೇರೊಂದು ಲಿಂಗವನ್ನು ಪಡೆದು ಧರಿಸಿಕೊಳ್ಳಬೇಕು.

ಇನ್ನು ಲಿಂಗವು ಕಳೆದುಹೋದರೆ ಭಕ್ತಿಪರವಶನಾಗಿ ತನ್ನ ಪ್ರಾಣವನ್ನೇ ಕಳೆದುಕೊಳ್ಳಬೇಕು. ಒಂದು ವೇಳೆ ಅಂತ್ಯಸಂಸ್ಕಾರಕ್ಕಾಗಿ ದೇಹದ ಮೇಲೆ ಬೇರೊಂದು ಲಿಂಗವನ್ನು ಧರಿಸಬೇಕೆಂದು ಹೇಳಿದರೆ ಪ್ರಾಣವನ್ನು ತ್ಯಜಿಸುವುದು ನಿರರ್ಥಕವಾದುದು ಎಂಬ ಗಂಭೀರವಾದ ಪ್ರಶ್ನೆಯನ್ನು ದೇವಿಯು ಶಿವನನ್ನು (ಕಾರಣಾಗಮ., ಕ್ರಿಯಾಪಾದ., ಪಟಲ. ೧೦. ೩೯–೪೧) ಕುರಿತು ವಿಚಾರಿಸಲಾಗಿ ಶಿವನು – ಹೇ ದೇವಿ! ಇಷ್ಟಲಿಂಗಧಾರಿಯು ತನ್ನ ಲಿಂಗದ ಮೇಲಿನ ನಿಷ್ಠೆಯಿಂದ ಲಿಂಗ ಕಳೆದೊಡನೆ ಪ್ರಾಣವನ್ನು ಕಳೆದುಕೊಂಡರೆ ಅವನಿಗೆ ತಕ್ಷಣದಲ್ಲಿಯೇ ಮೋಕ್ಷಪ್ರಾಪ್ತಿಯಾಗುವುದು. ಆದ್ದರಿಂದ ಪ್ರಾಣವನ್ನೂ ತ್ಯಜಿಸಿದ್ದು ನಿರರ್ಥಕವಾಗಲಾರದು. ಇನ್ನು ವೀರಶೈವ ಸಿದ್ಧಾಂತದ ಪ್ರಕಾರವಾಗಿ ಲಿಂಗವಿರಹಿತವಾದ ದೇಹಕ್ಕೆ ಅಂತ್ಯಸಂಸ್ಕಾರವನ್ನು ಮಾಡಲು ಬರುವುದಿಲ್ಲವಾದ್ದರಿಂದ ಗುರುವು ಅದಕ್ಕೆ ಬೇರೊಂದು ಲಿಂಗವನ್ನು ಕಟ್ಟಿ ಆ ದೇಹದ ಅಂತ್ಯಸಂಸ್ಕಾರವನ್ನು ಮಾಡಿಸಬೇಕು. ಇಲ್ಲಿ ಇರುವ ರಹಸ್ಯವೇನೆಂದರೆ ಲಿಂಗವಿಯೋಗವಾದರೆ ಪ್ರಾಣವನ್ನು ತ್ಯಜಿಸಬೇಕೆಂಬ ವಿಷಯವು ಮುಖ್ಯವಾಗಿರದೆ ಪ್ರಾಣದಂತೆ ಲಿಂಗವನ್ನು ಧರಿಸಿಕೊಂಡಿರಬೇಕೇಂಬುದೇ (ಕಾರಣಾಗಮ., ಕ್ರಿಯಾಪಾದ., ಪಟಲ. ೧೦. ೪೨–೪೫) ಸಿದ್ಧಾಂತವಾಗಿರುತ್ತದೆ. ಎಂಬುದಾಗಿ ತಿಳಿದುಕೊಳ್ಳಲೇಬೇಕೆಂದು ಶಿವನು ಉಪದೇಶಿಸಿದ್ದಾನೆ.

ಹನ್ನೆರಡನೇ ಶತಮಾನದ ಚೆನ್ನಬಸವಣ್ಣ ಮತ್ತು ಪ್ರಭುದೇವ ಮುಂತಾದ ಶರಣರೂ ಸಹ ಇಷ್ಟಲಿಂಗ ವಿಯೋಗವಾದಾಗ ಪ್ರಾಣತ್ಯಜಿಸುವ ಪಕ್ಷವನ್ನು ಗೌಣಮಾಡಿ ಪುನಃ ಗುರುವಿನಿಂದ ಲಿಂಗವನ್ನು ಪಡೆದು ಪೂಜಿಸುವ ವಿಚಾರವನ್ನು ತಮ್ಮ ವಚನಗಳಲ್ಲಿ ಅಲ್ಲಲ್ಲಿ ಹೇಳಿರುವುದನ್ನು ನೋಡಬಹುದು.

ಪ್ರತಿಯೊಬ್ಬ ಜೀವಿಗೆ ತನ್ನ ಪ್ರಾಣವು ಅತ್ಯಂತ ಪ್ರಿಯಕರವಾಗಿರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ತನ್ನ ಪ್ರಾಣಕ್ಕಿಂತಲೂ ಇನ್ನೊಂದು ವಸ್ತು ಅಥವಾ

ವ್ಯಕ್ತಿ ಪ್ರಿಯಕರವಾಗಿ ಕಂಡಾಗ ಅದಕ್ಕೋಸುಗ ತನ್ನ ಪ್ರಾಣವನ್ನೂ ಸಹ ಕಳೆದುಕೊಳ್ಳುವ ಅನೇಕ ಪ್ರಸಂಗಗಳನ್ನು ಲೋಕದಲ್ಲಿ ಕಾಣುತ್ತೇವೆ. ಸಾಂಸಾರಿಕ ಕ್ಷುದ್ರ ವಿಷಯಗಳಿಗಾಗಿ ಕೆಲವರು ತಮ್ಮ ಪ್ರಾಣ ತೆಗೆದುಕೊಂಡು ಲೋಕನಿಂದೆಗೆ ಗುರಿಯಾದರೆ, ವೀರರಾದ ಸೈನಿಕರು ರಾಷ್ಟ್ರಪ್ರೇಮಕ್ಕಾಗಿ ರಣರಂಗದಲ್ಲಿ ತಮ್ಮ ಪ್ರಾಣಗಳನ್ನು ಆಹುತಿಗೈದು ವೀರಸ್ವರ್ಗವನ್ನೈದಿ ಲೋಕದಲ್ಲಿ ಶ್ಲಾಘ್ಯರಾಗುವಂತೆ ವೀರಶೈವರು ತಮ್ಮ ಇಷ್ಟಲಿಂಗದಲ್ಲಿರುವ ವೀರಭಕ್ತಿಯಿಂದ ತಮ್ಮ ಪ್ರಾಣವನ್ನು ಕಳೆದುಕೊಂಡರೂ ಸಹ ಅವರಿಗೆ ಸದ್ಗತಿಯೇ ಪ್ರಾಪ್ತವಾಗುವುದು. ಇದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಪ್ರಾಣ ತ್ಯಜಿಸುವಷ್ಟು ಧೈರ್ಯವಿಲ್ಲದವನು ಮೇಲೆ ಹೇಳಿದ ಪ್ರಾಯಶ್ಚಿತ್ತಗಳನ್ನಾಚರಿಸಿ ತನ್ನ ಲೋಪದೋಷಗಳನ್ನು ತಿದ್ದಿಕೊಳ್ಳಬೇಕು. ಒಟ್ಟಿನಲ್ಲಿ ಇಷ್ಟಲಿಂಗದ ಬಗ್ಗೆ ದೃಢವಾದ ನಿಷ್ಠೆಯಿರಬೇಕೆಂಬುದೇ ಆಗಮಾದಿ ಶಾಸ್ತ್ರಗಳ ತಾತ್ಪರ್ಯವಾಗಿದೆ.

ಇಷ್ಟಲಿಂಗಧಾರಣೆಯ ಮೂಲಕ ಸಾಮಾಜಿಕ ಸಮಾನತೆ :

ನಮ್ಮ ದೇಶದಲ್ಲಿ ಸನಾತನಗಳಾದ ಕೆಲವು ಧರ್ಮಗಳಲ್ಲಿ ಶೂದ್ರ ಹಾಗೂ ಸ್ತ್ರೀಯರಿಗೆ ಧರ್ಮಾಚರಣೆಯಲ್ಲಿ ಅಧಿಕಾರವನ್ನು ಕೊಡದಿರುವುದು ಕಂಡುಬರುತ್ತದೆ. ಇದೂ ಅಲ್ಲದೆ ಅವರಿಗೆ ಓಂಕಾರ ಹಾಗೂ ವೈದಿಕಮಂತ್ರಗಳ ಉಚ್ಚಾರಣೆಯಲ್ಲಿ ನಿಷೇಧವನ್ನೂ ಸಹ ಮಾಡಲಾಗಿದೆ. ವರ್ಣಾಶ್ರಮ ಪದ್ಧತಿಯನ್ನು ಪರಿಪಾಲಿಸುವ ಆಯಾ ಧರ್ಮಾಚಾರ್ಯರ ದೃಷ್ಟಿಯಲ್ಲಿ ಅದು ಯೋಗ್ಯವಾಗಿದ್ದರೂ ಅತಿವರ್ಣಾಶ್ರಮ ಧರ್ಮವೆನಿಸುವ ವೀರಶೈವಧರ್ಮದ ಸಂಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಜಾತಿಯ ಆಧಾರದಿಂದ ಮಾನವ ಸಮಾಜವನ್ನು ವಿಭಾಗಿಸದೆ ಭಕ್ತಿ–ಅಭಕ್ತಿಗಳ ಮೂಲಕ ಇಡೀ ಸಮಾಜವನ್ನೇ ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಅಂದರೆ ಇಷ್ಟದೇವರಲ್ಲಿ ಶ್ರದ್ಧೆ ಹಾಗೂ ವಿಶ್ವಾಸವುಳ್ಳವರು ಒಂದು ಭಾಗವಾದರೆ ಅವುಗಳಲ್ಲದವರು ಇನ್ನೊಂದು ಭಾಗವೆಂದು ತಿಳಿದುಕೊಳ್ಳಬೇಕು. ಇದನ್ನೇ ಭಕ್ತ ಮತ್ತು ಭವಿಯೆಂಬುದಾಗಿ ಸಹ ಹೇಳಬಹುದು.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಅಧಮ–ಉತ್ತಮಗಳೆಂಬ ಜಾತಿಗಿಂತಲೂ ಭಕ್ತಿಯುಳ್ಳವನೇ ಶಿವನಿಗೆ ಪ್ರಿಯನಾಗುವನೆಂಬ ವಿಷಯವನ್ನು –

ಅಧಮೇ ಚೋತ್ತಮೇ ವಾऽಪಿ ಯತ್ರಕುತ್ರಚಿದೂರ್ಜಿತಾ ।
ವರ್ತತೇ ಶಾಂತರೀ ಭಕ್ತಿಃ ಸ ಭಕ್ತ ಇತಿ ಗೀಯತೇ ॥

ಭಕ್ತಿಃ ಸ್ಥಿರೀಕೃತಾ ಯಸ್ಮಿನ್ ಮ್ಲೇಚ್ಛೇ ವಾ ದ್ವಿಜಸತ್ತಮೇ ।
ಶಂಭೋಃ ಪ್ರಿಯಃ ಸ ವಿಪ್ರಶ್ಚ ನ ಪ್ರಿಯೋ ಭಕ್ತಿವರ್ಜಿತಃ ॥

(ಸಿ.ಶಿ., ೯, ೪–೫)

ಬ್ರಾಹ್ಮಣಃ ಕ್ಷತ್ರಿಯೋ ವಾಽಪಿ ವೈಶ್ಯೋ ವಾ ಶೂದ್ರ ಏವ ವಾ ।
ಅಂತ್ಯಜೋ ವಾ ಶಿವೇ ಭಕ್ತಃ ಶಿವವನ್ಮಾನ್ಯ ಏವ ಸಃ ॥

ಶಿವಭಕ್ತಿಸಮಾವೇಶೇ ಕ್ವ ಜಾತಿ ಪರಿಕಲ್ಪನಾ ।
ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ ॥

(ಸಿ.ಶಿ., ೧೧. ೫೪–೫೫)

ಎಂದು ಸ್ಪಷ್ಟಪಡಿಸಿದ್ದಾರೆ. ತಾತ್ಪರ್ಯವೇನೆಂದರೆ, ವ್ಯಕ್ತಿಯ (ಜನ್ಮತಾಳಿದ) ಕುಲವು ಅಧಮವಾಗಿರಬಹುದು ಅಥವಾ ಉತ್ತಮವೇ ಆಗಿರಬಹುದು ಅರ್ಥಾತ್ ನೀಚವಾಗಿರಬಹುದು, ಇಲ್ಲವೆ ಉಚ್ಚವಾಗಿರಬಹುದು. ಯಾರಲ್ಲಿ ಉತ್ಕೃಷ್ಟವಾದ ಶಿವಭಕ್ತಿ ಇರುವುದೋ ಅವನೇ ಭಕ್ತನೆಂಬುದಾಗಿ ಕರೆಯಿಸಿಕೊಳ್ಳುತ್ತಾನೆ. ಭಕ್ತಿಯುಳ್ಳ ವ್ಯಕ್ತಿಯು ಮ್ಲೇಚ್ಛಜಾತಿಯವನಾಗಿರಬಹುದು ಅಥವಾ ಬ್ರಾಹ್ಮಣೋತ್ತಮನೇ ಆಗಿರಬಹುದು. ಅವನೇ ಶಿವನಿಗೆ ಪ್ರಿಯನಾಗುವನೇ ವಿನಹಾ ಭಕ್ತಿವರ್ಜಿತನಾದ ಬ್ರಾಹ್ಮಣನು ಅದೆಂದಿಗೂ ಶಿವನಿಗೆ ಪ್ರಿಯಕರನಾಗಲಾರನು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಅಥವಾ ಅಂತ್ಯಜ ಇವರಲ್ಲಿ ಯಾರು ಶಿವಭಕ್ತಿ ಸಂಪನ್ನರಾಗಿರುವರೋ ಅವರು ಶಿವನಷ್ಟೇ ಮನ್ನಣೆಯುಳ್ಳವರಾಗುವರು. ಶಿವಭಕ್ತಿಯು ಯಾರಲ್ಲಿ ಪ್ರವೇಶಿಸುವುದೋ ಅವರಲ್ಲಿಯ ಜಾತಿ ಮೂಲಕವಾದ ಭೇದವು ಉಳಿಯಲಾಗದು ಎಂಬುದಾಗಿ ಉಪದೇಶ ಮಾಡಿದ ರೇಣುಕ ಭಗವತ್ಪಾದರು ಇದಕ್ಕೆ ಸುಡಲ್ಪಟ್ಟ ಕಟ್ಟಿಗೆಗಳನ್ನು ಉದಾಹರಿಸಿದ್ದಾರೆ. ಬೇವು, ಮಾವು, ನೇರಲೆ, ಪೇರಲ, ನಿಂಬೆ, ಅಶ್ವತ್ಥ, ಅರಳೆ ಮತ್ತು ಆಲ ಮುಂತಾದ ಬೇರೆ ಬೇರೆ ಜಾತಿಯ ಗಿಡದ ಕಟ್ಟಿಗೆಗಳನ್ನು ಅಗ್ನಿಯಲ್ಲಿ ಹಾಕಿದಾಗ ಅವುಗಳು ಸುಟ್ಟು ನಿಗಿನಿಗಿಸುವ ಕೆಂಡವಾದಾಗ ಅವುಗಳ ಮೊದಲಿನ ಜಾತಿಗಳೆಲ್ಲ ಅಳಿದುಹೋಗಿ ಒಂದೇ ಅಗ್ನಿರೂಪವಾಗುವಂತೆ ಇಷ್ಟಲಿಂಗ ದೀಕ್ಷೆಯುನ್ನು ಪಡೆದು ಶಿವಭಕ್ತನೆನಿಸುವ ಪೂರ್ವದಲ್ಲಿ ಅದಾವುದೇ ಜಾತಿಯವನಾಗಿದ್ದರೂ ದೀಕ್ಷಾ ಸಂಸ್ಕಾರವನ್ನು ಹೊಂದಿ ಶಿವಭಕ್ತನೆನಿಸಿಕೊಂಡು ಪರಿಶುದ್ಧವಾದ ಆಚಾರ ವಿಚಾರ ಸಂಪನ್ನನಾಗಲು ಅವನ ಪೂರ್ವಜಾತಿಗಳಾವವೂ ಉಳಿಯುವುದಿಲ್ಲ. ಅಂದರೆ ಶಿವಭಕ್ತನಾದವನು ಬ್ರಾಹ್ಮಣನೇ ಇರಬಹುದು ಅಥವಾ ಶೂದ್ರನೇ ಇರಬಹುದು. ಈ ವಿಧವಾದ ಜಾತಿಭೇದವು ಶಿವದೀಕ್ಷೆಯ ನಂತರ ಉಳಿಯುವುದಿಲ್ಲವೆಂಬ ತಾತ್ಪರ್ಯವು.

ಪಾರಮೇಶ್ವರಾಗಮದಲ್ಲಿಯೂ ಸಹ ಇಷ್ಟಲಿಂಗಧಾರಿಗಳಾದವರಲ್ಲಿ ಜಾತಿ ಭೇದವನ್ನು ಮಾಡಬಾರದೆಂಬ ವಿಚಾರವನ್ನು ಬಹು ಸ್ಪಷ್ಟವಾಗಿ –

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಯೇ ಚಾನ್ಯಜಾತಯಃ ।
ಲಿಂಗಧಾರಣಮಾತ್ರೇಣ ಶಿವಾ ಏವ ನ ಸಂಶಯ ಃ ॥

(ಪಟಲ. ೧–೫೮)

ಎಂದು ಹೇಳಲಾಗಿದೆ. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಅಥವಾ ಇನ್ನಿತರ ಯಾವುದೇ ಜಾತಿಯವನಾಗಿದ್ದರೂ ಇಷ್ಟಲಿಂಗವನ್ನು ಧರಿಸಿದ ಮಾತ್ರದಿಂದ ಅವನು ಶಿವನೇ ಎಂಬುದರಲ್ಲಿ ಯಾವ ಸಂಶಯವಿರುವುದಿಲ್ಲ. ಇದೂ ಅಲ್ಲದೆ ಸ್ತ್ರೀಯರು, ಬಾಲರು, ವೃದ್ಧರು, ಷಂಢರು, ಕುಳ್ಳರು, ಕುರುಡರು, ಕುಂಟರು, ಹುಚ್ಚರು, ಕಿವುಡರು, ಧೂರ್ತರು, ವಂಚಕರು, ಕಳ್ಳರು, ಸ್ತ್ರೀಲಂಪಟರು, ವೇಶ್ಯೆಯರು ಮತ್ತು ಚಾಂಡಾಲಾದಿ ಜಾತಿಯಲ್ಲಿ ಜನಿಸಿದವರು ಇವರ್‍ಯಾರೇ ಇದ್ದರೂ ಇಷ್ಟಲಿಂಗವನ್ನು ಧರಿಸುವುದರಿಂದ ಶಿವಸ್ವರೂಪವನ್ನೇ ತಾಳುತ್ತಾರೆಂಬ ವಿಷಯವನ್ನು ಶಿವನು ಪಾರಮೇಶ್ವರಾಗಮದಲ್ಲಿ (ಪಟಲ. ೧. ೫೯-೬೦) ಪಾರ್ವತಿಯನ್ನು ಕುರಿತು ಉಪದೇಶಿಸಿದ್ದಾನೆ. ಹೀಗೆ ಶಿವಾಗಮ ಹಾಗೂ ಸಿದ್ಧಾಂತಶಿಖಾಮಣಿಯಲ್ಲಿ ಇಷ್ಟಲಿಂಗಧಾರಣೆಯ ಮೂಲಕ ಸಮಾಜದಲ್ಲಿಯ ಜಾತಿಮೂಲಕಗಳಾದ ಮೇಲು-ಕೀಳು ಭಾವನೆಗಳನ್ನು ದೂರಮಾಡಿದ್ದನ್ನು ನೋಡಬಹುದು. ವೀರಶೈವ ಸಿದ್ಧಾಂತದ ಈ ಬುನಾದಿ ತತ್ತ್ವವನ್ನು ಹಿಡಿದುಕೊಂಡೇ ಹನ್ನೆರಡನೇ ಶತಮಾನದ ಬಸವಾದಿ ಶಿವಶರಣರೂ ಸಹ ತಮ್ಮ ಅನುಭಾವಪೂರ್ಣಗಳಾದ ಕನ್ನಡದ ವಚನಗಳಲ್ಲಿ ಈ ವಿಷಯಗಳನ್ನು ಪ್ರಸ್ತಾಪಿಸಿ ಅವರೂ ಸಹ ಸಮಾಜವನ್ನು ಭಕ್ತ ಮತ್ತು ಭವಿಯೆಂಬುದಾಗಿ ವಿಂಗಡಿಸಿದ್ದನ್ನು ಕಾಣಬಹುದು.

ಗಣದಾಸಿ ವೀರಣ್ಣನೆಂಬ ಶರಣನು - "ಕುಲಯೆಷ್ಟು ಎಂದರೆ ಎರಡು ಕುಲ. ಅವಾವೆಂದೊಡೆ, ಭವಿ ಒಂದು ಕುಲ, ಭಕ್ತ ಒಂದು ಕುಲ". ಈ ತನ್ನ ವಚನದಲ್ಲಿ ಕುಲಗಳನ್ನು ಭವಿ ಮತ್ತು ಭಕ್ತನೆಂಬುದಾಗಿ ಎರಡು ವಿಧವಾಗಿ ವಿಂಗಡಿಸಿದ್ದನ್ನಿಲ್ಲ ಕಾಣಬಹುದು. ಶ್ರೀ ಬಸವಣ್ಣನವರು -

ಶೆಟ್ಟಿಯೆಂದೆಂಬೆನೆ ಶಿರಿಯಾಳನ ?
ಮಡಿವಾಳನೆಂದೆಂಬೆನೆ ಮಾಚಯ್ಯನ ?
ಡೋಹಾರನೆಂದೆಂಬೆನೆ ಕಕ್ಕಯ್ಯನ ?
ಮಾದಾರನೆಂದೆಂಬೆನೆ ಚೆನ್ನಯ್ಯನ ?
ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯಾ.

ಎಂಬ ಈ ವಚನದಲ್ಲಿ ಶರಣರಲ್ಲಿಯ ಪೂರ್ವಾಶ್ರಮದ ಜಾತಿಗಳನ್ನು ಅಲ್ಲಗಳೆದು ಎಲ್ಲರನ್ನೂ ಒಂದಾಗಿ ನೋಡುವ ಭಾವನೆಯನ್ನು ವ್ಯಕ್ತಮಾಡಿದ್ದಾರೆ. ಇದೂ ಅಲ್ಲದೆ ತಾನು ಉಚ್ಚಕುಲದವನು ಬ್ರಾಹ್ಮಣನು ಎಂಬ ಭಾವನೆಯು ತನಗೆ ಬಾರದಿರುವಂತೆ ಕರುಣಿಸೆಂಬುದಾಗಿ ಶಿವನನ್ನು ಅವರು ಪ್ರಾರ್ಥಿಸಿದ್ದೂ ಉಂಟು. ಮನುಷ್ಯನು ಜನಿಸಿದ ಜಾತಿಗಿಂತಲೂ ಆತನ ಕರ್ಮವೇ ಮುಖ್ಯವೆಂಬುದಾಗಿ ಹೇಳುವುದರ ಮೂಲಕ "ಕೊಲ್ಲುವವನೇ ಮಾಡಿಗ, ಹೊಲಸು ತಿಂಬುವವನೇ

ಹೊಲೆಯ" ಎಂಬ ಈ ವಚನದಲ್ಲಿ ಹುಟ್ಟಿನಿಂದ ಅದಾರೂ ಹೊಲೆಯ–ಮಾದಿಗರಲ್ಲ, ಅಂತಹ ಕುಕೃತ್ಯವನ್ನು ಎಸಗುವವರೇ ಹೊಲೆಯರೆಂಬುದಾಗಿ ತಿಳಿಸಿದ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವರೇ ಉಚ್ಚಕುಲದವರೆಂಬ ವಿಷಯವನ್ನು ಪ್ರತಿಪಾದಿಸಿದ್ದಾರೆ.

ಈ ತೆರನಾಗಿ ವೀರಶೈವಧರ್ಮದಲ್ಲಿ ಇಷ್ಟಲಿಂಗದಾರಣೆಯ ಮೂಲಕ ಸಾಮಾಜಿಕ ಜಾತಿಬೇಧವನ್ನು ತೊಲಗಿಸಿ ಇಷ್ಟಲಿಂಗ ದೀಕ್ಷೆಯುನ್ನು ಹೊಂದಿದವರೆಲ್ಲರೂ ಸಮಾನರೆಂಬ ವಿಚಾರವು ಪ್ರತಿಪಾದಿಸಲ್ಪಟ್ಟಿದ್ದನ್ನು ಕಾಣುತ್ತೇವೆ.

ಅತಿ ಪ್ರಾಚೀನಕಾಲದಲ್ಲಿ ಬೇರೆ ಬೇರೆ ಜಾತಿಯ ಮಹರ್ಷಿಗಳಾದ ಶ್ರೀ ಅಗಸ್ತ್ಯನಿಗೆ ಶ್ರೀ ಜಗದ್ಗುರು ರೇಣುಕರು, ಶ್ರೀ ದದೀಚಿ ಮಹರ್ಷಿಗೆ ಶ್ರೀ ಜಗದ್ಗುರು ದಾರುಕರು, ಶ್ರೀ ವ್ಯಾಸಮಹರ್ಷಿಗೆ ಶ್ರೀ ಜಗದ್ಗುರು ಘಂಟಾಕರ್ಣರು, ಶ್ರೀ ಸಾನಂದ ಮಹರ್ಷಿಗೆ ಶ್ರೀ ಜಗದ್ಗುರು ಧೇನುಕರ್ಣರು ಮತ್ತು ಶ್ರೀ ದೂರ್ವಾಸ ಮಹರ್ಷಿಗೆ ಶ್ರೀ ಜಗದ್ಗುರು ವಿಶ್ವಕರ್ಣ ಭಗವತ್ಪಾದರು ಇಷ್ಟಲಿಂಗ ದೀಕ್ಷೆಯನ್ನಿತ್ತು ವೀರಶೈವ ಸಿದ್ಧಾಂತವನ್ನು ಬೋಧಿಸಿ ಅಂದಿನ ಕಾಲದಲ್ಲಿಯೇ ಜಾತಿನಿರ್ಮೂಲನೆಗೆ ನಾಂದಿ ಹಾಡಿದ್ದಾರೆ. ಇದನ್ನೇ ಶರಣರು ಸಹ ಅನುಸರಿಸಿದ್ದನ್ನು ಕಾಣಬಹುದು. ಹೀಗೆ ಶಿವಾಗಮ ಮತ್ತು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಪ್ರತಿಪಾದಿಸಿದ ವಿಷಯದ ಹಿನ್ನೆಲೆಯಲ್ಲಿಯೇ ಶರಣರೂ ಸಹ ಅದೇ ವಿಷಯವನ್ನು ಇನ್ನಷ್ಟು ಮತ್ತಷ್ಟು ಪುಷ್ಟಿಗೊಳಿಸಿದ್ದನ್ನು ಕಾಣಬಹುದು. ಆದ್ದರಿಂದ ಸರ್ವರಲ್ಲಿಯ ವ್ಯಾವಹಾರಿಕ ಜಾತಿಭೇದವನ್ನು ದೂರಮಾಡಿ ಸರ್ವರಲ್ಲಿ ಸಮಭಾವನೆಯನ್ನು ಮೂಡಿಸಲು ಇಷ್ಟಲಿಂಗಧಾರಣೆಯು ಅತಿಮಹತ್ತ್ವದ ಪಾತ್ರವಹಿಸಿದ್ದನ್ನಿಲ್ಲಿ ಖಚಿತಪಡಿಸಿಕೊಳ್ಳ ಬಹುದಾಗಿದೆ.

ಇಷ್ಟಲಿಂಗಧಾರಣೆಯಲ್ಲಿ ಸ್ತ್ರೀಯರಿಗೆ ಸಮಾನಾಧಿಕಾರ :

ವೀರಶೈವಧರ್ಮದ ಸಂಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಪಂಚಾಚಾರ್ಯರು ಈ ಧರ್ಮದಲ್ಲಿ ಸ್ತ್ರೀ–ಪುರುಷರೆಂಬ ಭೇದವನ್ನು ಮಾಡದೆ ಸರ್ವರಿಗೂ ಧರ್ಮಾಚರಣೆಯಲ್ಲಿ ಸಮಾನವಾದ ಅಧಿಕಾರವನ್ನು ದಯಪಾಲಿಸಿದ್ದು ಈ ಧರ್ಮದ ಒಂದು ವೈಶಿಷ್ಟ್ಯವಾಗಿದೆ. ಆದ್ದರಿಂದ ವೀರಶೈವಧರ್ಮೋಚಿತವಾದ ಲಿಂಗಧಾರಣೆ ಹಾಗೂ ದೀಕ್ಷಾದಿ ಸಂಸ್ಕಾರಗಳು ಸ್ತ್ರೀ ಹಾಗೂ ಪುರುಷರೆಂಬ ಲಿಂಗಭೇದವಿಲ್ಲದೆ ಪ್ರಾಚೀನಕಾಲದಿಂದಲೂ ಸಾಗಿಬಂದಿವೆ. ಅಂತೆಯೇ ಪಾರಮೇಶ್ವರಾಮಗದಲ್ಲಿ – "ಸ್ತ್ರೀಯೋ ಬಾಲಾಸ್ತಥಾ ವೃದ್ಧಾಃ.....................ಮಲ್ಲಿಂಗ ಧಾರಣಾದೇವ ಮದ್ರೂಪಾ ಏವ ತೇ ಪ್ರಿಯೇ ! (ಪಟಲ. ೧. ೫೯–೬೦)

ಎಂಬುದಾಗಿ ಹೇಳಿ ಸ್ತ್ರೀಯರಿಗೆ ಇರುವ ಲಿಂಗಧಾರಣೆಯ ಅಧಿಕಾರವನ್ನು ಖಚಿತಪಡಿಸಲಾಗಿದೆ. ಇದೇ ಪ್ರಕಾರವಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರೂ ಸಹ –

ಲಿಂಗಾರ್ಚನರತಾಯಾಶ್ಚ ಋತೌ ನಾರ್ಯಾ ನ ಸೂತಕಮ್ ।
ತಥಾ ಪ್ರಸೂತಿಕಾಯಾಶ್ಚ ಸೂತಕಂ ನೈವ ವಿದ್ಯತೇ ॥

ಗೃಹೇ ಯಸ್ಮಿನ್ ಪ್ರಸೂತಾ ಸ್ತ್ರೀ ಸೂತಕಂ ನಾತ್ರ ವಿದ್ಯತೇ।
ಶಿವಪಾದಾಂಬುಸಂಸ್ಪರ್ಶಾತ್ ಸರ್ವಪಾಪಂ ಪ್ರಣಶ್ಯತಿ ॥

(ಸಿ.ಶಿ., ೯. ೪೪–೪೫)

ಭಕ್ತಮಾರ್ಗಕ್ರಿಯಾಸ್ಥಲದ ಈ ಸಂದರ್ಭದಲ್ಲಿ ಸ್ತ್ರೀಯರಿಗುಂಟಾಗುವ ರಜ ಮತ್ತು ಪ್ರಸೂತಿಕಾ ಸೂತಕಗಳ ನಿಷೇಧಪೂರ್ವಕವಾಗಿ ಸ್ತ್ರೀಯರ ಇಷ್ಟಲಿಂಗಧಾರಣೆ ಹಾಗೂ ಅದರ ಪೂಜಾ ವಿಷಯವನ್ನು ದೃಢಪಡಿಸಿದ್ದನ್ನಿಲ್ಲಿ ಕಾಣುತ್ತೇವೆ. ಪ್ರಾಣಲಿಂಗಾಂಗಸಂಗಿಯಾದ ವೀರಶೈವನಿಗೆ ಜನನಸೂತಕ, ಮರಣಸೂತಕ, ಜಾತಿಸೂತಕ ಮತ್ತು ಉಚ್ಛಿಷ್ಟಸೂತಕಗಳು ಇರುವುದಿಲ್ಲ. ಅಂತೆಯೇ ಇಂತಹ ಲಿಂಗಧಾರಣೆಯನ್ನು ಹೊಂದಿ ಲಿಂಗಾರ್ಚನೆಯಲ್ಲಿ ನಿಷ್ಠರಾಗಿರುವ ವೀರಶೈವ ಸ್ತ್ರೀಯರಿಗೆ ಮಾಸಿಕ ರಜೋದರ್ಶನದಿಂದುಂಟಾಗುವ ರಜಸ್ಸೂತಕವಾಗಲಿ ಮತ್ತು ಹೆರಿಗೆಯಿಂದುಂಟಾಗುವ ಪ್ರಸೂತಿಕಾ ಸೂತಕವಾಗಲಿ ಇರುವುದಿಲ್ಲ. ಇಂತಹ ಸೂತಕಗಳು ಬಂದಾಗ ಸದ್ಗುರುಗಳ ಪಾದೋದಕದಿಂದ ತಮ್ಮನ್ನು ಪ್ರೋಕ್ಷಿಸಿಕೊಂಡು ಪರಿಶುದ್ಧವಾಗಿ ಲಿಂಗಪೂಜೆಯನ್ನು ಮಾಡಬೇಕೆಂಬುದಾಗಿ ಪೂಜ್ಯರು ಇಲ್ಲಿ ಅಪ್ಪಣೆಕೊಡಿಸಿದ್ದಾರೆ.

ಇಷ್ಟಲಿಂಗಪೂಜಕರಿಗೆ ಸೂತಕಗಳ ನಿಷೇಧ :

ಧರ್ಮಶಾಸ್ತ್ರದಲ್ಲಿ ಜನನ, ಮರಣ, ರಜ, ಜಾತಿ ಮತ್ತು ಉಚ್ಛಿಷ್ಟಗಳೆಂಬ ಪಂಚಸೂತಕಗಳು ಪ್ರತಿಪಾದಿಸಲ್ಪಟ್ಟಿವೆ. ಸೂತಕವೆಂದರೆ ಆಶೌಚ ಅಥವಾ ಅಪವಿತ್ರತೆ ಎಂದರ್ಥ. ಮನೆಯಲ್ಲಿ ಹೆರಿಗೆಯಾದಾಗ ಜನನ ಸೂತಕವೂ, ಯಾರಾದರೂ ನಿಧನರಾದರೆ ಮರಣಸೂತಕವೂ, ಹೆಣ್ಣುಮಕ್ಕಳಿಗೆ ಋತುಸ್ರಾವವಾದರೆ ರಜಸ್ಸೂತಕವೂ, ಉಂಡುಬಿಟ್ಟ ಅನ್ನಾದಿಗಳನ್ನು ಸೇವಿಸುವುದು ಉಚ್ಛಿಷ್ಟಸೂತಕವೂ, ಇದೇ ಪ್ರಕಾರವಾಗಿ ಕೆಳದರ್ಜೆಯ ಜಾತಿಯ ಜನರೊಂದಿಗೆ ಸ್ಪರ್ಶಾದಿಗಳಾದರೆ ಜಾತಿಸೂತಕವೂ ಪ್ರಾಪ್ತವಾಗುವುದೆಂಬುದಾಗಿ ಶಾಸ್ತ್ರಕಾರರು ಪ್ರತಿಪಾದಿಸಿದ್ದಾರೆ.

ಮೇಲೆ ಹೇಳಿದ ಸೂತಕಗಳಲ್ಲಿ ಜನನ ಸೂತಕಕ್ಕೆ ಹತ್ತುದಿನಗಳ ಆಶೌಚವು, ಮರಣಸೂತಕಕ್ಕೆ ಹನ್ನೆರಡು ದಿನಗಳ ಆಶೌಚವೂ ಮತ್ತು ರಜಸ್ಸೂತಕಕ್ಕೆ ಮೂರು

ಇಲ್ಲವೆ ನಾಲ್ಕು ದಿನಗಳ ಆಶೌಚವು ವಿಧಿಸಲಾಗಿದೆ. ಈ ಆಶೌಚದ ಕಾಲಾವಧಿಯನ್ನು ನಿರ್ಣಯಿಸುವಾಗ ವ್ಯಕ್ತಿಗಳ ಪರಸ್ಪರರ ಸಂಬಂಧಗಳ ಮೇಲಿಂದಲೂ ಆಶೌಚದ ದಿನಗಳ ಇತಿಮಿತಿಗಳಲ್ಲಿ ವ್ಯತ್ಯಾಸವನ್ನು ಸಹ ಕಾಣಬಹುದು. ಇದರ ವಿಸ್ತೃತವಾದ ವಿವರವನ್ನು ಧರ್ಮಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟ ಆಶೌಚನಿರ್ಣಯವನ್ನು ಜಿಜ್ಞಾಸುಗಳು ಅವಲೋಕಿಸಬಹುದು.

ವೀರಶೈವಸಿದ್ಧಾಂತದಲ್ಲಿ ಶಿವದೀಕ್ಷಾ ಸಂಸ್ಕಾರ, ಇಷ್ಟಲಿಂಗಧಾರಣೆ ಮತ್ತು ಅದರ ಪೂಜಾದಿಗಳಿಗೆ ಪುರುಷರಂತೆ ಸ್ತ್ರೀಯರೂ ಸಹ ಸಮಾನವಾದ ಅಧಿಕಾರವನ್ನು ಅನಾದಿಕಾಲದಿಂದಲೂ ಪಡೆದುಕೊಂಡಿದ್ದಾರೆ. ಇಷ್ಟಲಿಂಗಪೂಜೆಯು ನಿತ್ಯಕರ್ಮವಾಗಿರುವುದರಿಂದ ಅದನ್ನು ಸ್ತ್ರೀ–ಪುರುಷರೆಲ್ಲರೂ ತಮ್ಮ ಜೀವನ ಪರ್ಯಂತವಾಗಿ ತಪ್ಪದೇ ಮಾಡಬೇಕಾಗುವುದು. ಇಂತಹ ಲಿಂಗಪೂಜಾವ್ರತವನ್ನು ಪ್ರಾರಂಭಿಸಿದ ನಂತರ ಹೆಣ್ಣುಮಕ್ಕಳಿಗೆ ರಜಸ್ಸೂತಕಾದಿಗಳು ಪ್ರಾಪ್ತವಾಗಲು ಅವರಿಗೆ ಆ ಕಾಲಾವಧಿಯಲ್ಲಿ ಆಶೌಚವು ಪ್ರಾಪ್ತವಾಗುವುದು. ಈ ಆಶೌಚದ ಸಮಯದಲ್ಲಿ ಪೂಜಾದಿಗಳು ಧರ್ಮಶಾಸ್ತ್ರದಲ್ಲಿ ನಿಷೇಧಿಸಲ್ಪಟ್ಟಿರುವುದರಿಂದ ವೀರಶೈವ ಸ್ತ್ರೀಯರು ಇಷ್ಟಲಿಂಗಪೂಜಾರೂಪವಾದ ನಿತ್ಯಕರ್ಮವನ್ನು ಹೇಗೆ ಆಚರಿಸಲು ಸಾಧ್ಯವಾಗುವುದು? ಆಚರಿಸಿದರೆ ಆಶೌಚದೋಷ ಬಿಟ್ಟರೆ ನಿತ್ಯಕರ್ಮದ ಲೋಪ. ಹೀಗೆ ಉಭಯ ಸಂಕಟವು ಪ್ರಾಪ್ತವಾದಾಗ ಪೂಜ್ಯಪಾದರಾದ ಆಚಾರ್ಯರು ಪ್ರಾಣಲಿಂಗಧಾರಿಗಳಾದ ವೀರಶೈವರಿಗೆ ಲಿಂಗಧಾರಣೆ ಹಾಗೂ ಲಿಂಗಪೂಜೆಗೆ ಸೂತಕವಿಲ್ಲೆಂಬುದಾಗಿ ಪ್ರತಿಪಾದಿಸಿದ್ದಾರೆ.

ಸೂತಕದ ಸಮಯದಲ್ಲಿ ಆಶೌಚವನ್ನು ಪರಿಪಾಲಿಸುವ ವೈದಿಕ ಬ್ರಾಹ್ಮಣರಲ್ಲಿಯೂ ಕೆಲವೊಂದು ವಿಶಿಷ್ಟ ಪ್ರಸಂಗಗಳಲ್ಲಿ ಆಶೌಚವನ್ನು ನಿಷೇಧಿಸಿ ಪೂಜಾದಿಕರ್ಮಗಳನ್ನು ಮಾಡುತ್ತಿರುವ ಬಗ್ಗೆ ಶಾಸ್ತ್ರಪ್ರಮಾಣವಿರುವುದನ್ನೂ ಸಹ ಕಾಣಬಹುದಾಗಿದೆ. ಅಂತೆಯೇ ಶ್ರೀಪತಿ ಪಂಡಿತಾರಾಧ್ಯರು ಶ್ರೀಕರಭಾಷ್ಯದಲ್ಲಿ –

ಸ್ವೇಷ್ಟಲಿಂಗೈಕಪೂಜಾಯಾಂ ನೈವಾಶೌಚಂ ವಿಧೀಯತೇ ।
ಪೌಂಡರೀಕೇ ರಜಃ ಸ್ತ್ರೀಣಾಂ ಸ್ವಾಗ್ನಿಹೋತ್ರೇ ಯಥಾ ತಥಾ ॥
ಅಕರಸ್ಪರ್ಶಯೋಗ್ಯಾಪಿ ಯಥಾ ಜಿಹ್ವಾ ಮಹೇಶ್ವರೀ ।
ಮಂತ್ರೋಚ್ಚಾರಣಮಾತ್ರಸ್ಯ ಪೂತಾ ಭವತಿ ಭೂತಲೇ ॥
ತಥಾ ಸೂತಕಿನಃ ಶೈವಾಃ ಪೂಜಾಮಾತ್ರ ಸುನಿರ್ಮಲಾಃ ।
ನಾನ್ಯಸ್ಪರ್ಶಾನುಕೂಲಾಃ ಸ್ಯುರಿತಿ ವೇದಾನುಶಾಸನಮ್ ॥

(ಬ್ರ.ಸೂ. ಶ್ರೀಕರ., ೧–೧–೧)

ಈ ರೀತಿಯಾಗಿ ಸಿದ್ಧಾಂತಾಗಮದ ಪ್ರಮಾಣಗಳನ್ನು ಉದಾಹರಿಸಿ ಸೂತಕಗಳ ನಿಷೇಧವನ್ನು ಸಮರ್ಥಿಸಿದ್ದಾರೆ. ವೈದಿಕಮಾರ್ಗದಲ್ಲಿ ಕೆಲವು ಆಹಿತಾಗ್ನಿಗಳಾಗಿ ಅಗ್ನಿಹೋತ್ರಕರ್ಮವನ್ನು ಪ್ರತಿದಿನ ತಪ್ಪದೇ ಮಾಡುತ್ತಿರುತ್ತಾರೆ. ಇದೂ ಅಲ್ಲದೆ ದೀರ್ಘಕಾಲದವರೆಗೆ ನಡೆಯುವ ಪೌಂಡರೀಕ ಯಾಗಾದಿಗಳನ್ನೂ ಸಹ ಮಾಡುವುದುಂಟು. ಗೃಹಸ್ಥರಾದವರು ಇಂತಹ ಧಾರ್ಮಿಕ ಅನುಷ್ಠಾನಗಳನ್ನು ಮಾಡುವಾಗ ಪತ್ನೀಸಮೇತರಾಗಿಯೇ ಮಾಡಬೇಕೆಂಬ ನಿಯಮವಿದೆ. ಹೀಗೆ ಪ್ರತಿದಿವಸದ ಅಗ್ನಿಹೋತ್ರವನ್ನು ಮಾಡುವಾಗ ಅಥವಾ ದೀರ್ಘಕಾಲೀನವಾದ ಪೌಂಡರೀಕಾದಿ ಯಾಗಗಳನ್ನು ಮಾಡುವಾಗ ಯಜಮಾನನ ಧರ್ಮಪತ್ನಿಯು ರಜಸ್ವಲೆಯಾದರೂ ಸಹ ಅವಳು ಸಚೇಲಸ್ನಾನಮಾಡಿ ಆರ್ದ್ರವಸ್ತ್ರದೊಂದಿಗೆ ಹವನ ಕರ್ಮದಲ್ಲಿ ಭಾಗಿಯಾಗಲು ಧರ್ಮಶಾಸ್ತ್ರವು ಸಮ್ಮತಿಯನ್ನಿತ್ತಿದೆ. ನಿತ್ಯ ಅನುಷ್ಠಾನದ ಲೋಪವಾಗಬಾರದೆಂಬುದೇ ಧರ್ಮಶಾಸ್ತ್ರದ ಆದೇಶದ ತಾತ್ಪರ್ಯವಾಗಿದೆ.

ಇದೇ ಪ್ರಕಾರವಾಗಿ ವೀರಶೈವರ ಇಷ್ಟಲಿಂಗಪೂಜೆಯು ನಿತ್ಯಕರ್ಮವಾಗಿರುವುದರಿಂದ ಶಿವದೀಕ್ಷಾ ಸಂಪನ್ನಳಾದ ಹೆಣ್ಣುಮಗಳು ರಜಸ್ಸೂತಕ ಪ್ರಾಪ್ತವಾದಾಗಲೂ ಸ್ನಾನದಿಂದ ಶುಚಿರ್ಭೂತಳಾಗಿ ಗುರು ಇಲ್ಲವೆ ಜಂಗಮನ ಪಾದೋದಕ ಪ್ರೋಕ್ಷಿಸಿಕೊಂಡು ಇಷ್ಟಲಿಂಗಪೂಜೆಯನ್ನು ಮಾಡಿದರೆ ಅದಾವ ದೋಷವೂ ಇರುವುದಿಲ್ಲ. ಇಷ್ಟಲಿಂಗ ಪೂಜೆಗೆ ಮಾತ್ರ ಈ ಆಶೌಚವನ್ನು (ಸೂತಕವನ್ನು) ನಿಷೇಧಿಸಲಾಗಿರುವುದರಿಂದ ಅಷ್ಟನ್ನು ಮಾಡಲು ಅವಳಿಗೆ ಅನುಮತಿಯೇ ವಿನಹ ಬೇರಾವ ವ್ಯವಹಾರಗಳಿಗೆ ಅನುಮತಿಯನ್ನು ಕೊಡಲಾಗಿರುವುದಿಲ್ಲ. ಅಂದರೆ ಅನ್ಯವ್ಯಕ್ತಿಗಳ ಸ್ಪರ್ಶ ಅಥವಾ ಪಾಕಾದಿ ವ್ಯವಹಾರವನ್ನು ಮಾಡಬಾರದೆಂಬುದೇ ಆಚಾರ್ಯರ ಅಭಿಮತವಾಗಿದೆ. ಇದೇ ಮಾತನ್ನೇ ಸಿದ್ಧಾಂತಾಗಮದಲ್ಲಿ ಮೇಲೆ ಹೇಳಿದ ಪ್ರಮಾಣದಲ್ಲಿ ಉದಾಹರಣೆ ಪೂರ್ವಕವಾಗಿ ಸ್ಪಷ್ಟಪಡಿಸಲಾಗಿದೆ. ಬಾಯೊಳಗಿನ ನಾಲಿಗೆಯು ಕರಸ್ಪರ್ಶಕ್ಕೆ ಅಂದರೆ ಕೈಯಿಂದ ಮುಟ್ಟಲು ಅಯೋಗ್ಯವಾಗಿದ್ದರೂ ಮಂತ್ರೋಚ್ಚಾರಣೆಗೆ ಅದು ಪವಿತ್ರವೇ ಆಗಿರುವಂತೆ ರಜಸ್ವಲೆಯಾದ ಸ್ತ್ರೀಯು ಅನ್ಯವ್ಯಕ್ತಿಗಳ ಸ್ಪರ್ಶಕ್ಕೆ ಅಪವಿತ್ರಳಾಗಿದ್ದರೂ ಇಷ್ಟಲಿಂಗಪೂಜೆಗೆ ಮಾತ್ರ ಸದಾ ಪವಿತ್ರಳೇ ಆಗಿರುತ್ತಾಳೆ. ಆದ್ದರಿಂದ ಇಷ್ಟಲಿಂಗಧಾರಿಯಾದ ಹೆಣ್ಣುಮಗಳು ರಜಸ್ವಲೆಯೇ ಆಗಿರಲಿ ಅಥವಾ ಪ್ರಸೂತಳೇ ಆಗಿರಲಿ ಅವಳಿಗೆ ಇಷ್ಟಲಿಂಗ ಪೂಜೆಗೆ ಮಾತ್ರ ಅದಾವ ಆಶೌಚವೂ ಇರುವುದಿಲ್ಲವೆಂಬುದು ಶಾಸ್ತ್ರಪ್ರಮಾಣ ಸಿದ್ಧವಾದುದು.

"ನ ಹಿಂಸ್ಯಾತ್ ಸರ್ವಾಭೂತಾನಿ ನ ಮಾಂಸಮಶ್ನೀಯಾತ್ ನೋಚ್ಛಿಷ್ಟಂ ಕಸ್ಯಚಿತ್ ದದ್ಯಾತ್" ಮುಂತಾದ ಶಾಸ್ತ್ರೀಯ ಆದೇಶಗಳಲ್ಲಿ ಸಾಮಾನ್ಯವಾಗಿ

ಪ್ರಾಣಿಹಿಂಸೆ, ಮಾಂಸಭಕ್ಷಣೆ ಮತ್ತು ಉಚ್ಛಿಷ್ಟ ಸೇವನೆಯ ಬಗ್ಗೆ ನಿಷೇಧವನ್ನು ಮಾಡಲಾಗಿದ್ದರೂ "ಅಗ್ನಿಷ್ಟೋಮೀಯಂ ಪಶುಮಾಲಭೇತ್ ಸೋಮೇ ನೋಚ್ಛಿಷ್ಟಮ್" ಇತ್ಯಾದಿ ವಿಶೇಷ ಶಾಸ್ತ್ರಬೋಧಕ ಪ್ರಮಾಣಗಳಾನು ಸಾರವಾಗಿ ಯಜ್ಞದಲ್ಲಿ ಪಶುಬಲಿ, ಮಾಂಸಭಕ್ಷಣೆ ಮತ್ತು ಉಚ್ಛಿಷ್ಟ ಭಕ್ಷಣೆಗಳು ಪ್ರತಿಪಾದಿಸಲ್ಪಟ್ಟಿರುವುದರಿಂದ ಮೇಲಿನ ಸಾಮಾನ್ಯ ನಿಯಮವು ವಿಶೇಷ ನಿಯಮದಿಂದ ಬಾಧಿತವಾಗಿ ವಿಶೇಷ ನಿಯಮಕ್ಕೆ ಪ್ರಾಧಾನ್ಯತೆ ಬರುವಂತೆ ಸರ್ವಸಾಮಾನ್ಯ ಸ್ತ್ರೀಯರಿಗೆ ರಜಸ್ಸೂತಕ ಮತ್ತು ಪ್ರಸೂತಿಕಾ ಸೂತಕಗಳು ಪ್ರಾಪ್ತವಾದರೂ ಇಷ್ಟಲಿಂಗಧಾರಿಗಳಾದ ವೀರಶೈವ ಸ್ತ್ರೀಯರಿಗೆ ಸೂತಕಗಳಿಲ್ಲವೆಂಬ ವಿಶೇಷಗಳಾದ ಶಾಸ್ತ್ರಪ್ರಮಾಣಗಳು ಪ್ರತಿಪಾದಿಸಲ್ಪಟ್ಟಿರುವಾಗ ವಿಶೇಷ ನಿಯಮದಿಂದ ಸಾಮಾನ್ಯ ನಿಯಮವು ಬಾಧಿತವಾಗಿ ವೀರಶೈವ ಸ್ತ್ರೀಯರಿಗೆ ಸೂತಕನಿಷೇಧವು ಸಿದ್ಧವಾಗುತ್ತದೆ.

ಸಾಮಾನ್ಯವಾಗಿ ವರ್ಷಾಋತುವಿನಲ್ಲಿ ನದಿಗಳಿಗೆ ಹೊಸನೀರು ಬಂದಾಗ ನದಿಗಳಿಗೆ ರಜಸ್ಸೂತಕವನ್ನು ಹೇಳಿ ಆ ನೀರಿನಲ್ಲಿ ಸ್ನಾನಮಾಡಬಾರದೆಂಬ ನಿಷೇಧವಿದೆ. ಈ ನಿಯಮವು ಉಳಿದೆಲ್ಲ ನದಿಗಳಿಗೆ ಅನ್ವಯಿಸಿದರೂ ಶಿವನ ಜಡೆಯಿಂದ ಹೊರ ಹೊಮ್ಮಿದ ಗಂಗಾನದಿಗೆ ಈ ಸೂತಕವನ್ನು ಹೇಳಲಾಗಿರುವುದಿಲ್ಲ. ಶಿವನ ಸಂಬಂಧಿನಿಯಾಗಿರುವುದರಿಂದ ಗಂಗೆಗೆ ಎಂದೂ ರಜಸ್ಸೂತಕವಿಲ್ಲದಿರುವಂತೆ ಲಿಂಗಾಂಗಸಂಗಿಗಳಾದ ವೀರಶೈವ ಸ್ತ್ರೀಯರಿಗೂ ಸಹ ಈ ರಜಸ್ಸೂತಕಾದಿಗಳು ಇಷ್ಟಲಿಂಗಪೂಜೆಯಲ್ಲಿ ಪ್ರತಿಬಂಧಕಗಳಾಗಲಾರವೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಶ್ರೀ ನಂದಿಕೇಶ್ವರ ಶಿವಾಚಾರ್ಯರು ತಮ್ಮ 'ಲಿಂಗಧಾರಣಚಂದ್ರಿಕಾ' ಎಂಬ ಗ್ರಂಥದಲ್ಲಿಯೂ ಸಹ ಈ ಸೂತಕಗಳ ನಿಷೇಧಕ್ಕೆ ವೀರಾಗಮ. ಪದ್ಮಪುರಾಣ, ಶಿವರಹಸ್ಯ ಮತ್ತು ಪರಾಶರಸ್ಮೃತಿಗಳ ಪ್ರಮಾಣಗಳನ್ನು ಉದಾಹರಿಸಿರುವುದಾಗಿ ಕಾಣಬಹುದು. ಆ ಪ್ರಮಾಣ ವಚನಗಳ ತಾತ್ಪರ್ಯವೇನೆಂದರೆ, ಸೂರ್ಯ, ಅಗ್ನಿ ಮತ್ತು ವಾಯುಗಳು ಸದಾ ಶುದ್ಧಗಳಾಗಿರುವಂತೆ ಇಷ್ಟಲಿಂಗಧಾರಿಯಾಗಿ ಲಿಂಗಾರ್ಚನೆಯನ್ನು ಮಾಡುತ್ತಿರುವ ನಾರಿಯೂ ಸಹ ಸೂತಕವರ್ಜಿತಳಾಗಿರುತ್ತಾಳೆ. ಅಗ್ನಿಯ ಸಂಪರ್ಕವನ್ನು ಹೊಂದಿದ ಕಬ್ಬಿಣವು ಕೇವಲ ಕಬ್ಬಿಣವಾಗಿರದೆ ಅಗ್ನಿ ವಿಶಿಷ್ಟ ಕಬ್ಬಿಣವಾಗಿರುವಂತೆ ಲಿಂಗಧಾರಿಯಾದ ಹೆಣ್ಣುಮಗಳು ಉಳಿದ ಪ್ರಾಕೃತ ಹೆಣ್ಣುಮಕ್ಕಳಂತೆ ಕೇವಲ ಹೆಣ್ಣುಮಗಳಾಗಿರದೆ ಲಿಂಗಧಾರಿಯಾದ ಹೆಣ್ಣು ಮಗಳಾಗಿರುತ್ತಾಳೆ. ಆದ್ದರಿಂದ ಅಗ್ನಿಯ ಸಂಪರ್ಕದಿಂದ ಕಬ್ಬಿಣವು ಅಗ್ನಿರೂಪವನ್ನು ತಾಳಿ ವಸ್ತುಗಳನ್ನು ಸುಡುವ ಸಾಮರ್ಥ್ಯವನ್ನು ಹೊಂದಿದಂತೆ ಇಷ್ಟಲಿಂಗ ಸಂಬಂಧ

ಹೊಂದಿದ ಸ್ತ್ರೀಯೂ ಲಿಂಗರೂಪಳೇ ಆಗಿರುವುದರಿಂದ ಇವಳಿಗೆ ಅದಾವ ಸೂತಕಗಳ ಸ್ಪರ್ಶವಾಗದೆ ಸದಾ ಪವಿತ್ರಳಾಗಿರುತ್ತಾಳೆ. ಆದ್ದರಿಂದ ಇಷ್ಟಲಿಂಗ ಪೂಜಕರಿಗೆ, ಪ್ರತಿದಿವಸ ಅಗ್ನಿಹೋತ್ರಕರ್ಮ ಮಾಡುವವರಿಗೆ, ವಾನಪ್ರಸ್ಥ ಇಲ್ಲವೆ ಸನ್ಯಾಸಾಶ್ರಮ ಸ್ವೀಕರಿಸಿದವರಿಗೆ ಅದಾವ ಸೂತಕಗಳೂ ಅಂಟಿಕೊಳ್ಳುವುದಿಲ್ಲ ವೆಂಬುದಾಗಿ ಪರಾಶರಸ್ಮೃತಿಯಲ್ಲಿ ಪ್ರತಿಪಾದಿಸಿದ್ದನ್ನು ಶ್ರೀ ನಂದಿಕೇಶ್ವರ ಶಿವಾಚಾರ್ಯರು ಲಿಂಗಧಾರಣಚಂದ್ರಿಕೆಯಲ್ಲಿ ಸಮರ್ಥಿಸಿದ್ದಾರೆ. ಆದ್ದರಿಂದ ಇಷ್ಟಲಿಂಗಧಾರಿಗಳಾದ ವೀರಶೈವ ಸ್ತ್ರೀಯರಿಗೆ ರಜಸ್ಸೂತಕ ಮತ್ತು ಪ್ರಸೂತಿಕಾ ಸೂತಕಗಳು ಲಿಂಗಪೂಜಾದಿ ಕರ್ಮಗಳಲ್ಲಿ ಪ್ರತಿಬಂಧಕಗಳಾಗುವುದಿಲ್ಲವೆಂದು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು.

ಇದೇ ಪ್ರಕಾರವಾಗಿ ವೀರಶೈವರಿಗೆ ಮರಣಸೂತಕವೂ ಸಹ ಇರುವುದಿಲ್ಲ. ಅಂದರೆ ಮನೆಯಲ್ಲಿ ಯಾರಾದರೂ ಲಿಂಗೈಕ್ಯರಾದರೆ ಆ ಲಿಂಗೈಕ್ಯನಾದ ವ್ಯಕ್ತಿಯ ಪಾರ್ಥಿವ ಶರೀರಕ್ಕೆ ಸ್ನಾನಾದಿಗಳನ್ನು ಮಾಡಿಸಿ ಅದಕ್ಕೆ ಭಸ್ಮರುದ್ರಾಕ್ಷಿಗಳಿಂದ ಅಲಂಕರಿಸಿ ಆ ದೇಹದ ಮೇಲಿರುವ ಇಷ್ಟಲಿಂಗವನ್ನು ಆ ದೇಹದ ಎಡ ಅಂಗೈಯಲ್ಲಿಟ್ಟು ಪೂಜಿಸಿ ಅಲ್ಲಿಯೇ ಅದನ್ನು ಅರಿವೆಯಿಂದ ಕಟ್ಟಿ ಆ ದೇಹದ ಅಂತ್ಯಕ್ರಿಯೆಯನ್ನು ಮಾಡುತ್ತಾರೆ. ಇದೂ ಅಲ್ಲದೆ ರುದ್ರಭೂಮಿಯಿಂದ ಮನೆಗೆ ಮರಳಿದ ನಂತರ ಮನೆಯನ್ನೆಲ್ಲ ತೊಳೆದು ಶುಚಿಗೊಳಿಸಿ ಮನೆಯ ಗುರುಗಳನ್ನು ಬರಮಾಡಿಕೊಂಡು ಅವರ ಲಿಂಗಪೂಜಾ ಸಮಾರಂಭವನ್ನು ಏರ್ಪಡಿಸಿ ಗುರುಪಾದ ಪೂಜೆಯನ್ನು ಮಾಡಿಕೊಳ್ಳುತ್ತಾರೆ. ಈ ಪೂಜೆಯಲ್ಲಿ ಮನೆಯವರೆಲ್ಲಾ ಪಾಲುಗೊಂಡು ಗುರುಗಳ ಪಾದೋದಕ ಪ್ರಸಾದಾದಿಗಳನ್ನು ಸೇವಿಸಿ ಪುನೀತರಾಗುತ್ತಾರೆ. ಈ ಪದ್ಧತಿಯು ಅನಾದಿಕಾಲದಿಂದಲೂ ನಡೆದುಬಂದುದಾಗಿದೆ. ಆದ್ದರಿಂದ ಹಿಂದೂಧರ್ಮದಲ್ಲಿ ಉಳಿದವರು ಪರಿಪಾಲಿಸುತ್ತಿರುವ ಹನ್ನೆರಡುದಿನ ಪರ್ಯಂತವಾದ ಮರಣಸೂತಕವು ವೀರಶೈವರ ಇಷ್ಟಲಿಂಗಪೂಜೆಗೆ ಅನ್ವಯಿಸುವುದಿಲ್ಲ. ಅಂತೆಯೇ ವೀರಶೈವರಿಗೆ ಇಷ್ಟಲಿಂಗಪೂಜೆಯಲ್ಲಿ ಮರಣ ಸೂತಕವು ಇಲ್ಲವೆಂಬುದನ್ನು ಸರ್ವರೂ ತಿಳಿದುಕೊಳ್ಳಬೇಕು.

ಇದೇ ತೆರನಾಗಿ ವೀರಶೈವ ಸಿದ್ಧಾಂತದಲ್ಲಿ ಪಾದೋದಕ ಪ್ರಸಾದಗಳನ್ನು ಸೇವಿಸುವಾಗ ಉಚ್ಛಿಷ್ಟಸೂತಕವನ್ನೂ ಸಹ ನಿಷೇಧಿಸಲಾಗಿದೆ. ಒಂದು ಪಾತ್ರೆಯಲ್ಲಿ ಪೇಯ ಇಲ್ಲವೆ ಖಾದ್ಯಪದಾರ್ಥವನ್ನು ಯಾರೊಬ್ಬರು ತೆಗೆದುಕೊಂಡು ಸೇವಿಸಿದರೆ ಆ ಸೇವನೆಯ ನಂತರ ಉಳಿದಿರುವ ಆ ಪದಾರ್ಥಕ್ಕೆ ಉಚ್ಛಿಷ್ಟ ಪದಾರ್ಥವೆಂದು ಕರೆಯುವರು. ಸರ್ವೇ ಸಾಮಾನ್ಯವಾಗಿ ಒಬ್ಬರ ಭಕ್ಷ್ಯಾವಶೇಷವಾದ ಉಚ್ಛಿಷ್ಟವನ್ನು ಮತ್ತೊಬ್ಬರಾರೂ ಸೇವಿಸಬಾರದೆಂಬ ಸಾಮಾನ್ಯವಾದ ನಿಯಮವಿದೆ. ಆದರೆ

ವೀರಶೈವ ಪೂಜಾವಿಧಾನದಲ್ಲಿ ಗುರುವಿನ ಪಾದಪೂಜಾ ಸಮಾರಂಭದಲ್ಲಿ ಅನೇಕ ಜನರು ಸಹಭಾಗಿಗಳಾಗಿ ಗುರುಪಾದಪೂಜೆಯ ನಂತರ ಒಂದು ಪಾತ್ರೆಯಲ್ಲಿ ಸಂಗ್ರಹಿಸಲ್ಪಟ್ಟ ಪಾದೋದಕವನ್ನು ಮೊದಲು ಗುರುಗಳು ಸೇವಿಸುತ್ತಾರೆ. ನಂತರ ಪೂಜೆಯಲ್ಲಿ ಪಾಲುಗೊಂಡ ಪ್ರತಿಯೊಬ್ಬರೂ ಒಬ್ಬರ ನಂತರ ಒಬ್ಬರಂತೆ ಆ ಒಂದೇ ಪಾತ್ರೆಯಲ್ಲಿಯ ಪಾದೋದಕವನ್ನು ಸ್ವೀಕರಿಸುತ್ತಾರೆ. ಹೀಗೆ ಸ್ವೀಕರಿಸುವುದು ಉಚ್ಛಿಷ್ಟ ಸ್ವೀಕಾರವಲ್ಲವೇ? ಇದನ್ನು ಸ್ವೀಕರಿಸುವುದು ಯೋಗ್ಯವೇ? ಎಂಬ ಪ್ರಶ್ನೆಯು ಉಪಸ್ಥಿತವಾಗಲು ವೀರಶೈವ ಆಚಾರ್ಯರು ಪಾದೋದಕ–ಪ್ರಸಾದಗಳಿಗೆ ಉಚ್ಛಿಷ್ಟ (ಎಂಜಲು) ದೋಷವನ್ನು ಎಣಿಸಬಾರದೆಂಬುದಾಗಿ ಆದೇಶವಿತ್ತಿದ್ದಾರೆ. ಅದೂ ಒಂದು ಗುರು–ಶಿಷ್ಯರ ಸಾಮರಸ್ಯದ ಸಂಕೇತವಾಗಿದೆ. ಆದಕಾರಣ ಈ ಪಾದೋದಕ–ಪ್ರಸಾದ ಸೇವನೆಯಲ್ಲಿ ಉಚ್ಛಿಷ್ಟಸೂತಕವಿರುವುದಿಲ್ಲ.

ವೈದಿಕ ಸಂಪ್ರದಾಯದಲ್ಲಿಯೂ ಸಹ ಸೋಮಯಾಗವನ್ನು ಮಾಡಿ ಯಜ್ಞದ ಕೊನೆಗೆ ಒಂದು ಪಾತ್ರೆಯಲ್ಲಿ ಅವಶಿಷ್ಟವಾಗಿರುವ ಸೋಮರಸವನ್ನು ಯಜ್ಞದಲ್ಲಿ ಸಹಭಾಗಿಗಳಾಗಿರುವ ಋತ್ವಿಜರೆಲ್ಲರೂ ಒಬ್ಬೊಬ್ಬರಾಗಿ ಸ್ವೀಕರಿಸಿದರೂ ಅಲ್ಲಿ ಉಚ್ಚಿಷ್ಟದೋಷವನ್ನು ಎಣಿಸುವುದಿಲ್ಲ. ಇದೇ ತೆರನಾಗಿ ವೀರಶೈವಸಿದ್ಧಾಂತದಲ್ಲಿ ಪಾದೋದಕ – ಪ್ರಸಾದ ಸೇವನೆಯ ವಿಷಯದಲ್ಲಿ ಉಚ್ಛಿಷ್ಟಸೂತಕವನ್ನು ಎಣಿಸಲಾಗುವುದಿಲ್ಲ. ಅಂತೆಯೇ ಸರ್ವಜ್ಞ ಕವಿಯು –

> **ಗುರುವ ನರನೆಂದವಗೆ ಹರನ ಶಿಲೆಯೆಂದವಗೆ**
> **ಕರುಣ ಪ್ರಸಾದವ ಎಂಜಲೆಂದವಗೆ ನರಕ ತಪ್ಪುವುದೇ ಸರ್ವಜ್ಞ**

ಈ ತನ್ನ ವಚನದಲ್ಲಿ ಗುರು–ಲಿಂಗಗಳ ಮಹಿಮೆಯನ್ನು ಹೇಳುವುದರ ಜೊತೆಗೆ ಕರುಣಪ್ರಸಾದಕ್ಕೆ ಅರ್ಥಾತ್ ಪಾದೋದಕ–ಪ್ರಸಾದಗಳಿಗೆ ಉಚ್ಛಿಷ್ಟ ಅಂದರೆ ಎಂಜಲು ದೋಷವು ಇಲ್ಲವೆಂಬುವುದನ್ನು ಸ್ಪಷ್ಟಪಡಿಸಿದ್ದಾನೆ. ಆದುದರಿಂದ ವೀರಶೈವಸಿದ್ಧಾಂತದಲ್ಲಿ ಈ ಪೂರ್ವದಲ್ಲಿ ವಿವರಿಸುತ್ತ ಬಂದಿರುವ ಜನನ, ಮರಣ, ಜಾತಿ, ರಜ ಮತ್ತು ಉಚ್ಛಿಷ್ಟಗಳೆಂಬ ಪಂಚಸೂತಕಗಳು ಶಾಸ್ತ್ರಗಳ ಆಧಾರದ ಮೇಲಿಂದ ಆಯಾ ಪ್ರಸಂಗಗಳಲ್ಲಿ ಇಲ್ಲವೆಂಬುದನ್ನು ಸಿದ್ಧಪಡಿಸಿದ ವೀರಶೈವ ಆಚಾರ್ಯರ ವಿಚಾರಗಳು ಸಶಾಸ್ತ್ರೀಯವಾಗಿವೆ. ಆದಕಾರಣ ಈ ಸೂತಕ ನಿಷೇಧದ ಪ್ರಕರಣವನ್ನು ಸರಿಯಾಗಿ ಅರ್ಥಮಾಡಿಕೊಂಡು ತಮ್ಮ ನಿತ್ಯ ಜೀವನದಲ್ಲಿ ಪ್ರಸಂಗಾನುಸಾರವಾಗಿ ಅವುಗಳನ್ನು ಆಚರಿಸಿ ಈ ಧರ್ಮಪರಂಪರೆಯನ್ನು ಉಳಿಸಿಬೆಳೆಸಿಕೊಂಡು ಹೋಗಬೇಕು.

ಹೀಗೆ ಸನಾತನವಾದ ಈ ವೀರಶೈವ ಧರ್ಮದಲ್ಲಿ ಆಗಮಕಾಲದಿಂದಲೂ ಸ್ತ್ರೀಯರಿಗೆ ಧರ್ಮಾಚರಣೆಯಲ್ಲಿ ಸಮಾನಾಧಿಕಾರವನ್ನು ಕೊಟ್ಟಿರುವುದು

ಕಂಡುಬರುತ್ತಿರುವಾಗ ಇತ್ತೀಚಿನ ದಿನಮಾನಗಳಲ್ಲಿಯ ಕೆಲಜನರು ಸಂಸ್ಕೃತದಲ್ಲಿರುವ ಈ ಪ್ರಾಚೀನ ವಾಙ್ಮಯವನ್ನು ಅಭ್ಯಾಸಮಾಡದೆ ಸ್ತ್ರೀ-ಶೂದ್ರಾದಿಗಳಿಗೆ ಧರ್ಮಾಚರಣೆಯ ಸ್ವಾತಂತ್ರ್ಯವು ಹನ್ನೆರಡನೆಯ ಶತಮಾನದಲ್ಲಿ ಬಂದಿತೆಂದು ಹೇಳುವುದು ಅವರ ಅಪೂರ್ಣ ಅಭ್ಯಾಸದ ಪ್ರತೀಕವಾಗಿದೆ. ಆದಕಾರಣ ಹನ್ನೆರಡನೇ ಶತಮಾನದ ಶರಣರ ವಿಚಾರಧಾರೆಗಳಿಗೆಲ್ಲ ಶಿವಾಗಮಗಳು ಹಾಗೂ ಶ್ರೀ ಸಿದ್ಧಾಂತ ಶಿಖಾಮಣಿಯೇ ಮೂಲವೆಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು.

ಪ್ರಾಣಲಿಂಗ :

ಪ್ರಾಣ ಹಾಗೂ ಅಪಾನವಾಯುಗಳ ಸಂಘಟ್ಟನವಾಗಲು ಮೂಲಾಧಾರ ಕೇಂದ್ರದಿಂದ ಒಂದು ಜ್ಯೋತಿಯು ಉತ್ಪನ್ನವಾಗುವುದು. ಅದು ಸುಷುಮ್ನಾ ನಾಡಿಯ ಮುಖಾಂತರವಾಗಿ ಊರ್ಧ್ವಮುಖವಾಗಿ ಅನಾಹತಚಕ್ರದಲ್ಲಿ ಅರ್ಥಾತ್ ಹನ್ನೆರಡು ದಳಗಳುಳ್ಳ ಹೃದಯ ಕಮಲಕರ್ಣಿಕೆಯಲ್ಲಿ ಹವಳದ ವರ್ಣದ ಸ್ವರೂಪತಾಳಿ ಸ್ಫುರಿಸತೊಡಗುವುದು. ಹೃದಯಕಮಲದಲ್ಲಿ ಸ್ಫುರಿಸುವ ಈ ಜ್ಯೋತಿಗೆ ವೀರಶೈವ ಆಚಾರ್ಯರು ಪ್ರಾಣಲಿಂಗವೆಂದು ಕರೆದಿದ್ದಾರೆ. ಸೂರ್ಯೋದಯವಾಗಲು ಮಂಜಿನ ಕಣಗಳು ಆ ಸೂರ್ಯಪ್ರಕಾಶದಲ್ಲಿ ಲಯವಾಗುವಂತೆ ಈ ಜ್ಯೋತಿರೂಪವಾದ ಪ್ರಾಣಲಿಂಗಾನುಸಂಧಾನವನ್ನೂ ಸಹ ಮಾಡಬೇಕು. ಅಂದಾಗಲೇನೇ ಅವನ ಆಧ್ಯಾತ್ಮಿಕ ಪ್ರಗತಿಯು ಸಾಧ್ಯವಾಗುವುದು.

ಭಾವಲಿಂಗ :

ಸಾಧಕನ ಭುವನೆಗಳು ಎಲ್ಲಿ ವಿಲಯುಗೊಳ್ಳುವುವೋ ಅದಕ್ಕೆ ಭಾವಲಿಂಗವೆಂದು ಕರೆಯುತ್ತಾರೆ. ಇದು ಮಸ್ತಕದ ಸಹಸ್ರದಳ ಕಮಲದಲ್ಲಿ ವಿರಾಜಿಸು ವಂಥಾದ್ದಾಗಿರುತ್ತದೆ. 'ಶಿವೋಽಹಂ' ಎಂಬ ಭಾವನಾರೂಪವಾದುದೇ ಭಾವಲಿಂಗವು. ಭಾವನಾಮಯ ಪದಾರ್ಥಗಳಿಂದಲೇ ಇದರ ಪೂಜೆಯಾಗುವುದರಿಂದ ಇದಕ್ಕೆ 'ಭಾವಲಿಂಗ'ವೆಂದು ಕರೆದಿದ್ದಾರೆ. ಬಾಹ್ಯದಲ್ಲಿರುವ ಮೃತ್-ಶಿಲೆಗಳಿಂದ ನಿರ್ಮಿಸಿದ ಲಿಂಗಕ್ಕಿಂತಲು ಇದು ಶ್ರೇಷ್ಠವಾದುದು (ಸಿ.ಶಿ., ೧೫. ೩೭-೪೦). ವೀರಶೈವ ಸಾಧಕನು ಈ ಪೂರ್ವದಲ್ಲಿ ಹೇಳಿದ ಇಷ್ಟಲಿಂಗ ಹಾಗೂ ಪ್ರಾಣಲಿಂಗಗಳ ಅರ್ಚನೆಯ ಜೊತೆಗೆ ಈ ಭಾವಲಿಂಗಾನುಸಂಧಾನವನ್ನೂ ಸಹ ಪ್ರತಿನಿತ್ಯ ಅವಶ್ಯವಾಗಿ ಮಾಡಲೇಬೇಕು. ಅಂದಾಗಲೇ ಲಿಂಗಾಂಗಸಾಮರಸ್ಯ ರೂಪವಾದ ಕೈವಲ್ಯವು ಅವನಿಗೆ ಪ್ರಾಪ್ತವಾಗುವುದು. ಇಲ್ಲಿ ತಿಳಿಸಲ್ಪಟ್ಟ ವಿವಿಧ ಲಿಂಗಗಳಲ್ಲಿ ಇಷ್ಟಲಿಂಗವು ಸ್ಥೂಲಶರೀರಕ್ಕೆ, ಪ್ರಾಣಲಿಂಗವು ಸೂಕ್ಷ್ಮಶರೀರಕ್ಕೆ ಮತ್ತು ಭಾವಲಿಂಗವು ಕಾರಣ ಶರೀರಕ್ಕೆ ಸಂಬಂಧಪಟ್ಟವುಗಳೆಂಬುದಾಗಿ ತಿಳಿದುಕೊಳ್ಳಬೇಕು.

ಈ ಪೂರ್ವದಲ್ಲಿ ಆವರಣವೆಂದರೆ ರಕ್ಷಾಕವಚವೆಂದು ಅರ್ಥ ಮಾಡಲಾಗಿದೆ. ಇಲ್ಲಿ ಇಷ್ಟಲಿಂಗೋಪಾಸನೆಯು ನೇತ್ರಗಳ ಪರಿಶುದ್ಧಿಗೆ, ಪ್ರಾಣಲಿಂಗೋಪಾಸನೆಯು ಮನಸ್ಸಿನ ಪರಿಶುದ್ಧಿಗೆ ಮತ್ತು ಭಾವಲಿಂಗೋಪಾಸನೆಯು ಬುದ್ಧಿಯ ಪರಿಶುದ್ಧಿಗೆ ಕಾರಣವಾಗಿರುತ್ತವೆ. ಹೀಗೆ ತ್ರಿವಿಧ ಲಿಂಗಗಳ ಉಪಾಸನೆಯಿಂದ ಸಾಧಕನ ತ್ರಿಕರಣಗಳು ಪರಿಶುದ್ಧವಾಗಿರುತ್ತವೆ. ಈ ರೀತಿಯಾಗಿ ಪರಿಶುದ್ಧವಾದ ಕರಣಗಳು ನಿಷಿದ್ಧ ವಿಷಯಗಳತ್ತ ಹೋಗದಿರುವುದರಿಂದ ಸಾಧಕನು ರಕ್ಷಿಸಲ್ಪಡುತ್ತಾನೆ. ಅಂತೆಯೇ ಇವುಗಳಿಗೆ ಆವರಣವೆಂದು ಕರೆದಿದ್ದಾರೆ. ಇಲ್ಲಿ ಇಷ್ಟಲಿಂಗದಿಂದ ಸ್ಥೂಲಶರೀರದ ರಕ್ಷಣೆ, ಪ್ರಾಣಲಿಂಗದಿಂದ ಸೂಕ್ಷ್ಮಶರೀರದ ರಕ್ಷಣೆ ಮತ್ತು ಭಾವಲಿಂಗದಿಂದ ಕಾರಣಶರೀರದ ರಕ್ಷಣೆಯಾಗುವುದೆಂಬುದಾಗಿ ತಿಳಿದುಕೊಳ್ಳಬೇಕು.

೩) ಜಂಗಮ :

ವಿಶ್ವ ಪ್ರಕಾಶಕನಾದ ಶಿವನನ್ನು ತನ್ನ ಆತ್ಮಸ್ವರೂಪವನ್ನಾಗಿ ತಿಳಿದಿರುವ ಶಿವಯೋಗಿಗೆ ಜಂಗಮನೆಂಬುದಾಗಿ ಕರೆದಿದ್ದಾರೆ. (ಸಿ. ಶಿ., ೧೧. ೩೬–೩೭). ಈ ಜಂಗಮ ಶಬ್ದದಲ್ಲಿ ಬರುವ ಒಂದೊಂದು ಅಕ್ಷರಕ್ಕೂ ಸಹ ವಿಶಿಷ್ಟವಾದ ಅರ್ಥಗಳಿವೆ. 'ಜ' ಅಂದರೆ ಜನರಹಿತ, 'ಗ' ಅಂದರೆ ಗತಿರಹಿತ ಮತ್ತು 'ಮ' ಎಂದರೆ ಮರಣ ರಹಿತ ಎಂಬುದಾಗಿ ಶಾಸ್ತ್ರಕಾರರು ಅರ್ಥಮಾಡಿದ್ದಾರೆ. ಅಂದರೆ ಪುನರ್ಜನ್ಮರಹಿತನೂ, ಗಮನಾಗಮನವಿಲ್ಲದವನೂ ಮತ್ತು ಮರಣರಹಿತನೂ ಆದ ಮಹಾಶಿವಯೋಗಿಯೇ ಜಂಗಮನೆಂಬುದಾಗಿ ಭಾವಿಸಬೇಕು. (ವೀರಶೈವ ಸದಾಚಾರಸಂಗ್ರಹ., ೧೫. ೬–೮)

ಇಲ್ಲಿ ಇವನು ಜರಾಮರಣರಹಿತನೆಂಬುದಾಗಿ ಹೇಳುವುದರ ಮುಖಾಂತರ ಈತನ ಜೀವನ್ಮುಕ್ತ ಸ್ವರೂಪವು ನಿರೂಪಿಸಲ್ಪಟ್ಟಿದೆ. ಜೀವನ್ಮುಕ್ತನಾದ ಈ ಶಿವಯೋಗಿಯು ಸ್ವಯ, ಚರ ಮತ್ತು ಪರವೆಂಬ ಮೂರು ವಿಲಕ್ಷಣಗಳಾದ ಜೀವನ್ಮುಕ್ತಿಯ ಅವಸ್ಥೆಗಳನ್ನು ಪಡೆದುಕೊಳ್ಳುತ್ತಾನೆ.

ಸ್ವಯಜಂಗಮ :

ಸ್ವಸ್ವರೂಪಾನುಸಂಧಾನವನ್ನು ಮಾಡುತ್ತ ತನ್ನಲ್ಲಿಯೇ ತಾನು ಆನಂದವನ್ನು ಪಡೆಯುತ್ತಿರುವ ಜೀವನ್ಮುಕ್ತನಾದ ಶಿವಯೋಗಿಗೆ ಸ್ವಯಜಂಗಮನೆಂಬುದಾಗಿ ಕರೆಯಲಾಗಿದೆ. ಈತನು ಶಿವಧ್ಯಾನ, ಶಿವಜ್ಞಾನ, ಏಕಾಂತನಿವಾಸ ಮತ್ತು ಭಿಕ್ಷಾನ್ನ ಸೇವನೆ ಈ ನಾಲ್ಕು ಕ್ರಿಯೆಗಳ ಹೊರತು ಬೇರಾವ ಕ್ರಿಯೆಯನ್ನೂ ಮಾಡುವುದಿಲ್ಲ, ಸ್ವಸ್ವರೂಪ ಸಂಪನ್ನನಾದ ಇವನು ಯಾರನ್ನೂ ದ್ವೇಷಿಸುವುದಿಲ್ಲ ಮತ್ತು ಯಾರ ಬಗ್ಗೆಯೂ ಜಿಗುಪ್ಸೆಯನ್ನು ತಾಳುವುದಿಲ್ಲ. (ಸಿ.ಶಿ., ೧೫. ೫೧–೫೬)

ಚರಜಂಗಮ :

ಸ್ವಸ್ವರೂಪಜ್ಞಾನ ಸಂಪನ್ನನಾದ ಅಹಂಕಾರ–ಮಮಕಾರ ಶೂನ್ಯವಾದ ಆ ಸ್ವಯಜಂಗಮನೇ ಯಾವಾಗ ಲೋಕಕಲ್ಯಾಣಕ್ಕಾಗಿ ಸದಾ ಸಂಚರಿಸತೊಡಗುವನೋ ಆಗ ಅವನಿಗೆ ಚರಜಂಗಮನೆಂದು ಕರೆಯುವರು. ಈತನು ತನ್ನ ಲೋಕ ಸಂಚಾರದ ಸಮಯದಲ್ಲಿ ಕೆಲವರನ್ನು ನೋಡಿ, ಇನ್ನು ಕೆಲವರನ್ನು ಮುಟ್ಟಿ ಮತ್ತೆ ಕೆಲವರನ್ನು ಉಪದೇಶದ ಮೂಲಕ ಉದ್ಧರಿಸುತ್ತಿರುತ್ತಾನೆ. ಹೀಗೆ ಲೋಕೋದ್ಧಾರಕನಾದ ಈ ಜಂಗಮನಿಗೆ ಚರಜಂಗಮನೆಂದು ಕರೆದಿದ್ದಾರೆ. ಈವನಿಗೇನೇ ಈ ಸಂಪ್ರದಾಯದಲ್ಲಿ ಚರಪಟ್ಟಾಧಿಕಾರಿಯೆಂತಲೂ ಕರೆಯುವುದುಂಟು (ಸಿ.ಶಿ., ೧೫. ೫೭–೬೩) ವೀರಶೈವ ಸದಾಚಾರಸಂಗ್ರಹ., ಪುಟ. ೧೩೧)

ಪರಜಂಗಮ :

'ಪರ' ಎಂದರೆ ಶ್ರೇಷ್ಠವೆಂದರ್ಥ, 'ಜಂಗಮ'ವೆಂದರೆ ಶಿವಯೋಗಿ ಎಂದರ್ಥ ಅಂದರೆ ಸರ್ವಶ್ರೇಷ್ಠನಾದ ಶಿವಯೋಗಿಯೇ ಪರಜಂಗಮನೆಂದು ಕರೆಯಲ್ಪಡುತ್ತಾನೆ. 'ಪರ' ಎಂದರೆ ವಿಶ್ವೋತ್ತೀರ್ಣನಾದ ಶಿವನೆಂತಲೂ ಅರ್ಥವಾಗುವುದು. ಆ ಶಿವನನ್ನು ಸ್ವ ಸ್ವರೂಪವಾಗಿ ಅನುಸಂಧಾನಿಸುತ್ತಿರುವ ಈ ಶಿವಯೋಗಿಗೆ ಸರ್ವತ್ರ ತನ್ನ ಆತ್ಮವೇ ಗೋಚರವಾಗುವುದೇ ವಿನಃ ಬೇರುವುದರ ಪ್ರತೀತಿಯಾಗುವುದಿಲ್ಲ. ಹೀಗೆ ಅನ್ಯದರ ಪ್ರತೀತಿಯಿಲ್ಲದಿರುವ ಈ ಜಂಗಮನಿಗೆ ಪರಜಂಗಮನೆಂದು ಕರೆಯಲಾಗಿದೆ (ಸಿ.ಶಿ., ೧೫. ೬೪–೭೦) ಇಲ್ಲಿ ನಿರೂಪಿಸಲ್ಪಟ್ಟ ಸ್ವಯ, ಚರ ಮತ್ತು ಪರವೆಂಬ ಅವಸ್ಥಾಸಂಪನ್ನನಾದ ಜಂಗಮನು ತನ್ನ ದರ್ಶನ, ಸ್ಪರ್ಶನ ಮತ್ತು ಉಪದೇಶಗಳ ಮೂಲಕ ಸಾಧಕರನ್ನು ಸನ್ಮಾರ್ಗಪ್ರವೃತ್ತರನ್ನಾಗಿ ಮಾಡುವುದರ ಮೂಲಕ ರಕ್ಷಿಸುತ್ತಾನೆ. ಅಂತೆಯೇ ಜಂಗಮನೂ ಸಹ ಆವರಣವೆಂದು ಕರೆಯಲ್ಪಟ್ಟಿದ್ದಾನೆ.

೪) ಪಾದೋದಕ :

ಪಾದ ಮತ್ತು ಉದಕ ಎಂಬ ಎರಡು ಶಬ್ದಗಳ ಜೋಡಣೆಯಿಂದ ಈ ಶಬ್ದವು ಉತ್ಪನ್ನವಾಗಿದೆ. ಇಲ್ಲಿ ಪಾದವೆಂದರೆ ಗುರುವೆಂತಲೂ, ಉದಕವೆಂದರೆ ಶಿಷ್ಯನೆಂತಲೂ ಅರ್ಥಮಾಡುತ್ತಾರೆ. ಅಂದರೆ ಗುರು–ಶಿಷ್ಯರ ಸಾಮರಸ್ಯ ಸ್ಥಿತಿಯನ್ನು ನಿರೂಪಿಸುವುದೇ ಪಾದೋದಕವು. ಇನ್ನೊಂದು ಅರ್ಥದಲ್ಲಿ ಪರಮಾನಂದಕ್ಕೆ ಪಾದವೆಂಬುದಾಗಿ ಮತ್ತು ಅದರ ಜ್ಞಾನಕ್ಕೆ ಉದಕವೆಂಬುದಾಗಿ ಕರೆದಿದ್ದಾರೆ. ಅಂದರೆ ಪರಮಾನಂದ ಸ್ವರೂಪದ ಜ್ಞಾನವೇ ಇಲ್ಲಿ ಪಾದೋದಕವೆಂದು ತಿಳಿದುಕೊಳ್ಳಬೇಕು (ಸಿ.ಶಿ., ೧೯. ೭–೮)

ಇನ್ನು ವೀರಶೈವಸಿದ್ಧಾಂತದಲ್ಲಿ ಗುರು ಇಲ್ಲವೆ ಜಂಗಮನ ಪಾದಪೂಜೆಯನ್ನು ಮಾಡಿ ಆತನ ಪಾದ ಅಂಗುಷ್ಠದ ಮೇಲೆ ಜಲವನ್ನೆರೆದು ಕೆಳಗೆ ಒಂದು ಪಾತ್ರೆಯಲ್ಲಿ ವಿಧ್ಯುಕ್ತವಾಗಿ ಸಂಗ್ರಹಿಸಿದ ಜಲಕ್ಕೆ ಪಾದೋದಕವೆಂಬುದಾಗಿ ಕರೆಯಲಾಗಿದೆ. ಇದಕ್ಕೆ ಚರಣಾಮೃತವೆಂತಲೂ, ಪಾದತೀರ್ಥವೆಂತಲೂ ಸಹ ಕರೆಯುವುದುಂಟು (ಪಾರಮೇಶ್ವರಾಗಮ., ೭. ೪೭–೫೦) ಈ ಪಾದೋದಕವು ಗುರುಪಾದಪೂಜೆಯಿಂದ ದೊರೆತರೆ ಗುರುಪಾದೋದಕವೆಂತಲೂ, ಜಂಗಮ ಪಾದಪೂಜೆಯಿಂದ ದೊರೆತರೆ ಜಂಗಮಪಾದೋದಕವೆಂತಲೂ ಮತ್ತು ಇಷ್ಟಲಿಂಗಪೂಜೆಯಿಂದ ದೊರೆತರೆ ಲಿಂಗಪಾದೋದಕವೆಂತಲೂ ಕರೆಯುತ್ತಾರೆ. ವೀರಶೈವ ಸಾಧಕನು ದಿನಾಲು ಈ ತ್ರಿವಿಧ ಪಾದೋದಕವನ್ನು ಭಕ್ತಿಯಿಂದ ಸೇವಿಸಬೇಕು. (ಸಿ.ಶಿ., ೯. ૬೭–೭೧)

ಈ ಪಾದೋದಕ ಸೇವನೆಯಿಂದ ಸಾಧಕನ ಪಾಪ, ದೋಷ ಮತ್ತು ಕರ್ಮಗಳೆಲ್ಲ ದಹಿಸಿ ಅವನು ಪರಿಶುದ್ಧ ಚಿತ್ತನಾಗುವನು (ವೀರಶೈವಾನಂದ ಚಂದ್ರಿಕಾ, ಪು. ೧೧೫) ಈ ತ್ರಿವಿಧ ಪಾದೋದಕವನ್ನು ಸೇವಿಸುವುದರಿಂದ ಸಾಧಕನ ಸ್ಥೂಲ, ಸೂಕ್ಷ್ಮ ಮತ್ತು ಕಾರಣಶರೀರಗಳು ಪರಿಶುದ್ಧವಾಗುವುದಲ್ಲದೆ ಸಾಧಕನು ಅದೆಂದೂ ದುರ್ಮಾರ್ಗದಲ್ಲಿ ಪ್ರವೃತ್ತನಾಗಲಾರನು ಹೀಗೆ ಸಾಧಕನ ತನು–ಕರಣಗಳಲ್ಲಿ ನಿರ್ಮಲತೆಯನ್ನು ನಿರ್ಮಿಸಿ ಅವನನ್ನು ರಕ್ಷಿಸುವ ಕಾರಣದಿಂದಾಗಿ ಪಾದೋದಕವೂ ಸಹ ಒಂದು ರಕ್ಷಾಕವಚವಾಗಿರುತ್ತದೆ.

೫) ಪ್ರಸಾದ :

ಅಷ್ಟಾವರಣಗಳಲ್ಲಿ ಐದನೆಯದಾದ ಆವರಣವೇ ಪ್ರಸಾದವು. ಮನಸ್ಸಿನ ಪ್ರಸನ್ನತೆಗೇನೇ ಇಲ್ಲಿ ಪ್ರಸಾದವೆಂದು ಕರೆದಿದ್ದಾರೆ. "ಅನ್ನಮಯಂ ಹಿ ಸೋಮ್ಯ ಮನಃ" (ಛಾಂದೋಗ್ಯೋಪನಿಷತ್., ૬–೫–೪) ಎಂಬ ಉಪನಿಷತ್ತಿನ ವಚನದಂತೆ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸು ಆತನು ಸೇವಿಸಿದ ಅನ್ನದ ಅಣುಪರಿಣಾಮವೇ ಆಗಿರುತ್ತದೆ. ಹೀಗೆ ಮನಸ್ಸಿನ ಉತ್ಪತ್ತಿಗೆ ಮೂಲವಾದ ಅನ್ನವು ಪರಿಶುದ್ಧವಾಗಿದ್ದರೆ ಮನಸ್ಸೂ ಸಹ ಪರಿಶುದ್ಧವಾಗುವುದು. ಅಂತೆಯೇ ಮನೋನೈರ್ಮಲ್ಯಕ್ಕೆ ಕಾರಣವಾಗಿರುವ ಶಿವಾರ್ಪಿತಗಳಾದ ಪದಾರ್ಥಗಳಿಗೆ ಶಿವನಿರ್ಮಾಲ್ಯಗಳೆಂದು ಕರೆಯಲಾಗಿದೆ. (ಸಿ.ಶಿ., ೧೧. ૬–೮) ಈ ಶಿವನಿರ್ಮಾಲ್ಯವನ್ನು ಸೇವಿಸಿದರೆ ಮನಸ್ಸು ಸದಾ ನಿರ್ಮಲವಾಗಿರುವುದು. ಹೀಗೆ ಮನೋನೈರ್ಮಲ್ಯಕ್ಕೆ ಮತ್ತು ಮನಸ್ಸಿನ ಪ್ರಸನ್ನತೆಗೆ ಕಾರಣವಾದ ಶಿವಾರ್ಪಿತ ಪದಾರ್ಥಗಳಿಗೆ ಪ್ರಸಾದವೆಂಬುದಾಗಿ ಕರೆಯಲಾಗಿದೆ. ವೀರಶೈವ ಸಾಧಕನು ತಾನು ಉಪಭೋಗಿಸುವ ಪ್ರತಿಯೊಂದು

ಪದಾರ್ಥವನ್ನು ಗುರು-ಲಿಂಗ ಮತ್ತು ಜಂಗಮರಿಗೆ ಸಮರ್ಪಿಸಬೇಕಾಗುತ್ತದೆ. ಈ ಸಮರ್ಪಣೆಯಿಂದ ಬಂದುದೇ ಪ್ರಸಾದವು. ಇಲ್ಲಿ ಗುರುವರ್ತಿತವಾಗಿ ಬಂದದ್ದು ಶುದ್ಧ ಪ್ರಸಾದವು, ಲಿಂಗಾರ್ಪಿತವಾಗಿ ಬಂದದ್ದು ಸಿದ್ಧಪ್ರಸಾದವು ಮತ್ತು ಜಂಗಮಾರ್ಪಿತ ವಾಗಿ ಬಂದದ್ದು ಪ್ರಸಿದ್ಧ ಪ್ರಸಾದವು ಎಂಬುದಾಗಿ ಕರೆಯಲ್ಪಡುತ್ತದೆ (ವೀರಶೈವಾನಂದ ಚಂದ್ರಿಕಾ., ಪುಟ. ೧೩೨)

ಇಲ್ಲಿ ವಿವರಿಸಲ್ಪಟ್ಟ ಈ ತ್ರಿವಿಧ ಪ್ರಸಾದದ ಸೇವನೆಯಿಂದ ಸಾಧಕನ ಮನಸ್ಸು ಸದಾ ಶುದ್ಧವೂ, ಸಾತ್ವಿಕವೂ ಆಗಿರುತ್ತದೆ. ಅಂತೆಯೇ ಆತನ ಮನಸ್ಸು ಸಂಸಾರದ ನಿಷಿದ್ಧಭೋಗಗಳತ್ತ ಹರಿಯಲಾರದು. ಹೀಗೆ ಮನಸ್ಸನ್ನೂ ಪರಿಶುದ್ಧವಾಗಿಸುವುದರ ಮೂಲಕ ಪ್ರಸಾದವು ಸಾಧಕನನ್ನು ರಕ್ಷಿಸುತ್ತದೆಯಾದ್ದರಿಂದ ಇದಕ್ಕೆ ಆವರಣವೆಂದು ಕರೆದಿದ್ದಾರೆ.

೬) ವಿಭೂತಿ :

ಅಷ್ಟಾವರಣಗಳಲ್ಲಿ ಆರನೆಯದಾದ ಆವರಣವೇ ವಿಭೂತಿಯು. ಇದಕ್ಕೆ ವಿಭೂತಿ, ಭಸಿತ, ಭಸ್ಮ ಕ್ಷಾರ, ರಕ್ಷಾ ಎಂಬುದಾಗಿ ಐದು ಹೆಸರುಗಳಿರುತ್ತವೆ. ವೀರಶೈವ ಆಚಾರ ಪರಂಪರೆಯಲ್ಲಿ ಆಕಳಿನ ಸಗಣಿಯಿಂದ ಇದನ್ನು ಶಾಸ್ತ್ರೋಕ್ತ ಪದ್ಧತಿಯಿಂದ ನಿರ್ಮಿಸುತ್ತಾರೆ. ಇದರ ಸಂಪೂರ್ಣವಾದ ವಿಧಿ-ವಿಧಾನಗಳು ಶ್ರೀ ಸಿದ್ಧಾಂತಶಿಖಾಮಣಿಯ ಭಸ್ಮಧಾರಣಸ್ಥಲದಲ್ಲಿ (ಸಿ.ಶಿ., ೭. ೧-೪೪). ಪ್ರತಿಪಾದಿಸಲ್ಪಟ್ಟಿವೆ. ಅಲ್ಲಿ ಹೇಳಿದ ವಿಧಿಯಲ್ಲಿ ಯಾವುದಾದರೊಂದು ವಿಧಿಯಿಂದ ಭಸ್ಮವನ್ನು ನಿರ್ಮಿಸಿಗೊಂಡು ಆ ಭಸ್ಮದಿಂದ ಭಸ್ಮೋದ್ಧೂಲನ, ಭಸ್ಮಸ್ನಾನ ಮತ್ತು ತ್ರಿಪುಂಡ್ರಧಾರಣೆಯನ್ನು ಪ್ರತಿಯೊಬ್ಬ ಸಾಧಕನು ಮಾಡಿಕೊಳ್ಳಬೇಕು. ಹೀಗೆ ವಿಧಿಗನುಸಾರವಾಗಿ ಭಸ್ಮವನ್ನು ಧರಿಸಿಕೊಳ್ಳುವುದರಿಂದ ಸ್ಥೂಲಶರೀರವು ರೋಗಾಣುಗಳ ಆಕ್ರಮಣದಿಂದ ರಕ್ಷಿಸಲ್ಪಡುವುದಲ್ಲದೆ ಮನೋಬುದ್ಧಿಗಳು ನಿರ್ಮಲ ಗೊಳ್ಳುವವು. ಹೀಗೆ ಸಾಧಕನ ಅಂತರಂಗ ಮತ್ತು ಬಹಿರಂಗಗಳ ಶುದ್ಧಿ ಹಾಗೂ ರಕ್ಷಣೆಗೆ ಕಾರಣವಾದ್ದರಿಂದ ವಿಭೂತಿಯೂ ಸಹ ಒಂದು ಆವರಣವೆಂಬುದಾಗಿ ಪರಿಗಣಿಸಲ್ಪಟ್ಟಿದೆ.

೭) ರುದ್ರಾಕ್ಷ :

ರುದ್ರನ ಅಂದರೆ ಶಿವನ ಅಕ್ಷದಿಂದ ಅರ್ಥಾತ್ ತ್ರಿವಿಧನೇತ್ರಗಳಿಂದ ಉತ್ಪನ್ನವಾದ ಒಂದು ವೃಕ್ಷದ ಬೀಜವೇ ರುದ್ರಾಕ್ಷವು. ಇದು ಕಪಿಲ, ಶ್ವೇತ ಮತ್ತು ಕೃಷ್ಣವೆಂಬ ಮೂರು ವರ್ಣದ್ದಾಗಿರುತ್ತದೆ. ಈ ರುದ್ರಾಕ್ಷಗಳಿಗೆ ಒಂದರಿಂದ ಹದಿನಾಲ್ಕರ ವರೆಗೆ ಮುಖಗಳಿರುವುದುಂಟು. ವೀರಶೈವ ಸಾಧಕನು ತನ್ನ ಇಷ್ಟಲಿಂಗ ಪೂಜೆಯನ್ನು

ಮಾಡುವಾಗ ಶ್ರೀ ಸಿದ್ಧಾಂತಶಿಖಾಮಣಿಯ ರುದ್ರಾಕ್ಷಧಾರಣಸ್ಥಲದಲ್ಲಿ (ಸಿ.ಶಿ., ೭. ೫೩ ರಿಂದ ೫೮) ಪೂಜ್ಯಪಾದರು ಉಪದೇಶಿಸಿದಂತೆ ರುದ್ರಾಕ್ಷಗಳನ್ನು ಧರಿಸಿಕೊಳ್ಳಬೇಕು. ಈ ರುದ್ರಾಕ್ಷಗಳ ದರ್ಶನ, ಸ್ಪರ್ಶನ ಮತ್ತು ಸ್ಮರಣೆ ಮತ್ತು ಪೂಜೆಯಿಂದ ಸರ್ವವಿಧ ಪಾತಕಗಳು ಪರಿಹಾರಗೊಳ್ಳುವವು. ಇದರ ಧಾರಣೆಯಿಂದ ಧಾರಕನು ರುದ್ರದೃಷ್ಟಿ ಸಂಪನ್ನನಾಗುವನು. ಆದಕಾರಣ ಪ್ರತಿಯೊಬ್ಬ ವೀರಶೈವನೂ ಇಷ್ಟಲಿಂಗ ಪೂಜಾ ಸಮಯದಲ್ಲಿ ರುದ್ರಾಕ್ಷಗಳನ್ನು ಅವಶ್ಯವಾಗಿ ಧರಿಸಿಕೊಳ್ಳಬೇಕು. ಲೋಕಪಾವನಗಳಾದ ಈ ರುದ್ರಾಕ್ಷಗಳ ಧಾರಣೆಯಿಂದ ಸಾಧಕನು ದೋಷಮುಕ್ತನಾಗುವುದರ ಜೊತೆಗೆ ಸದಾ ಪರಿಶುದ್ಧನಾಗಿರುತ್ತಾನೆ. ಈ ವಿಧವಾಗಿ ಸಾಧಕನ ದೃಷ್ಟಿ–ಮನಗಳನ್ನು ಪರಿಶುದ್ಧಗೊಳಿಸುವುದರ ಮೂಲಕ ಈ ರುದ್ರಾಕ್ಷಗಳು ಸಾಧಕನನ್ನೂ ಸಂರಕ್ಷಿಸುವ ಕಾರಣದಿಂದಾಗಿ ಇವುಗಳಿಗೂ ಸಹ ಆವರಣವೆಂದು ಕರೆಯಲಾಗಿದೆ.

೮) ಮಂತ್ರ :

ಅಷ್ಟಾವರಣಗಳಲ್ಲಿ ಎಂಟನೆಯದಾದ ಆವರಣವೇ ಮಂತ್ರವು. 'ನಮಃ ಶಿವಾಯ' ಎಂಬ ಐದು ಅಕ್ಷರಗಳಿಂದ ಕೂಡಿದ ಈ ಮಂತ್ರಕ್ಕೆ ಪಂಚಾಕ್ಷರ ಮಂತ್ರವೆಂದು ಕರೆಯಲಾಗಿದೆ. ಇದುವೇ ವೀರಶೈವರ ಮುಖ್ಯಮಂತ್ರವಾಗಿರುತ್ತದೆ. ಸಪ್ತಕೋಟಿ ಮಂತ್ರಗಳಲ್ಲಿ ಇದು ಶ್ರೇಷ್ಠವಾದದ್ದು. ಉಳಿದೆಲ್ಲ ಮಂತ್ರಗಳು ಅನೇಕಸಾರೆ ಆವೃತ್ತಿಯನ್ನಾಗಿ ಮಾಡಿದಾಗ ಸಿದ್ಧಿದಾಯಕವಾಗುತ್ತಿದ್ದರೆ ಇದು ಒಂದೇ ಸಾರೆ ಉಚ್ಚರಿಸಲ್ಪಟ್ಟರೂ ಸಿದ್ಧಿಯನ್ನು ಕೊಡುವಂಥದ್ದಾಗಿದೆ. ಈ ಪಂಚಾಕ್ಷರಕ್ಕೆ ಪ್ರಣವ ಅರ್ಥಾತ್ ಓಂಕಾರವನ್ನು ಜೋಡಿಸಲಾಗಿ ಇದು ಷಡಕ್ಷರವೆಂತಲೂ ಕರೆಯಲ್ಪಡುತ್ತದೆ. ಈ ಮಂತ್ರದಲ್ಲಿಯ ಪ್ರಣವವು ಶಿವನ ನಿರ್ಗುಣ–ನಿರಾಕಾರ ಸ್ವರೂಪವನ್ನು ಪ್ರತಿಪಾದಿಸುತ್ತವೆ.

ಈ ಮಂತ್ರಕ್ಕೆ ಮೂಲಮಂತ್ರ, ವಿದ್ಯಾಮಂತ್ರ, ಶಿವಮಂತ್ರ, ಶೈವಸೂತ್ರಮಂತ್ರ ಮತ್ತು ಪಂಚಾಕ್ಷರಮಂತ್ರವೆಂಬುದಾಗಿ ಐದು ಹೆಸರುಗಳಿವೆ. ಸಾಧಕನು ಮಂತ್ರ ದೀಕ್ಷಾಪೂರ್ವಕವಾಗಿ ತನ್ನ ಗುರುವಿನಿಂದ ಈ ಮತ್ರವನ್ನು ಪಡೆದುಕೊಂಡು ಜಪಿಸಬೇಕು. ಮಂತ್ರವನ್ನು ಜಪಿಸುವಾಗ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಉಪದೇಶಿಸಿದ ರೀತಿಯಂತೆ ವಾಚಿಕ, ಉಪಾಂಶು ಇಲ್ಲವೆ ಮಾನಸಿಕವೆಂಬ ಮೂರು ವಿಧಾನಗಳಲ್ಲಿ ಯಾವುದಾದರೊಂದು ವಿಧಾನವನ್ನು ಅನುಸರಿಸಬೇಕು. ಇಲ್ಲಿಯ ಈ ಮೂರು ವಿಧಾನಗಳಲ್ಲಿ 'ಮಾನಸಿಕಜಪ' ವಿಧಾನವೇ ಶ್ರೇಷ್ಠವಾದುದು. ಸಾಧಕನು ಸದ್ಗುರುವಿನ ಉಪದೇಶದಂತೆ ಪ್ರಾಣಾಯಾಮ ಮತ್ತು ನ್ಯಾಸಾದಿಗಳನ್ನು ಮಾಡಿ

ಈ ಮಹಾಮಂತ್ರವನ್ನು ಜಪಿಸುತ್ತ ಹೋದರೆ "ಜಪತೋ ನಾಸ್ತಿ ಪಾತಕಮ್" ಎಂಬ ಉಕ್ತಿಗನುಸಾರವಾಗಿ ಸಾಧಕನು ಸರ್ವಪಾತಕಗಳಿಂದ ಮುಕ್ತನಾಗುತ್ತಾನೆ. ಹೀಗೆ ಜಪ ಸಾಧಕನನ್ನು ಪಾಪನಿವೃತ್ತಿಪೂರ್ವಕ ಪರಿರಕ್ಷಿಸುವ ಕಾರಣದಿಂದಾಗಿ ಮಂತ್ರಕ್ಕೂ ಸಹ ಆವರಣವೆಂದು ಕರೆಯಲಾಗಿದೆ (ಸಿ.ಶಿ., ೮. ೧–೪೯)

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಮೇಲೆ ಹೇಳಲ್ಪಟ್ಟ ಎಂಟು ವಿಧ ಆವರಣಗಳ ಸ್ವರೂಪ ಮತ್ತು ಪ್ರಯೋಜನಗಳ ಬಗ್ಗೆ ವಿಸ್ತಾರವಾಗಿ ವಿವರಿಸಿದ್ದನ್ನು ಕಾಣಬಹುದು. ಸಾಧಕನು ಈ ಎಲ್ಲ ಆವರಣ ಸಂಪನ್ನನಾಗಿದ್ದರೆ, ಅವನ ಸಾಧನೆಯಲ್ಲಿ ಯಾವ ವಿಘ್ನವೂ ಬರುವುದಿಲ್ಲ.

ಬಹಿರಂಗ ಹಾಗೂ ಅಂತರಂಗ ಆವರಣಗಳು :

ಮೇಲೆ ಹೇಳಲ್ಪಟ್ಟ ಈ ಅಷ್ಟವಿಧ ಆವರಣಗಳನ್ನು ಬಹಿರಂಗ ಮತ್ತು ಅಂತರಂಗವೆಂದು ಎರಡು ವಿಧವಾಗಿ ವಿಂಗಡಿಸಬಹುದು. ಇಲ್ಲಿ ದೀಕ್ಷಾದಿ ಸಂಸ್ಕಾರವನ್ನು ಕೊಡುವ ಶಿವಾಚಾರ್ಯನು 'ಗುರು' ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. ಈತನು ಬಹಿರಂಗದ ಸ್ಥೂಲ ಆವರಣವಾದರೆ, ಈತನು ಬೋಧಿಸಿದ ದಿವ್ಯ ಜ್ಞಾನವು ನಮ್ಮ ಅಂತರಂಗದಲ್ಲಿ ಗುರು ಆಗಿ ಸದಾ ನೆಲೆಸಿರುತ್ತದೆ. ಅಂತೆಯೇ ಅನುಭವಿಗಳು 'ಅರಿವೆ ಗುರು' ಎಂಬುದಾಗಿ ಕರೆದಿದ್ದಾರೆ. ಇದರಂತೆ ಸ್ಥೂಲಶರೀರದ ಮೇಲೆ ಧರಿಸಿರುವ ಇಷ್ಟಲಿಂಗವು ಬಾಹ್ಯ ಆವರಣವೆಂದು ಕರೆಯಲ್ಪಡುತ್ತದೆ. ಆದರೆ ಸದ್ಗುರುವಿನ ಉಪದೇಶದ ಮೂಲಕ ಅಂತರಂಗದಲ್ಲಿ ಅರುವಾಗಿರುವ ಪ್ರಾಣಲಿಂಗ ಹಾಗೂ ಭಾವಲಿಂಗಗಳು ಅಂತರಂಗದ ಆವರಣಗಳೆಂದು ತಿಳಿದುಕೊಳ್ಳಬೇಕು. ಇದೇ ಪ್ರಕಾರವಾಗಿ ಶಿವಜ್ಞಾನಸಂಪನ್ನನಾದ ಶಿವಯೋಗಿಯು ಜಂಗಮನೆಂದು ಕರೆಯಿಸಿಕೊಂಡು ಸ್ಥೂಲ ಆವರಣದಲ್ಲಿ ಪರಿಗಣಿಸಲ್ಪಡುತ್ತಾನೆ. ಆದರೆ ಅವನಿಂದ ಉಪದೇಶಿಸಲ್ಪಟ್ಟ ಶಿವಾದ್ವೈತ ಜ್ಞಾನವನ್ನು ಪಡೆದ ಸಾಧಕನು ಸರ್ವತ್ರ ಶಿವದರ್ಶನವನ್ನು ಮಾಡುವುದರಿಂದ ಸಾಧಕನ ಅಂತರಂಗದಲ್ಲುದಿಸಿದ ಆ ಶಿವಾದ್ವೈತ ಜ್ಞಾನವೇ ಅಂತರಂಗ ಜಂಗಮನೆಂಬುದಾಗಿ ತಿಳಿದುಕೊಳ್ಳಬೇಕು.

ಇನ್ನು ಗುರು, ಲಿಂಗ ಹಾಗೂ ಜಂಗಮರ ಪಾದಪೂಜೆಯಿಂದ ದೊರೆತ ಪಾದೋದಕವು ಅಂದರೆ ಪಾದಜಲವು ಸ್ಥೂಲ ಅಥವಾ ಬಾಹ್ಯ ಪಾದೋದಕವೆಂದು ಕರೆಯಲ್ಪಡುತ್ತದೆ. ಆದರೆ ಈ ಪಾದೋದಕ ಸೇವನೆಯಿಂದ ತನ್ನ ಪರಮಾನಂದ ಸ್ವರೂಪದ ಯಾವ ಜ್ಞಾನವುಂಟಾಗುವುದೋ ಆ ಜ್ಞಾನಕ್ಕೆ ಅಂತರಂಗಪಾದೋದಕ ವೆಂದು ಕರೆಯಲಾಗಿದೆ. ಇದೇ ಪ್ರಕಾರವಾಗಿ ಗುರು–ಲಿಂಗ ಮತ್ತು ಜಂಗಮರಿಗೆ

ಸಮರ್ಪಿಸಿದ ಭೋಗ್ಯ ಪದಾರ್ಥಗಳು ಸ್ಥೂಲ ಇಲ್ಲವೆ ಬಾಹ್ಯ ಪ್ರಸಾದವೆಂದು ಕರೆಯಿಸಿಕೊಂಡರೆ ಆ ಪ್ರಸಾದ ಸೇವನೆಯಿಂದ ಉಂಟಾದ ಮನಸ್ಸಿನ ಪ್ರಸನ್ನತೆಯು ಅಂತರಂಗ ಪ್ರಸಾದ ಎಂಬುದಾಗಿ ಕರೆಯಲ್ಪಡುತ್ತದೆ.

ಇದೇ ತೆರನಾಗಿ ಶುದ್ಧ ಗೋಮಯದಿಂದ ನಿರ್ಮಿಸಲ್ಪಟ್ಟ ಭಸಿತವು ಬಾಹ್ಯ ಆವರಣವಾದರೆ, ಅದನ್ನು ಧರಿಸುವುದರಿಂದ ಮನಸ್ಸಿನಲ್ಲಾಗುವ ಶಿವನ ಚಿದ್ರೂಪ ಚಿಂತನೆಯೇ ಅಂತರಂಗ ಭಸ್ಮವೆಂದು ಕರೆಯಲ್ಪಡುವುದು. ಇದೇ ಪ್ರಕಾರ ಶಿವನ ತ್ರಿನೇತ್ರಗಳಿಂದ ಉದಿಸಿದ ರುದ್ರಾಕ್ಷಗಳು ಬಹಿರಂಗದ ಆವರಣಗಳಾದರೆ ಆ ರುದ್ರಾಕ್ಷಧಾರಣೆಯಿಂದ ಸಾಧಕನಲ್ಲುಂಟಾದ ರುದ್ರದೃಷ್ಟಿಯು ಅರ್ಥಾತ್ ಸರ್ವರನ್ನು ಸಮಾನತೆಯಿಂದ ಕಾಣುವ ದಿವ್ಯದೃಷ್ಟಿಯು ಅಂತರಂಗದ ರುದ್ರಾಕ್ಷ ಎಂಬುದಾಗಿ ಕರೆಯಲ್ಪಟ್ಟಿದೆ.

ಇದೇ ಪ್ರಕಾರವಾಗಿ ಸದ್ಗುರುವಿನಿಂದ ಉಪದೇಶಿಸಲ್ಪಟ್ಟ ಪಂಚಾಕ್ಷರ ಮಹಾಮಂತ್ರವು ಬಹಿರಂಗದ ಆವರಣವಾದರೆ ಆ ಮಂತ್ರಜಪದಿಂದುತ್ಪನ್ನವಾದ ಶಿವ ಹಾಗೂ ಜೀವರ ಅಭೇದವನ್ನು ಬೋಧಿಸುವ ಶಿವಾದ್ವೈತ ಜ್ಞಾನವು ಅಂತರಂಗದ ಮಂತ್ರವು ಅರ್ಥಾತ್ ಅಂತರಂಗದ ಆವರಣವು ಎಂದು ತಿಳಿಯಬೇಕು. ಹೀಗೆ ಇಲ್ಲಿ ಬೋಧಿಸಲ್ಪಟ್ಟ ಬಹಿರಂಗ ಹಾಗೂ ಅಂತರಂಗ ಆವರಣಗಳ ಸ್ವರೂಪವನ್ನರಿತು ಮೊದ ಮೊದಲು ಬಹಿರಂಗ ಆವರಣ ಸಂಪನ್ನನಾದ ಸಾಧಕನು ತನ್ನ ಸಾಧನೆಯ ಬಲದಿಂದ ಗುರು–ಜಂಗಮರ ಕೃಪಾಶಿರ್ವಾದದಿಂದ ಅಂತರಂಗ ಆವರಣ ಸಂಪನ್ನನಾದಾಗಲೇ ನಿಜವಾಗಿ ಆವರಣಯುಕ್ತನೆನಿಸಿಕೊಳ್ಳುವನು. ಆದ್ದರಿಂದ ಪ್ರತಿಯೊಬ್ಬ ಸಾಧಕನು ಈ ಬಹಿರಂಗ ಹಾಗೂ ಅಂತರಂಗ ಆವರಣವೆಂಬ ದಿವ್ಯಾಂಗವುಳ್ಳವನಾಗಿ ಮುಂದೆ ಹೇಳಲ್ಪಡುವ ಪಂಚ–ಆಚಾರಗಳನ್ನು ಆಚರಿಸುತ್ತಾ ಷಟ್‌ಸ್ಥಲ ಮಾರ್ಗದಲ್ಲಿ ನಡೆದು ನೂರೊಂದು ಮೆಟ್ಟಲುಗಳನ್ನೇರಿ ಕೊನೆಗೆ ಲಿಂಗಾಂಗ ಸಾಮರಸ್ಯರೂಪವಾದ ಐಕ್ಯಸ್ಥಿತಿಯನ್ನು ಪಡೆಯಬೇಕು.

॥

ತೃತೀಯ ಅಧ್ಯಾಯ

ಶ್ರೀ ಸಿದ್ಧಾಂತಶಿಖಾಮಣಿಯಲ್ಲಿಯ ಆಚಾರ ಮೀಮಾಂಸೆ

ವೀರಶೈವ ಆಚಾರ್ಯರು ಸಾಧಕನಿಗೆ ಅಂತರಂಗ-ಬಹಿರಂಗ ಶುದ್ಧಿಗೋಸುಗ ಐದು ವಿಧಗಳಾದ ಆಚಾರಗಳನ್ನು ಉಪದೇಶಿಸಿದ್ದಾರೆ. ಅವುಗಳಿಗೇನೇ ಪಂಚಾಚಾರಗಳೆಂದು ಕರೆಯಲಾಗಿದೆ. 'ಆಚರ್ಯತ ಇತ್ಯಾಚಾರಃ' ಎಂಬ ವ್ಯುತ್ಪತ್ತಿಯ ಮೇರೆಗೆ ಶಾಸ್ತ್ರ ವಿಹಿತಗಳಾದ ಆಚರಣೆಗಳನ್ನು ಪರಿಪಾಲಿಸುವುದೇ ಆಚಾರವು. ಇಂತಹ ಆಚರಣೆಗಳು ಮನುಷ್ಯನಿಗೆ ಒಂದು ವಿಧವಾದ ಆಭೂಷಣಗಳಿದ್ದಂತೆ. ವಸ್ತ್ರ ಹಾಗೂ ಸುವರ್ಣದ ಆಭೂಷಣಗಳಿಗಿಂತಲೂ ಉತ್ತಮವಾದ ಆಚರಣೆಯೇ ಒಂದು ಶ್ರೇಷ್ಠವಾದ ಆಭೂಷಣವೆಂದು ಕರೆಯಿಸಿಕೊಳ್ಳುವುದು. ದಿವ್ಯವಸ್ತ್ರಾದಿಗಳಿಂದ ಅಲಂಕೃತನಾಗಿದ್ದರೂ ಆಚಾರಹೀನನಾಗಿದ್ದರೆ ಲೋಕದಲ್ಲಿಯ ಜನರು ಅವನನ್ನು ನಿಂದಿಸುವರು. ಇದಕ್ಕೆ ವಿಪರೀತವಾಗಿ ವಸ್ತ್ರ ವಿಹೀನನಾಗಿ ಕೇವಲ ಕೌಪೀನಧಾರಿಯಾಗಿದ್ದರೂ ಸದಾಚಾರ ಸಂಪನ್ನನಾಗಿದ್ದರೆ ಲೋಕಪೂಜ್ಯನಾಗುವನು. ಆದ್ದರಿಂದ ಕನಕಾದ್ಯಾಭೂಷಣಗಳಿಗಿಂತಲೂ ಆಚಾರರೂಪವಾದ ಆಭೂಷಣವೇ ಶ್ರೇಷ್ಠ ಎಂಬುದಾಗಿ ತಿಳಿದುಬರುತ್ತದೆ. ಅಂತೆಯೇ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು –

ಆಚಾರ ಏವ ಸರ್ವೇಷಾಮಲಂಕಾರಾಯ ಕಲ್ಪತೇ।
ಆಚಾರಹೀನಃ ಪುರುಷೋ ಲೋಕೇ ಭವತಿ ನಿಂದಿತಃ ॥

ಜ್ಞಾನೇನಾಚಾರಯುಕ್ತೇನ ಪ್ರಸೀದತಿ ಮಹೇಶ್ವರಃ ।
ತಸ್ಮಾದಾಚಾರವಾನ್ ಜ್ಞಾನೀ ಭವೇದಾದೇಹಪಾತನಮ್ ॥

(ಸಿ.ಶಿ., ೧೬. ೧೩-೧೪)

ಎಂದು ಉಪದೇಶಿಸಿದ್ದಾರೆ. ಜ್ಞಾನ ಮತ್ತು ಆಚಾರಗಳಲ್ಲಿ ಆಚಾರವೂ ಸಹ ಜ್ಞಾನದಷ್ಟೇ ಮಹತ್ತ್ವಪೂರ್ಣವಾಗಿರುತ್ತದೆ. ಶಿವನೊಲುಮೆಯನ್ನು ಪಡೆಯಬೇಕಾದರೆ ಜ್ಞಾನವೊಂದಿದ್ದರೆ ಸಾಲದು, ಅದರ ಜೊತೆಗೆ ಶಾಸ್ತ್ರವಿಹಿತವಾದ ಆಚರಣೆಯು

ಅವಶ್ಯವಾಗಿ ಬೇಕೇಬೇಕು. ಎಂತಪ್ಪ ದಿವ್ಯಜ್ಞಾನಿಯಾಗಿದ್ದರೂ ಆಚಾರಹೀನನಾದರೆ ಲೋಕದ ಪೂಜ್ಯತೆಯನ್ನು ಪಡೆಯದೆ ನಿಂದೆಗೊಳಗಾಗುವನು. ಆದ್ದರಿಂದ ದೇಹವನ್ನು ತ್ಯಜಿಸುವ ಕೊನೆಯ ಗಳಿಗೆಯವರೆಗೂ ಸಹ ತನ್ನ ಸದಾಚಾರವನ್ನು ಕಾಪಾಡಿಕೊಂಡಿರಬೇಕೆಂಬುದಾಗಿ ಪೂಜ್ಯರು ಇಲ್ಲಿ ಪ್ರತಿಪಾದಿಸಿ ಆ ಸದಾಚಾರವೇ ಜ್ಞಾನಿಯ ಒಂದು ಅಲಂಕಾರವೆಂಬುದಾಗಿ ಉಪದೇಶಿಸಿದ್ದಾರೆ. ಚಂದ್ರಜ್ಞಾನಾಗಮದಲ್ಲಿ ಆಚಾರವು ಒಂದು ದಿವ್ಯವಾದ ಅಲಂಕಾರವೆಂಬುದಾಗಿ (ಕ್ರಿಯಾಪಾದ., ೯. ೧೬–೧೭) ಪ್ರತಿಪಾದಿಸಿ ಅದುವೇ ಒಂದು ಶ್ರೇಷ್ಠವಾದ ಧರ್ಮವೆಂಬುದನ್ನು

ಆಚಾರಃ ಪರಮೋ ಧರ್ಮ ಆಚಾರಃ ಪರಮಂ ಧನಮ್ ।
ಜ್ಞಾನಮಾಚಾರಹೀನಂ ಚೇನ್ನ ತದ್ಭವತಿ ಸಿದ್ಧಯೇ ॥

(ಕ್ರಿಯಾಪಾದ., ೯. ೧೮–೧೯)

ಎಂದು ಪ್ರತಿಪಾದಿಸಲಾಗಿದೆ. ತಾತ್ಪರ್ಯವೇನೆಂದರೆ, ಶಿವಭಕ್ತಿಗೆ ಆಚಾರವೇ ಆಧಾರವು. ಈ ಆಚಾರವೇ ಸಾಧಕನ ಶ್ರೇಷ್ಠವಾದ ಧರ್ಮವು. ಇದುವೇ ಅಕ್ಷಯವಾದ ಧನವು. ಇಂತಹ ಆಚಾರವಿಲ್ಲದಿರೆ ಶುಷ್ಕವಾದ ಜ್ಞಾನವು ಅದಾವ ಪ್ರಯೋಜನಕಾರಿಯಾಗಲಾರದು.

ಶಾಸ್ತ್ರೋಕ್ತವಾದ ಆಚಾರಸಂಪನ್ನನಾದ ವ್ಯಕ್ತಿಯು ಸದಾ ಪ್ರಸನ್ನನಾಗಿರುತ್ತಾನೆ. ಅವನ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯಗಳು ಚೆನ್ನಾಗಿರುತ್ತವೆ. ಇದೂ ಅಲ್ಲದೆ ಆತನು ಪುಣ್ಯಜೀವಿ ಎನಿಸಿಕೊಳ್ಳುವನಲ್ಲದೆ ಪೂರ್ಣಾಯುಷಿಯೂ ಸಹ ಆಗುವನು. ಆದರೆ ದುರಾಚಾರಿಯಾದ ವ್ಯಕ್ತಿಯು ಲೋಕನಿಂದೆಗೊಳಗಾಗುವನಲ್ಲದೆ ಆದಿ–ವ್ಯಾಧಿಗಳಿಂದ ಆಕ್ರಾಂತನಾಗಿ ಅಲ್ಪಾಯು ಆಗಿ ಜೀವನದುದ್ದಕ್ಕೂ ದುಃಖವನ್ನೇ ಅನುಭವಿಸುವನು. ಆಚಾರಹೀನನಾದ ವ್ಯಕ್ತಿಯನ್ನು ಅದಾವ ವೈದಿಕ ಮಂತ್ರಗಳೂ ಪವಿತ್ರಗೊಳಿಸಲಾರವು. ಆದ್ದರಿಂದ ಪ್ರತಿಯೊಬ್ಬರೂ ಧರ್ಮವಿಹಿತಗಳಾದ ಆಚರಣೆಗಳನ್ನು ಆಚರಿಸುತ್ತಿರಬೇಕು. ಉತ್ತಮವಾದ ಆಚಾರವು ಒಂದು ಕಲ್ಪತರುವಿದ್ದಂತೆ. ಅದರಿಂದಲೇ ಧರ್ಮ–ಅರ್ಥ–ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡೆಯಬಹುದು. ಅಂತೆಯೇ ವೀರಶೈವ ಆಚಾರ್ಯರು ಮುಕ್ತಿಗೆ ಜ್ಞಾನವೊಂದನ್ನೇ ಸಾಧನವನ್ನಾಗಿ ಹೇಳದೇ ಆಚಾರವನ್ನೂ ಸಹ ಒಪ್ಪಿಕೊಂಡಿದ್ದಾರೆ. ಅಂದರೆ ಆಚಾರಯುಕ್ತವಾದ ಜ್ಞಾನವೇ ಮುಕ್ತಿಗೆ ಹೇತು ಎಂಬುದು ಸಿದ್ಧವಾಗುತ್ತದೆ. ಹೀಗೆ ಜ್ಞಾನದಷ್ಟೇ ಆಚಾರಕ್ಕೆ ಮಹತ್ತ್ವಕೊಟ್ಟಿರುವ ವೀರಶೈವಸಿದ್ಧಾಂತದಲ್ಲಿ ಪಂಚ ಆಚಾರಗಳು ಪ್ರತಿಪಾದಿಸಲ್ಪಟ್ಟಿವೆ. ಅದನ್ನೇ ಚಂದ್ರಜ್ಞಾನಾಗಮದಲ್ಲಿ:

ಲಿಂಗಾಚಾರಃ ಸದಾಚಾರಃ ಶಿವಾಚಾರಸ್ತಥೈವ ಚ ।
ಭೃತ್ಯಾಚಾರೋ ಗಣಾಚಾರಃ ಪಂಚಾಚಾರಾಃ ಪ್ರಕೀರ್ತಿತಾಃ ॥

(ಕ್ರಿಯಾಪಾದ., ೯–೪)

ಎಂದು ವಿವರಿಸಲಾಗಿದೆ.

೧) ಲಿಂಗಾಚಾರ :

ಅಂಗನು ಲಿಂಗರೂಪನಾಗಲು ಉಪದೇಶಿಸಿದ ಆಚಾರವೇ ಲಿಂಗಾಚಾರವು. ಅದನ್ನೇ ಚಂದ್ರಜ್ಞಾನಾಗಮದಲ್ಲಿ

ಗುರುಣಾ ದತ್ತಲಿಂಗಾದ್ ವೈ ನಾಸ್ತಿ ದೈವಂ ಮಹೀತಲೇ ।
ಇತಿ ಭಾವಾನುಸಂಧಾನಂ ಲಿಂಗಾಚಾರಃ ಸ ಉಚ್ಯತೇ ॥

(ಕ್ರಿಯಾಪಾದ., ೯–೫)

ಎಂದು ಹೇಳಲಾಗಿದೆ. ತಾತ್ಪರ್ಯವೇನೆಂದರೆ ದೀಕ್ಷಾಪ್ರಸಂಗದಲ್ಲಿ ಸದ್ಗುರುವಿನಿಂದ ಕೊಡಲ್ಪಟ್ಟ ಇಷ್ಟ–ಪ್ರಾಣ ಹಾಗೂ ಭಾವಲಿಂಗಗಳ ಹೊರತಾಗಿ ಈ ಜಗತ್ತಿನಲ್ಲಿ ಬೇರೊಂದು ದೈವವು ಇರುವುದಿಲ್ಲ ಎಂಬ ಭಾವನೆಯಿಂದ ಇಷ್ಟಲಿಂಗದ ಪೂಜೆ, ಪ್ರಾಣಲಿಂಗದ ಚಿಂತನೆ ಹಾಗೂ ಭಾವಲಿಂಗದ ಅನುಸಂಧಾನವೇ ಲಿಂಗಾಚಾರವೆಂಬುದಾಗಿ ಕರೆಯಿಸಿಕೊಳ್ಳುವುದು. ಈ ಲಿಂಗದ ಹೊರತಾಗಿ ಬೇರಾವ ಕಡೆಯೂ ಅರ್ಚನಾನುಸಂಧಾನ ಮನೋಭಾವವು ಬೆಳೆಯದಿರಬೇಕು. ಇದೇ ವಿಷಯವನ್ನೇ ಶ್ರೀಸಿದ್ಧಾಂತಶಿಖಾಮಣಿಯಲ್ಲಿ –

ನಾರ್ಚಯೇದನ್ಯದೇವಾಂಸ್ತು ನ ಸ್ಮರೇನ್ನ ಚ ಕೀರ್ತಯೇತ್ ।
ನ ತನ್ನೈವೇದ್ಯಮಶ್ನೀಯಾಚ್ಛಿವಭಕ್ತೋ ದೃಢವ್ರತಃ ॥

ಯದ್ಗೃಹೇಷ್ವನ್ಯದೇವೋಽಸ್ತಿ ತದ್ಗೃಹಾಣಿ ಪರಿತ್ಯಜೇತ್ ।
ನಾನ್ಯದೇವಾರ್ಚಕಾನ್ ಮರ್ತ್ಯಾನ್ ಪೂಜಾಕಾಲೇ ನಿರೀಕ್ಷಯೇತ್ ॥

ಸದಾ ಶಿವೈಕನಿಷ್ಠಾನಾಂ ವೀರಶೈವಾಧ್ವವರ್ತಿನಾಮ್ ।
ನ ಹಿ ಸ್ಥಾವರಲಿಂಗಾನಾಂ ನಿರ್ಮಾಲ್ಯಾದ್ಯುಪಯುಜ್ಯತೇ ॥

(ಸಿ.ಶಿ., ೯. ೩೧–೩೩)

ಎಂದು ಉಪದೇಶಿಸಲಾಗಿದೆ. ಅಂದರೆ ಇಷ್ಟ–ಪ್ರಾಣ ಮತ್ತು ಭಾವಲಿಂಗಗಳನ್ನು ಹೊರತುಪಡಿಸಿ ಅನ್ಯದೇವರನ್ನು ಅರ್ಚಿಸಕೂಡದು, ಸ್ತುತಿಸಕೂಡದು ಮತ್ತು ಸ್ಮರಿಸಲೂ ಸಹ ಕೂಡದು, ಅನ್ಯದೇವರ ನೈವೇದ್ಯವನ್ನೆಂದೂ ಸ್ವೀಕರಿಸಬಾರದು. ದೃಢಭಕ್ತಿ ಸಂಪನ್ನನಾದ ವೀರಶೈವನು ಅನ್ಯದೇವರನ್ನು ಪೂಜಿಸುವವರ ಮನೆಗೂ ಕೂಡ ಹೋಗಬಾರದು. ಅನ್ಯದೇವರ ಭಕ್ತರನ್ನೂ ಸಹ ತಾನು ಲಿಂಗಪೂಜೆಯನ್ನು

ಮಾಡುವಾಗ ನೋಡಬಾರದು. ಹೀಗೆ ಇಷ್ಟ–ಪ್ರಾಣ–ಭಾವಲಿಂಗಗಳಲ್ಲಿ ನಿಷ್ಠೆಯುಳ್ಳ ವೀರಶೈವ ಸಾಧಕನು ಸ್ಥಾವರಾದಿ ಶಿವಲಿಂಗಗಳ ನೈವೇದ್ಯ–ನಿರ್ಮಾಲ್ಯಗಳನ್ನೂ ಸಹ ಸ್ವೀಕರಿಸಕೂಡದು.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಬೋಧಿಸಿದ ಈ ಉಪದೇಶದಲ್ಲಿ ಅನ್ಯದೇವಾರ್ಚನೆಯ ನಿಷೇಧವು ಆ ದೇವರ ಬಗ್ಗೆ ಹೀನಭಾವವನ್ನು ವ್ಯಕ್ತಮಾಡುವುದಕ್ಕೋಸ್ಕರವಾಗಿ ಇರದೇ ತನ್ನ ಇಷ್ಟಲಿಂಗಾದಿಗಳಲ್ಲಿ ನಿಷ್ಠೆಯನ್ನು ದೃಢಪಡಿಸಿಕೊಳ್ಳ ಬೇಕೆಂಬ ಭಾವನೆಯುಳ್ಳದ್ದಾಗಿದೆ ಎಂಬುದಾಗಿ ಅರ್ಥೈಸಿಕೊಳ್ಳಬೇಕು. ಇಷ್ಟಲಿಂಗಾದಿಗಳ ಬಗ್ಗೆ ಇಂತಹ ದೃಢನಿಷ್ಠೆಯನ್ನು ಉಪದೇಶಮಾಡಿದ ಪೂಜ್ಯರೇ ಪನಃ –

ಯತ್ರ ಸ್ಥಾವರಲಿಂಗಾನಾಮಪಾಯಃ ಪರಿವರ್ತತೇ ।
ಅಥವಾ ಶಿವಭಕ್ತಾನಾಂ ಶಿವಲಾಂಛನಧಾರಿಣಾಮ್ ॥

ತತ್ರ ಪ್ರಾಣಾನ್ ವಿಹಾಯಾಪಿ ಪರಿಹಾರಂ ಸಮಾಚರೇತ್ ।
ಶಿವಾರ್ಥಂ ಮುಕ್ತಜೀವಶ್ಚೇಚ್ಛಿವಸಾಯುಜ್ಯಮಾಪ್ನುಯಾತ್ ॥

(ಸಿ.ಶಿ., ೯. ೩೪–೩೫)

ಎಂದು ಉಪದೇಶಿಸಿದ್ದಾರೆ. ತಾತ್ಪರ್ಯವೇನೆಂದರೆ ಲಿಂಗಾಚಾರಿಯಾದ ವೀರಶೈವನು ತನ್ನ ಇಷ್ಟಲಿಂಗಾದಿಗಳನ್ನು ಪೂಜಿಸುತ್ತಿರುವುದರ ಜೊತೆಗೆ ಸ್ಥಾವರ ದೇವಾಲಯಗಳ ಸಂರಕ್ಷಣೆಯನ್ನೂ ಸಹ ಮಾಡಬೇಕು. ಯಾವುದೇ ದೇವಾಲಯಕ್ಕಾಗಲೀ ಅಥವಾ ಯಾವನೊಬ್ಬ ಶಿವಭಕ್ತನಿಗಾಗಲೀ ಪರಧರ್ಮೀಯರಿಂದ ಆಪತ್ತು ಬಂದೊದಗಿದಾಗ ತನ್ನ ಪ್ರಾಣವನ್ನು ಕಳೆದುಕೊಂಡಾದರೂ ಅವರನ್ನು ಸಂರಕ್ಷಿಸಬೇಕೆಂಬುದಾಗಿ ಉಪದೇಶಿಸಿದ್ದನ್ನು ನೋಡಿದರೆ ಪೂಜ್ಯರಲ್ಲಿ ಅನ್ಯದೇವರ ಬಗ್ಗೆ ಹೀನಭಾವನೆಯಿಲ್ಲೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಆದ್ದರಿಂದ ಪ್ರತಿಯೊಬ್ಬ ವೀರಶೈವನು ಆಚಾರ್ಯರ ಉಪದೇಶದ ಮರ್ಮವನ್ನರಿತು ನಡೆದುಕೊಳ್ಳಬೇಕು. ಈ ಪೂರ್ವದಲ್ಲಿ ಹೇಳಿದ ಇಷ್ಟ–ಪ್ರಾಣ–ಭಾವಲಿಂಗಗಳ ಅರ್ಚನ, ಮನನ ಮತ್ತು ನಿದಿಧ್ಯಾಸನೆಗಳೇ ಲಿಂಗಾಚಾರವು. ಇದನ್ನು ಪ್ರತಿಯೊಬ್ಬರು ನಿಷ್ಠೆಯಿಂದ ಪರಿಪಾಲಿಸಬೇಕು.

ಹನ್ನೆರಡನೇ ಶತಮಾನದ ಶರಣರೂ ಸಹ ತಮ್ಮ ಅನುಭಾವಪೂರ್ಣ ವಚನಗಳಲ್ಲಿ ಲಿಂಗನಿಷ್ಠಾರೂಪವಾದ ಲಿಂಗಾಚಾರ ವಿಷಯಕವಾಗಿ – "ತನ್ನ ಲಿಂಗವ ಬಿಟ್ಟು ಅನ್ಯಲಿಂಗಕ್ಕೆ ಶರಣೆಂಬ ಕುನ್ನಿಗಳನೇನೆಂಬೆನಯ್ಯಾ ಕಲಿದೇವರ ದೇವಾ!" "ಉಡಿಯ ಲಿಂಗವ ಬಿಟ್ಟು ಗುಡಿಯಲಿಂಗಕ್ಕೆ ಶರಣೆಂಬ ಗುಡಿಹಿಗಳನೇನೆಂಬೆನಯ್ಯ ಕಲದೇವರ ದೇವಾ!" ಎಂಬುದಾಗಿ ಮಡಿವಾಳ ಮಾಚಿ

ದೇವರು; "ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ ಇದ್ದರೇನೋ ಶಿವಶಿವಾ ! ಹೋದರೇನೋ? ಕೂಡಲ ಸಂಗಮದೇವಯ್ಯಾ ಊಡದ ಆವಿಂಗೆ ಉಣ್ಣದ ಕರುವಬಿಟ್ಟಂತೆ, ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ, ಎಂಬುದಾಗಿ ಶ್ರೀ ಬಸವಣ್ಣನವರು; "ಮರ್ತ್ಯಲೋಕದ ಮಾನವರು ದೇಗುಲದೊಳಗೊಂದು ದೇವರ ಮಾಡಿದಡೆ ಆನು ಬೆರಗಾದೆನಯ್ಯಾ", ಎಂಬುದಾಗಿ ಶ್ರೀ ಅಲ್ಲಮಪ್ರಭುದೇವರು; "ತೀರ್ಥಯಾತ್ರೆ ಲಿಂಗದರುಶನಕ್ಕೆ ಹೋಗಿ, ಕರ್ಮವ ಹಿಂಗಿಸಿಕೊಂಡನೆಂಬ ಭಂಗಿತರ ಮಾತ ಕೇಳಲಾಗದು. ಅದೇನು ಕಾರಣವೆಂದರೆ, ತೀರ್ಥವಾವುದು, ಯಾತ್ರೆ ಯಾವುದು? ಬಲ್ಲರೇ ನೀವು ಹೇಳಿರೇ! ಮಹಾಪುನ ಗುರುಪಾದ ತೀರ್ಥದಿಂದ ವೆಗ್ಗಳ ತೀರ್ಥವುಂಟೇ? ಜಗತ್ಪಾವನ ಜಂಗಮದರುಶನ ದಿಂದ ಬೇರೆ ಯಾತ್ರೆಯುಂಟೆ? ಇಂಗಿತವನಂದ ಬಳಿಕ ತನ್ನ ಅಂಗದ ಮೇಲಿರ್ಪ ಲಿಂಗವಲ್ಲದೆ ಬೇರೆ ಲಿಂಗವುಂಟೇ? ಇದನರಿಯದೇ ಇನ್ನು ತೀರ್ಥಯಾತ್ರೆ, – ಲಿಂಗದರುಶನವುಂಟೆಂಬ ಅಂಗಹೀನರ ಮುಖವ ನೋಡಲಾಗದು ಬಸವಪ್ರಿಯ ಕೂಡಲ ಚೆನ್ನಬಸವಣ್ಣ ಎಂಬುದಾಗಿ ಹಡಪದಪ್ಪಣ್ಣನವರು ಹೀಗೆ ಹೇಳಿರುವುದನ್ನು ಕಾಣಬಹುದು.

ಶಿವಾಗಮ, ಸಿದ್ಧಾಂತಶಿಖಾಮಣಿ ಮತ್ತು ಶರಣರ ವಚನಗಳಲ್ಲಿ ಉಪದೇಶಿಸಲ್ಪಟ್ಟ ಲಿಂಗಾಚಾರವು ಏಕರೂಪವಾದುದಾಗಿದೆ. ಶರಣರ ವಚನಗಳಲ್ಲಿ ತೀರ್ಥಯಾತ್ರೆಯನ್ನು ಖಂಡಿಸಿರುವ ಕೆಲ ವಿಚಾರಗಳು ಜಿಜ್ಞಾಸುಗಳ ಮನಸ್ಸಿನಲ್ಲಿ ಕುತೂಹಲವನ್ನು ಕೆರಳಿಸುವಂತಾಗಿವೆ. ಅಂದರೆ ಲಿಂಗಾಚಾರ ಪರಾಯಣನಾದ ವೀರಶೈವನು ತೀರ್ಥಯಾತ್ರೆಯನ್ನು ಮಾಡಬೇಕೋ ಅಥವಾ ಮಾಡಬಾರದೋ? ಎಂಬ ಜಿಜ್ಞಾಸೆ ಇಲ್ಲಿ ಪ್ರಮುಖವಾದುದು. ಇದರ ಸಮಾಧಾನವೇನೆಂದರೆ ವೀರಶೈವರಿಗೆ ಇಷ್ಟಲಿಂಗಪೂಜೆಯು ಪ್ರಮುಖವಾದುದರಿಂದ ಅವರು ತೀರ್ಥಯಾತ್ರೆಗೆ ಹೋಗುವುದಾದರೂ ಆ ಕ್ಷೇತ್ರದಲ್ಲಿ ಸ್ಥಾವರಲಿಂಗಪೂಜೆಗಾಗಿ ಹೋಗದೇ ತಮ್ಮ ಇಷ್ಟಲಿಂಗಪೂಜೆಗಾಗಿಯೇ ಕ್ಷೇತ್ರಗಳಿಗೆ ಹೋಗಬೇಕು. ದೇಶ–ಕಾಲಗಳ ತಾರತಮ್ಯದಿಂದಲೂ ಪೂಜೆಯ ಫಲದಲ್ಲಿ ತಾರತಮ್ಯವುಂಟಾಗುತ್ತದೆ. ಅಂದರೆ ನಮ್ಮ ಮನೆಯಲ್ಲಿ ಇಷ್ಟಲಿಂಗಪೂಜೆಯನ್ನು ಮಾಡುವುದಕ್ಕಿಂತಲೂ ಪವಿತ್ರ ತೀರ್ಥಕ್ಷೇತ್ರಗಳಿಗೆ ಹೋಗಿ ಅದೇ ಇಷ್ಟಲಿಂಗಪೂಜೆಯನ್ನು ಮಾಡಿದರೆ ಅದರ ಫಲವು ದಶಗುಣ, ಶತಗುಣವಾಗುವುದೆಂದು ಶಾಸ್ತ್ರಗಳು ಪ್ರತಿಪಾದಿಸುತ್ತವೆ. ಅಂತೆಯೇ ವೀರಶೈವರು ತೀರ್ಥಕ್ಷೇತ್ರಗಳಿಗೆ ಹೋಗುವಾಗ ಇಷ್ಟಲಿಂಗಧಾರಿಗಳಾಗಿ ಹೋಗುವುದಲ್ಲದೆ ಜೊತೆಗೆ ಗುರು–ಜಂಗಮರನ್ನು ಕರೆದೊಯ್ದು ತೀರ್ಥಗಳಲ್ಲಿ ಸ್ನಾನಮಾಡುವಾಗ ಅವರ ಪಾದಗಳನ್ನು ಮಸ್ತಕದ ಮೇಲಿರಿಸಿಕೊಂಡು ಸ್ನಾನಮಾಡುವ

ಪದ್ಧತಿಯು ಇಂದಿಗೂ ರೂಢಿಯಲ್ಲಿದೆ. ಕಾಶೀ ಮಹಾಕ್ಷೇತ್ರದ ಜ್ಞಾನಪೀಠದಲ್ಲಿ ಪ್ರತಿ ಶಿವರಾತ್ರಿಯಂದು ಸಹಸ್ರಾರು ಭಕ್ತಾದಿಗಳು ಸಾಮೂಹಿಕ ಇಷ್ಟಲಿಂಗಪೂಜೆಯಲ್ಲಿ ಪಾಲ್ಗೊಳ್ಳುತ್ತಿರುವುದು ಒಂದು ಪ್ರತ್ಯಕ್ಷ ಉದಾಹರಣೆಯಾಗಿರುತ್ತದೆ. ಆದ್ದರಿಂದ ವೀರಶೈವರು ಪೂರ್ವದಲ್ಲಿ ಹೇಳಿದ ಲಿಂಗನಿಷ್ಠೆಗೆ ಅರ್ಥಾತ್ ಲಿಂಗಾಚಾರಕ್ಕೆ ಬಾಧೆ ಬಾರದ ಹಾಗೆ ತೀರ್ಥಯಾತ್ರೆಯನ್ನು ಕೈಕೊಂಡರೆ ಅದಾವ ದೋಷವೂ ಇರುವುದಿಲ್ಲ.

೨) ಸದಾಚಾರ :

ವೀರಶೈವ ಸಿದ್ಧಾಂತದ ಪಂಚಾಚಾರಗಳಲ್ಲಿ ಎರಡನೆಯದಾದ ಆಚಾರವೇ ಸದಾಚಾರವು. ಸೂಕ್ಷ್ಮಾಗಮದಲ್ಲಿ ಈ ಸದಾಚಾರವನ್ನು ಕುರಿತು –

ಸಜ್ಜನಃ ಶಿವಭಕ್ತಶ್ಚ ಯೇನ ಮಾರ್ಗೇಣ ಸರ್ವದಾ ।
ತೋಷ್ಯತೇ ಚ ಮಹಾದೇವಿ ಸದಾಚಾರಃ ಸ ವೈ ಸ್ಮೃತಃ ॥

(ಕ್ರಿಯಾಪಾದ., ೬–೯)

ಎಂದು ವಿವರಿಸಲ್ಪಟ್ಟಿದೆ. ತಾತ್ಪರ್ಯವೇನೆಂದರೆ ವೀರಶೈವಧರ್ಮದಲ್ಲಿ ಪೂಜನೀಯವೆಂದು ಕರೆಯಲ್ಪಟ್ಟಿರುವ ಗುರು–ಲಿಂಗ ಮತ್ತು ಜಂಗಮರಿಗೆ ತಾನು ಧರ್ಮಮಾರ್ಗದಿಂದ ಸಂಪಾದಿಸಿದ ದ್ರವ್ಯದಿಂದ ಅನ್ನ, ವಸ್ತ್ರ ಮತ್ತು ಭೂರಿ ದಕ್ಷಿಣಾದಿಗಳಿಂದ ಸಂತರ್ಪಣೆಯನ್ನು ಮಾಡುವುದು ಅರ್ಥಾತ್ ತೃಪ್ತಿಪಡಿಸುವುದೇ ಸದಾಚಾರವು. ಈ ಸದಾಚಾರದಲ್ಲಿ ವಿಶೇಷವಾಗಿ ದಾನವು ಪ್ರತಿಪಾದಿಸಲ್ಪಟ್ಟಿದೆ. ಈ ದಾನರೂಪವಾದ ಸದಾಚಾರವು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಸೋಪಾಧಿ, ನಿರುಪಾಧಿ ಮತ್ತು ಸಹಜವೆಂಬುದಾಗಿ ಮೂರು ವಿಧವಾಗಿ ಪ್ರತಿಪಾದಿಸಲ್ಪಟ್ಟಿದೆ. ಸಾಂಸಾರಿಕ ಫಲದ ಅಪೇಕ್ಷೆಯಿಂದ ಗುರು–ಲಿಂಗ–ಜಂಗವರಿಗೆ ಸಮರ್ಪಿಸುವ ದಾನಕ್ಕೆ ಸೋಪಾಧಿಕದಾನವೆಂದೂ (ಸಿ.ಶಿ., ೯–೮೧). ಇನ್ನು ಫಲಾಪೇಕ್ಷೆಯಿಲ್ಲದೆ ಈಶ್ವರಾರ್ಪಣ ಬುದ್ಧಿಯಿಂದ ಮಾಡುವ ದಾನಕ್ಕೆ ನಿರುಪಾಧಿಕದಾನವೆಂದೂ (ಸಿ.ಶಿ., ೯–೮೨), ಇನ್ನು ಕೊಡುವವ, ಕೊಂಬುವವ ಮತ್ತು ಕೊಡುವ ವಸ್ತು ಇವು ಮೂರು ಶಿವರೂಪವೆಂದು ತಿಳಿದು ತನ್ನಲ್ಲಿ ಕರ್ತೃತ್ವ ಭಾವವೂ ಬಾರದ ಹಾಗೆ ಮಾಡುವ ದಾನಕ್ಕೆ ಸಹಜದಾನವೆಂದು (ಸಿ.ಶಿ., ೯–೮೩) ಕರೆಯುತ್ತಾರೆ.

ಪೂಜ್ಯಪಾದರಾದ ರೇಣುಕರು ಈ ತ್ರಿವಿಧ ದಾನಗಳಲ್ಲಿ ಸಹಜದಾನವೇ ಶ್ರೇಷ್ಠವೆಂಬುದಾಗಿ ಪ್ರತಿಪಾದಿಸುತ್ತ –

ಸಹಜಂ ದಾನಮುತ್ಕೃಷ್ಟಂ ಸರ್ವದಾನೋತ್ತಮೋತ್ತಮಮ್ ।
ಶಿವಜ್ಞಾನಪ್ರದಂ ಪುಂಸಾಂ ಜನ್ಮರೋಗನಿವರ್ತಕಮ್ ॥

(ಸಿ.ಶಿ.,' ೯–೮೪)

ಎಂದು ಉಪದೇಶಿಸಿದ್ದಾರೆ. ತಾತ್ಪರ್ಯವೇನೆಂದರೆ ಮೇಲೆ ಹೇಳಿದ ತ್ರಿವಿಧ ದಾನಗಳಲ್ಲಿ ಸಹಜದಾನವೇ ಶ್ರೇಷ್ಠವಾದುದು. ಇಂತಹ ದಾನವನ್ನು ಮಾಡುವ ಭಕ್ತನಿಗೆ ಶಿವಜ್ಞಾನವು ಉಂಟಾಗುವುದಲ್ಲದೆ, ಜನ್ಮ ಮರಣ ಲಕ್ಷಣರೂಪವಾದ ಭವ ರೋಗವು ಇಲ್ಲದಾಗಿ ಹೋಗುವುದು.

ಸದಾಚಾರದಲ್ಲಿಯ ಸಾಮಾಜಿಕ ಮೌಲ್ಯ :

ಮೇಲೆ ನಿರೂಪಿಸಿದ ಸದಾಚಾರದಲ್ಲಿ ದಾನವು ಮುಖ್ಯವಾಗಿ ಪ್ರತಿಪಾದಿಸಲ್ಪಟ್ಟಿರುತ್ತದೆ. ಸಮಾಜದಲ್ಲಿ ಅಸಮಾನತೆಯನ್ನು ಸ್ವಲ್ಪಮಟ್ಟಿಗಾದರೂ ದೂರಮಾಡುವ ಭಾವನೆಯು ಈ ದಾನದ ಹಿನ್ನೆಲೆಯಲ್ಲಿ ಅಡಗಿರುವಂಥದ್ದಾಗಿದೆ. ನಾವು ಸಂಪಾದಿಸಿದ್ದ ಸಂಪತ್ತಿಗೆ ನಾವು ಮತ್ತು ನಮ್ಮ ಪರಿವಾರವಷ್ಟೇ ಹಕ್ಕುದಾರರಾಗಿರುವುದಿಲ್ಲ. ಅದರಲ್ಲಿ ಸಮಾಜ ಮತ್ತು ಸರಕಾರದ ಹಕ್ಕುಗಳೂ ಕೂಡ ಇರುತ್ತವೆ. ಅಂತೆಯೇ ಧರ್ಮಾಚಾರ್ಯರು ಪ್ರಾಚೀನ ಕಾಲದಿಂದಲೂ ರಾಜನಿಗೆ ಕರರೂಪದಲ್ಲಿ ಮತ್ತು ಸಮಾಜಕ್ಕೆ ದಾನರೂಪದಲ್ಲಿ ಕೊಡುವ ಪದ್ಧತಿಯನ್ನು ರೂಢಿಯಲ್ಲಿ ತಂದಿದ್ದಾರೆ. ಈ ಜಗತ್ತಿನ ಪ್ರತಿಯೊಂದು ಧರ್ಮ ಪರಂಪರೆಯಲ್ಲಿ ದಾನಕ್ಕೆ ಆದ್ಯತೆಯನ್ನು ಕೊಡಲಾಗಿದೆ. ಧರ್ಮದೃಷ್ಟಿಯಿಂದ ದಾನವನ್ನು ಕೊಡುವುದು ಒಂದು ವಿಧವಾದರೆ, ಕರ್ತವ್ಯ ದೃಷ್ಟಿಯಿಂದ ಕೊಡುವುದು ಇನ್ನೊಂದು ವಿಧವಾಗಿರುತ್ತದೆ. ಅಂದರೆ ತಾನು ಉಂಡು–ಉಟ್ಟು ಉಳಿದದ್ದು ತನ್ನದೆಂದು ಭಾವಿಸದೆ ಅದು ಅನ್ಯರ ಇಡುಗಂಟೆಂಬುದಾಗಿ ತಿಳಿದು ಪ್ರಸಂಗಾನುಸಾರವಾಗಿ ಆ ಧನವನ್ನು ಪ್ರತಿಯೊಬ್ಬರೂ ಸಮಾಜ ಮತ್ತು ರಾಷ್ಟ್ರಕ್ಕಾಗಿ ಅವಶ್ಯವಾಗಿ ಅರ್ಪಿಸಬೇಕು. ಇದರಿಂದ ಆರ್ಥಿಕ ದೃಷ್ಟಿಯಿಂದ ಹಿಂದುಳಿದವರನ್ನು ಮೇಲಕ್ಕೆತ್ತುವ ಮತ್ತು ಅವರಿಗೂ ಸಮಾಜದಲ್ಲಿ ಒಂದು ಉಚಿತ ಸ್ಥಾನಮಾನವನ್ನು ಒದಗಿಸಿಕೊಡುವ ಯೋಜನೆಯು ಸಫಲವಾಗುವುದು.

ಇಂತಹ ದಾತೃತ್ವ ಸ್ವಭಾವವನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಂಡಾಗ ಸಮಾಜದಲ್ಲುಂಟಾಗುವ ಅನೇಕ ಅವ್ಯವಹಾರಗಳು ಸಹಜವಾಗಿ ಇಲ್ಲವಾಗುವವು. ಓರ್ವ ವ್ಯಕ್ತಿಯ ಹತ್ತಿರ ಆತನ ಅವಶ್ಯಕತೆಗಿಂತಲೂ ಅಧಿಕಾಧಿಕವಾಗಿ ಧನವು ಸಂಗ್ರಹವಾಗುತ್ತ ಹೋದರೆ ಸಮಾಜದಲ್ಲಿ ಆರ್ಥಿಕ ವಿಷಮತೆಯು ಬೃಹದಾಕಾರವಾಗಿ ಬೆಳೆದು ನಿಲ್ಲುವುದು. ಇದರಿಂದ ಅತ್ಯಧಿಕ ಧನಾಢ್ಯರಾದವರು ತಮ್ಮಲ್ಲಿರುವ ಧನವನ್ನು ದುರ್ವ್ಯವಹಾರಗಳಿಗೆ ಉಪಯೋಗಿಸತೊಡಗುವರಲ್ಲದೆ ಅತಿ ದರಿದ್ರರಾದವರು ಕಳ್ಳತನ ಮುಂತಾಗಿ ಕುಕೃತ್ಯಗಳಲ್ಲಿ ತೊಡಗುವರು. ಇದರಿಂದಾಗಿ ಸಮಾಜದೊಳಗೆ ಅಧರ್ಮ, ಅನೀತಿ ಅಶಾಂತಿಗಳು ತಲೆದೋರುವವು. ಈ ಎಲ್ಲ ಅನಿಷ್ಟತೆಯನ್ನು

ದೂರುಗೊಳಿಸುವಲ್ಲಿ ಸದಾಚಾರದಲ್ಲಿ ಹೇಳಲ್ಪಟ್ಟ ದಾನವು ಮಹತ್ತ್ವದ ಪಾತ್ರವನ್ನು ವಹಿಸುವುದು. ಅಂತೆಯೇ ಶಿವಾಗಮ ಹಾಗೂ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ದಾನದ ಮೂಲಕ ಸಮಾಜದಲ್ಲಿರುವ ಆರ್ಥಿಕ ಅಸಮಾನತೆಯನ್ನು ದೂರಿಕರಿಸಲು ಪ್ರಯತ್ನಿಸಲಾಗಿದೆ.

ಈ ಆದರ್ಶವನ್ನಿಟ್ಟುಕೊಂಡೇ ಶ್ರೀ ಬಸವಣ್ಣನವರು –

ಹೊನ್ನಿನೊಳಗೊಂದೊರೆಯ
ಸೀರೆಯೊಳಗೊಂದೆಳೆಯ
ಇಂದಿಗೆ ನಾಳಿಂಗೆ ಬೇಕೆಂದೆನಾದೊಡೆ
ನಿಮ್ಮಾಣೆ, ನಿಮ್ಮ ಪುರಾತನರಾಣೆ
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ
ಕೂಡಲಸಂಗಮದೇವಾ !

ಎಂಬ ತಮ್ಮ ಈ ವಚನದಲ್ಲಿ ಅಸಂಗ್ರಹಣೀಯ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಇದೂ ಅಲ್ಲದೆ ಅವರು ತಮ್ಮ ನಿತ್ಯ ಜೀವನದಲ್ಲಿ ಅನೇಕ ಜನ ಜಂಗಮರಿಗೆ ನಿತ್ಯ ದಾಸೋಹವನ್ನೇರ್ಪಡಿಸಿ ತಾವು ಸ್ವತಃ ದಾನ ಮಾಡುವುದರ ಜೊತೆಗೆ ಅನ್ಯರಲ್ಲಿಯೂ ಆ ಪ್ರವೃತ್ತಿಯು ಬೆಳೆಯುವಂತೆ ಮಾಡಿದ್ದರು.

ಈ ವಿಧವಾಗಿ ಸಮಾಜದಲ್ಲಿಯ ಆರ್ಥಿಕ ಅಸಮಾನತೆಯನ್ನು ದೂರಮಾಡಿ ಸರ್ವತ್ರ ಶಾಂತಿ ಸಮೃದ್ಧಿಗಳನ್ನು ಉಂಟುಮಾಡುವ ಈ ಸದಾಚಾರವು ಎಂಟು ವಿಧಗಳಾದ ಅವಾಂತರ ಶೀಲಗಳನ್ನು ಹೊಂದಿರುವುದಾಗಿದೆ. ಈ ವಿಚಾರವು ಚಂದ್ರಜ್ಞಾನಾಗಮದ ಕ್ರಿಯಾಪಾದದಲ್ಲಿ –

ಸದಾಚಾರೋಽಷ್ಟಶೀಲಾಢ್ಯಃ ಸೇವಿತಃ ಕಲ್ಪಪಾದಪಃ ।
ಸದ್ಭಕ್ತಾನಾಂ ಸುಮನಸಾಂ ದದಾತೀಷ್ಟಫಲಂ ಮಹತ್ ॥

(೯–೨೨)

ಎಂದು ಹೇಳಲಾಗಿದೆ. ಈ ಆಗಮೋಕ್ತಿಯಂತೆ ಗುರುವಿನಿಂದ ದೀಕ್ಷೆಯನ್ನು ಪಡೆದ ತನ್ನ ತನುವು ಅಪ್ರಾಕೃತವೆಂದು ತಿಳಿಯುವುದು 'ಅಂಕುರಶೀಲವು'; ಶಿವದೀಕ್ಷೆಯನ್ನು ಹೊಂದಿದ ಸತೀ–ಸುತರೊಂದಿಗೆ ಸಹವಾಸಿಸುವುದು 'ಉತ್ಪನ್ನಶೀಲವು'; ಭಸ್ಮ–ರುದ್ರಾಕ್ಷಾದಿಗಳನ್ನು ಶರೀರದ ಮೇಲೆ ತಪ್ಪದೇ ಧರಿಸಿಕೊಳ್ಳುವುದು 'ದ್ವಿದಳಶೀಲವು'; ಮನದಲ್ಲಿ ಶಿವಧರ್ಮ ಭಾವನೆಯಿಂದೊಡ ಗೂಡಿರುವುದು 'ಪ್ರವೃದ್ಧಶೀಲವು'; ಇಷ್ಟಲಿಂಗವನ್ನು ಪೂಜಿಸದೆ ಭೋಜನಾದಿಗಳನ್ನು ಮಾಡದಿರುವುದು 'ಸಪ್ರಕಾಂಡ ಶೀಲವು'; ಇಷ್ಟಲಿಂಗಕ್ಕೆ ಅರ್ಪಿಸದೇ ಇರುವ ಪದಾರ್ಥಗಳನ್ನು ಸ್ವೀಕರಿಸದಿರುವುದು

'ಸಶಾಖಾಶೀಲವು'; ಲಿಂಗಾರ್ಪಿತವಾದ ಪ್ರಸಾದವನ್ನು ಪರಿತ್ಯಜಿಸದೇ ಇರುವುದು 'ಸಪುಷ್ಪಶೀಲವು'; ಗುರು–ಲಿಂಗ–ಜಂಗಮರಲ್ಲಿ ಭೇದವನ್ನು ಮಾಡದಿರುವುದು 'ಸಫಲಶೀಲವು'; ಹೀಗೆ ಎಂಟುವಿಧ ಶೀಲಗಳನ್ನೊಳಗೊಂಡುದೇ ಸದಾಚಾರವು (ಚಂದ್ರಜ್ಞಾನಾಗಮ., ಕ್ರಿ.ಪಾ., ೯. ೨೩–೩೧)

ಇಂತಹ ಸದಾಚಾರವು ಒಂದು ವಿಧವಾದ ಈಶ್ವರನ ಪೂಜೆಯೆನಿಸಿ ಕೊಳ್ಳುವುದು. ಪರಮಾತ್ಮನಿಗೆ ಸದಾಚಾರವೇ ಪ್ರಿಯವೆಂಬ ವಿಷಯವು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ –

ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ ।
ಸದಾಚಾರಂ ವಿನಾ ತಸ್ಯ ಪ್ರಸಾದೋ ನೈವ ಜಾಯತೇ ॥

(ಸಿ.ಶಿ., ೧೬–೬೬)

ಎಂದು ಹೇಳಲಾಗಿದೆ. ಸದಾಚಾರವು ಶಿವನಿಗೆ ಪ್ರಿಯವಾಗಿರುವುದು. ಸದಾಚಾರಿಯಾದ ವ್ಯಕ್ತಿಯು ಲೋಕದಲ್ಲಿ ಗೌರವಾದರಗಳಿಗೆ ಪಾತ್ರನಾಗುವನು. ಸದಾಚಾರ ಸಂಪನ್ನರಲ್ಲದವರಿಗೆ ಶಿವಾನುಗ್ರಹವು ಎಂದೂ ದೊರೆಯದು. ಆದ್ದರಿಂದ ಪ್ರತಿಯೊಬ್ಬರೂ ಸದಾಚಾರಿಗಳಾಗಿರಬೇಕು.

೩) **ಶಿವಾಚಾರ :**

ಪಂಚಾಚಾರಗಳಲ್ಲಿ ಮೂರನೆಯದಾದ ಆಚಾರವೇ ಶಿವಾಚಾರವು. ಚಂದ್ರಜ್ಞಾನಾಗಮದಲ್ಲಿ ಇದರ ಲಕ್ಷಣ –

ಶಿವ ಏವ ಪರಂಬ್ರಹ್ಮ ಪಂಚಕೃತ್ಯಪರಾಯಣಃ ।
ನ ತತೋಽನ್ಯಾ ಗತಿರಿತಿ ಶಿವಾಚಾರೋ ಹಿ ಕೀರ್ತಿತಃ ॥

(ಕ್ರಿಯಾಪಾದ., ೯–೭)

ಎಂದು ಹೇಳಲ್ಪಟ್ಟಿದೆ. ತಾತ್ಪರ್ಯವೇನೆಂದರೆ, ಸೃಷ್ಟಿ, ಸ್ಥಿತಿ, ಲಯ, ನಿಗ್ರಹ ಮತ್ತು ಅನುಗ್ರಹಗಳೆಂಬ ಪಂಚಕೃತ್ಯಗಳನ್ನು ನಿರ್ವಹಿಸುವ ಶಿವನೇ ಸರ್ವೋತ್ಕೃಷ್ಟನು. ಅವನ ಹೊರತಾಗಿ ನನ್ನನ್ನು ರಕ್ಷಿಸುವವರು ಬೇರಾರೂ ಇಲ್ಲವೆಂಬ ಈ ಉತ್ಕೃಷ್ಟವಾದ ಭಾವನೆಯನ್ನೇ ಶಿವಾಚಾರವೆಂದು ಕರೆಯಲಾಗಿದೆ. ಅಂತೆಯೇ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ –

ಶಿವಭಕ್ತೋ ಮಹಾತೇಜಾಃ ಶಿವಭಕ್ತಿಪರಾಙ್ಮುಖಾನ್ ।
ನ ಸ್ಪೃಶೇನ್ನೈವ ವೀಕ್ಷೇತ ನ ತೈಃ ಸಃ ವಸೇತ್ ಕ್ವಚಿತ್ ॥

(ಸಿ.ಶಿ., ೯–೨೭)

ಈ ವಿಧವಾಗಿ ಶಿವಾಚಾರದ ಸ್ವರೂಪವು ಪ್ರತಿಪಾದಿಸಲ್ಪಟ್ಟದೆ. ಮಹಾ ತೇಜಸ್ವಿಯಾದ ಶಿವಭಕ್ತನು ಶಿವಭಕ್ತಿ ವಿಮುಖರಾದವರನ್ನು ಅದೆಂದೂ ಸ್ಪರ್ಶಿಸಕೂಡದು, ನೋಡಕೂಡದು ಮತ್ತು ಅವರೊಂದಿಗೆ ಸಹವಾಸವನ್ನೂ ಸಹ ಮಾಡಕೂಡ ದೆಂಬುದಾಗಿ ಉಪದೇಶಿಸುವ ಮೂಲಕ ಶಿವ ಇಲ್ಲವೆ ಶಿವಭಕ್ತರ ಶರಣಾಗತಿಯನ್ನು ಪ್ರತಿಪಾದಿಸಲಾಗಿದೆ. ಹೀಗೆ ನಿಷೇಧ ಮುಖೇನ ಶಿವಭಕ್ತಿಯು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಈ ತೆರನಾಗಿ ಅನನ್ಯವಾದ ಶಿವಶರಣಾಗತಿಯಿಂದ ಶಿವಭಕ್ತನ ಮನಸ್ಸಿನಲ್ಲಿ ಶಿವಭಾವನೆಯು ದೃಢಗೊಳ್ಳುವುದು. ಈ ಶಿವಭಾವನೆಯ ಪರಿಣಾಮವಾಗಿಯೇ ಸರ್ವತ್ರ ಶಿವದರ್ಶನವೇ ಉಂಟಾಗುವುದು. ಇಂತಹ ಮಂಗಲ ಮಯವಾದ ಶಿವದೃಷ್ಟಿಯಿಂದ ಭಕ್ತನಲ್ಲಿರುವ ಸಂಕುಚಿತ ಭಾವನೆಗಳೆಲ್ಲ ದೂರಾಗಿ ಸರ್ವವೆಲ್ಲವೂ ಶಿವಮಯವಾಗಿ ತೋರುವುದು. ಆಗ ಇವನು ಯಾರನ್ನೂ ದ್ವೇಷಿಸಲಾರ, ಯಾರ ಬಗ್ಗೆಯೂ ಹೇಸಿಗೊಳ್ಳಲಾರ. ಈ ಶಿವಾಚಾರದಿಂದ ವ್ಯಕ್ತಿಯ ವ್ಯಕ್ತಿತ್ವದ ವಿಕಾಸವಾಗುವುದಲ್ಲದೆ ಸಮಾಜದಲ್ಲಿ ಸಮಭಾವನೆಯು ಸರ್ವರಲ್ಲಿ ಒಡಮೂಡುವುದು.

ಇಂತಹ ಶಿವಾಚಾರವು ಭಾವಶುದ್ಧಿಯಿಲ್ಲದವರಿಗೆ ಸಂಭವಿಸುವುದಿಲ್ಲ. ಭಾವಶುದ್ಧವಾಗಬೇಕಾದರೆ ನಾವು ಸೇವಿಸುವ ಪದಾರ್ಥಗಳು ಮೊದಲು ಪರಿಶುದ್ಧವಾಗಿರಬೇಕು. ಅಂತೆಯೇ ಚಂದ್ರಜ್ಞಾನಾಗಮದ ಕ್ರಿಯಾಪಾದದಲ್ಲಿ ನಾವು ಉಪಭೋಗಿಸುವ ಹದಿನಾರು ವಿಧ ಪದಾರ್ಥಗಳ ಪರಿಶುದ್ಧಿಯು ಪ್ರತಿಪಾದಿಸಲ್ಪಟ್ಟಿದೆ. ಅದರ ಪ್ರಕಾರವಾಗಿ ಪೇಟೆಯಿಂದ ಕೊಂಡುತಂದ ಗಡ್ಡೆ–ಗೆಣಸು, ಕಾಯಿಪಲ್ಯ ಮತ್ತು ಹಣ್ಣು ಹಂಪಲಾದಿಗಳನ್ನು ಭಸ್ಮ ಪ್ರೋಕ್ಷಣದ ಮೂಲಕ ಶುದ್ಧಗೊಳಿಸಿ ಕೊಳ್ಳುವುದು ದ್ರವ್ಯಶುದ್ಧಿಯು. ತನ್ನ ಹೊಲ ಇಲ್ಲವೆ ಮನೆಯ ನಾಲ್ಕೂ ಮೂಲೆಗಳಲ್ಲಿ ನಂದಿ ಇಲ್ಲವೆ ಶಿವಲಿಂಗ ಲಾಂಛನವುಳ್ಳ ಶಿಲೆಗಳನ್ನು ಸ್ಥಾಪಿಸುವುದು ಕ್ಷೇತ್ರಶುದ್ಧಿಯು. ಮನೆಯ ಮಹಾದ್ವಾರದ ಚೌಕಟ್ಟಿನ ಮೇಲೆ ಶಿವಲಿಂಗವನ್ನು ಕೆತ್ತಿಸುವುದು ಗೃಹಶುದ್ಧಿಯು. ಉಣ್ಣುವ ಹಾಗು ಅಡುಗೆ ಮಾಡುವ ಪಾತ್ರೆಗಳ ಮೇಲೆ ಶಿವಲಿಂಗವನ್ನು ಕೆತ್ತಿಸುವುದು ಭಾಂಡಶುದ್ಧಿಯು. ಆಕಳು ಮುಂತಾದ ಪಶುಗಳಿಗೆ ತಿನ್ನಲು ಹಾಕಿದ ಹುಲ್ಲನ್ನು ಭಸ್ಮಪ್ರೋಕ್ಷಣದಿಂದ ಶುದ್ಧಗೊಳಿಸುವುದು ತೃಣಶುದ್ಧಿಯು. ಭಸ್ಮಪ್ರೋಕ್ಷಣದ ಮೂಲಕ ಶುದ್ಧಗೊಳಿಸಿದ ಕಟ್ಟಿಗೆಗಳನ್ನು ಉರುವಲಾಗಿ ಉಪಯೋಗಿಸುವುದು ಕಾಷ್ಟಶುದ್ಧಿಯು. ಶಿವಭಕ್ತರಿಂದ ತಯಾರಿಸಿದ ತಾಂಬೂಲವನ್ನು ಮಾತ್ರ ಸ್ವೀಕರಿಸುವುದು ವೀಟಿಕಾಶುದ್ಧಿಯು. ಶಿವದೀಕ್ಷಾ ಸಂಪನ್ನರಿಂದ ಮಾತ್ರ ತಯಾರಿಸಿದ ಭೋಜ್ಯ ಪದಾರ್ಥಗಳನ್ನು ಗ್ರಹಿಸುವುದು ಪಾಕಶುದ್ಧಿಯು. ಕೇವಲ ಆಕಳಿನ ಹಾಲು, ಮೊಸರು ಮತ್ತು ತುಪ್ಪವನ್ನು ಸೇವಿಸುವುದು ರಸಶುದ್ಧಿಯು.

ಕಾಮ್ಯಕರ್ಮಗಳನ್ನು ಬಿಟ್ಟು ನಿಷ್ಕಾಮ ಕರ್ಮಾಚರಣೆಯ ಮೂಲಕ ಅಂತಃಕರಣವನ್ನು ಪರಿಶುದ್ಧಮಾಡಿಕೊಂಡು ಜ್ಞಾನದ ಮೂಲಕ ಪುನರ್ಜನ್ಮದ ಸ್ಥಿತಿಯನ್ನು ಪಡೆಯುವುದೇ ಭವಶುದ್ಧಿಯು. ಸರ್ವಪ್ರಾಣಿಗಳಲ್ಲಿ ದಯಾಳು ಭಾವನೆಯನ್ನು ತಾಳುವುದು ಭೂತಶುದ್ಧಿಯು. ಎಲ್ಲ ಭಾವನೆಗಳನ್ನು ತ್ಯಜಿಸಿ ಸದಾ ಶಿವಭಾವನೆಯಿಂದೊಡಗೂಡಿರುವುದು ಭಾವಶುದ್ಧಿಯು. ಮಾರ್ಗದಲ್ಲಿ ತನ್ನಿಂದ ಯಾವುದೇ ಪ್ರಾಣಿಯ ಹಿಂಸೆಯಾಗದ ಹಾಗೆ ಸಾವಧಾನವಾಗಿ ಹೋಗುವುದು ಮಾರ್ಗಶುದ್ಧಿಯು. ಪ್ರಾತಃಕಾಲ ಮತ್ತು ಸಾಯಂಕಾಲದ ಸಂಧ್ಯಾವೇಳೆಯಲ್ಲಿ ಇಷ್ಟಲಿಂಗವನ್ನರ್ಚಿಸುವುದು ಕಾಲಶುದ್ಧಿಯು. ಇನ್ನು ಕುಳಿತಾಗ, ಮಲಗಿದಾಗ ವಾಹನಗಳಲ್ಲಿ ಹೋಗುವಾಗ ಯಾವಾಗಲೂ ಶಿವಭಕ್ತರ ಸಹವಾಸದಲ್ಲಿರುವುದು ಜನಶುದ್ಧಿಯು. ಹೀಗೆ ಹದಿನಾರು ವಿಧಗಳಾದ ಶುದ್ಧಾಚರಣೆಗಳನ್ನು ಆಚರಿಸುವದಕ್ಕೇನೇ ಶಿವಾಚಾರವೆಂದು (ಚಂದ್ರಜ್ಞಾನಾಗಮ., ಕ್ರಿ.ಪಾ., ೯. ೩೩–೪೯) ಕರೆಯಲಾಗಿದೆ. ಈ ಶಿವಾಚಾರವನ್ನು ನಿಷ್ಠೆಯಿಂದ ಪರಿಪಾಲಿಸಿದವರಿಗೆ ಶಿವಸಾಯುಜ್ಯವೇ ಪ್ರಾಪ್ತವಾಗುವುದು.

೪) ಗಣಾಚಾರ :

ಪಂಚಾಚಾರಗಳಲ್ಲಿ ನಾಲ್ಕನೆಯದಾದ ಆಚಾರವೇ ಗಣಾಚಾರವು ಶಿವಗಣರಿಂದ ಅರ್ಥಾತ್ ಶಿವಭಕ್ತರಿಂದ ಆಚರಿಸಲ್ಪಡುವ ಆಚಾರವೇ ಗಣಾಚಾರವು. ಇದರ ಸ್ವರೂಪವು ಚಂದ್ರಜ್ಞಾನಾಗಮದ ಕ್ರಿಯಾಪಾದದಲ್ಲಿ –

ಶಿವಸ್ಯ ಶಿವಭಕ್ತಸ್ಯ ಶಿವಧರ್ಮಾಧಿಕಸ್ಯ ಚ।
ನ ಶೃಣೋತಿ ಚ ಯೋ ನಿಂದಾಂ ಸ ಗಣಾಚಾರ ಉಚ್ಯತೇ ॥

(೯–೮)

ಎಂದು ಹೇಳಲಾಗಿದೆ. ತಾತ್ಪರ್ಯವೇನೆಂದರೆ ತನ್ನ ಇಷ್ಟದೇವರ ಬಗ್ಗೆ, ಗುರುವಿನ ಬಗ್ಗೆ, ಶಿವಭಕ್ತರ ಬಗ್ಗೆ, ಧರ್ಮ ಹಾಗೂ ಧರ್ಮ ಗ್ರಂಥಾದಿಗಳ ಬಗ್ಗೆ ಯಾರಾದರೂ ತಿರಸ್ಕರಿಸಿ ಮಾತನಾಡಿದರೆ ಅಥವಾ ನಿಂದಿಸಿದರೆ ಅದನ್ನು ಸಹಿಸದಿರುವಿಕೆಯೇ ಗಣಾಚಾರವು.

ಈ ಆಚಾರವನ್ನು ಆಚರಿಸುವ ವಿಧಾನವನ್ನು ಕುರಿತು ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀಸಿದ್ಧಾಂತಶಿಖಾಮಣಿಯಲ್ಲಿ –

ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾ ಶಪೇತ್ ।
ಸ್ಥಾನಂ ವಾ ತತ್ಪರಿತ್ಯಜ್ಯ ಗಚ್ಛೇದ್ಯದ್ಯಕ್ಷಮೋ ಭವೇತ್ ॥

ಯತ್ರ ಚಾಚಾರನಿಂದಾಽಸ್ತಿ ಕದಾಚಿತ್ತತ್ರ ನ ವ್ರಜೇತ್ ।
ಯದ್ಗೃಹೇ ಶಿವನಿಂದಾಽಸ್ತಿ ತದ್ಗೃಹಾಣಿ ಪರಿತ್ಯಜೇತ್ ॥

(ಸಿ.ಶಿ., ೯. ೩೬-೩೭)

ಎಂದು ಉಪದೇಶಿಸಿದ್ದಾರೆ. ಅಂದರೆ ಯಾರಾದರೂ ತನ್ನೆದುರಿನಲ್ಲಿ ತನ್ನ ಇಷ್ಟದೇವರಾದ ಶಿವನನ್ನು ನಿಂದಿಸುತ್ತಿದ್ದರೆ ಆ ನಿಂದೆಯನ್ನು ಕೇಳುತ್ತ ಸುಮ್ಮನಿರದೆ ಅದನ್ನು ಪ್ರತಿಭಟಿಸಿ, ಅವನನ್ನು ಮುಖಭಂಗಗೊಳಿಸಬೇಕು, ಇಲ್ಲವೆ ಸಂಹರಿಸಬೇಕು. ಹೀಗೆ ಮಾಡುವ ಸಾಮರ್ಥ್ಯವಿರದಿದ್ದರೆ ಆ ಸ್ಥಾನವನ್ನು ಬಿಟ್ಟು ಬಹುದೂರ ತೊಲಗಿಹೋಗಬೇಕು. ಆಚಾರವನ್ನು ನಿಂದಿಸುವವರ ಬಳಿಗೆ ಎಂದೂ ಹೋಗಬಾರದು. ಇನ್ನು ಯಾರ ಮನೆಯಲ್ಲಿ ಶಿವನಿಂದೆಯು ನಡೆಯುತ್ತದೆಯೋ ಅಂತಹ ಮನೆಗಳನ್ನು ಸಹ ಬಿಟ್ಟು ಬಿಡಬೇಕು.

ಹಿಂದೊಮ್ಮೆ ದಕ್ಷ ಪ್ರಜಾಪತಿಯು ಶಿವನನ್ನು ಅಪಮಾನಗೊಳಿಸುವುದಕ್ಕಾಗಿ ಬಹು ದೊಡ್ಡ ಯಾಗವನ್ನು ಏರ್ಪಡಿಸಿದಾಗ ಶಿವನ ಜಡೆಯಿಂದ ಆವಿರ್ಭವಿಸಿದ ವೀರಭದ್ರನು ದಕ್ಷನ ಆ ಕುಯಜ್ಞವನ್ನು ಧ್ವಂಸಗೊಳಿಸಿ ದಕ್ಷನ ಶಿರವನ್ನು ಕತ್ತರಿಸಿ ಆತನಿಗೆ ಕುರಿತಲೆಯನಿತ್ತು ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ಕೊಟ್ಟ ವೀರಭದ್ರನ ಆ ಆಚರಣೆಯು ಗಣಾಚಾರಕ್ಕೊಂದು ಉತ್ಕೃಷ್ಟ ಉದಾಹರಣೆಯಾಗಿದೆ. ಇಲ್ಲಿ ಸಂಹರಿಸಬೇಕು ಎಂಬ ಶಬ್ದದಿಂದ ಪ್ರಾಣಸಂಹಾರವನ್ನಷ್ಟೇ ಪ್ರಧಾನವಾಗಿ ತೆಗೆದುಕೊಳ್ಳದೆ ಬುದ್ಧಿಯ ಸಂಹಾರವೆಂತಲೂ ಅರ್ಥೈಸುವುದು ಹೆಚ್ಚು ಸೂಕ್ತವೆನಿಸುವುದು. ಮನುಷ್ಯನ ದುರ್ನಡತೆಗೆ ಅವನ ದುರ್ಬುದ್ಧಿಯೇ ಕಾರಣ ವಾಗಿರುವುದರಿಂದ ಅವನ ಬುದ್ಧಿಯನ್ನು ಪರಿವರ್ತಿಸಿದರೆ ದುಷ್ಟನೂ ಕೂಡಾ ಶಿಷ್ಟನಾಗಬಲ್ಲನು. ಇಂತಹ ಅನೇಕ ಘಟನೆಗಳು ನಮ್ಮ ದೇಶದ ಇತಿಹಾಸದಲ್ಲಿ ಘಟಿಸಿರುತ್ತವೆ. ಕೊಲೆಗಡುಕರು, ದರೋಡೆಕೋರರೂ, ಸಂಸ್ಕಾರಹೀನರೂ ಆದ ವಾಲ್ಮೀಕಿ, ಅಂಗುಲಿಮಾಲ ಮತ್ತು ಮಾತಂಗರು ಕ್ರಮವಾಗಿ ನಾರದ, ಬುದ್ಧ ಮತ್ತು ಸುಜ್ಞಾನದೇವರ ಸತ್ಸಂಗ ಮತ್ತು ಸದುಪದೇಶದಿಂದ ಶ್ರೇಷ್ಠವ್ಯಕ್ತಿಗಳಾಗಿ ಪರಿವರ್ತಿಸಲ್ಪಟ್ಟ ಉದಾಹರಣೆಗಳು ಜನಜನಿತವಾಗಿವೆ.

ಸಜ್ಜನರು ದುಷ್ಟವ್ಯಕ್ತಿಯನ್ನು ಸಂಹರಿಸುವುದಕ್ಕೆ ಪ್ರಾಧಾನ್ಯತೆಯನ್ನು ಕೊಡದೆ ಬುದ್ಧಿ ಪರಿವರ್ತನೆಗೆ ಹೆಚ್ಚಿನ ಮಹತ್ತ್ವವನ್ನು ಕೊಡುತ್ತಾರೆ. ವೀರಭದ್ರನು ದಕ್ಷನ ಶಿರವನ್ನು ಕತ್ತರಿಸಿ ಆತನನ್ನು ಕೊಂದು ಹಾಕಲಿಲ್ಲ. ಆದರೆ ಅವನಿಗೆ ಕುರಿದಲೆಯನಿತ್ತು ಪುನಃ ಜೀವದಾನ ಮಾಡಿದನು. ಇಲ್ಲಿ ನರದಲೆಯನ್ನು ಕತ್ತರಿಸಿ ಕುರಿದಲೆಯನಿತ್ತಿದ್ದು ಬುದ್ಧಿಪರಿವರ್ತನೆಯ ಸಂಕೇತವಾಗಿದೆ. ಈ ಗಣಾಚಾರದಲ್ಲಿ ಕಾಯಿಕ, ವಾಚಿಕ

ಮತ್ತು ಮಾನಸಿಕ ಶುದ್ಧಿಗೋಸ್ಕರ ಅರವತ್ನಾಲ್ಕು ಪ್ರಕಾರದ ಶೀಲಾಚರಣೆಗಳು ಪ್ರತಿಪಾದಿಸಲ್ಪಟ್ಟಿವೆ. ಈ ವಿಷಯದಲ್ಲಿ ಚಂದ್ರಜ್ಞಾನಾಗಮವು–

ಸರ್ವೋತ್ತಮೇ ಗಣಾಚಾರೇ ಸದ್ಯಃ ಸಿದ್ಧಿಕರೇ ಪರೇ ।
ಶೀಲಾನಿ ತು ಚತುಃಷಷ್ಠಿರ್ವರ್ತಂತೇ ತಾನಿ ಸಂಶೃಣು ॥

(ಕ್ರಿಯಾಪಾದ., ೯–೫೨)

ಎಂದು ಉಪದೇಶಿಸಿದೆ. ತಾತ್ಪರ್ಯವೇನೆಂದರೆ ಅರವತ್ನಾಲ್ಕು ಶೀಲಗಳನ್ನೊಳಗೊಂಡ ಈ ಗಣಾಚಾರವು ಎಲ್ಲ ಆಚಾರಗಳಲ್ಲಿ ಶ್ರೇಷ್ಠವಾದುದಾಗಿದೆ. ಇದರ ಆಚರಣೆಯಿಂದ ಸಕಲ ಅಭೀಷ್ಟಗಳು ಸಿದ್ಧಿಸುತ್ತವೆ. ಇಂತಹ ಈ ಆಚಾರದಲ್ಲಿ ಬರುವ ತ್ರಿಕರಣಶುದ್ಧಿಯ ಶೀಲಗಳ ಬಗ್ಗೆ ಒಂದಿಷ್ಟು ವಿಚಾರಿಸೋಣ –

ಸಪ್ತವಿಧವಾದ ವಾಚಿಕಶೀಲಗಳು :

ಸತ್ಯವನ್ನು ನುಡಿಯುವುದು, ಸತ್ಯವಾಗಿ ಪ್ರಿಯವಾಗಿ ಹಾಗೂ ಹಿತವಾಗಿ ನುಡಿಯುವುದು, ಪ್ರತಿದಿನ ವೇದಾಗಮಾದಿ ಶಾಸ್ತ್ರಗಳನ್ನು ಪಠಿಸುವುದು, ಶಿವ ಹಾಗೂ ಶಿವಭಕ್ತರ ಗುಣಗಾನವನ್ನು ಮಾಡುವುದು, ಅನ್ಯದೇವರ ಹಾಗೂ ಸಾಮಾನ್ಯ ಮನುಷ್ಯರನ್ನು ಸ್ತುತಿಸದಿರುವುದು, ಆತ್ಮಪ್ರಶಂಸೆಯನ್ನು ಮಾಡಿಕೊಳ್ಳದಿರುವುದು ಮತ್ತು ಪರನಿಂದೆಯನ್ನು ಮಾಡದಿರುವುದೇ ವಾಣಿಯ ಸಪ್ತಶೀಲಗಳು (ಚಂ. ಜ್ಞಾ. ಆಗಮ., ಕ್ರಿ.ಪಾ., ೯. ೫೪–೬೦)

ಹಸ್ತಗತ ಪಂಚಶೀಲಗಳು :

ಗುರು–ಲಿಂಗ–ಜಂಗಮರನ್ನು ನಮಸ್ಕರಿಸುವುದು, ತನ್ನ ಪೂಜಾ ಸಾಮಾಗ್ರಿಗಳನ್ನು ತಾನೇ ಸಂಗ್ರಹಿಸುವುದು, ರುದ್ರಾಕ್ಷ ಮಾಲೆಯಿಂದ ಮಹಾಮಂತ್ರವನ್ನು ಜಪಿಸುವುದು, ಪ್ರತಿದಿನ ಗುರು–ಲಿಂಗ–ಜಂಗಮರನ್ನು ಅರ್ಚಿಸುವುದು, ಗುರು–ಲಿಂಗ–ಜಂಗಮರಿಗೆ ಮತ್ತು ಧರ್ಮಕಾರ್ಯಕ್ಕೆ ಶಕ್ತ್ಯಾನುಸಾರವಾಗಿ ದಾನಗೈಯ್ಯುವುದು (ಚಂ.ಜ್ಞಾ.ಆ., ಕ್ರಿ.ಪಾ., ೯. ೬೧–೬೬) ಈ ಐದು ಹಸ್ತಸಂಬಂಧಿಯಾದ ಶೀಲಗಳಾಗಿರುತ್ತವೆ. ನಮ್ಮ ಹಸ್ತಗಳೇ ನಮ್ಮ ಭಾಗ್ಯವನ್ನು ಬರೆಯುವುವಾದ್ದರಿಂದ ಹಸ್ತಗಳಿಂದ ಸದಾ ಶ್ರೇಷ್ಠ ಕರ್ಮಗಳನ್ನು ಆಚರಿಸುತ್ತಿರಬೇಕು.

ಪಾದಗತ ಚತುರ್ವಿಧ ಶೀಲಗಳು :

ಗುರುಮಠಕ್ಕೆ ಮತ್ತು ಶಿವಯೋಗಿಗಳ ಸ್ಥಾನಕ್ಕೆ ಹೋಗುವುದು, ಗುರು ಹಾಗೂ ದೇವರಿಗೆ ಪ್ರದಕ್ಷಿಣೆಯನ್ನು ಹಾಕುವುದು, ಪೂಜಾ ಸಾಮಾಗ್ರಿಗಳನ್ನು ತರಲು ಸ್ವತಃ ಹೋಗುವುದು, ಇಷ್ಟಲಿಂಗ ಪೂಜೆ ಮತ್ತು ಗುರುಪಾದ ಪೂಜೆಯನ್ನು

ಮಾಡುವಾಗ ಸ್ಥಿರಾಸನವನ್ನು ಹಾಕಿಕೊಂಡು ಕುಳಿತುಕೊಳ್ಳುವುದು–ಹೀಗೆ ಈ ನಾಲ್ಕು ಶೀಲಗಳು ಪಾದಸಂಬಂಧಿಗಳಾಗಿರುತ್ತವೆ. (ಚಂ.ಜ್ಞಾ.ಆ., ಕ್ರಿ.ಪಾ., ೯. ೬೭–೭೧). ಈ ಪಾದಸಂಬಂಧಿಗಳಾದ ಶೀಲಗಳು ಮನುಷ್ಯನ ನಿಷಿದ್ಧಮಾರ್ಗದ ಗಮನವನ್ನು ನಿರೋಧಿಸುತ್ತವೆ. ಅಂತೆಯೇ ಬಸವಣ್ಣನವರು – "ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ" ಎಂದು ದೇವರನ್ನು ಪ್ರಾರ್ಥಿಸಿ ಈ ಪಾದಗತಶೀಲವನ್ನು ಪರಿಪಾಲಿಸಿದ್ದರೆಂಬುದು ತಿಳಿದುಬರುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಗುರು–ಹಿರಿಯರ ಪಾದಕ್ಕೆ ನಮಸ್ಕರಿಸುವ ಪರಿಪಾಠವುಂಟು. ಯಾರ ಪಾದಗಳು ಶಾಸ್ತ್ರವಿಹಿತಮಾರ್ಗದಲ್ಲಿ ಚರಿಸುತ್ತವೆಯೋ ಆ ಪಾದಗಳೇ ಪೂಜನೀಯ ವಾದವುಗಳು ಎಂಬುದು ಈ ಪರಿಪಾಠದ ಹಿನ್ನೆಲೆಯಾಗಿದೆ. ಪಾದವು ಆಚಾರದ ಪ್ರತೀಕವಾದ ಕಾರಣ ಪ್ರತಿಯೊಬ್ಬರು ಶೀಲಬಾಹಿರರಾಗದೆ, ಶಿಲವಂತರಾಗಿರ ಬೇಕೆಂಬುದೇ ಶಿವಾಗಮೋಕ್ತಿಯ ತಾತ್ಪರ್ಯವಾಗಿದೆ.

ತ್ವಕ್ ಸಂಬಂಧೀ ದ್ವಿವಿಧ ಶೀಲಗಳು :

ಪಂಚವಿಧ ಜ್ಞಾನೇಂದ್ರಿಯಗಳಲ್ಲಿ ತ್ವಗಿಂದ್ರಿಯವು ಒಂದಾಗಿದೆ. ತ್ವಕ್ ಎಂದರೆ ಚರ್ಮವೆಂದರ್ಥ. ಒಂದೊಂದು ಇಂದ್ರಿಯಗಳು ಒಂದೊಂದು ನಿರ್ದಿಷ್ಟ ಸ್ಥಾನದಲ್ಲಿದ್ದರೆ ತ್ವಗಿಂದ್ರಿಯವು ಸಂಪೂರ್ಣ ಶರೀರವನ್ನು ವ್ಯಾಪಿಸಿದುದಾಗಿದೆ. ಅಂತೆಯೇ ಇದೊಂದು ಪ್ರಬಲವಾದ ಜ್ಞಾನೇಂದ್ರಿಯವು. ಮೃದು, ಕಠಿಣ, ಶೀತ ಮತ್ತು ಉಷ್ಣ ಮೊದಲಾದ ಸ್ಪರ್ಶಗುಣವನ್ನರಿಯಲು ಈ ತ್ವಗಿಂದ್ರಿಯವು ಸಹಾಯಕ ವಾದುದಾಗಿದೆ. ಪ್ರಕೃತಿಪ್ರದತ್ತವಾದ ಈ ಇಂದ್ರಿಯದ ದುರುಪಯೋಗಪಡಿಸಿಕೊಂಡು ದುರ್ಗತಿಯನ್ನು ಪಡೆಯಬಾರದೆಂಬ ಉದ್ದೇಶದಿಂದ ಇಲ್ಲಿ ತ್ವಕ್ ಸಂಬಂಧಿಗಳಾದ ಶೀಲಗಳು ಹೇಳಲ್ಪಟ್ಟಿವೆ. ಇದರಲ್ಲಿ ಮೊದಲನೇ ಶೀಲವೆಂದರೆ ತನ್ನ ದೇಹದ ಮೇಲೆ ಇಷ್ಟಲಿಂಗವನ್ನು ಸದಾ ಧರಿಸಿಕೊಂಡು ಅದರ ಸ್ಪರ್ಶಸುಖವನ್ನು ಅನುಭವಿಸುವುದು. ಅದರಂತೆ ಇಷ್ಟಲಿಂಗ ಸ್ಪರ್ಶಜನ್ಯವಾದ ರೋಮಾಂಚನವನ್ನನು ಭವಿಸುವುದು. ಇದು ಎರಡನೇ ಶೀಲವು (ಚಂ.ಜ್ಞಾ, ಆ., ಕ್ರಿ.ಪಾ., ೯–೭೨). ಇವೆರಡೂ ತ್ವಕ್ ಸಂಬಂಧಿಗಳಾದ ಶೀಲಗಳು. ಕ್ಷಣಿಕವಾದ ವೈಷಯಿಕ ಸ್ಪರ್ಶಸುಖವನ್ನನುಭವಿಸಿ ಪುಳಕಿತಗೊಂಡು ಆನಂದಿಸುವ ಅಜ್ಞ ಜೀವಿಗಳಿಗೆ ಆ ಪರಾತ್ಪರ ವಸ್ತುವಿನ ಶಾಶ್ವತ ಸ್ಪರ್ಶಸುಖದ ಆನಂದವನ್ನು ತಿಳಿಯಪಡಿಸಲೋಸುಗ ಈ ಶೀಲಗಳು ಪ್ರತಿಪಾದಿಸಲ್ಪಟ್ಟಿವೆ.

ಚಕ್ಷು ಸಂಬಂಧೀ ದ್ವಿವಿಧ ಶೀಲಗಳು :

ಪಂಚ ಜ್ಞಾನೇಂದ್ರಿಯಗಳಲ್ಲಿ ಚಕ್ಷುರಿಂದ್ರಿಯವೂ ಒಂದಾಗಿದೆ. ಇದು ರೂಪ

ವಿಷಯವನ್ನು ಗ್ರಹಿಸುವುದು. ಈ ಇಂದ್ರಿಯವನ್ನು ರೂಪವಿಷಯವನ್ನನುಭವಿಸುವುದಕ್ಕಾಗಿ ಬಳಸುತ್ತಿರುವ ಭೋಗಿಗಳಿಗೆ ಯೋಗಮಾರ್ಗವನ್ನು ತಿಳಿಯಪಡಿಸಲೋಸುಗ ಈ ಶೀಲಗಳು ಉಪದೇಶಿಸಲ್ಪಟ್ಟಿವೆ. ಯೋಗಗಳಲ್ಲಿ ಶಿವಯೋಗವು ಶ್ರೇಷ್ಠವಾದುದು. ಅಂತೆಯೇ ತನ್ನ ವಾಮಹಸ್ತಪೀಠದಲ್ಲಿ ಇಷ್ಟಲಿಂಗವನ್ನಿರಿಸಿ ಅದನ್ನು ನಿರ್ನಿಮೇಷ ದೃಷ್ಟಿಯಿಂದ ನಿರೀಕ್ಷಿಸುವುದು ಮತ್ತು ಆ ನಿರೀಕ್ಷಣೆಯಿಂದ ಉದುರುವ ಆನಂದಭಾಷ್ಪಗಳನ್ನನುಭವಿಸುವುದು–ಇವೆರಡೂ ಚಕ್ಷು ಸಂಬಂಧಿಯಾದ ಶೀಲಗಳಾಗಿರುತ್ತವೆ. (ಚಂ.ಜ್ಞಾ.ಆ., ಕ್ರಿ.ಪಾ., ೯. ೭೪–೭೫) ಇಷ್ಟಲಿಂಗದ ನಿರೀಕ್ಷಣೆ ಹಾಗೂ ಆನಂದಾಶ್ರುಗಳಪಾತದಿಂದ ಚಕ್ಷುರಿಂದ್ರಿಯವು ಪರಿಶುದ್ಧವಾಗುವುದು.

ಜಿಹ್ವಾ ಸಂಬಂಧೀ ಶೀಲವು :

ರಸವನ್ನು ಗ್ರಹಿಸುವ ಜ್ಞಾನೇಂದ್ರಿಯವೇ ರಸನೆಯು. ಇದಕ್ಕೇನೇ ಜಿಹ್ವೆಯೆಂದು ಕರೆಯುತ್ತಾರೆ. ಶಿವಾರ್ಪಿತವಾದ ಪ್ರಸಾದರಸವನ್ನು ಆಸ್ವಾದಿಸುವುದೇ ಜಿಹ್ವಾಶೀಲವು (ಚಂ. ಜ್ಞಾ.ಆ., ಕ್ರಿ.ಪಾ., ೯–೭೮). ಗಣಾಚಾರಿಯಾದವನು ಜಿಹ್ವಾಲೋಲುಪನಾಗದೇ ಪ್ರಸಾದಭೋಗಿಯಾಗಿರಬೇಕೆಂಬುದೇ ಈ ಶೀಲದ ತಾತ್ಪರ್ಯವು. ಪ್ರಸಾದ ಸೇವನೆಯಿಂದ ಮನಸ್ಸು ಪ್ರಸನ್ನವಾಗುವುದು. ಹೀಗೆ ಈ ಶೀಲವು ಮನಶ್ಶುದ್ಧಿಗೆ ಕಾರಣವಾಗಿರುತ್ತದೆ.

ಘ್ರಾಣ ಸಂಬಂಧೀ ಶೀಲವು :

ಗಂಧಗ್ರಾಹಕವಾದ ಜ್ಞಾನೇಂದ್ರಿಯದಿಂದ ಶಿವನಿರ್ಮಾಲ್ಯಗಳಾದ ಗಂಧಪುಷ್ಪಾದಿಗಳನ್ನು ಮೂಸಿಸಿ ಗಂಧಪ್ರಸಾದವನ್ನು ಸ್ವೀಕರಿಸುವುದೇ ಘ್ರಾಣ ಸಂಬಂಧಿಯಾದ ಶೀಲವು, (ಚಂ.ಜ್ಞಾ.ಆ., ಕ್ರಿ.ಪಾ., ೯–೭೯). ಶಿವಭಕ್ತನಾದವನು ಸುಗಂಧ ಪದಾರ್ಥಗಳನ್ನು ತಾನು ಆಘ್ರಾಣಿಸುವ ಪೂರ್ವದಲ್ಲಿ ಅದನ್ನು ಲಿಂಗಾರ್ಪಿತವ ಮಾಡಿ ಪ್ರಸಾದರೂಪವನ್ನಾಗಿಸಿಕೊಳ್ಳುವ ವಿಧಾನವು ಈ ಶೀಲದಲ್ಲಿ ಅಡಕವಾಗಿದೆ.

ಶ್ರೋತ್ರ ಸಂಬಂಧವಾದ ಶೀಲಗಳು :

ಶಬ್ದವನ್ನು ಗ್ರಹಿಸುವ ಜ್ಞಾನೇಂದ್ರಿಯವೇ ಶ್ರೋತ್ರವು. ಈ ಶ್ರೋತ್ರದಿಂದ ಗುರುವಿನ, ಶಿವನ ಹಾಗೂ ಶಿವಭಕ್ತರ ಸ್ತುತಿ, ಸ್ತೋತ್ರಾದಿಗಳನ್ನು ಆಲಿಸುವುದು ಮತ್ತು ಗುರುವಿನ ಶಿವನ ಹಾಗೂ ಶಿವಭಕ್ತರ ನಿಂದೆಯನ್ನು ಕೇಳದಿರುವುದು ಇವೆರಡು ಶ್ರೋತ್ರಸಂಬಂಧಿಯಾದ ಶೀಲಗಳೆಂದು ಕರೆಯಲ್ಪಡುತ್ತವೆ. (ಚಂ.ಜ್ಞಾ.ಆ., ಕ್ರಿ.ಪಾ., ೯. ೮೦–೮೧). ನಾವು ಎಂಥ ಶಬ್ದವನ್ನು ಆಲಿಸುತ್ತೇವೆಯೋ ಅಂತಹ

ವಿಚಾರಗಳೇ ಮನಸ್ಸಿನಲ್ಲಿ ತಲೆದೋರುತ್ತವೆ. ವಿಚಾರಗಳು ಕೆಟ್ಟರೆ ಕೃತಿಯೂ ಸಹ ಕೆಡುವುದು. ಹೀಗೆ ನಾವು ಕೇಳಿದ ಶಬ್ದಗಳಿಂದಲೇ ನಮ್ಮ ಕ್ರಿಯಾಶಕ್ತಿಯು ಅಭಿವ್ಯಕ್ತವಾಗುವುದಾದ್ದರಿಂದ ಸದಾ ಒಳ್ಳೆಯ ಶಬ್ದಗಳನ್ನೇ ಆಲಿಸುತ್ತಿರಬೇಕು.

ಪಂಚವಿಧಗಳಾದ ಕಾಯಶೋಧನೆಯ ಶೀಲಗಳು :

ಅಶುದ್ಧವಾದ ಕಾಯವನ್ನು ಶುದ್ಧಗೊಳಿಸುವ ಶೀಲಗಳೇ ಕಾಯಶೋಧನೆಯ ಶೀಲಗಳು. ಅವು ಯಾವುವೆಂದರೆ, ಗುರು–ಲಿಂಗ–ಜಂಗಮರಿಗೆ ಅರ್ಪಿಸಿದ ಪ್ರಸಾದವನ್ನು ಸೇವಿಸುವುದು; ಶಾಸ್ತ್ರನಿಷಿದ್ಧ ವಿಷಯಗಳತ್ತ ಇಂದ್ರಿಯಗಳು ಹೋಗದಂತೆ ನಿಗ್ರಹಿಸುವುದು; ಅಸ್ಪೃಶ್ಯವಾದ ವಸ್ತು ಇಲ್ಲವೆ ವ್ಯಕ್ತಿಯ ಸ್ಪರ್ಶವಾದಾಗ ಜಲಸ್ನಾನ ಇಲ್ಲವೆ ಭಸ್ಮಸ್ನಾನದಿಂದ ಶರೀರವನ್ನು ಶುಚಿಗೊಳಿಸಿಕೊಳ್ಳುವುದು; ಕೂಡ್ರುವಾಗ, ಮಲಗುವಾಗ, ಪ್ರಯಾಣಮಾಡುವಾಗ, ಸಭೆ ಸಮಾರಂಭಗಳಲ್ಲಿ ಭಾಗವಹಿಸುವಾಗ ಭವಿಗಳ ಸಂಬಂಧವಾಗದಂತೆ ಎಚ್ಚರಿಕೆ ವಹಿಸುವುದು ಮತ್ತು ದೇಹದ ಮೇಲೆ ಸದಾ ಇಷ್ಟಲಿಂಗ, ಭಸ್ಮ ಮತ್ತು ರುದ್ರಾಕ್ಷಾದಿಗಳನ್ನು ಧರಿಸಿಕೊಂಡಿರುವುದು – ಈ ಐದು ವಿಧವಾದ ಆಚರಣೆಗಳಿಂದ ಶರೀರವು ಪರಿಶುದ್ಧವಾಗುವುದು. ಅಂತೆಯೇ ಇವುಗಳಿಗೆ ಕಾಯಶೋಧನೆಯ ಶೀಲಗಳೆಂದು ಕರೆಯಲಾಗಿದೆ (ಚಂ.ಜ್ಞಾ.ಆ., ಕ್ರಿ.ಪಾ., ೯. ೮೨–೮೭). ಶರೀರವು ಸ್ವಾಭಾವಿಕವಾಗಿ ಅಶುದ್ಧವಾದುದೇ ಆಗಿರುತ್ತದೆ. ಅಂತೆಯೇ ಶಿವಾಗಮಗಳು ಇದನ್ನು ಸದಾ ಶುಚಿಯಾಗಿಡುವುದಕ್ಕಾಗಿ ಈ ಶೀಲಗಳನ್ನು ಪ್ರತಿಪಾದಿಸಿವೆ. ನಿಷಿದ್ಧ ವಿಷಯಗಳತ್ತ ಇಂದ್ರಿಯಗಳು ಹೋಗದಂತೆ ನಿಗ್ರಹಿಸುವುದು ಸ್ವಪ್ರಯತ್ನದಿಂದ ಸಾಧ್ಯವಾಗದೇಯಿದ್ದಾಗ ಶಿವನಿಗೆ ಶರಣಾಗತನಾಗಿ ಅವನ ಅನುಗ್ರಹ ದಿಂದ ಆ ನಿಗ್ರಹವನ್ನು ಪಡೆಯಲು ಪ್ರಯತ್ನಿಸಬೇಕು. ಇಂಥದೊಂದು ವಿಚಾರವನ್ನು ಶ್ರೀ ಬಸವಣ್ಣನವರು –

> **ವಿಷಯವೆಂಬ ಹಸುರನೆನ್ನ ಮುಂದೆ ತಂದು ।**
> **ಪಸರಿಸದಿರಯ್ಯಾ !**
> **ಪಶುವೇನು ಬಲ್ಲುದು ಹಸುರೆಂದೆಳಸುವುದು**
> **ವಿಷಯ ರಹಿತನ ಮಾಡಿ ಕರುಣಿಸಿ ಕಾಪಾಡು**
> **ಕೂಡಲಸಂಗಮದೇವಾ**

ಈ ತಮ್ಮ ವಚನದಲ್ಲಿ ಅಭಿವ್ಯಕ್ತ ಮಾಡಿದ್ದನ್ನು ಕಾಣಬಹುದು. ಈ ಪೂರ್ವದಲ್ಲಿ ಆಗಮೋಕ್ತಗಳಾದ ಲಿಂಗ, ಭಸ್ಮ ಮತ್ತು ರುದ್ರಾಕ್ಷಿಗಳೆಂಬ ಶಿವಲಾಂಛನಗಳು ಮನುಷ್ಯನ ಸ್ವೇಚ್ಛಾಪ್ರವೃತ್ತಿಯನ್ನು ನಿಯಂತ್ರಿಸುವಲ್ಲಿ ಸಹಾಯಕಗಳಾಗಿರುತ್ತವೆ. ಆದ್ದರಿಂದ ಪ್ರತಿಯೊಬ್ಬರು ಈ ಶಿವಲಾಂಛನಗಳನ್ನು ದೇಹಗಳ ಮೇಲೆ ಧರಿಸಿಕೊಂಡಿರಬೇಕು.

ಮೂವತ್ತೈದು ವಿಧಗಳಾದ ಮಾನಸಿಕ ಶೀಲಗಳು :

ಗಣಾಚಾರದಲ್ಲಿ ಬರುವ ಒಟ್ಟು ಅರವತ್ನಾಲ್ಕು ಶೀಲಗಳಲ್ಲಿ ವಾಕ್, ಪಾಣಿ, ಪಾದ, ತ್ವಕ್, ಜಿಹ್ವಾ, ಘ್ರಾಣ, ಶ್ರೋತ್ರ ಮತ್ತು ಕಾಯ ಸಂಬಂಧಿಗಳಾದ ಇಪ್ಪತ್ತೊಂಭತ್ತು ಶೀಲಗಳ ಬಗ್ಗೆ ತಿಳಿದುಕೊಳ್ಳಲಾಗಿದ್ದು ಇನ್ನು ಮುಂದೆ ಮನಸ್ಸಿಗೆ ಸಂಬಂಧಪಟ್ಟ ಮೂವ್ವತ್ತೈದು ಶಿಲಗಳ ಬಗ್ಗೆ ವಿವೇಚಿಸಲಾಗುವುದು. ನಿಷಿದ್ಧಭೋಗ ವಿಷಯದ ಬಗ್ಗೆ ಸಂಕಲ್ಪವನ್ನು ಮಾಡದಿರುವುದು; ಶಬ್ದಾದಿ ವಿಷಯಗಳಲ್ಲಿ ಕಾಮವನ್ನು ತ್ಯಜಿಸಿ ಭಕ್ತಿಯಲ್ಲಿ ಕಾಮನೆಯನ್ನಿರಿಸುವುದು; ವೈರಿಗಳಲ್ಲಿ ಕ್ರೋಧವನ್ನು ತಾಳದೆ ಅಧರ್ಮಾಚರಣೆಯ ಬಗ್ಗೆ ಕ್ರೋಧ ತಾಳುವುದು; ಧನಾದಿಗಳಲ್ಲಿ ಲೋಭಿಯಾಗಿರದೆ ಶಿವಾರಾಧನೆಯಲ್ಲಿ ಲೋಭಿಯಾಗಿರುವುದು; ಸತಿ–ಸುತಾದಿಗಳಲ್ಲಿ ಮೋಹವನ್ನಿರಿಸದೆ ಶಿವಭಕ್ತರಲ್ಲಿ ಮೋಹಿಯಾಗಿರುವುದು; ಜನಗಳಲ್ಲಿ ಮಾತ್ಸರ್ಯವನ್ನು ಹೊಂದದೆ ತನ್ನ ಇಂದ್ರಿಯಗಳ ಪ್ರವೃತ್ತಿಯ ಬಗ್ಗೆ ಮತ್ಸರಿಯಾಗಿರುವುದು, ಅಂದರೆ ಇಂದ್ರಿಯಗಳ ವಿಷಯಾಭಿಮುಖ ಪ್ರವೃತ್ತಿಯನ್ನು ಸಹಿಸದಿರುವುದು; ಧರ್ಮಾಚರಣೆಯಲ್ಲಿ ಗರ್ವವನ್ನು ತಾಳದೆ ಮಾಯೆಯನ್ನು ಗೆಲ್ಲುವೆನೆಂಬ ವಿಷಯದಲ್ಲಿ ಗರ್ವತಾಳಿರುವುದು; ಗುರು–ಜಂಗಮರ ಗುಣಾವಗುಣಗಳ ವಿಮರ್ಶೆಯನ್ನು ಮಾಡದಿರುವುದು; ಸಕಲ ಪ್ರಾಣಿಗಳ ದುಃಖವನ್ನು ಕಂಡಾಗ ದಯಾಗುಣವನ್ನು ತಾಳುವುದು; ಮಾತಿನಲ್ಲಿ ಮತ್ತು ಕೃತಿಯಲ್ಲಿ ನಿರ್ವಂಚನೆಯನ್ನು ತಾಳಿರುವುದು; ಶತ್ರು ಹಾಗೂ ಪುತ್ರರಲ್ಲಿ ವೈಷಮ್ಯ ಭಾವನೆಯನ್ನು ಬಿಟ್ಟಿರುವುದು; ಗುರುವಿನಿಂದ ಉಪದೇಶಿಸಲ್ಪಟ್ಟ ನಿಗಮಾಗಮಗಳ ವಚನಗಳಲ್ಲಿ ವಿಶ್ವಾಸವನ್ನು ತಾಳಿರುವುದು.

ಅತಿಕಠಿಣವಾದ ವಿಪತ್ತು ಬಂದೊದಗಿದಾಗಲು ಧರ್ಮಮಾರ್ಗವನ್ನು ಬಿಡದಿರುವ ಧೈರ್ಯವುಳ್ಳವನಾಗಿರುವುದು; ತನಗೆ ಅಪಕಾರವನ್ನುಂಟು ಮಾಡಿದ ವೈರಿಗಳನ್ನು ದೂಷಿಸದೇ ಅವರ ಬಗ್ಗೆ ಕ್ಷಮೆಯನ್ನು ತಾಳುವುದು; ಮನಸ್ಸಿನಲ್ಲಿ ಹುದುಗಿಕೊಂಡಿರುವ ವೈಷಯಿಕ ಭೋಗಾಸಕ್ತಿಯನ್ನು ಬಿಡುವುದು; ಕೃತಿ ಮತ್ತು ಮಾತುಗಳಲ್ಲಿ ಪ್ರಮಾದವನ್ನು ಮಾಡದಿರುವುದು; ನಿಷಿದ್ಧ ವಸ್ತುಗಳನ್ನು ಪಡೆಯಬೇಕೆಂಬ ಸಂಕಲ್ಪವನ್ನೂ ಮಾಡದಿರುವುದು; ಪರದ್ರವ್ಯವನ್ನು ಅಪಹರಿಸಬಾರದೆಂಬ ಆಸ್ತೇಯ ಭಾವನೆಯನ್ನು ತಾಳುವುದು; ತನಗೆ ದೊರೆಯದ ವಸ್ತುವಿನ ವಿಷಯದಲ್ಲಿ ವ್ಯಸನವಿಲ್ಲದಿರುವುದು; ಅರ್ಥಾತ್ ಸದಾ ಸಂತುಷ್ಟನಾಗಿರುವುದು; ಶಿವನ ನಾಮರೂಪಾದಿಗಳನ್ನು ಸದಾ ಚಿಂತಿಸುತ್ತ ಇರುವುದು; ಶಿವನ ನಾಮ ಗುಣಗಳನ್ನು ಸದಾ ಸ್ಮರಿಸುತ್ತ ಇರುವುದು; ಯಾವಾಗಲೂ ಶಿವನ ಪಾದಸೇವನೆಯ ಭಾವನೆಯನ್ನು ತಾಳಿಕೊಂಡಿರುವುದು; ಮನೋಮಯ ಸಾಮಗ್ರಿಗಳಿಂದ ಸದಾ ಶಿವನ ಮಾನಸಿಕ ಪೂಜೆಯನ್ನು ಮಾಡುತ್ತಿರುವುದು;

ಶಿವನ ಚರಣಗಳಿಗೆ ನಿತ್ಯವೂ ಮಾನಸಿಕವಾಗಿ ವಂದಿಸುವುದು; ಸದಾ ತನ್ನನ್ನು ಶಿವನ ಕಿಂಕರನೆಂದು ತಿಳಿದುಕೊಂಡಿರುವುದು; ಅನಂತಕಲ್ಯಾಣಕಾರಿಯಾದ ಶಿವನ ಬಗ್ಗೆ ಸಖ್ಯಭಾವನೆಯನ್ನು ತಾಳುವುದು; ತನ್ನ ಬಂಧ–ಮೋಕ್ಷಗಳ ಎಲ್ಲ ಹೊಣೆಯನ್ನು ಶಿವನಿಗೆ ಸಮರ್ಪಿಸಿ ಆತ್ಮಾರ್ಪಣಭಾವವನ್ನು ತಾಳುವುದು.

ಪಂಚಾಕ್ಷರ ಮಹಾಮಂತ್ರವನ್ನು ಸದಾ ಮನಸ್ಸಿನಲ್ಲಿ ಜಪಿಸುವುದು; ಶಿವನ ದಿವ್ಯಸ್ವರೂಪವನ್ನು ಮನಸ್ಸಿನಲ್ಲಿ ಸದಾ ಧ್ಯಾನಿಸುವುದು; ತೈಲಧಾರೆಯಂತೆ ಎಡಬಿಡದೆ ಶಿವಸ್ಮರಣರೂಪವಾದ ಧಾರಣೆಯನ್ನು ಹೊಂದುವುದು; ಗಾಳಿ ಸೋಂಕದ ದೀಪದಂತೆ ಸದಾಶಿವಧ್ಯಾನದಲ್ಲಿಯೇ ಮನಸ್ಸನ್ನು ಸ್ಥಿರಗೊಳಿಸುವುದು; ಶಿವನನ್ನು ತನ್ನ ಆತ್ಮಸ್ವರೂಪವನ್ನಾಗಿ ಅನುಸಂಧಾನಿಸುವುದು; ಶಿವನು ಸರ್ವವ್ಯಾಪಕನೆಂದು ಪರಿಭಾವಿಸುವುದು ಮತ್ತು ಅನಂತರೂಪನಾದ ಶಿವನನ್ನು ತನ್ನ ನಿಜರೂಪವನ್ನಾಗಿ ಭಾವಿಸುವುದು–ಇವೇ ಮೂವತ್ತೈದು ವಿಧಗಳಾದ ಮಾನಸಿಕ ಶೀಲಗಳೆಂದು ಚಂದ್ರಜ್ಞಾನಾಗಮದ ಕ್ರಿಯಾಪಾದದಲ್ಲಿ (೯. ೮೮–೧೨೩) ಪ್ರತಿಪಾದಿಸಲಾಗಿದೆ. ಹೀಗೆ ಒಟ್ಟು ಅರವತ್ನಾಲ್ಕು ಶೀಲಗಳನ್ನೊಳಗೊಂಡ ಆಚಾರವೇ ಗಣಾಚಾರವೆಂದು ಕರೆಯಲ್ಪಡುತ್ತದೆ. ಇದನ್ನು ನಿಷ್ಠೆಯಿಂದ ಆಚರಿಸಿದವರಿಗೆ ಶಿವಸಾಯುಜ್ಯವೇ ಪ್ರಾಪ್ತವಾಗುವುದೆಂದು ಶಿವಾಗಮವು ಸಾರಿ ಹೇಳಿರುತ್ತದೆ.

ಇಲ್ಲಿಯವರೆಗೆ ಹೇಳಲ್ಪಟ್ಟ ಸದಾಚಾರದಲ್ಲಿ ಎಂಟು ಶೀಲಗಳು, ಶಿವಾಚಾರದಲ್ಲಿ ಹದಿನಾರು ಶೀಲಗಳು ಮತ್ತು ಗಣಾಚಾರದಲ್ಲಿ ಅರವತ್ನಾಲ್ಕು ಶೀಲಗಳು ಪ್ರತಿಪಾದಿಸಲ್ಪಟ್ಟಿವೆ. ಇಲ್ಲಿ ಶೀಲವೆಂದರೆ ಶಿವತತ್ತ್ವವನ್ನರಿಯುವ ಜಿಜ್ಞಾಸಾ ಭಾವನೆಯೆಂದರ್ಥ. ಅಂತೆಯೇ ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಶೀಲವನ್ನು ಕುರಿತು–

ಜಿಜ್ಞಾಸಾ ಶಿವತತ್ತ್ವಸ್ಯ ಶೀಲಮಿತ್ಯುಚ್ಯತೇ ಬುಧೈಃ ।
ನಿರ್ದೈಶ್ಯ ಯೋಗಾದಾರ್ಯಾಣಾಂ ತದ್ವಾನ್ ಶೀಲೀತಿ ಕಥ್ಯತೇ ॥

ಪ್ರಪನ್ನಾರ್ತಿ ಹರೇ ದೇವೇ ಪರಮಾತ್ಮನಿ ಶಂಕರೇ ।
ಭಾವಸ್ಯ ಸ್ಥಿರತಾಯೋಗಃ ಶೀಲಮಿತ್ಯುಚ್ಯತೇ ಬುಧೈಃ ॥

ಶೀಲಂ ಶಿವೈಕವಿಜ್ಞಾನಂ ಶಿವಧ್ಯಾನೈಕತಾನತಾ ।
ಶಿವಪ್ರಾಪ್ತಿಸಮುತ್ಕಂಠಾ ತದ್‌ಯೋಗೀ ಶೀಲವಾನ್ ಸ್ಮೃತಃ ॥

ಬಹುನಾತ್ರ ಕಿಮುಕ್ತೇನ ಶಿವಜ್ಞಾನೈಕನಿಷ್ಠತಾ ।
ಶೀಲಮಿತ್ಯುಚ್ಯತೇ ಸದ್ಭಿಃ ಶೀಲವಾಂಸ್ತತ್ಪರೋ ಮತಃ ॥

(ಸಿ.ಶಿ., ೧೩. ೩೦–೩೩, ೩೬)

ಎಂದು ಹೇಳಲಾಗಿದೆ. ತಾತ್ಪರ್ಯವೇನೆಂದರೆ, ಶಿವತತ್ತ್ವವನ್ನು ತಿಳಿದುಕೊಳ್ಳ ಬೇಕೆಂಬ ಉತ್ಕಟವಾದ ಬಯಕೆಗೆ ಶೀಲವೆಂದು ಕರೆಯುತ್ತಾರೆ. ಇದೂ ಅಲ್ಲದೆ ಆತ್ಮರಕ್ಷಕನಾದ ಶಿವನಲ್ಲಿ ಸ್ಥಿರವಾದ ಭಾವನೆಯನ್ನು ತಾಳುವುದು; ಶಿವಧ್ಯಾನದಲ್ಲಿ ಏಕನಿಷ್ಠತೆಯನ್ನು ಹೊಂದುವುದು; ಶಿವನೋರ್ವನನ್ನೇ ತಿಳಿದುಕೊಳ್ಳಬೇಕೆಂಬ ಭಾವನೆಯು ಮತ್ತು ಶಿವನನ್ನು ಪ್ರಾಪ್ತಿಮಾಡಿಕೊಳ್ಳಬೇಕೆಂಬ ಉತ್ಕಟವಾದ ಬಯಕೆಯು, ಇವೆಲ್ಲವುಗಳು ಶೀಲಗಳೆಂದೇ ಕರೆಯಿಸಿಕೊಳ್ಳುತ್ತವೆ. ಪತಿವ್ರತೆಯಾದ ಹೆಣ್ಣುಮಗಳು ಪತಿ ಸೇವೆಯನ್ನೇ ಮಾಡುವಂತೆ ಈ ಶೀಲವುಳ್ಳ ಶಿವಭಕ್ತನು ತಾನು ಏನನ್ನೇ ಮಾಡಿದರೂ ಶಿವನಿಗಾಗಿಯೇ ಮಾಡುತ್ತಿರುತ್ತಾನೆ. ಇಂತಹ ಶಿವನಲ್ಲಿಯ ಏಕನಿಷ್ಠತೆಯೇ ಶೀಲವೆಂಬುದಾಗಿ ತಿಳಿದುಕೊಳ್ಳಬೇಕು. ಶಿವಾಗಮಗಳಲ್ಲಿ ಶೀಲಗಳ ಪ್ರಕಾರ ಹಾಗೂ ಅವುಗಳ ಸ್ವರೂಪವನ್ನು ವಿಸ್ತೃತವಾಗಿ ವಿವರಿಸಿದ್ದನ್ನು ನೋಡಿದ್ದೇವೆ. ಶ್ರೀಸಿದ್ಧಾಂತಶಿಖಾಮಣಿಯಲ್ಲಿಯೂ ಸಹ ಆ ಎಲ್ಲ ಶೀಲಗಳ ಸಾರವನ್ನು ಕ್ರೋಢೀಕರಿಸಿ ಸಾರರೂಪವಾಗಿ ಪ್ರತಿಪಾದಿಸಲಾಗಿದೆ.

ಇನ್ನು ಹನ್ನೆರಡನೇ ಶತಮಾನದ ಶರಣರೂ ಸಹ ತಮ್ಮ ವಚನಸಾಹಿತ್ಯದಲ್ಲಿ ಶೀಲದ ಬಗ್ಗೆ –

ಸತ್ಯದಲ್ಲಿ ನಡೆವುದು ಶೀಲ; ಸತ್ಯದಲ್ಲಿ ನುಡಿವುದು ಶೀಲ
ಸತ್ಯಸದಾಚಾರದಲ್ಲಿ ವರ್ತಿಸಿ ನಿತ್ಯವನರಿವುದೇ ಶೀಲಕಾಣಿಭೋ !
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ !

ಶೀಲ ಶೀಲವೆಂದು ಗರ್ವಿಸಿ ನುಡಿಯುತಿಪ್ಪಿರಿ
ಶೀಲವಾವುದೆಂದರಿಯಿರಿ ಕೇಳಿರಣ್ಣಾ !
ಇದ್ದುದ ವಂಚನೆ ಮಾಡದಿರ್ಪುದೇ ಶೀಲ;
ಇಲ್ಲದುದಕ್ಕೆ ಕದನ ಮಾಡದಿರ್ಪುದೇ ಶೀಲ;
ಪರಧನ – ಪರಸ್ತ್ರೀಯರ ಮುಟ್ಟದಿರ್ಪುದೇ ಶೀಲ;
ಪರದೇವ ಪರಸಮಯಕ್ಕೆ ಅಳುಪದಿರ್ಪುದೇ ಶೀಲ;
ಗುರುನಿಂದೆ–ಹರ ನಿಂದೆ–ಚರನಿಂದೆ ಕೇಳದಿರ್ಪುದೇ ಶೀಲ
ನಮ್ಮ ಕೂಡಲ ಚೆನ್ನಸಂಗನ ಶರಣರ ಬರವಿಂಗೆ
ಮೈಯ್ಯಾಂತುದೇ ಅಚ್ಚಶೀಲ

ಈ ವಿಧವಾಗಿ ಹೇಳಿರುವುದನ್ನೂ ಸಹ ಕಾಣಬಹುದು. ಒಟ್ಟಿನಲ್ಲಿ ಪರಿಶುದ್ಧವಾದ ಆಚಾರ–ವಿಚಾರಕ್ಕೇನೇ ಶೀಲವೆಂದು ಕರೆಯಲಾಗಿದೆ. ಶಿವಾಗಮಗಳಲ್ಲಿ ಶೀಲಗಳ ವಿಸ್ತೃತ ವಿವೇಚನೆಯಿದ್ದು ಶ್ರೀಸಿದ್ಧಾಂತಶಿಖಾಮಣಿ ಹಾಗೂ ವಚನ ಸಾಹಿತ್ಯದಲ್ಲಿ ಸಾರರೂಪವಾಗಿ ಪ್ರತಿಪಾದಿಸಲಾಗಿದೆ.

ಇಂತಹ ಈ ಶೀಲಾಚಾರಗಳು ಕೇವಲ ವೀರಶೈವರಿಗಷ್ಟೇ ಅಲ್ಲ ಶುಚಿಯಾದ ಜೀವನವನ್ನು ಸಾಗಿಸಬೇಕೆನ್ನುವ ಪ್ರತಿಯೊಬ್ಬ ಮನುಷ್ಯನಿಗೂ ಅವಶ್ಯಕವಾದವುಗಳಾಗಿವೆ.

೫) ಭೃತ್ಯಾಚಾರ :

ವೀರಶೈವರ ಪಂಚಾಚಾರಗಳಲ್ಲಿ ಐದನೆಯದಾದ ಆಚಾರವೇ ಭೃತ್ಯಾಚಾರವು. ಶಿವನು ನನ್ನ ಸ್ವಾಮಿಯು. ನಾನು ಅವನ ಸೇವಕನು ಎಂಬ ಈ ಭಾವನೆಯಿಂದ ಆಚರಿಸುವ ಆಚಾರಕ್ಕೇನೇ ಭೃತ್ಯಾಚಾರವೆಂಬುದಾಗಿ ಕರೆಯುತ್ತಾರೆ. ಇದನ್ನೇ ಚಂದ್ರಜ್ಞಾನಾಗಮದಲ್ಲಿ–

ಶಿವಭಕ್ತಜನಾಃ ಸರ್ವೇ ವರಿಷ್ಠಾಃ ಪೃಥಿವೀ ತಲೇ ।
ತೇಷಾಂ ಭೃತ್ಯೋಽಹಮಿತಿ ಯದ್ ಭೃತ್ಯಾಚಾರ ಇತಿ ಸ್ಮೃತಃ ॥

(ಚಂ.ಜ್ಞಾ. ಆಗಮ., ಕ್ರಿ.ಪಾ., ೯–೯)

ಎಂದು ಉಪದೇಶಿಸಲಾಗಿದೆ. ಅಂದರೆ ಈ ಜಗತ್ತಿನಲ್ಲಿ ಶಿವ ಹಾಗೂ ಶಿವಭಕ್ತರೇ ಸರ್ವಶ್ರೇಷ್ಠರಾದವರು. ನಾನು ಅವರ ಭೃತ್ಯನಾಗಿದ್ದೇನೆ ಎಂಬ ಭಾವನೆಯುಳ್ಳಾತನೇ ಭೃತ್ಯಾಚಾರಿಯು. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀಸಿದ್ಧಾಂತ ಶಿಖಾಮಣಿಯಲ್ಲಿ ಈ ಭೃತ್ಯಾಚಾರವನ್ನು ಕುರಿತು –

ಶಿವಯೋಗೀ ಶಿವಃ ಸಾಕ್ಷಾದಿತಿ ಕೈಂಕರ್ಯಭಕ್ತಿತಃ ।
ಪೂಜಯೇದಾರೇಣೈವ ಯಥಾ ಲಿಂಗಂ ಯಥಾ ಗುರುಃ ॥

(ಸಿ.ಶಿ., ೯–೬೬)

ಎಂದು ಉಪದೇಶಿಸಿದ್ದಾರೆ. ಅಂದರೆ ಶಿವಜ್ಞಾನ ಸಂಪನ್ನನಾದ ಶಿವಯೋಗಿಯು ಸಾಕ್ಷಾತ್ ಶಿವರೂಪನೇ ಆಗಿರುತ್ತಾನೆ. ಆದ್ದರಿಂದ ಅವನಲ್ಲಿ ಕಿಂಕರಭಾವನೆಯನ್ನು ತಾಳಿ ಗುರು ಹಾಗೂ ಲಿಂಗವನ್ನು ಪೂಜಿಸಿದಂತೆ ಅವನನ್ನೂ ಆದರದಿಂದ ಪೂಜಿಸಬೇಕು. ಈ ಭೃತ್ಯಾಚಾರವು ಭೃತ್ಯಭಾವ ಮತ್ತು ವೀರಭೃತ್ಯ ಯೆಂಬುದಾಗಿ ಎರಡು ವಿಧವಾಗಿ ಇರುತ್ತದೆ. ಗುರು–ಲಿಂಗ–ಜಂಗಮರನ್ನು ಕಿಂಕರಭಾವದಿಂದ ಅರ್ಚಿಸುವುದು ಭೃತ್ಯಭಾವವೆಂದು ಕರೆಯಿಸಿಕೊಂಡರೆ, ಗುರುವಿಗೆ ತನುವನ್ನು, ಇಷ್ಟಲಿಂಗಕ್ಕೆ ಮನವನ್ನು ಮತ್ತು ಜಂಗಮಕ್ಕೆ ತನ್ನ ಎಲ್ಲ ಸರ್ವಸ್ವವನ್ನು ಸಮರ್ಪಿಸಿ ನಿಃಸ್ಪೃಹನಾಗಿ ಕೇವಲ ಮೋಕ್ಷ ಮಾತ್ರಾಭಿಲಾಷೆಯುಳ್ಳವನಾಗಲು ವೀರಭೃತ್ಯನೆಂದು ಕರೆಯಿಸಿಕೊಳ್ಳುತ್ತಾನೆ. ಇಂತಹ ವೀರಭೃತ್ಯಭಾವವುಳ್ಳವ ನಾದಾಗಲೇನೇ ಶಿವಾನುಗ್ರಹವು ಪ್ರಾಪ್ತವಾಗುವುದು (ಚಂ.ಜ್ಞಾ.ಆ.,ಕ್ರಿ.ಪಾ., ೯. ೧೨೫–೧೨೬)

ಈ ವಿಧವಾದ ಭೃತ್ಯಭಾವನೆಯನ್ನು ತಾಳುವುದರಿಂದ ಸಾಧಕನ ಮನಸ್ಸಿನಲ್ಲಿ ಅಹಂಕಾರವು ಅದೆಂದೂ ಮೈದಳೆದು ಈ ಪೂರ್ವದಲ್ಲಿ ಹೇಳಿದ ಲಿಂಗಾಚಾರ, ಸದಾಚಾರ, ಶಿವಾಚಾರ ಮತ್ತು ಗಣಾಚಾರಗಳನ್ನು ನಿಷ್ಠೆಯಿಂದ ಪರಿಪಾಲಿಸುತ್ತಿರುವಾಗ ಸಾಧಕನ ಮನಸ್ಸಿನಲ್ಲಿ ಅಹಂಕಾರವು ಸುಳಿಯುವ ಸಾಧ್ಯತೆಯಿರುತ್ತದೆ. ಅಂತೆಯೇ ಈ ಅಹಂಕಾರವು ಸುಳಿಯದಿರಲಿ ಎಂಬ ಉದ್ದೇಶದಿಂದ ಈ ಭೃತ್ಯಾಚಾರವು ಪ್ರತಿಪಾದಿಸಲ್ಪಟ್ಟಿದೆ.

ಸಮಾಜದ ಪ್ರತಿಯೊಂದು ವ್ಯಕ್ತಿಯಲ್ಲಿ ಈ ಭೃತ್ಯಭಾವನೆಯು ಒಡಮೂಡಿದರೆ ಅನಾವಶ್ಯಕ ವಿವಾದಗಳು ನಿಂತುಹೋಗಿ ಸಮಾಜದಲ್ಲಿ ಶಾಂತಿಯು ನೆಲೆಸುವುದು. ಆದ್ದರಿಂದ ಈ ಭೃತ್ಯಭಾವನೆಯು ಕೇವಲ ಕೆಳಮಟ್ಟದ ಸಾಧಕನಲ್ಲಷ್ಟೇ ಅಲ್ಲ ಉನ್ನತ ಮಟ್ಟದ ಶಿವಯೋಗಿಗಳಲ್ಲಿಯೂ ಸಹ ಇರಬೇಕಾದುದಾಗಿದೆ. ಹೀಗೆ ಶಿವಾಗಮೋಕ್ತವಾದ ಭೃತ್ಯಾಚಾರವನ್ನು ಪರಿಪಾಲಿಸಿ ತನ್ನ ತನು, ಮನ ಮತ್ತು ಧನಗಳ ಮೇಲಿನ ಅಭಿಮಾನವನ್ನು ತ್ಯಜಿಸಿ ಇವೆಲ್ಲವುಗಳು ಈಶ್ವರನವು ಆಗಿರುತ್ತವೆ. ನಾನು ಮಾತ್ರ ಅವನ ಭೃತ್ಯನಾಗಿದ್ದೇನೆ ಎಂಬ ಭಾವನೆಯನ್ನು ಸರ್ವರೂ ಹೊಂದಬೇಕು. ಶಿವನ ವಿಷಯಕವಾಗಿ ಇಂತಹ ಭೃತ್ಯ ಭಾವನೆಯನ್ನು ತಾಳಿದವರಿಗೆ ಶಿವನೂ ಸಹ ಅವರ ಭೃತ್ಯನಾಗಿ ಸೇವೆ ಸಲ್ಲಿಸುತ್ತಾನೆ. ಇಂತಹ ಅನೇಕ ಶರಣ–ಸಂತರ ಜೀವನದಲ್ಲಿ ಘಟಿಸುತ್ತಿರುವುದನ್ನು ಕೇಳುತ್ತೇವೆ.

ಆಚಾರದ ವೈಜ್ಞಾನಿಕತೆ :

ಪ್ರಾಚೀನಗಳಾದ ಶಿವಾಗಮ, ಶ್ರೀಸಿದ್ಧಾಂತಶಿಖಾಮಣಿ ಮತ್ತು ಶರಣರ ವಚನಗಳಲ್ಲಿ ವೀರಶೈವಧರ್ಮೋಚಿತಗಳಾದ ಪಂಚಾಚಾರಗಳು ಇಲ್ಲಿಯವರೆಗೆ ಪ್ರತಿಪಾದಿಸಲ್ಪಟ್ಟವು. ಈ ಎಲ್ಲ ಆಚಾರಗಳ ಹಿನ್ನೆಲೆಯಲ್ಲಿ ಒಂದು ಸೂಕ್ಷ್ಮವಾದ ವಿಜ್ಞಾನವು ಅಡಗಿಕೊಂಡಿದೆ. ಅದುವೇ ಆರೋಗ್ಯ ವಿಜ್ಞಾನವು. ಮನುಷ್ಯನ ಜೀವನದಲ್ಲಿ ಎಲ್ಲ ಸಂಪತ್ತುಗಳಿಗಿಂತಲೂ ಆರೋಗ್ಯ ಸಂಪತ್ತೇ ಅತೀ ಮಹತ್ತ್ವದ್ದಾಗಿದೆ. ಈ ಆರೋಗ್ಯವು ದೈಹಿಕ ಹಾಗೂ ಮಾನಸಿಕವೆಂದು ಎರಡು ವಿಧವಾಗಿರುತ್ತದೆ. ಮನುಷ್ಯನ ಆಹಾರವು ದೂಷಿತವಾದರೆ ಮಾನಸಿಕ ಅನಾರೋಗ್ಯವು ಪ್ರಾಪ್ತವಾಗುವುದು. ಆದ್ದರಿಂದ ನಾವು ಸಂಪೂರ್ಣವಾಗಿ ಆರೋಗ್ಯವಂತರಾಗಬೇಕಾದರೆ ಆಹಾರ ಮತ್ತು ವಿಚಾರಗಳಲ್ಲಿ ಪರಿಶುದ್ಧತೆಯು ಬೇಕೇ ಬೇಕು. ಮೇಲೆ ವಿವರಿಸಿದ ಪಂಚಾಚಾರಗಳಲ್ಲಿ ಹಾಗೂ ಅವುಗಳ ಅಂತರ್ಗತಗಳಾದ ಸರ್ವವಿಧಶೀಲಗಳಲ್ಲಿ ಆಹಾರ ಹಾಗೂ ವಿಚಾರಗಳ ಪರಿಶುದ್ಧತೆಯೇ ಪ್ರತಿಪಾದಿಸಲ್ಪಟ್ಟಿದೆ. ಕಾರಣ ಸಾಧಕನು ಮೇಲಿನ ಎಲ್ಲ ಆಚಾರಗಳನ್ನು ನಿಷ್ಠೆಯಿಂದ ಪರಿಪಾಲಿಸಿದರೆ ಅವನೋರ್ವ ಆರೋಗ್ಯವಂತನೂ

ಸಮಾಜದಲ್ಲಿ ಪೂಜ್ಯನೂ ಆಗುವುದರ ಜೊತೆಗೆ ಕೊನೆಗೆ ಶಿವಸಾಮರಸ್ಯವನ್ನೇ ಪಡೆಯುತ್ತಾನೆ.

ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಈ ಮೇಲಿನ ಆಚಾರಗಳನ್ನು ನಿಷ್ಠೆಯಿಂದ ಕಟ್ಟುನಿಟ್ಟಾಗಿ ಪರಿಪಾಲಿಸುತ್ತಿದ್ದರು. ಅಂತೆಯೇ ಅಂದು ಮನುಷ್ಯ ಸಮಾಜವು ಅಷ್ಟೊಂದು ರೋಗ ರುಜಿನಗಳಿಂದ ಬಳಲುತ್ತಿರಲಿಲ್ಲ. ಇಂದು ಈ ಆಚಾರಗಳ ಬಗ್ಗೆ ತಾತ್ಸಾರ ಭಾವನೆಯನ್ನು ತಾಳಿ ಆಹಾರ–ವಿಹಾರ–ವ್ಯವಹಾರ ಮತ್ತು ವಿಚಾರಗಳಲ್ಲಿ ಸಂತುಲನೆಯನ್ನು ಕಳೆದುಕೊಂಡ ಮಾನವ ಸಮಾಜವು ಅನೇಕ ವಿಧ ರೋಗಗಳಿಗೆ ತುತ್ತಾಗುತ್ತಿದೆಯಲ್ಲದೆ ಸರ್ವಕ್ಷೇತ್ರಗಳಲ್ಲಿ ಅಪ್ರಮಾಣಿಕತೆಯು ತಾಂಡವವಾಡುತ್ತಿದೆ. ಇದರಿಂದಾಗಿ ಸರ್ವರೂ ಮಾನಸಿಕ ಶಾಂತಿ ಸಮಾಧಾನಗಳನ್ನು ಕಳೆದುಕೊಂಡಿದ್ದಾರೆ. ಹಿಂದಿನ ದಿನಗಳಲ್ಲಿ ಜನನ–ಮರಣಗಳು ಮನೆಯಲ್ಲಿಯೇ ಆಗುತ್ತಿದ್ದವು. ಆದರೆ ಇಂದು ಜನನವೂ ದವಾಖಾನೆಯಲ್ಲಿಯೇ ಮರಣವೂ ಸಹ ದವಾಖಾನೆಯಲ್ಲಿಯೇ ಆಗುತ್ತಿವೆ. ಮನುಷ್ಯ ದೇಹಕ್ಕೆ ಹಿಂದಿನವರು ದೇವಾಲಯವೆಂದು ಕರೆಯುತ್ತಿದ್ದರು. ಇಂದು ಅದು ರೋಗಾಲಯವಾಗಿ ಪರಿವರ್ತನೆಗೊಂಡಿದೆ.

ಒಬ್ಬ ಮನುಷ್ಯನ ದೇಹದಲ್ಲಿ ಇಷ್ಟೊಂದು ವಿಷಯುಕ್ತಗಳಾದ ಜೀವಾಣುಗಳು ಬೆಳೆದುಕೊಂಡಿವೆಯೆಲ್ಲಾ ಅಂತೇನೇ ಒಬ್ಬ ರೋಗಿಗೆ ಉಪಯೋಗಿಸಿದ ಇಂಜಕ್ಷನ್ ಸೂಜಿಗಳನ್ನು ಮತ್ತೊಬ್ಬರಿಗೆ ಉಪಯೋಗಿಸುವಂತಿಲ್ಲ. ಆದರೆ ಮೊದಲಿನ ವೈದ್ಯರು ಒಂದೇ ಸೂಜಿಯನ್ನು ಮೇಲಿಂದ ಮೇಲೆ ಕುದಿಯುವ ನೀರಿನಲ್ಲಿ ತೊಳೆದು ಉಪಯೋಗಿಸುತ್ತಿದ್ದರು. ಇಂದು ಹಾಗೇಕೆ ಮಾಡುವುದಿಲ್ಲ? ಬಹುತೇಕವಾಗಿ ಸೂಜಿಗೆ ಅಂಟಿದ ರೋಗಾಣುಗಳು ಕುದಿಸಿದರೂ ಸಾಯುವುದಿಲ್ಲೆಂಬ ಭೀತಿಯು ವೈದ್ಯರ ಮನಸ್ಸಿನಲ್ಲಿ ಮೂಡಿರಬಹುದಲ್ಲವೆ? ಇತ್ತೀಚಿನ ದಿನಮಾನಗಳಲ್ಲಿ ಒಂದೊಂದು ಅವಯವಕ್ಕೂ ಒಬ್ಬೊಬ್ಬ ವಿಶೇಷ ವೈದ್ಯ ತಜ್ಞರು. ಹೊರಬರುತ್ತಿರುವುದನ್ನು ನೋಡಿದರೆ ಅದೆಷ್ಟು ಸಂಖ್ಯೆಯಲ್ಲಿ ಹೊಸ ಹೊಸ ರೋಗಗಳು ಬೆಳೆದಿದೆ ಎಂಬುದು ತಿಳಿದು ಬರುತ್ತದೆ.

ಇದೂ ಅಲ್ಲದೆ ಇಂದು ಮನ್ನಣೆಯನ್ನು ಪಡೆಯುವ ವ್ಯಕ್ತಿತ್ವದ ವ್ಯಕ್ತಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ನೋಡಿದರೆ ಅದಕ್ಕೆಲ್ಲ ಮೂಲವು ಆಚಾರಹೀನತೆಯೆಂದೇ ಕಂಡುಬರುತ್ತದೆ. ಕಾರಣ ಇದೆಲ್ಲವನ್ನೂ ಕೂಲಂಕಷವಾಗಿ ಪರಾಮರ್ಶಿಸಲು ಇಂದಿನ ಈ ದುಃಸ್ಥಿತಿಯನ್ನು ದೂರಮಾಡಬೇಕಾದರೆ ಪುನಃ ಪ್ರತಿಯೊಬ್ಬರೂ ಆಚಾರಗಳ ಪರಿಪಾಲನೆಗೇನೇ ಶರಣಾಗತರಾಗಬೇಕಾಗುತ್ತದೆ.

ಔಷಧವನ್ನು ಸೇವಿಸಿ ಆರೋಗ್ಯವನ್ನು ಪಡೆಯುವುದಕ್ಕಿಂತ ಆಚಾರದಿಂದ ಬದುಕಿ ಸದಾ ನಿರೋಗಿಯಾಗಿರುವುದೇ ಶ್ರೇಷ್ಠವಾದುದು. ಅಂತೆಯೇ ಆಂಗ್ಲ ಅನುಭಾವಿಯೋರ್ವನು "Prevention is better than cure" ಅಂದರೆ ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತ ರೋಗ ಬಾರದಂತೆ ಮುಂಚಿತವಾಗಿಯೇ ಪ್ರತಿಬಂಧಕೋಪಾಯವನ್ನು ಮಾಡಿಕೊಂಡಿರುವುದು ಉತ್ತಮವಾದುದು ಎಂದು ನುಡಿದದ್ದನ್ನು ಸಹ ಇಲ್ಲಿ ಗಮನಿಸಬಹುದಾಗಿದೆ.

ಇದೆಲ್ಲವನ್ನು ಪರ್ಯಾಲೋಚಿಸಿದಾಗ ಶಿವಾಗಮ, ಶ್ರೀ ಸಿದ್ಧಾಂತಶಿಖಾಮಣಿ ಮತ್ತು ಶರಣರ ವಚನಗಳಲ್ಲಿ ಉಪದೇಶಿಸಿದ ಆಚಾರಗಳು ಸಂಪೂರ್ಣ ಮಾನವ ಸಮಾಜದ ಸ್ವಾಸ್ಥ್ಯಕ್ಕೆ ಬುನಾದಿಯಾಗಿವೆಯಲ್ಲದೆ ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ನಾಂದಿಯಾಗಿವೆ ಎಂಬುದಾಗಿ ಪ್ರತಿಯೊಬ್ಬರು ತಿಳಿದುಕೊಂಡು ಈ ಆಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪುನಃ ಪ್ರಯತ್ನಿಸಬೇಕು ಅಂದಾಗಲೇನೇ ವಿಶ್ವದಲ್ಲಿ ಸುಖ-ಶಾಂತಿ ಮತ್ತು ಸಮೃದ್ಧಿಗಳು ತಲೆದೋರುವವು. ಹೀಗೆ ಇಲ್ಲಿ ಹೇಳಲ್ಪಟ್ಟ ಆಚಾರ ಸಂಪನ್ನನಾದ ಸಾಧಕನು ಮುಂದೆ ಹೇಳಲ್ಪಡುವ ದಾರ್ಶನಿಕ ತತ್ತ್ವವಿಚಾರಗಳನ್ನರಿತು ಷಟ್‌ಸ್ಥಲಾಂತರ್ಗತಗಳಾದ ನೂರೊಂದು ಸ್ಥಲಗಳ ನಿಲುವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು.

❑❑

ಚತುರ್ಥ ಅಧ್ಯಾಯ

ಶ್ರೀ ಸಿದ್ಧಾಂತಶಿಖಾಮಣಿಯ ದಾರ್ಶನಿಕ ವಿಚಾರಧಾರೆ

ಭಾರತೀಯ ದಾರ್ಶನಿಕರು ಅರ್ಥಾತ್ ತತ್ತ್ವಜ್ಞಾನಿಗಳು ತಮ್ಮ ಅಂದರೆ ಸಿದ್ಧಾಂತಗಳಲ್ಲಿ ಈಶ್ವರ, ಜೀವ, ಜಗತ್ತು, ಬಂಧ ಮತ್ತು ಮೋಕ್ಷಗಳೆಂಬ ವಿಷಯಗಳ ಮೇಲೆ ತಮ್ಮ ತಮ್ಮ ದೃಷ್ಟಿಯಿಂದ ಪ್ರತಿಪಾದಿಸಿದ್ದಾರೆ. ವೀರಶೈವವು ಕೇವಲ ಧರ್ಮವಾಗಿರದೆ ಅದೊಂದು ದರ್ಶನವೂ ಸಹ ಆಗಿರುತ್ತದೆ. ಆದ್ದರಿಂದ ಈ ಸಿದ್ಧಾಂತದ ರೀತಿಯಲ್ಲಿ ಈಶ್ವರ, ಜೀವ, ಜಗತ್ತು, ಬಂಧ ಮತ್ತು ಮೋಕ್ಷಗಳ ವಿಷಯಕವಾಗಿ ಶ್ರೀ ಸಿದ್ಧಾಂತಶಿಖಾಮಣಿಯ ವಿಚಾರಧಾರೆಯು ಹೇಗಿದೆ ಯೆಂಬುದನ್ನು ಇಲ್ಲಿ ಕ್ರಮವಾಗಿ ಪರ್ಯಾಲೋಚಿಸಲಾಗುವುದು.

ಪರಶಿವ ಸ್ವರೂಪ :

ವೀರಶೈವ ಸಿದ್ಧಾಂತದಲ್ಲಿ ಪರಮ ತತ್ತ್ವಕ್ಕೆ ಸ್ಥಲ (ಅನು. ಸೂ., ೨–೪), ಲಿಂಗ (ಅನು.ಸೂ., ೩–೮) ಮತ್ತು ಪರಶಿವನೆಂಬ ನಾಮಗಳಿಂದ ಕರೆಯಲಾಗಿದೆ. ಅಂತೆಯೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ–

ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ ।
ವೇದಾಂತಿನೋ ಜಗನ್ಮೂಲಂ ತನ್ನಮಾಮಿ ಪರಂ ಶಿವಮ್ ॥

(ಸಿ.ಶಿ., ೧–೨)

ಎಂದು ನಿರೂಪಿಸಲಾಗಿದೆ. ಅಂದರೆ ಉಪನಿಷತ್ ಸಿದ್ಧಾಂತದಲ್ಲಿ ಯಾವುದಕ್ಕೆ ಬ್ರಹ್ಮವೆಂಬುದಾಗಿ ಕರೆಯುತ್ತಾರೆಯೋ ಮತ್ತು ಯಾವುದು ಜಗತ್ತಿಗೆ ಮೂಲ ಕಾರಣವಾಗಿದೆಯೋ ಅದಕ್ಕೇನೇ ವೀರಶೈವ ಸಿದ್ಧಾಂತದಲ್ಲಿ ಪರಶಿವನೆಂಬುದಾಗಿ ಕರೆಯಲಾಗಿದೆ. ಅಂಥ ಪರಶಿವ ತತ್ತ್ವಕ್ಕೆ ನಮಸ್ಕಾರ ಎಂಬುದಾಗಿ ಶ್ರೀ ಶಿವಯೋಗಿ ಶಿವಾಚಾರ್ಯರು ಶಿವಸ್ತುತಿಯನ್ನಿಲ್ಲಿ ಮಾಡಿದ್ದಾರೆ. ಈ ಪರಶಿವ ತತ್ತ್ವವು ಸುಗುಣ ಹಾಗೂ ನಿರ್ಗುಣವೆಂಬ ಎರಡು ಸ್ವರೂಪವನ್ನು ತಳೆಯುವಂಥಾದ್ದಾಗಿರುತ್ತದೆ. ಸಗುಣಕ್ಕೆ ಸಕಲವೆಂತಲೂ, ನಿರ್ಗುಣಕ್ಕೆ ನಿಷ್ಕಲವೆಂತಲೂ ಕರೆಯುವುದುಂಟು. ಈ

ಪರಶಿವ ತತ್ತ್ವವು ತನ್ನ ಶಕ್ತಿಯನ್ನು ಸಂಕೋಚಗೊಳಿಸಿಕೊಂಡಾಗ ನಿರ್ಗುಣವಾಗಿ ಮತ್ತು ವಿಕಾಸಗೊಳಿಸಿಕೊಂಡಾಗ ಸಗುಣವಾಗಿ ತೋರುವುದು. ಈ ಪರಶಿವ ತತ್ತ್ವವು ನಿರ್ಗುಣವಾದರೂ ನಿರ್ವಿಶೇಷವಾಗಿರುವುದಿಲ್ಲ. ಪರಶಿವನು ತಾನೇ ತಾನಾಗಿರುವಾಗ ಆತನ ಜ್ಞಾನ, ಇಚ್ಛಾ ಮತ್ತು ಕ್ರಿಯಾ ಮೊದಲಾದ ಶಕ್ತಿಗಳು ಅವಿಕಾಸಾವಸ್ಥೆಯಲ್ಲಿ ಇರುವುದರಿಂದ ಅವನು ನಿರ್ಗುಣನೆಂದು ಪರಿಗಣಿಸಲ್ಪಟ್ಟಿರುವನು. ಹೀಗೆ ನಿರ್ಗುಣನಾದರೂ ಸೂಕ್ಷ್ಮ ರೂಪದಲ್ಲಿ ಅವನೊಳಗೆ ಶಕ್ತಿಗಳು ಅವಿಕಾಸಾವಸ್ಥೆಯಲ್ಲಿ ಇರುವುದರಿಂದ ಅವನು ನಿರ್ಗುಣನೆಂದು ಪರಿಗಣಿಸಲ್ಪಟ್ಟಿರುವನು ಹೀಗೆ ನಿರ್ಗುಣನಾದರೂ ಸೂಕ್ಷ್ಮರೂಪದಲ್ಲಿ ಅವನೊಳಗೆ ಶಕ್ತಿಯು ನೆಲೆಸಿರುವುದರಿಂದ ಪರಶಿವನು ಸವಿಶೇಷನೇ ಹೊರತು ನಿರ್ವಿಶೇಷನಲ್ಲ. ಆದ್ದರಿಂದ ಅದ್ವೈತ ವೇದಾಂತಿಗಳ ಆ ನಿರ್ಗುಣ ನಿರಾಕಾರ ಪರಬ್ರಹ್ಮ ತತ್ತ್ವಕ್ಕಿಂತಲೂ ಈ ಪರಿಶಿವ ತತ್ತ್ವವು ಭಿನ್ನವಾದುದಾಗಿದೆ. ಇದೇ ವಿಷಯವನ್ನೇ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು –

ಪರಿಚ್ಛೇದ ಕಥಾಶೂನ್ಯಂ ಪ್ರಪಂಚಾತೀತವೈಭವಮ್ ।
ಪ್ರತ್ಯಕ್ಷಾದಿ ಪ್ರಮಾಣಾನಾಮಗೋಚರಪದೇ ಸ್ಥಿತಮ್ ॥

ಸ್ವಪ್ರಕಾಶಂ ಪರಾಕಾಶಮನೌಪಮ್ಯಮನಾಮಯಮ್ ।
ಸರ್ವಜ್ಞಂ ಸರ್ವಗಂ ಶಾಂತಂ ಸರ್ವಶಕ್ತಿ ನಿರಂಕುಶಮ್ ॥

(ಸಿ.ಶಿ., ೨. ೪–೫)

ಎಂದು ಪ್ರತಿಪಾದಿಸಿದ್ದಾರೆ. ಅಂದರೆ ಈ ಪರಶಿವ ತತ್ತ್ವವು ದೇಶ, ಕಾಲ, ವಸ್ತು ಪರಿಚ್ಛೇದ ರಹಿತವೂ, ಪ್ರಪಂಚದ ವೈಭವವನ್ನೇ ಮೀರಿದುದೂ, ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಅಗೋಚರವಾದುದೂ, ಸ್ವಪ್ರಕಾಶರೂಪವೂ, ಪರಾಕಾಶ ಸ್ವರೂಪವೂ, ಉಪಮಾತೀತವೂ, ದೋಷರಹಿತವೂ, ಸರ್ವತ್ರ ಸ್ಥಿತವೂ, ಶಾಂತವೂ, ಸರ್ವಜ್ಞವೂ, ಸರ್ವರ ಮೇಲೆ ಅಂಕುಶವನ್ನಿಟ್ಟುದೂ, ತನ್ನ ಮೇಲೆ ಆಧಾರ ಅಂಕುಶವೂ ಇಲ್ಲದುದೂ ಮತ್ತು ಸರ್ವಶಕ್ತಿ ಸಮನ್ವಿತವೂ ಆಗಿರುತ್ತದೆ. ಇಲ್ಲಿ ಪರಶಿವ ಸ್ವರೂಪವನ್ನು ಪ್ರತಿಪಾದಿಸುವಾಗ ಅವನಲ್ಲಿ ಶಕ್ತಿಯ ಇರುವಿಕೆಯನ್ನು ಸ್ಪಷ್ಟಪಡಿಸಲಾಗಿದೆ.

ಶಕ್ತಿಯ ಸ್ವರೂಪ :

ಬೆಂಕಿಯಲ್ಲಿ ಉಷ್ಣತೆ, ಚಂದ್ರನಲ್ಲಿ ಶೀತಲತೆ, ಶೈಯ್ಯೆಯಲ್ಲಿ ಮೃದುತ್ವ,ಕಲ್ಲಿನಲ್ಲಿ ಕಾಠಿಣ್ಯತೆ, ಸಂಸಾರಿಗಳಲ್ಲಿ ಮೋಹ ಮತ್ತು ಯೋಗಿಗಳಲ್ಲಿ ಬೋಧವಿರುವಂತೆ ಪರಶಿವನಲ್ಲಿ ಒಂದು ಸ್ವಾತಂತ್ರ್ಯ ಶಕ್ತಿಯು ಇರುತ್ತದೆ. (ಮಹಾರ್ಥಮಂಜರಿ). ಪ್ರಪಂಚದ ಪ್ರತಿಯೊಂದು ವಸ್ತುವಿನಲ್ಲಿ ತನ್ನದೇ ಆದ ಅಸಾಧಾರಣ ಶಕ್ತಿಯು

ಇರುವುದನ್ನು ಕಾಣುತ್ತೇವೆ. ಇಂತಹ ಶಕ್ತಿಯಿಂದೊಡಗೂಡಿದ ವಿಶ್ವವನ್ನು ಸೃಷ್ಟಿಸಿದ ಆ ಪರಶಿವನು ಅದ್ಭುತವಾದ ಶಕ್ತಿಯುಳ್ಳವನಾಗಿರಲೇಬೇಕೆಂಬುದರಲ್ಲಿ ಅದಾವ ಸಂಶಯವಿರುವುದಿಲ್ಲ. ಅಂತೆಯೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ – "ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದ ಲಕ್ಷಣಾ" (ಸಿ.ಶಿ., ೨–೧೨); "ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ" (ಸಿ.ಶಿ., ೫–೩೯), ಎಂಬುದಾಗಿ ಶಕ್ತಿಯ ಎರಡು ಸ್ವರೂಪಗಳು ಪ್ರತಿಪಾದಿಸಲ್ಪಟ್ಟಿವೆ. ಇದರಿಂದ ಶಕ್ತಿಯು ಸಚ್ಚಿದಾನಂದ ಸ್ವರೂಪಳೂ ತ್ರಿಗುಣಾತ್ಮಕಳೂ ಆಗಿರುವಳೆಂಬುದು ತಿಳಿದುಬರುತ್ತದೆ.

ವಸ್ತುತಃ ಶಕ್ತಿಯು ಒಂದೇ ಆಗಿದ್ದು ಅದರ ಅವಸ್ಥೆಗಳು ಎರಡು ವಿಧಗಳಾಗಿರುತ್ತವೆ. ಒಂದನೆಯದು "ಅವಿಭಾಗಪರಾಮರ್ಶಾವಸ್ಥೆ" ಮತ್ತು ಎರಡನೆಯದು "ವಿಭಾಗಪರಾಮರ್ಶಾವಸ್ಥೆ". ಅವಿಭಾಗಪರಾಮರ್ಶಾವಸ್ಥೆಯಲ್ಲಿ ಶಕ್ತಿಯು ಸಚ್ಚಿದಾನಂದ ಸ್ವರೂಪಳಾಗಿ ಸಚ್ಚಿದಾನಂದ ಸ್ವರೂಪನಾದ ಪರಶಿವನೊಂದಿಗೆ ಸಮರಸವಾಗಿರುತ್ತಾಳೆ. ಅಂತೆಯೇ ಆ ಪರಶಿವನಲ್ಲಿ ನಾನು ಇದ್ದೇನೆ, ನಾನು ತೋರುತ್ತಿದ್ದೇನೆ ಮತ್ತು ನಾನು ಆನಂದಸ್ವರೂಪನಾಗಿದ್ದೇನೆ ಎಂಬ ಬೋಧೆಯು ಅರ್ಥಾತ್ ವಿಮರ್ಶೆಯು ಉಂಟಾಗುವುದು. ಪರಶಿವನಲ್ಲಿ ಇಂತಹ ಬೋಧೆ ಅರ್ಥಾತ್ ವಿಮರ್ಶೆಯನ್ನು ಒಪ್ಪಿಕೊಳ್ಳದಿದ್ದರೆ ಆ ಪರಶಿವನೂ ಸಹ ಪ್ರಕಾಶರೂಪವಾದ ಸ್ಫಟಿಕದಂತೆ 'ಜಡ' ಎನ್ನಬೇಕಾಗುವುದು. ತನ್ನ ಸೌಂದರ್ಯವನ್ನು ಕಾಣದ ಕುರುಡನಿಗೆ ಆ ಸೌಂದರ್ಯವು ವ್ಯರ್ಥವಾಗುವಂತೆ ತನ್ನ ಅನುಭವಕ್ಕೆ ಬಾರದಿರುವ ಅವನ ಸತ್ ಚಿತ್ ಆನಂದಗಳೂ ಸಹ ನಿರರ್ಥಕಗಳಾಗುವುದು. ಆದರೆ ಇದು ಯಾರಿಗೂ ಇಷ್ಟವಾಗುವುದಿಲ್ಲ. ಅಂತೆಯೇ ವೀರಶೈವ ಆಚಾರ್ಯರು ಪರಶಿವನಲ್ಲಿ ಸಚ್ಚಿದಾನಂದ ಸ್ವರೂಪಳಾದ ವಿಮರ್ಶಶಕ್ತಿಯನ್ನು ಒಪ್ಪಿಕೊಂಡಿರುತ್ತಾರೆ. ಅದನ್ನೇ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರು–"ವಂದೇ ತಾಂ ಪರಮಾನಂದ ಪ್ರಬೋಧಲಹರೀಂ ಶಿವಾಮ್" (ಸಿ.ಶಿ., ೧–೧೧) ಎಂದು ಪ್ರತಿಪಾದಿಸಿದ್ದಾರೆ.

ಈ ಅಮೋಘವಾದ ಶಕ್ತಿಯೇ ಜಗತ್ತಿನ ಸೃಷ್ಟಿಯ ಕಾಲದಲ್ಲಿ ಇಚ್ಛಾ–ಜ್ಞಾನಾದಿಗಳ ರೂಪದಲ್ಲಿ ವಿಭಾಗಪರಾಮರ್ಶಾವಸ್ಥೆಯನ್ನು ಹೊಂದಿ ತ್ರಿಗುಣಾತ್ಮಕವಾದ ಮಾಯೆಯೆಂಬುದಾಗಿ ಕರೆಯಲ್ಪಡುತ್ತದೆ. ಇಲ್ಲಿ ಹೇಳಿದ ವಿಮರ್ಶಶಕ್ತಿಗೆ ಚಿಚ್ಛಕ್ತಿಯೆಂತಲೂ ಕರೆಯುವುದುಂಟು. ಇದು ಈ ಅದ್ಭುತವಾದ ವಿಶ್ವಕ್ಕೆ ಕಾರಣೀಭೂತ ವಾಗಿರುತ್ತದೆ. ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಈ ಶಕ್ತಿಯನ್ನು ಕುರಿತು ಶ್ರೀ ಜಗದ್ಗುರು ರೇಣುಕ ಭಗವತ್ಪಾದರು –

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ರ್ಯಕಾರಿಣೀ ।
ಯಸ್ಮಿನ್ ಪ್ರತಿಷ್ಠಿತಂ ಬ್ರಹ್ಮ ತದಿದಂ ವಿಶ್ವಭಾಜನಮ್ ॥

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ॥

(ಸಿ.ಶಿ., ೨೦. ೩೬-೩೮)

ಎಂದು ಉಪದೇಶಿಸಿದ್ದಾರೆ. ಅಂದರೆ ಈ ವಿಶ್ವದ ವೈಚಿತ್ರ್ಯಕ್ಕೆ ವಿಮರ್ಶಾ ಶಕ್ತಿಯೇ ಕಾರಣವಾಗಿರುತ್ತದೆ. ಈ ಶಕ್ತಿಯಿಂದ ಒಡಗೂಡಿದ ಕಾರಣದಿಂದಲೇ ಪರಶಿವ ಬ್ರಹ್ಮವು ವಿಶ್ವಭುಜನೆಂದು ಕರೆಯಲ್ಪಡುತ್ತದೆ. ಜಗತ್ತನ್ನು ಬೆಳಗುವ ಬೆಳದಿಂಗಳು ಚಂದ್ರನಲ್ಲಿ ಸ್ಥಿರವಾಗಿರುವಂತೆ ಪರಶಿವ ಬ್ರಹ್ಮದಲ್ಲಿ ಈ ವಿಮರ್ಶಶಕ್ತಿಯೂ ಸದಾ ಇರುವುದಾಗಿರುತ್ತದೆ.

ಶಿವ-ಶಕ್ತಿಯರ ಸಂಬಂಧ :

ಎರಡು ತತ್ತ್ವಗಳು ಒಂದೆಡೆ ಕೂಡಿರಬೇಕಾದರೆ ಅವೆರಡರ ನಡುವೆ ಯವುದೊಂದು ಸಂಬಂಧವನ್ನು ಹೇಳಬೇಕಾಗುವುದು. ಶಕ್ತಿ ಮತ್ತು ಶಕ್ತಿಮಾನ್ ಇವೆರಡರಲ್ಲಿ ಸಮವಾಯ ಸಂಬಂಧವೆಂದು ಕೆಲವರು ಹೇಳಿದರೆ, ತಾದಾತ್ಮ್ಯ ಸಂಬಂಧವೆಂದು ಬೇರೆ ಕೆಲವರು ಹೇಳುತ್ತಾರೆ. ಆದರೆ ವೀರಶೈವ ಸಿದ್ಧಾಂತದಲ್ಲಿ ಶಿವ-ಶಕ್ತಿಯರ ನಡುವೆ ಅವಿನಾಭಾವ ಸಂಬಂಧವು ಸ್ವೀಕರಿಸಲಾಗಿದೆ. ಅದನ್ನೇ ಶ್ರೀ ಮರಿತೋಂಟದಾರ್ಯರು ವೀರಶೈವಾನಂದಚಂದ್ರಿಕೆಯಲ್ಲಿ -

ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತಃ ಶಿವಃ ।
ಪುಷ್ಪಗಂಧವದನ್ಯೋನ್ಯಂ ಮಾರುತಾಂಬರಯೋರಿವ ॥

ಎಂದು ಹೇಳಿದ್ದಾರೆ. ಪುಷ್ಪ-ಗಂಧಗಳಂತೆ, ಗಗನ-ಗಾಳಿಗಳಂತೆ ಶಿವ-ಶಕ್ತಿಯರು ಅನ್ಯೋನ್ಯರಾಗಿದ್ದಾರೆ. ಅಂತೆಯೇ ಅವರೀರ್ವರಿಗೆ ಅವಿನಾಭಾವ ಸಂಬಂಧವು ಏರ್ಪಡುತ್ತದೆ. ಈ ಪೂರ್ವದಲ್ಲಿ ಹೇಳಿದ ಸಿದ್ಧಾಂತಶಿಖಾಮಣಿಯ ಉಕ್ತಿಯಲ್ಲಿಯೂ ಸಹ ಚಂದ್ರ-ಚಂದ್ರಿಕೆಯರ ಉದಾಹರಣೆಯೂ ಅವಿನಾಭಾವ ಸಂಬಂಧವನ್ನೇ ವ್ಯಕ್ತಮಾಡುತ್ತದೆ. ಈ ಅವಿನಾಭಾವ ಸಂಬಂಧವು ಭೇದಾ ಭೇದರೂಪವಾಗಿರುತ್ತದೆ. ಕವಿಕುಲಗುರುವಾದ ಕಾಳಿದಾಸನು ರಘುವಂಶ ಮಹಾಕಾವ್ಯದ ಮಂಗಲ ಶ್ಲೋಕದಲ್ಲಿ ಶಿವ-ಶಕ್ತಿಯರನ್ನು ವಾಕ್ ಮತ್ತು ಅರ್ಥರೂಪದಲ್ಲಿ ಪ್ರತಿಪಾದಿಸಿ ಶಿವ-ಶಕ್ತಿಯರಲ್ಲಿ ಅವಿನಾಭಾವಸಂಬಂಧವನ್ನು ಸಮರ್ಥಿಸಿದ್ದನ್ನು ಕಾಣಬಹುದು.

ಶಕ್ತಿಯ ಭೇದಗಳು :

ಪರಶಿವನಲ್ಲಿ ಅವಿನಾಭಾವ ಸಂಬಂಧದಿಂದಿರುವ ಶಕ್ತಿಯು ಚಿಚ್ಛಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಎಂಬುದಾಗಿ ಆರು ವಿಧವಾಗಿರುತ್ತದೆ.

ಇವುಗಳಲ್ಲಿ ಚಿಚ್ಛಕ್ತಿಯು ಪರಶಿವನ ಬೋಧರೂಪವಾಗಿದ್ದು ಅವನೊಂದಿಗೆ ಸಮರಸವಾಗಿರುತ್ತದೆ. ಸೃಷ್ಟಿಯ ಕಾಲದಲ್ಲಿ ಚಿಚ್ಛಕ್ತಿಯಿಂದೊಡಗೂಡಿದ ಪರಶಿವನಿಂದ ಉಳಿದ ಐದು ಶಕ್ತಿಗಳು ಕ್ರಮವಾಗಿ ಒಂದೊಂದರ ಸಾವಿರದ ಒಂದನೇ ಅಂಶದಿಂದ ಪ್ರಕಟವಾಗುತ್ತವೆ. ಈ ವಿಷಯವು ವಾತುಲಶುದ್ಧತಂತ್ರದಲ್ಲಿ ಹೀಗೆ ಪ್ರತಿಪಾದಿಸಲ್ಪಟ್ಟಿದೆ – "ಚಿಚ್ಛಕ್ತಿ ವಿಶಿಷ್ಟನಾದ ಪರಶಿವನು ಯೋಗಿಗಳನ್ನು ಅನುಗ್ರಹಿಸಲೋಸುಗ ಚಿಂತಿಸಿದೊಡನೆ ಅವನಲ್ಲಿ ಅವಿನಾಭಾವ ಸಂಬಂಧಿನಿಯಾಗಿದ್ದ ಚಿಚ್ಛಕ್ತಿಯ ಸಹಸ್ರಾಂಶದಿಂದ ಪರಾಶಕ್ತಿಯು, ಆ ಪರಾಶಕ್ತಿಯ ಸಹಸ್ರಾಂಶದಿಂದ ಆದಿಶಕ್ತಿಯು, ಆದಿಶಕ್ತಿಯ ಸಹಸ್ರಾಂಶದಿಂದ ಇಚ್ಛಾಶಕ್ತಿಯು, ಆ ಇಚ್ಛಾಶಕ್ತಿಯ ಸಹಸ್ರಾಂಶದಿಂದ ಜ್ಞಾನಶಕ್ತಿಯು, ಆ ಜ್ಞಾನಶಕ್ತಿಯ ಸಹಸ್ರಾಂಶದಿಂದ ಕ್ರಿಯಾಶಕ್ತಿಯು ಪ್ರಾದುರ್ಭವಿಸಿತು. (ವಾತುಲಶುದ್ಧತಂತ್ರ., ೧. ೨೪–೨೭)

ಈ ರೀತಿಯಾಗಿ ಐದು ವಿಧವಾಗಿ ವಿಭಾಗವನ್ನು ಹೊಂದಿದ ಆ ಚಿಚ್ಛಕ್ತಿಯೇ ಶಿವನ ಸೃಷ್ಟಿ ಮುಂತಾದ ವ್ಯವಹಾರಗಳಿಗೆ ಸಹಾಯಕವಾಗಿರುತ್ತದೆ. ಈ ವಿಧವಾಗಿ ಅವಿಭಾಗಪರಾಮರ್ಶದೆಶೆಯಿಂದ ವಿಭಾಗಪರಾಮರ್ಶಾವಸ್ಥೆಗೆ ಬಂದ ಈ ಶಕ್ತಿಯು ಯಾವಾಗ ಸತ್ತ್ವ, ರಜ ಮತ್ತು ತಮಗಳೆಂಬ ದ್ವಿಗುಣ ಸ್ವರೂಪವನ್ನು ತಾಳುತ್ತದೆಯೋ ಆಗ ಆ ಶಕ್ತಿಗೆ ವೀರಶೈವಸಿದ್ಧಾಂತದಲ್ಲಿ ಮಹಾಮಾಯೆ, ಊರ್ಧ್ವಮಾಯೆ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಇಂತಹ ಮಾಯೆಯಿಂದೊಡಗೂಡಿದ ಆ ಪರಶಿವನು ಮಹೇಶ್ವರನೆಂಬುದಾಗಿ ಕರೆಯಿಸಿಕೊಳ್ಳುವನು. ಇಲ್ಲಿ ಹೇಳಿರುವ ಈ ಮಾಯೆಯು ವೇದಾಂತಿಗಳು ಒಪ್ಪಿಕೊಳ್ಳುವ ಮಾಯೆಯಂತೆ ಮಿಥ್ಯಾರೂಪವಾದುದಲ್ಲ. ಆದರೆ "ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ" ಎಂಬ ಸಿದ್ಧಾಂತಾಗಮದ ಪ್ರಮಾಣದಂತೆ ಶಿವನೊಂದಿಗೆ ಸದಾ ಇರುವುದೇ ಮಾಯೆಯೆಂಬುದಾಗಿ ತಿಳಿದುಕೊಳ್ಳಬೇಕು. ಈ ಮಾಯಾ ವಿಶಿಷ್ಟನಾಗಿರುವುದರಿಂದ ಶಿವನು ಮಹೇಶ್ವರನೆಂದು ಕರೆಯಲ್ಪಡುತ್ತಾನೆ. ಈ ಮಾಯೆಯು ಶುದ್ಧವೆಂತಲೂ, ಅಶುದ್ಧವೆಂತಲೂ ಎರಡು ವಿಧವಾಗಿ ಇರುವುದು. ಶಿವನಿಗೆ ಉಪಾಧಿಯಾದ ಮಾಯೆಯು ಶುದ್ಧವಾದರೆ, ಜೀವನಿಗೆ ಉಪಾಧಿಯಾದುದು ಅಶುದ್ಧವೆನಿಸಿ ಕೊಳ್ಳುವುದು. ಇದನ್ನೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ಉಪಾಧಿಃ ಪುನರಾಖ್ಯಾತಃ ಶುದ್ಧಾಶುದ್ಧವಿಭೇದತಃ ।
ಶುದ್ಧೋಪಾಧಿಃ ಪರಾಮಾಯಾ ಸ್ವಾಶ್ರಯಾಽಮೋಹಕಾರಿಣೀ ॥

ಅಶುದ್ಧೋಪಾಧಿರಪ್ಯೇವಮವಿದ್ಯಾಶ್ರಯಮೋಹಿನೀ ।
ಅವಿದ್ಯಾಶಕ್ತಿಭೇದೇನ ಜೀವಾ ಬಹುವಿಧಾಃ ಸ್ಮೃತಾಃ ॥

(ಸಿ.ಶಿ., ೫. ೪೪–೪೫)

ಎಂದು ಹೇಳಲಾಗಿದೆ ಅಂದರೆ ಶುದ್ಧ ಮತ್ತು ಅಶುದ್ಧವೆಂಬುದಾಗಿ ಮಾಯೆಯು ಎರಡು ವಿಧವಾಗಿದ್ದು ಶುದ್ಧಮಾಯೆಗೆ 'ಪರಾಮಾಯೆ' ಎಂದು ಕರೆಯುತ್ತಾರೆ. ಇದು ತಾನು ಆಶ್ರಯಿಸಿದ ಶಿವನಿಗೆ ಮೋಹಾದಿಗಳನ್ನುಂಟು ಮಾಡುವುದಿಲ್ಲ. ಅಂತೆಯೇ ಈ ಶುದ್ಧ ಮಾಯಾಶಕ್ತಿಯುಕ್ತನಾದ ಶಿವನು ಸರ್ವಜ್ಞನೂ, ಸರ್ವಕರ್ತನೂ, ಮಹೇಶ್ವರನೂ ಮತ್ತು ನಿತ್ಯಮುಕ್ತನೂ ಎಂಬುದಾಗಿ ಕರೆಯಲ್ಪಡುತ್ತಾನೆ. ಇನ್ನು ಎರಡನೆಯದಾದ ಅಶುದ್ಧೋಪಾದಿಯು 'ಅವಿದ್ಯಾ' ಎಂಬುದಾಗಿ ಕರೆಯಲ್ಪಡುತ್ತದೆ. ಇದು ಜೀವಾತ್ಮನನ್ನು ಆಶ್ರಯಿಸಿಕೊಂಡಿದ್ದು ಅವನಲ್ಲಿ ಮೋಹಾದಿಗಳನ್ನು ಉಂಟುಮಾಡುತ್ತದೆ. ಈ ಅವಿದ್ಯೆಯು ಅನಂತರೂಪವನ್ನು ತಾಳುವುದರಿಂದ ಜೀವಾತ್ಮರೂ ಸಹ ಅನಂತರಾಗಿ ತೋರುತ್ತಿದ್ದಾರೆ. ಜೀವಾತ್ಮನಿಗೆ ಈ ಅವಿದ್ಯೆಯ ಆವರಣವಾಗಿರುವುದರಿಂದ ಇವನು ಅಲ್ಪಜ್ಞನೂ, ಅಲ್ಪಕರ್ತನೂ, ಬದ್ಧನೂ, ಅನಾದಿ ಶರೀರಿಯೂ, ಬ್ರಹ್ಮೈಕ್ಯ ಜ್ಞಾನವಿಹೀನನೂ ಆಗಿ ತಾನು ಮಾಡಿದ ಕರ್ಮಾನುಸಾರವಾಗಿ ದೇವ, ತಿರ್ಯಕ್ ಮತ್ತು ಮನುಷ್ಯಾದಿ ದೇಹಗಳನ್ನು ಧರಿಸುತ್ತ ಈ ಸಂಸಾರದಲ್ಲಿ ತಿರುಗುತ್ತಿರುತ್ತಾನೆ (ಸಿ.ಶಿ., ೫. ೪೭–೪೮)

ಮಹೇಶ್ವರನ ಕರ್ತವ್ಯ :

ಈ ಜಗತ್ತಿನಲ್ಲಿ ಸೃಷ್ಟಿ, ಸ್ಥಿತಿ ಮತ್ತು ಸಂಹಾರ(ಲಯ)ಗಳ ವ್ಯವಸ್ಥೆಗಾಗಿ ಉಳಿದ ದಾರ್ಶನಿಕರು ಈಶ್ವರನನ್ನು ಒಪ್ಪುವಂತೆ ವೀರಶೈವ ಸಿದ್ಧಾಂತದಲ್ಲಿಯೂ ಸಹ ಪ್ರಾಣಿಗಳ ಕರ್ಮಾನುಸಾರವಾಗಿ ಅವರ ಸೃಷ್ಟಿ ಮುಂತಾದ ವ್ಯವಹಾರಗಳನ್ನು ವ್ಯವಸ್ಥೆಗೊಳಿಸಲು ಪರಶಿವನ ಸಗುಣರೂಪಗಳಾದ ಮಾಯಾಶಕ್ತಿ ವಿಶಿಷ್ಟನಾದ ಮಹೇಶ್ವರನನ್ನು ಅಂಗೀಕರಿಸಲಾಗಿದೆ. ಪರಶಿವನು ಮಹೇಶ್ವರನಾದ ಪರಿಯು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಹೀಗೆ ಹೇಳಲಾಗಿದೆ – "ಅಪ್ರಾಕೃತ ಗುಣಗಳಿಗೆ ಆಧಾರಭೂತವೂ, ಅನಂತ ಮಹಿಮೆಗಳಿಂದಯುಕ್ತವೂ, ಕೋಟಿಸೂರ್ಯರಷ್ಟು ಪ್ರಖರವಾದ ತೇಜಸುಳ್ಳದ್ದೂ ಕೋಟಿ ಚಂದ್ರರಷ್ಟು ಕಾಂತಿಯುತವಾದದ್ದೂ, ವಿಶುದ್ಧ ಜ್ಞಾನಕ್ಕೆ ವಿಷಯವಾದುದೂ ಮತ್ತು ಯೋಗಿಗಳಿಗೆ ಮಾತ್ರ ಗೋಚರವಾದ ಆ ಪರಶಿವ ಬ್ರಹ್ಮವು ಈ ಜಗತ್ತನ್ನು ನಿರ್ಮಿಸಬೇಕೆಂಬ ಇಚ್ಛೆಯುಳ್ಳದಾದೊಡನೆ ಕಿಂಚಿತ್ ಸುಖಸ್ಫೂರ್ತಿಯಿಂದೊಡಗೂಡಿದ ಸ್ವರೂಪವನ್ನು ತಾಳುತ್ತದೆ (ಸಿ.ಶಿ., ೨. ೮–೧೧) ತಾತ್ಪರ್ಯವೇನೆಂದರೆ ವಿಮರ್ಶಾಶಕ್ತಿಯಿಂದೊಡಗೂಡಿದ ಆ ಪರಶಿವ ಬ್ರಹ್ಮವು ಸೃಷ್ಟಿಯನ್ನು ರಚಿಸಬೇಕೆಂಬ ಇಚ್ಛೆಯಿಂದ ಘೃತ–ಕಾಠಿಣ್ಯ ನ್ಯಾಯದಂತೆ ಅಂದರೆ ತಿಳಿದುಪ್ಪವೇ ಒಂದೆಡೆಯಲ್ಲಿ ತಂಪಿನ ಪ್ರಭಾವದಿಂದ ಘಟ್ಟಿದುಪ್ಪವಾಗುವಂತೆ ನಿಸ್ಸೀಮಸುಖ ಸ್ವರೂಪವಾದ ಆ ಪರಶಿವಬ್ರಹ್ಮವು ತನ್ನಿಚ್ಛೆಯಿಂದ ಕಿಂಚಿತ್ ಸುಖ

ಹಾಗೂ ಸ್ಫೂರ್ತಿಯ ಸ್ವರೂಪವನ್ನು ಹೊಂದುತ್ತದೆ. ಇದುವೇ ಪರಶಿವನ ಸಗುಣರೂಪವು. ಈ ಸಗುಣರೂಪವೇ ತನ್ನ ಇಚ್ಛಾ ಮಾತ್ರದಿಂದ ಲೀಲಾಜಾಲವಾಗಿ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹಗಳೆಂಬ ಪಂಚಕೃತ್ಯಗಳನ್ನು ನೆರವೇರಿಸುತ್ತಿರುತ್ತದೆ.

ಪ್ರಾಣಿಗಳ ಕರ್ಮಗಳೇ ಅರ್ಥಾತ್ ಅದೃಷ್ಟವೇ ಈ ಸೃಷ್ಟಿಗೆ ಕಾರಣವಾಗುತ್ತಿರಲು ಪುನಃ ಈ ಈಶ್ವರನನ್ನು ಒಪ್ಪುವ ಅವಶ್ಯಕತೆಯಾದರೂ ಏನು? ಎಂಬ ಪ್ರಶ್ನೆಯು ಜಿಜ್ಞಾಸುಗಳ ಮನದಲ್ಲಿ ಮೂಡುವುದು ಸಹಜವಾದುದು. ಈ ಜಿಜ್ಞಾಸೆಗೆ ಸಮಾಧಾನವೇನೆಂದರೆ ಪ್ರಾಣಿಗಳ ಅದೃಷ್ಟದಿಂದಲೇ ಸೃಷ್ಟಿಯಾಗುತ್ತಿದ್ದರೂ ಆ ಅದೃಷ್ಟವು ಸ್ವತಃ ಜಡರೂಪವಾಗಿರುತ್ತದೆ. ಆ ಜಡವಾದ ಅದೃಷ್ಟವನ್ನು ನಿಯಂತ್ರಿಸಿ ಅದಕ್ಕೆ ತಕ್ಕ ಫಲವನ್ನು ಕೊಡಲು ಸರ್ವಜ್ಞತ್ವಾದಿ ಉತ್ಕೃಷ್ಟ ಗುಣವುಳ್ಳ ಈಶ್ವರನನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇವನು ಸಾಕ್ಷಿಯಾಗಿದ್ದು ಎಲ್ಲವನ್ನೂ ನಿರ್ವಹಿಸುತ್ತಿರುತ್ತಾನೆ. ಈ ವಿಷಯವನ್ನು ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಹೀಗೆ ಹೇಳಿದ್ದಾರೆ – "ಈ ಜಗತ್ತಿನಲ್ಲಿಯ ಜೀವಿಗಳ ಸರ್ವ ವ್ಯವಹಾರಗಳಿಗೆ ಶಿವನು ಸಾಕ್ಷಿಯೂ, ಪ್ರೇರಕನೂ ಆಗಿರುತ್ತಾನೆ. ಸಂಸಾರದಲ್ಲಿ ಜನ್ಮತಾಳಿ ಬಂದ ಪ್ರತಿಯೊಬ್ಬ ಜೀವಿಗಳಿಗೆ ಅವರವರ ಕರ್ಮಾನುಸಾರವಾಗಿ ತಕ್ಕಫಲಗಳನ್ನು ಕೊಡುತ್ತಿರುತ್ತಾನೆ. ಈ ಕರ್ಮಫಲಗಳನ್ನು ಕೊಡುವಾಗ ಒಂದಿಷ್ಟನ್ನೂ ಸಹ ಹೆಚ್ಚುಕಡಿಮೆ ಮಾಡುವುದಿಲ್ಲ (ಸಿ.ಶಿ., ೫–೫೦)

ಶಿವನು ಈ ನಿಷ್ಪಕ್ಷಪಾತರೂಪವಾದ ವ್ಯವಹಾರವನ್ನು ಶ್ರೀ ಬಸವಣ್ಣನವರೂ ಸಹ ತಮ್ಮದೊಂದು ವಚನದಲ್ಲಿ ರೂಪಕವಾಗಿ ವರ್ಣಿಸಿದ್ದಾರೆ. ವ್ಯವಹಾರದಲ್ಲಿ ಒಬ್ಬ ಕಿರಾಣಿ ಅಂಗಡಿಯ ಶೆಟ್ಟಿಯು ಗಿರಾಕಿಗಳಿಗೆ ಅವರು ತಂದ ಹಣಕ್ಕೆ ಬರುವಷ್ಟು ಪದಾರ್ಥಗಳನ್ನು ಕೊಟ್ಟು ಕಳಿಸುವನು. ಶಿವನೆಂಬ ಶೆಟ್ಟಿಯೂ ಸಹ ಜೀವಿಗಳ ಕರ್ಮಫಲವನ್ನು ಕೊಡುತ್ತಿರುವಾಗ "ಅರ್ಧಕಾಣಿಯಗೆಲ್ಲ ಅರ್ಧಕಾಣಿಯ ಸೋಲ" ಎಂಬ ವಿಧದಲ್ಲಿ ವ್ಯವಹರಿಸುತ್ತಿರುತ್ತಾನೆ ಎಂಬುದು ಅವರ ವಚನದ ತಾತ್ಪರ್ಯವಾಗಿದೆ. ಅಂದರೆ ಗ್ರಾಹಕರು ತಂದ ಹಣಕ್ಕೆ ಹಾಗೂ ಅಂಗಡಿಯಲ್ಲಿರುವ ಪದಾರ್ಥಕ್ಕೆ ಪರಸ್ಪರ ಸಂಬಂಧವಿದ್ದರೂ ಆ ವ್ಯವಹಾರವನ್ನು ನಿಯಂತ್ರಿಸಲು ಓರ್ವ ವ್ಯಕ್ತಿಯು ಹೇಗೆ ಅವಶ್ಯವಾಗಿ ಬೇಕೋ ಅದೇ ಪ್ರಕಾರವಾಗಿ ಪ್ರಾಣಿಗಳ ಅದೃಷ್ಟಾನುರೂಪವಾಗಿ ಅವುಗಳಿಗೆ ಫಲವನ್ನು ಕೊಡಲು ಅವರವರ ಅದೃಷ್ಟವನ್ನರಿಯಬಲ್ಲ ಸರ್ವಜ್ಞನಾದ ಈಶ್ವರನನ್ನು ಒಪ್ಪಿಕೊಳ್ಳದೆ ಗತ್ಯಂತರವಿರುವುದಿಲ್ಲ. ಆದ್ದರಿಂದ ಈಶ್ವರನನ್ನು ಕರ್ಮಯಂತ್ರ ನಿಯಂತ್ರಕನನ್ನಾಗಿ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಬೋಧಿಸಲಾಗಿದೆ.

ಈ ಶಿವನು ಕೇವಲ ಕರ್ಮನಿಯಂತ್ರಕ ಮಾತ್ರನಾಗಿರದೆ ಜೀವಿಗಳಿಗೆ ಹಿತಮಾರ್ಗೋಪದೇಶಕನೂ ಆಗಿರುತ್ತಾನೆ. ಈ ವಿಷಯವು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ದೇಹಿನಾಂ ಪ್ರೇರಕಃ ಶಂಭುರ್ಹಿತಮಾರ್ಗೋಪದೇಶಕಃ ।
ಪುನರಾವೃತ್ತಿರಹಿತಮೋಕ್ಷಮಾರ್ಗೋಪದೇಶಕಃ ॥

(ಸಿ.ಶಿ., ೫–೫೧)

ಎಂದು ಹೇಳಲಾಗಿದೆ. ಅಂದರೆ ಈ ಸಂಸಾರದಲ್ಲಿ ತಿರುಗುತ್ತಿರುವ ಜೀವಿಗಳಿಗೆ ಪ್ರೇರಕಶಕ್ತಿಯಾಗಿರುವ ಪರಮಾತ್ಮನು ಪ್ರತಿಯೊಬ್ಬ ಜೀವಿಗಳ ಹೃದಯದಲ್ಲಿದ್ದು ಹಿತೋಪದೇಶವನ್ನು ಮತ್ತು ಮುಕ್ತಿಯ ತತ್ತ್ವೋಪದೇಶವನ್ನೂ ಸಹ ಮಾಡುತ್ತಿರುತ್ತಾನೆ. ಪ್ರತಿಯೊಬ್ಬ ಜೀವಿಯು ತಾನು ಜಗತ್ತಿನಲ್ಲಿ ವ್ಯವಹರಿಸುತ್ತಿರುವಾಗ ಅನೇಕ ಸಾರೆ ಶಾಸ್ತ್ರ ನಿಷಿದ್ಧ ವ್ಯವಹಾರಗಳನ್ನು ಮಾಡುತ್ತಿರುತ್ತಾನೆ. ಆಗ ಅವನ ಅಂತರಂಗದಿಂದ ಒಂದು ವಾಣಿಯು ಇದು ತಪ್ಪು ಎಂಬುದಾಗಿ ಹೊರಹೊಮ್ಮುತ್ತಿರುತ್ತದೆ. ಅದುವೇ ನಮ್ಮ ವ್ಯವಹಾರಕ್ಕೆ ಸಾಕ್ಷಿಯಾಗಿ ಇರುವ ಈಶ್ವರನ ಹಿತೋಪದೇಶವು. ಜೀವಿಯು ಆ ವಾಣಿಯತ್ತ ಲಕ್ಷ್ಯಕೊಟ್ಟರೆ ಸುಧಾರಿಸುವನೇ ವಿನಹ ಅದನ್ನು ನಿರ್ಲಕ್ಷಿಸಿದರೆ ಅವನೆಂದೂ ಸುಧಾರಿಸಲಾರ. ಅಂತರ್ವಾಣಿಯನ್ನು ನಿರ್ಲಕ್ಷಿಸಿದವನು ಬಹಿರಂಗದಲ್ಲಿ ಬೇರಾರ ಉಪದೇಶದಿಂದಲೂ ಸುಧಾರಿಸಲಾರನು. ಆದ್ದರಿಂದ ಶಿವನ ಅಂತರ್ವಾಣಿಯತ್ತ ಲಕ್ಷ್ಯಕೊಟ್ಟಾಗಲೇ ಜೀವಿಯ ಕಲ್ಯಾಣವಾಗುವುದು.

ಮೇಲಿನ ವಿಚಾರಗಳಿಂದ ತಿಳಿದು ಬರುವುದೇನೆಂದರೆ ಪ್ರಾಣಿಗಳ ಜನನ ಮರಣಾದಿ ಆ ಕರ್ಮಗಳನ್ನು ನಿಯಂತ್ರಿಸಿ ಅವುಗಳಿಗೆ ತಕ್ಕ ಫಲವನ್ನು ಕೊಡಲು ಸಾಕ್ಷಿಯೂ ಕರ್ಮಾಧ್ಯಕ್ಷನೂ ಆದ ಶಿವನನ್ನು ಅವಶ್ಯವಾಗಿ ಒಪ್ಪಿಕೊಳ್ಳಬೇಕಾಗುತ್ತದೆ.

ಸೃಷ್ಟಿಯು ಶಿವನ ಲೀಲೆಯು :

ಯಾವುದೊಂದು ಕಾರ್ಯವನ್ನು ಯಾರಾದರೂ ಮಾಡಬೇಕಾದರೆ ಅಲ್ಲಿ ಯಾವುದಾದರೊಂದು ಪ್ರಯೋಜನವಿದ್ದೇ ಇರುತ್ತದೆ. ಪ್ರಯೋಜನವಿಲ್ಲದೆ ಮಂದ ಬುದ್ಧಿಯ ಮನುಷ್ಯನೂ ಸಹ ಕಾರ್ಯದಲ್ಲಿ ಪ್ರವೃತ್ತನಾಗಲಾರ ಎಂಬ ನೀತಿ ವಾಕ್ಯವು ಪ್ರಸಿದ್ಧವಾಗಿದೆ. ಹೀಗಿರುವಾಗ ಇಂತಹ ವಿಶಾಲವಾದ ಸೃಷ್ಟಿಯನ್ನು ಶಿವನು ರಚಿಸಬೇಕಾದರೆ ಅವನದೇ ಆದ ಏನಾದರೂ ಪ್ರಯೋಜನವಿದೆಯೆಂದು ಹೇಳಿದರೆ ಆತನ ನಿತ್ಯತೃಪ್ತತ್ವಕ್ಕೆ ಭಂಗಬರುವುದು. ಇನ್ನು ಪ್ರಯೋಜನವಿಲ್ಲದೆ ಪ್ರವೃತ್ತನಾಗುತ್ತಾನೆಂದರೆ ಆತನು ಉನ್ಮತ್ತ ಅರ್ಥಾತ್ ಹುಚ್ಚನೆಂದೂ ಕರೆಯಬೇಕಾಗುವುದು. ಹೀಗೆ ಎರಡು ವಿಧದಲ್ಲಿಯೂ ದೋಷಪ್ರಾಪ್ತವಾಗಲು

ಅದರ ನಿವಾರಣೆಗಾಗಿ ವೀರಶೈವಾಚಾರ್ಯರು ಲೀಲಾವಾದವನ್ನು ಸ್ವೀಕರಿಸಿದ್ದಾರೆ. ಅಂದರೆ ಈ ಸೃಷ್ಟಿಯು ಶಿವನ ಒಂದು ಸಹಜವಾದ ಲೀಲೆಯು. "ಲೋಕವತ್ತು ಲೀಲಾಕೈವಲ್ಯಮ್" ಎಂಬ ಈ ಬ್ರಹ್ಮಸೂತ್ರದಲ್ಲಿ ವ್ಯಾಸಮಹರ್ಷಿಗಳೂ ಸಹ ಈ ಲೀಲಾವಾದವನ್ನು ಒಪ್ಪಿಕೊಂಡಿದ್ದಾರೆ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶಿವನ ಈ ಲೀಲೆಯನ್ನು –

ಸ್ವೇಚ್ಛಾ ವಿಗ್ರಹಯುಕ್ತಾಯ ಸ್ವೇಚ್ಛಾವರ್ತನವರ್ತಿನೇ ।
ಸ್ವೇಚ್ಛಾಕೃತ ತ್ರಿಲೋಕಾಯ ನಮಃ ಸಾಂಭಾಯ ಶಂಭವೇ ॥

(ಸಿ.ಶಿ., ೧–೬)

ಎಂದು ವಿವರಿಸಿದ್ದಾರೆ. ಅಂದರೆ ಶಿವನು ತನ್ನ ಇಚ್ಛಾಮಾತ್ರದಿಂದ ಅನೇಕ ರೂಪಗಳನ್ನು ಧರಿಸಿ ಈ ಮೂರು ಲೋಕಗಳನ್ನೆಲ್ಲ ಕೇವಲ ತನ್ನ ಸಂಕಲ್ಪಮಾತ್ರದಿಂದ ಸೃಷ್ಟಿಸುತ್ತಾನೆ. ವಿಶೇಷ ಪ್ರಯೋಜನವಿಲ್ಲದ ಅತ್ಯಂತ ಅಲ್ಪಾಯಾಸದಿಂದ ಸಾಧ್ಯವಾಗುವ ವ್ಯವಹಾರಕ್ಕೆ ಲೀಲೆಯೆಂದು ಕರೆಯುತ್ತಾರೆ. ಅನಂತ ವೈಚಿತ್ರ್ಯಗಳಿಂದ ಕೂಡಿದ ಈ ವಿಶಾಲವಾದ ಸೃಷ್ಟಿಯು ಶಿವನ ಕೇವಲ ಇಚ್ಛೆಯಿಂದ ನಿರ್ಮಾಣವಾಗುತ್ತದೆಯೆಂದಾಗ ಇದರಲ್ಲಿ ಅಲ್ಪಾಯಾಸತೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಇದೂ ಅಲ್ಲದೆ ನಿತ್ಯತೃಪ್ತನೂ, ಪರಿಪೂರ್ಣನೂ ಆದ ಶಿವನಿಗೆ ಸೃಷ್ಟಿಯನ್ನು ನಿರ್ಮಿಸುವಲ್ಲಿ ಅದಾವ ಪ್ರಯೋಜನವೂ ಕಂಡು ಬರುವುದಿಲ್ಲ. ಅಂತೆಯೇ ಶಿವನ ಪಂಚಕತ್ಯಗಳೆಲ್ಲ ಅವನ ಲೀಲೆಗಳೆಂದೇ ತಿಳಿದುಕೊಳ್ಳಬೇಕು.

ಓರ್ವ ಸರ್ವೈಶ್ವರ್ಯ ಸಂಪನ್ನನಾದ ಚಕ್ರವರ್ತಿಯು ಆಟ–ಪಾಠಾದಿಗಳಲ್ಲಿ ಸಹಜವಾಗಿ ಲೀಲಾವಿನೋದದಲ್ಲಿ ವ್ಯವಹರಿಸುತ್ತಿರುವಂತೆ, ಶಿವನೂ ಸಹ ಸೃಷ್ಟ್ಯಾದಿ ಲೀಲೆಗಳನ್ನು ಮಾಡುತ್ತಿರುತ್ತಾನೆ. ಅಂದರೆ ಈ ಜಗತ್ತನ್ನು ಸೃಷ್ಟಿಸುವ, ಪಾಲಿಸುವ, ಸಂಹರಿಸುವ, ನಿಗ್ರಹಿಸುವ ಮತ್ತು ಅನುಗ್ರಹಿಸುವ ವ್ಯವಹಾರದಲ್ಲಿ ಆತನಿಗೆ ಕಿಂಚಿತ್ತೂ ದೈಹಿಕ ಇಲ್ಲವೆ ಮಾನಸಿಕ ಆಯಾಸವು ಉಂಟಾಗುವುದಿಲ್ಲವೆಂಬ ತಾತ್ಪರ್ಯವು.

ಶಿವನು ಪಕ್ಷಪಾತಿಯಲ್ಲ :

ಶಿವನ ಲೀಲೆಯಿಂದ ಜನಿಸಿದ ಈ ಸೃಷ್ಟಿಯು ಅನಂತ ವಿಷಮತೆಯಿಂದ ಕೂಡಿದೆ. ಶಾಸ್ತ್ರಕಾರರು ಇಲ್ಲಿರುವ ಜೀವಿಗಳನ್ನು ಉದ್ಭಿಜ, ಸ್ವೇದಜ, ಅಂಡಜ ಮತ್ತು ಜರಾಯುಜವೆಂಬುದಾಗಿ ಮೊದಲು ನಾಲ್ಕು ಪ್ರಕಾರವಾಗಿ ವಿಂಗಡಿಸಿ ಪುನಃ ಒಂದೊಂದನ್ನು ಇಪ್ಪತ್ತೊಂದು ಲಕ್ಷ ವಿಧವಾಗಿ ವಿಭಾಗಿಸಿ ಜೀವಿಗಳನ್ನು ಎಂಭತ್ತನಾಲ್ಕು ಲಕ್ಷ ಪ್ರಕಾರವಾಗಿ ಸೃಷ್ಟಿ ವಿಭಾಗಿಸಿದ್ದಾನೆ. ಇಲ್ಲಿರುವ ಜೀವಿಗಳಲ್ಲಿ ಕೆಲವರು ದೇವದೇಹ ಧಾರಿಗಳಾದರೆ, ಇನ್ನು ಕೆಲವರು ಮನುಷ್ಯ

ದೇಹಧಾರಿಗಳಾಗಿದ್ದಾರೆ. ಇನ್ನು ಬೇರೆ ಜೀವಿಗಳು ಕ್ರಿಮಿಕೀಟಾದಿ ದೇಹಗಳನ್ನು ಧರಿಸಿದರೆ, ಬೇರೆ ಕೆಲ ಜೀವಿಗಳು ಸ್ಥಾವರ ರೂಪಗಳನ್ನು ಧರಿಸಿರುತ್ತವೆ. ಈ ಪ್ರಕಾರವಾಗಿರದೆ ಅನೇಕ ವಿಷಮತೆಯಿಂದೊಡಗೂಡಿರುತ್ತದೆ.

ಈ ವಿಷಮತೆಗೆ ಕಾರಣರಾರು? ಶಿವನು ಕಾರಣನೆಂದರೆ ಆತನನ್ನು ಪಕ್ಷಪಾತಿಯೆಂದು ಕರೆಯಬೇಕಾಗುತ್ತದೆ. ಒಂದು ವೇಳೆ ಅವನು ಪಕ್ಷಪಾತಿಯಲ್ಲವೆಂದರೆ ಸೃಷ್ಟಿಯೆಲ್ಲಾ ಏಕರೂಪವಾಗಿರಬಹುದಾಗಿತ್ತು ಎಂಬುದೊಂದು ಜಟಿಲವಾದ ಸಮಸ್ಯೆಯು ಈ ಲೀಲಾವಾದಕ್ಕೆ ಅಡ್ಡ ಬಂದು ನಿಂತಾಗ ಶ್ರೀ ಜಗದ್ಗುರು ರೇಣುಕ ಭಗವದ್ಪಾದರು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ಅವಿದ್ಯಾಮೋಹಿತಾ ಜೀವಾ ಬ್ರಹ್ಮೈಕ್ಯ ಜ್ಞಾನವರ್ಜಿತಾಃ ।
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ ॥

ದೇವತಿರ್ಯಙ್ಮನುಷ್ಯಾದಿ ನಾನಾಯೋನಿವಿಭೇದತಃ ।
ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ ॥

ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮಕೇವಲಮ್ ।

(ಸಿ.ಶಿ., ೫. ೪೭–೪೯)

ಈ ತೆರನಾಗಿ ಅದನ್ನು ಪರಿಹರಿಸಿದ್ದಾರೆ. ಅಂದರೆ ಈ ಜಗತ್ತಿನಲ್ಲಿರುವ ವೈಷಮ್ಯಕ್ಕೆ ಅರ್ಥಾತ್ ವಿಷಮತೆಗೆ ಶಿವನು ಕಾರಣನಾಗಿರದೆ ಆಯಾ ಜೀವಿಗಳ ಕರ್ಮಗಳೇ ಕಾರಣಗಳಾಗಿರುತ್ತವೆ. ತಮ್ಮ ತಮ್ಮ ಕರ್ಮಾನುಸಾರವಾಗಿ ದೇಹಗಳನ್ನು ಧರಿಸಿಕೊಂಡ ಜೀವಿಗಳು ಚಕ್ರದಲ್ಲಿಯ ಅರೆಗಳಂತೆ ಸದಾ ತಿರುಗುತ್ತಿರುತ್ತವೆ. ಆದ್ದರಿಂದ ಜಾತಿ ಅರ್ಥಾತ್ ಜನ್ಮ, ಆಯು ಮತ್ತು ಭೋಗಗಳ ವಿಷಮತೆಗೆ ಕರ್ಮವೇ ಕಾರಣವಾಗಿರುತ್ತದೆ ಎಂಬುದಾಗಿ ಸ್ವೀಕರಿಸಲು ಶಿವನ ಲೀಲೆಗೆ ಯಾವ ಅಡೆತಡೆಗಳೂ ಉಳಿಯುವುದಿಲ್ಲ. ಆದ್ದರಿಂದ ಸೃಷ್ಟಿಯ ವಿಷಮತೆಯಿಂದ ಶಿವನನ್ನು ಪಕ್ಷಪಾತಿಯೆಂದು ಹೇಳಲಾಗುವುದಿಲ್ಲ. ಪ್ರಾಣಿಗಳ ಕರ್ಮಗಳೇ ಸೃಷ್ಟಿಯ ವಿಷಮತೆಗೆ ಕಾರಣವಾಗಿದ್ದು ಶಿವನು ಮಾತ್ರ ಆ ಕರ್ಮರೂಪಿಯಾದ ಯಂತ್ರವನ್ನು ನಿಯಂತ್ರಿಸುವವನಾಗಿದ್ದಾನೆ. ಇದರಿಂದ ಸೃಷ್ಟಿಗೆ ಶಿವನು ನಿಮಿತ್ತಮಾತ್ರನೆಂಬುದಾಗಿ ಹೇಳಬೇಕಾಗುತ್ತದೆ.

ಶಿವನು ಪ್ರಾಣಿಗಳನ್ನು ಸೃಷ್ಟಿಸುವಾಗ ಜೀವಿಗಳ ಕರ್ಮವನ್ನು ಅನುಸರಿಸಿ ಸೃಷ್ಟಿಸುತ್ತಾನೆಂದು ಇಲ್ಲಿಯವರೆಗೆ ಹೇಳಿದಂತಾಯಿತು. ಹೀಗೆ ಪ್ರಾಣಿಗಳ ಕರ್ಮಾನುಸಾರವಾಗಿ ಶಿವನು ಸೃಷ್ಟಿಸುವುದಾದರೆ ಅವನನ್ನು ಸರ್ವಶಕ್ತನೆಂದು ಅದು ಹೇಗೆ ಕರೆಯಲು ಸಾಧ್ಯ? ಒಂದು ವೇಳೆ ಕರ್ಮವನ್ನಪೇಕ್ಷಿಸದೇ ಸೃಷ್ಟಿ ಮಾಡುತ್ತಾನೆಂದರೆ ಪುನಃ ವೈಷಮ್ಯ ದೋಷವು ಪ್ರಾಪ್ತವಾಗುವುದೆಂಬ ಸಂಶಯವು

ಬರುವುದು ಸಹಜವಾದುದು. ಅದಕ್ಕೆ ಸಮಾಧಾನವೇನೆಂದರೆ ತಾನೇ ಮಾಡಿದ ನಿಯಮಗಳನ್ನು ತಾನು ಪರಿಪಾಲಿಸಿದರೆ ಅದಾವ ದೋಷವೂ ಬರುವುದಿಲ್ಲ ವೆಂಬುದನ್ನು ಇಲ್ಲಿ ತಿಳಿದುಕೊಳ್ಳಬೇಕು. ಪ್ರಾಣಿಗಳ ಕರ್ಮಾನುಸಾರವಾಗಿಯೇ ಸೃಷ್ಟಿಯಾಗಬೇಕೆಂಬುದು ಶಿವನೇ ಮಾಡಿದ ನಿಯಮವಾಗಿರುತ್ತದೆ. "ಪುಣ್ಯಃ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ" (ಬೃಹದಾರಣ್ಯಕೋಪನಿಷತ್., ೪-೪-೫) ಎಂಬ ಶೃತಿವಚನದಲ್ಲಿ ಇದು ಸ್ಪಷ್ಟವಾಗಿ ತೋರುವುದು. ಅಂದರೆ ಶಿವನಿಂದ ಹೊರಹೊರಟ ನಿಗಮಾಗಮಗಳು ಶಿವನು ಮಾಡಿದ ಸಂವಿಧಾನವು. ಆ ಸಂವಿಧಾನದಂತೆ ಶಿವನೂ ಸಹ ನಡೆಯಬೇಕಾಗುವುದು. ಹಾಗೆಂದ ಮಾತ್ರಕ್ಕೆ ಅವನು ಅಸ್ವತಂತ್ರನೆನ್ನಲು ಬರುವುದಿಲ್ಲ. ನಮ್ಮ ದೇಶದ ಸಂವಿಧಾನವನ್ನು ಒಬ್ಬ ಸಾಮಾನ್ಯ ಪ್ರಜೆಯು ಪರಿಪಾಲಿಸುವಂತೆ ರಾಷ್ಟ್ರಪತಿಯೂ ಸಹ ಪರಿಪಾಲಿಸಲೇ ಬೇಕಾಗುತ್ತದೆ. ಹಾಗೆಂದ ಮಾತ್ರಕ್ಕೆ ರಾಷ್ಟ್ರಪತಿಗಿರುವ ಅಧಿಕಾರಕ್ಕೆ ಅದಾವ ಕುಂದೂ ಬರುವುದಿಲ್ಲ. ಅದಕ್ಕೆ ವಿಪರೀತವಾಗಿ ಸಂವಿಧಾನವನ್ನು ಪರಿಪಾಲಿಸುವ ರಾಷ್ಟ್ರಪತಿಗೆ ಇನ್ನೂ ಹೆಚ್ಚಿನ ಮನ್ನಣೆಯು ದೊರೆಯುತ್ತದೆ. ಇದೇ ಪ್ರಕಾರವಾಗಿ ಶಿವನು ಜೀವಿಗಳ ಕರ್ಮವನ್ನು ಅನುಸರಿಸಿ ಸೃಷ್ಟಿಮಾಡಿದ ಮಾತ್ರದಿಂದ ಅವನ ಯಾವ ಸ್ವಾತಂತ್ರ್ಯಕ್ಕೂ ಭಂಗವಿರುವುದಿಲ್ಲೆಂಬುದಾಗಿ ತಿಳಿದುಕೊಳ್ಳಬೇಕು.

ಬೇರೆ ಬೇರೆ ಯಂತ್ರಗಳಿಗೆ ಸಂಬಂಧಪಟ್ಟ ವಿದ್ಯುತ್ತು ಒಂದೇ ಆಗಿದ್ದರೂ ಆಯಾ ಯಂತ್ರಗಳಿಂದ ಕಾರ್ಯಗಳು ಬೇರೆ ಬೇರೆಯಾಗುವಂತೆ ಶಿವನ ಪ್ರೇರಕ ಶಕ್ತಿಯಿಂದ ಜೀವಿಗಳ ಅನೇಕ ವಿಧಗಳಾದ ಕರ್ಮಗಳು ಭಿನ್ನ ಭಿನ್ನ ಫಲಗಳನ್ನು ಕೊಡುತ್ತಿರುವುದಾಗಿ ಸ್ವೀಕರಿಸಲು ಯಾವ ದೋಷವೂ ಅಡ್ಡಬರಬಾರದು. ಆದ್ದರಿಂದ ಸೃಷ್ಟಿಗೆ ಈಶ್ವರನು ಕಾರಣನಾಗಿದ್ದರೂ ಸೃಷ್ಟಿಯ ವೈಚಿತ್ರ್ಯಕ್ಕೆ ಪ್ರಾಣಿಗಳ ಕರ್ಮಗಳು ಕಾರಣವೆಂಬುದಾಗಿ ಒಪ್ಪಿಕೊಳ್ಳಬೇಕಾಗುತ್ತದೆ.

ಜಗತ್ತಿನ ಸೃಷ್ಟಿಗೆ ಕಾರಣನಾದ ಶಿವನು ವೇದಾಗಮಗಳ ಆವಿರ್ಭಾವಕ್ಕೂ ಕಾರಣನಾಗಿದ್ದಾನೆ. ಅಂತೆಯೇ ಮಹರ್ಷಿ ವ್ಯಾಸನು "ಶಾಸ್ತ್ರಯೋನಿತ್ವಾತ್" (ಬ್ರ. ಸೂ., ೧-೧-೩) ಎಂಬ ಸೂತ್ರದಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾನೆ. ಶಿವನಿಗಿರುವ ಪಂಚಮುಖಗಳಲ್ಲಿ ಸದ್ಯೋಜಾತಮುಖದಿಂದ ಋಗ್ವೇದವೂ, ವಾಮದೇವ ಮುಖದಿಂದ ಯಜುರ್ವೇದವೂ, ಅಘೋರಮುಖದಿಂದ ಸಾಮವೇದವೂ, ತತ್ಪುರುಷ ಮುಖದಿಂದ ಅಥರ್ವಣವೇದವೂ ಮತ್ತು ಈಶಾನಮುಖದಿಂದ ಕಾಮಿಕಾದಿ ವಾತುಲಾಂತಗಳಾದ ಇಪ್ಪತ್ತೆಂಟು ಶಿವಾಗಮಗಳು ಆವಿರ್ಭವಿಸಿದುವು ಎಂಬುದಾಗಿ ಶ್ರೀಪತಿ ಪಂಡಿತಾರಾಧ್ಯರು ಮೇಲಿನ ಸೂತ್ರದ ಭಾಷ್ಯವನ್ನು ಬರೆಯುವಾಗ ಪ್ರತಿಪಾದಿಸಿದ್ದಾರೆ.

ಹೀಗೆ ಒಟ್ಟಿನಲ್ಲಿ ಈ ಸಮಗ್ರ ವಿಚಾರದಿಂದ ತಿಳಿದುಬರುವುದೇನೆಂದರೆ

ಜಗತ್ತಿಗೆ ಸೃಷ್ಟ್ಯಾದಿ ವ್ಯವಹಾರಗಳನ್ನು ನಿರ್ವಹಿಸಲು ಪ್ರಾಣಿಗಳ ಅದೃಷ್ಟವನ್ನು ನಿಯಂತ್ರಿಸಲು ಮತ್ತು ವೇದಾಗಮಾದಿಗಳನ್ನು ಆವಿರ್ಭವಿಸಲು ಅಂದರೆ ಪ್ರಕಟ್ಯಗೊಳಿಸಲು ಸರ್ವೇ ಸಾಮಾನ್ಯ ಜೀವಿಗಳಿಗಿಂತಲೂ ಸರ್ವಜ್ಞನೂ, ಸರ್ವಶಕ್ತನೂ ಆದ ಶಿವನನ್ನು ವೀರಶೈವ ಆಚಾರ್ಯರು ಒಪ್ಪಿಕೊಂಡಿದ್ದಾರೆ. ಈ ಪೂರ್ವದಲ್ಲಿ ವಿಚಾರಮಾಡಿದಂತೆ ಚಿಚ್ಛಕ್ತಿ ವಿಶಿಷ್ಟವಾದ ಪರಶಿವನೇ ಮಾಯಾಶಕ್ತಿ ವಿಶಿಷ್ಟನಾಗಿ ಮಹೇಶ್ವರನೆನಿಸಿ ಈ ಜಗತ್ತಿನ ಆಗು–ಹೋಗುಗಳನ್ನು ನೋಡುತ್ತಿರುತ್ತಾನೆ. ಇದು ಆ ಪರಶಿವನ ಲೀಲಾವಸ್ಥೆಯು. ಪ್ರಪಂಚದ ಲೀಲಾದಿ ವ್ಯವಹಾರಗಳಿಲ್ಲದಿರುವಾಗ ಅವನು ತಾನೇ ತಾನಾಗಿ ಕೇವಲಾವಸ್ಥೆಯಲ್ಲಿ ಅರ್ಥಾತ್ ಕೈವಲ್ಯ ಸ್ಥಿತಿಯಲ್ಲಿ ಇರುತ್ತಾನೆ. ಇದೇ ವಿಚಾರವನ್ನೇ "ಲೀಲೆಯಾದರೆ ಉಮಾಪತಿ, ಲೀಲೆ ತಪ್ಪಿದೊಡೆ ಸ್ವಯಂಭೂ" ಎಂಬುದಾಗಿ ಶರಣರೂ ಸಹ ಶಿವನ ಈ ಉಭಯವಿಧ ಸ್ವರೂಪವನ್ನು ತಮ್ಮ ವಚನ ವಾಙ್ಮಯದಲ್ಲಿ ಹೇಳಿದ್ದನ್ನೂ ಸಹ ಕಾಣಬಹುದು.

ಸಿದ್ಧಾಂತಶಿಖಾಮಣಿಯಲ್ಲಿ ಜೀವಸ್ವರೂಪ :

ಈ ಜಗತ್ತಿನಲ್ಲಿ ಜನನ, ಮರಣ, ಬಂಧ, ಮೋಕ್ಷ ಮೊದಲಾದ ವ್ಯವಹಾರಗಳಿಗೆ ಕೇಂದ್ರಬಿಂದುವೆಂದರೆ ಜೀವಾತ್ಮನು. ಈ ಜೀವಾತ್ಮನ ಸ್ವರೂಪದ ವಿಷಯದಲ್ಲಿ ಭಾರತೀಯ ತತ್ತ್ವ ಚಿಂತಕರು ಭಿನ್ನಭಿನ್ನ ವಿಚಾರಧಾರೆಯನ್ನು ಅರುಹಿದ್ದಾರೆ. ಅದರಲ್ಲಿ ವೀರಶೈವ ಆಚಾರ್ಯರು ತಮ್ಮದೇ ಆದ ರೀತಿಯಲ್ಲಿ ಜೀವಾತ್ಮನ ಬಗ್ಗೆ ಅನೇಕ ವಿಚಾರಗಳನ್ನು ತಿಳಿಸಿದ್ದುಂಟು. ವೀರಶೈವ ಧರ್ಮದ ಧರ್ಮಗ್ರಂಥವೆಂದೇ ಪ್ರಸಿದ್ಧವಾಗಿರುವ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ – "ಅನಾದ್ಯವಿದ್ಯಾಸಂಬಂಧಾತ್ತ ದಂಶೋ ಜೀವನಾಮಕಃ" (ಸಿ.ಶಿ., ೫–೩೦) ಎಂಬುದಾಗಿ ಜೀವಾತ್ಮನ ಸ್ವರೂಪವನ್ನು ನಿರೂಪಿಸಲಾಗಿದೆ. ಅಂದರೆ ಸಚ್ಚಿದಾನಂದ ಸ್ವರೂಪನೂ, ನಿರ್ಗುಣನೂ, ನಿರಾಕಾರನೂ, ಪ್ರಪಂಚರಹಿತನೂ ಆದ ಆ ಪರಶಿವನ ಅಂಶವೇ ಜೀವಾತ್ಮನು. ಈ ಅಂಶಕ್ಕೆ ಜೀವಭಾವ ಬರಲು ಅನಾದಿಯಾದ ಅವಿದ್ಯೆಯೇ ಕಾರಣವಾಗಿರುತ್ತದೆ. ಅಂದರೆ ಈ ಅವಿದ್ಯೆಯಿಂದ ಆವೃತವಾದ ಪರಶಿವನ ಅಂಶವೇ 'ಜೀವ' ಎಂಬುದಾಗಿ ತಿಳಿದುಕೊಳ್ಳಬೇಕು.

ಅಂಶವೆಂದರೆ "ಅನಾವಿಷ್ಕೃತಾಖಿಲಶಕ್ತಿಮತ್ವಮಶತ್ವಮ್" ಎಂಬ ಉಕ್ತಿಗನುಸಾರ ವಾಗಿ ತನ್ನಲ್ಲಿರುವ ಸಂಪೂರ್ಣ ಶಕ್ತಿಗಳ ವಿಕಾಸವಾಗದಿರುವ ಅವಸ್ಥೆ ಎಂಬುದಾಗಿ ತಿಳಿದುಕೊಳ್ಳಬೇಕು. ಶಿವನಲ್ಲಿರುವ ಸರ್ವಜ್ಞತ್ವ, ಸರ್ವಕರ್ತೃತ್ವ, ಪರಿಪೂರ್ಣತ್ವ, ನಿತ್ಯತ್ವ ಮತ್ತು ವ್ಯಾಪಕತ್ವ ರೂಪಗಳಾದ ಶಕ್ತಿಗಳೇ ಸಂಕೋಚಗೊಂಡು ಕ್ರಮವಾಗಿ ಕಲಾ, ವಿದ್ಯಾ, ರಾಗ, ಕಾಲ ಮತ್ತು ನಿಯತಿಯೆಂಬ 'ಪಂಚ ಕಂಚುಕ'ಗಳಾಗಿ

ಜೀವನನ್ನು ಆವರಿಸುತ್ತವೆ. ಅಂತೆಯೇ ಆ ಜೀವನು ಅಲ್ಪಕರ್ತೃ, ಅಲ್ಪಜ್ಞ, ಅಪೂರ್ಣ, ಅನಿತ್ಯ ಮತ್ತು ಅವ್ಯಾಪಕನಾಗಿ ವ್ಯವಹರಿಸುತ್ತಿರುತ್ತಾನೆ. ಹೀಗೆ ಶಕ್ತಿಯ ಸಂಕೋಚದಿಂದ ಶಿವನ ಅಂಶವೇ ಜೀವ ಎಂಬುದಾಗಿ ಕರೆಯಲ್ಪಡುತ್ತದೆ.

ಈ ಜೀವನು ತನಗೆ ಉಪಾಧಿಯಾದ ಅವಿದ್ಯೆಯ ಮೋಹಕ್ಕೊಳಗಾಗಿ ಶಿವಾದ್ವೈತ ಜ್ಞಾನವಿಲ್ಲದೆ ತಾನು ಮಾಡಿದ ಕರ್ಮಾನುಸಾರವಾಗಿ ಸಂಸಾರದಲ್ಲಿ ನಾನಾ ಯೋನಿಗಳೊಳಗೆ ತಿರುಗುತ್ತಿರುತ್ತಾನೆ. (ಸಿ.ಶಿ., ೫. ೪೭–೪೯). ಅಂತೆಯೇ ಈ ಜೀವತ್ವವು ಅನಂತ ದುಃಖದಾಯಿಯಾಗಿರುತ್ತದೆ. ಜೀವಾತ್ಮನ ಈ ದುಃಖ ರೂಪವನ್ನು ಕುರಿತು ಶ್ರೀ ಜಗದ್ಗುರು ರೇಣುಕ ಭಗವತ್ಪಾದರು –

ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್ ।
ನಿರಸ್ಯತೇ ಗುರೋರ್ಬೋಧಾದ್ ಜ್ಞಾನಶಕ್ತಿಃ ಪ್ರಕಾಶತೇ ॥

(ಸಿ.ಶಿ., ೧೮–೧೭)

ಎಂದು ಹೇಳಿದ್ದಾರೆ. ಅಂದರೆ ಆಣವಾದಿ ಮಲಗಳಿಂದ ಪ್ರಾಪ್ತವಾದ ಈ ಜೀವತ್ವವು ಕೇವಲ ದುಃಖರೂಪವೇ ಆದುದಾಗಿದೆ. ಗುರುವಿನ ಉಪದೇಶಾಮೃತ ದಿಂದ ಜ್ಞಾನಶಕ್ತಿಯನ್ನು ಪಡೆದುಕೊಂಡಾಗಲೇ ಈ ದುಃಖದ ನಿರಸನವಾಗುವುದು. ಹೀಗೆ ಜೀವಾತ್ಮನ ಜ್ಞಾನಾದಿ ಶಕ್ತಿಗಳು ಸಂಕೋಚಗೊಂಡಾಗ ಆತನು ಬದ್ಧಿತನಾಗುವನು. ಆ ಶಕ್ತಿಗಳು ಪುನಃ ವಿಕಸಿತಗೊಂಡಾಗ ಅವನೇ ಮುಕ್ತನೆಂದೆನಿಸುವನು. ಆಮೆಯು ತನ್ನ ಕರ–ಚರಣಾದ್ಯವಯವಗಳನ್ನು ಸಂಕೋಚ ಗೊಳಿಸಿಕೊಂಡು ಕಲ್ಲಿನಂತೆ ಕೆಲ ಸಮಯ ಬಿದ್ದುಕೊಂಡಿದ್ದರೂ ಪುನಃ ಆ ಅವಯವಗಳನ್ನು ವಿಕಾಸಗೊಳಿಸಿಕೊಂಡು ಸಂಚರಿಸುವಂತೆ ಮತ್ತು ಸರ್ಪವೂ ತನ್ನನ್ನು ಶಿಂಬಿಯಂತೆ ಸುತ್ತಿಕೊಂಡು ಬಿದ್ದುಕೊಂಡಿದ್ದು ಮತ್ತು ಮೈ–ಬಿಚ್ಚಿ ಹರಿದಾಡುವಂತೆ, ಜೀವಾತ್ಮನೂ ಸಹ ತನ್ನ ಶಕ್ತಿಗಳ ಸಂಕೋಚದಿಂದ ಬದ್ಧಜೀವನೆನಿಸಿಕೊಂಡು ಅವುಗಳನ್ನು ಗುರುವಿನ ಕರುಣೆಯಿಂದ ವಿಕಾಸಗೊಳಿಸಿ ಕೊಂಡಾಗ ಮುಕ್ತಜೀವವೆಂದು ಕರೆಯಲ್ಪಡುತ್ತಾನೆ. ಈ ತೆರನಾಗಿ ವೀರಶೈವ ಆಚಾರ್ಯರು ಜೀವಾತ್ಮನ ಬಂಧ–ಮೋಕ್ಷಗಳಿಗೆ ಅವನಲ್ಲಿರುವ ಶಕ್ತಿಗಳ ಸಂಕೋಚ–ವಿಕಾಸಗಳೇ ಕಾರಣವೆಂಬುದಾಗಿ ಪ್ರತಿಪಾದಿಸಿದ್ದಾರೆ (ಬ್ರಹ್ಮಸೂತ್ರ ಶಾಂಕರೀ ವೃತ್ತಿ., ೧–೩–೧೯)

ಜೀವಾತ್ಮನ ಅಣು ಪರಿಮಾಣತ್ವ :

ಭಾರತೀಯ ತತ್ತ್ವಶಾಸ್ತ್ರಜ್ಞರು ಜೀವಾತ್ಮನ ಪರಿಮಾಣದ ವಿಷಯದಲ್ಲಿ ವಿಭು, ಮಧ್ಯಮ ಮತ್ತು ಅಣು ಪರಿಮಾಣವೆಂಬುದಾಗಿ ವಿಭಿನ್ನ ಮತಗಳನ್ನು

ಪ್ರತಿಪಾದಿಸಿದ್ದಾರೆ. ವೀರಶೈವಸಿದ್ಧಾಂತದಲ್ಲಿ ಜೀವಾತ್ಮನನ್ನು ಅಣುರೂಪವಾಗಿ ಸ್ವೀಕರಿಸಲಾಗಿದೆ. ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ವಾಲಾಗ್ರಶತಭಾಗೇನ ಸದೃಶೋ ಹೃದಯಸ್ಥಿತಃ ।
ಅಶ್ನನ್ ಕರ್ಮಫಲಂ ಸರ್ವಮಾತ್ಮಾಸ್ಫುರತಿ ದೀಪವತ್ ॥

ಆತ್ಮಾಪಿ ಸರ್ವಭೂತಾನಾಮಂತಃಕರಣಮಾಶ್ರಿತಃ ।
ಅಣುಭೂತೋ ಮಲಾಸಂಗಾದಾದಿಕರ್ಮನಿಯಂತ್ರಿತಃ ॥

(ಸಿ.ಶಿ., ೧೮. ೬–೭)

ಈ ವಿಧವಾಗಿ ಜೀವಾತ್ಮನ ಅಣುರೂಪವು ನಿರೂಪಿಸಲಾಗಿದೆ. ತಾತ್ಪರ್ಯವೇನೆಂದರೆ, ಕೂದಲಿನ ಅಗ್ರಭಾಗದ ಶತಾಂಶದಷ್ಟು ಜೀವನು ಅಣುರೂಪನಾಗಿ ಪ್ರತಿಯೊಬ್ಬರ ಹೃದಯದಲ್ಲಿ ನಿವಾಸಿಸುತ್ತಿರುತ್ತಾನೆ. ದೀಪದಂತೆ ಬೆಳಗುತ್ತಿರುವ ಈ ಜೀವಾತ್ಮನು ತಾನು ಮಾಡಿದ ಕರ್ಮದ ಫಲವನ್ನ ಅನುಭವಿಸುತ್ತಿರು ತ್ತಾನೆ. ವಸ್ತುತಃ ಪಂಚಭೂತಗಳಿಗೆಲ್ಲ ತಾನು ಆಶ್ರಯಸ್ವರೂಪನಾಗಿದ್ದರೂ ಆಣವಮಲದ ಆವರಣದಿಂದಾಗಿ ಇಂತಹ ಅಣುರೂಪವನ್ನು ತಾಳಿಕೊಂಡಿರುತ್ತಾನೆ. ಶ್ವೇತಾಶ್ವತರೋಪನಿಷತ್ತು (೫–೬) ಮತ್ತು ಮುಂಡಕೋಪನಿಷತ್ತುಗಳಲ್ಲಿ (೨–೧–೧) ಜೀವಾತ್ಮನ ಅಣುರೂಪವೇ ಸ್ಪಷ್ಟಪಡಿಸಲಾಗಿದೆ. ಪ್ರಜ್ವಲಿಸುವ ಅಗ್ನಿಯಿಂದ ಸಹಸ್ರಾರು ವಿಸ್ಫುಲಿಂಗಗಳು ಹೊರ ಹೊರಟಂತೆ ಪರಶಿವ ಬ್ರಹ್ಮದ ಸ್ವರೂಪದಿಂದ ಈ ಜೀವಿಗಳು ಅಂಶ–ಅಂಶವಾಗಿ ಹೊರಹೊಮ್ಮಿದ್ದಾರೆ. ಮಹರ್ಷಿ ಬಾದರಾಯಣನೂ ಸಹ "ಅಂಶೋ ನಾನಾ ವ್ಯಪದೇಶಾತ್" ಎಂಬ ಬ್ರಹ್ಮಸೂತ್ರದಲ್ಲಿ ಜೀವಾತ್ಮನು ಅಂಶರೂಪನೆಂದು ಪ್ರತಿಪಾದಿಸುವುದರ ಜೊತೆಗೆ ಜೀವಿಗಳ ಅನಂತತೆಯನ್ನೂ ಸಹ ನಿರೂಪಿಸಿದ್ದಾನೆ. ಶ್ರೀ ಮೊಗ್ಗೆಯ ಮಾಯಿದೇವನು "ಆತ್ಮಾಯಂ ಕೇವಲಃ ಶುದ್ಧಃ ಶಿವಸ್ಯಾಂಶಃ ಸದಾಽಮಲಃ (ಅನುಭವಸೂತ್ರ., ೫–೩), ಎಂಬುದಾಗಿ ಹೇಳುವುದರ ಮೂಲಕ ಜೀವಾತ್ಮನು ಶಿವನ ಅಂಶನೂ, ಶುದ್ಧನೂ ಎಂಬುದಾಗಿ ಪ್ರತಿಪಾದಿಸಿದ್ದಾರೆ. ಹೀಗೆ ಎಲ್ಲ ಪ್ರಮಾಣಗಳಿಂದ ಜೀವಾತ್ಮನು ಅಣುಪರಿಮಾಣನೆಂದು ಸಿದ್ಧವಾಗುತ್ತದೆ.

ಜೀವಾತ್ಮರ ಬಹುತ್ವ :

ಜೀವನನ್ನು ಅಣುರೂಪನನ್ನಾಗಿ ಒಡ್ಡಿದ ಕಾರಣ ಪ್ರತಿಯೊಂದು ಶರೀರದಲ್ಲಿ ಆತನ ಭಿನ್ನತೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ ಶರೀರಗಳು ಅನಂತ ಗಳಾಗಿರುವಾಗ ಜೀವಿಗಳೂ ಸಹ ಅನಂತಗಳೆಂದೇ ಒಪ್ಪಿಕೊಳ್ಳಬೇಕಾಗುತ್ತದೆ. ಅಂತೆಯೇ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು – "ಅವಿದ್ಯಾಶಕ್ತಿಭೇದೇನ

ಜೀವಾ ಬಹುವಿಧಾಃ ಸ್ಮೃತಾಃ" (ಸಿ.ಶಿ., ೫–೪೫) ಎಂಬುದಾಗಿ ಹೇಳುವುದರ ಮೂಲಕ ಜೀವಿಗಳ ಅನೇಕತೆಯನ್ನು ಸ್ಪಷ್ಟಪಡಿಸಿದ್ದಾರೆ. ಇದೇ ಪ್ರಕಾರವಾಗಿ ಶ್ರೀಪತಿ ಪಂಡಿತಾರಾಧ್ಯರೂ ಸಹ ಬ್ರಹ್ಮಸೂತ್ರದ ಶ್ರೀಕರಭಾಷ್ಯದಲ್ಲಿ – "ಲೋಕದಲ್ಲಿ ತೋರುವ ಎಲ್ಲ ವಿಧ ಭಿನ್ನ ಭಿನ್ನ ವ್ಯವಹಾರಗಳಿಗೆ ವ್ಯವಸ್ಥೆ ಮಾಡಬೇಕಾದರೆ ಜೀವಾತ್ಮನನ್ನು ಅಣುರೂಪನನ್ನಾಗಿಯೂ, ಸಂಖ್ಯೆಯಲ್ಲಿ ಅನಂತವಾಗಿಯೂ ಸ್ವೀಕರಿಸುವುದೇ ಉಚಿತವು" (೨–೩–೪೮) ಎಂಬುದಾಗಿ ಪ್ರತಿಪಾದಿಸಿದ್ದಾರೆ. ಆದ್ದರಿಂದ ಜೀವಾತ್ಮರು ಅಣುರೂಪರಾಗಿದ್ದು, ಅನೇಕರಾಗಿದ್ದು ಪ್ರತಿಯೊಂದು ಶರೀರದಲ್ಲಿ ಭಿನ್ನ ಭಿನ್ನರಾಗಿರುತ್ತಾರೆಂಬುದಾಗಿ ತಿಳಿದುಕೊಳ್ಳಬೇಕು.

ಪರಮಾತ್ಮನ ಅಂಶವೇ ಜೀವಾತ್ಮನೆಂದು ಹೇಳಲಾಗಿದೆ. ಹೀಗಿರುವಾಗ ಆ ಪರಮಾತ್ಮನು ಜೀವಾತ್ಮನಾಗಲು ಕಾರಣವೇನು? ಎಂಬ ಪ್ರಶ್ನೆಯು ಉದ್ಭವಿಸಲು ಈ ಜೀವಭಾವವನ್ನು ತಾಳುವುದೂ ಸಹ ಶಿವನ ಒಂದು ಲೀಲೆಯೆಂಬುದಾಗಿಯೇ ವೀರಶೈವಸಿದ್ಧಾಂತದಲ್ಲಿ ಸ್ವೀಕರಿಸಲಾಗಿದೆ. ಅಂತೆಯೇ ಶ್ರೀ ಸಿದ್ಧಾಂತಶಿಖಾಮಣಿ ಯಲ್ಲಿ –

> **ಅಸ್ವತಂತ್ರಾಶ್ಚ ಕಿಂಚಿಜ್ಞಾಃ ಕಿಂಚಿತ್ಕರ್ತೃತ್ವಹೇತವಃ ।**
> **ಲೀಲಾಭಾಜನತಾಂ ಪ್ರಾಪ್ತಃ ಶಿವಸ್ಯ ಪರಮಾತ್ಮನಃ ॥**

(ಸಿ.ಶಿ., ೧೮–೧೪)

ಎಂದು ಹೇಳಲಾಗಿದೆ. ತಾತ್ಪರ್ಯವೇನೆಂದರೆ, 'ಏಕಾಕೀ ನೈವ ರಮತೇ" (ಬೃಹದಾರಣ್ಯಕೋಪನಿಷತ್., ೧–೪–೩) ಎಂಬ ಉಪನಿಷದ್ವಚನದಂತೆ ಕೇವಲಾವಸ್ಥೆ ಯಲ್ಲಿರುವ ಶಿವನಿಗೆ ಓರ್ವನೇ ಒಂಟಿಯಾಗಿ ಇದ್ದು ಇದ್ದು ಬೇಸರಿಸಿದಾಗ ತನ್ನ ವಿನೋದಕ್ಕಾಗಿ ತಾನೇ ಇನ್ನೊಂದು ರೂಪವನ್ನು ತಾಳಿದನು. ಅದುವೇ ಜೀವರೂಪವು. ಹೀಗೆ ತನ್ನ ವಿನೋದಕ್ಕಾಗಿ ಅನಂತ ಜೀವರೂಪವನ್ನು ತಾಳಿ ಶಿವನು ಲೀಲೆಯನ್ನು ಮಾಡುತ್ತಿದ್ದಾನೆ. ಅವನ ಲೀಲೆಗೆ ಭಾಜನವಾಗಿರುವ ಅರ್ಥಾತ್ ಸಾಧನವಾಗಿರುವ ಜೀವಿಗಳು ನಾನಾಯೋನಿಗಳನ್ನಾಶ್ರಯಿಸಿ ನಾನಾ ಬುದ್ಧಿಯುಳ್ಳವರಾಗಿ ಅನೇಕ ವಿಧವಾದ ಕರ್ಮವಿಪಾಕಗಳ ಪರಿಣಾಮವಾಗಿ ಬೇರೆ ಬೇರೆ ಸಂಕಲ್ಪವನ್ನು ತಾಳಿ ವಿಭಿನ್ನ ಮಾರ್ಗಗಳಲ್ಲಿ ವ್ಯವಹರಿಸುತ್ತಿರುತ್ತಾರೆ. (ಸಿ.ಶಿ., ೧೮–೧೩)

ಶಿವನ ಲೀಲಾಭಾಜನರಾದ ಈ ಜೀವಿಗಳು ದೇವ, ಮನುಷ್ಯ, ಜಲಜ, ವಿಹಗ, ಮೃಗ, ಸರಿಸೃಪ ಮತ್ತು ಸ್ಥಾವರ ಎಂಬ ಸಪ್ತ ಜನ್ಮಗಳಲ್ಲಿ ಸದಾ ಸಂಚರಿಸುತ್ತಿರುತ್ತಾರೆ. ಸ್ಕಾಂದ ಮಹಾಪುರಾಣದಲ್ಲಿ ಮಹರ್ಷಿ ವ್ಯಾಸನು ದೇವತೆಗಳು

ಹದಿನಾರು ಲಕ್ಷ, ಮನುಷ್ಯರು ಒಂಭತ್ತು ಲಕ್ಷ, ಜಲಚರ ಪ್ರಾಣಿಗಳು ಹತ್ತು ಲಕ್ಷ, ಸರ್ಪಗಳು ಹನ್ನೊಂದು ಲಕ್ಷ ಮತ್ತು ಸ್ಥಾವರಗಳು ಹದಿನೆಂಟು ಲಕ್ಷ, ಹೀಗೆ ಒಟ್ಟು ಸಪ್ತಜನ್ಮಗಳಲ್ಲಿ ಎಂಭತ್ನಾಲ್ಕು ಲಕ್ಷ ವಿಧ ಜೀವಿಗಳ ವಿಭಾಗವನ್ನು ಮಾಡಿದ್ದಾರೆ. ಶಾಸ್ತ್ರದಲ್ಲಿ ಬರುವ ಸಪ್ತ ಜನ್ಮಗಳೆಂದರೆ ಈ ಮೇಲೆ ನಿರೂಪಿಸಲ್ಪಟ್ಟ ಸಪ್ತಯೋನಿಗಳೆಂದೇ. ಸಪ್ತಯೋನಿಗಳಲ್ಲಿ ಜನ್ಮ ತಾಳಿದ ಜೀವಿಗಳು ಒಟ್ಟು ಎಂಭತ್ನಾಲ್ಕು ಲಕ್ಷ ಪ್ರಕಾರದವುಗಳಾಗಿರುತ್ತವೆ. ಜೀವಿಗಳು ಈ ಎಂಭತ್ನಾಲ್ಕು ಲಕ್ಷ ವಿಧ ಭೇದಗಳನ್ನು ಬೇರೆ ಕಡೆಗಳಲ್ಲಿ ಉದ್ಭಿಜ, ಸ್ವೇದಜ, ಅಂಡಜ ಮತ್ತು ಜರಾಯುಜ ಎಂಬ ನಾಲ್ಕು ಯೋನಿಗಳೊಳಗೆ ಪ್ರತಿಯೊಂದಕ್ಕೂ ಇಪ್ಪತ್ತೊಂದು ಲಕ್ಷ ಪ್ರಕಾರವಾಗಿ ಹೇಳಿ ಒಟ್ಟಾರೆ ಎಂಭತ್ನಾಲ್ಕು ಲಕ್ಷ ಜೀವಿಗಳೆಂದು ಪ್ರತಿಪಾದಿಸಿರುತ್ತಾರೆ. ಮೇಲೆ ಹೇಳಿದ ಎರಡು ವಿಧ ವಿಚಾರಸರಣಿಯಲ್ಲಿ ಜೀವಿಗಳ ಯೋನಿಗಳ ಗಣನೆಯಲ್ಲಿ ವ್ಯತ್ಯಾಸಕಂಡರೂ ಜೀವಿಗಳ ಒಟ್ಟು ಸಂಖ್ಯೆಯನ್ನು ಹೇಳುವಲ್ಲಿ ಏಕಾಭಿಪ್ರಾಯವನ್ನು ಕಾಣಬಹುದಾಗಿದೆ.

ವಸ್ತುತಃ ಪರಶಿವನ ಅಂಶರೂಪವಾದ ಆತ್ಮವು ಅಶರೀರಿಯಾಗಿದ್ದರೂ ತನಗೆ ಉಪಾಧಿಯಾದ ಅವಿದ್ಯಾ ಮತ್ತು ಅಹಂಕಾರಾದಿಗಳ ಸಂಬಂಧದಿಂದ ಆ ಆತ್ಮಕ್ಕೆ ದೇಹಾಭಿಮಾನವು ಉಂಟಾಗುವುದು. ಅಂತೆಯೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ನ ಚಾಸ್ತಿ ದೇಹಸಂಬಂಧೋ ನಿರ್ದೇಹಸ್ಯ ಸ್ವಭಾವತಃ ।
ಅಜ್ಞಾನಕರ್ಮಯೋಗೇನ ದೇಹೀ ಭವತಿ ಭುಕ್ತಯೇ ॥

(ಸಿ.ಶಿ. ೧೮–೧೧)

ಎಂದು ಹೇಳಲಾಗಿದೆ ಅಂದರೆ ಆತ್ಮನು ಸ್ವಾಭಾವಿಕವಾಗಿ ನಿರ್ದೇಹಿಯು. ಅವನಿಗೆ ಶರೀರ ಸಂಬಂಧವಿರುವುದಿಲ್ಲ. ಆದರೂ ಅವಿದ್ಯೆಯ ಆವರಣದಿಂದಾಗಿ ಅಜ್ಞನೆನಿಸಿಕೊಂಡು ಶುಭಾಶುಭಕರ್ಮಗಳನ್ನು ಆಚರಿಸಿದ ಕಾರಣದಿಂದಾಗಿ ದೇಹಧರಿಸಿ ತಾನು ಮಾಡಿದ ಕರ್ಮಫಲಗಳನ್ನು ಅನುಭವಿಸುತ್ತಿದ್ದಾನೆ. ಜೀವಿಗಳು ತಮ್ಮ ಕರ್ಮಫಲಗಳನ್ನನುಭವಿಸಲು ಶರೀರವು ಒಂದು ಸಾಧನವಾಗಿರುತ್ತದೆ. ಅಂತೆಯೇ ಶಾಸ್ತ್ರಕಾರರು ಶರೀರಕ್ಕೆ ಭೋಗಾಯತನವೆಂದು ಕರೆದಿರುತ್ತಾರೆ. ಕಾರಣ ಜೀವಾತ್ಮನು ತಾನು ಮಾಡಿದ ಕರ್ಮಫಲವನ್ನನುಭವಿಸುವುದಕ್ಕಾಗಿ ಪೂರ್ವದಲ್ಲಿ ಹೇಳಿದ ದೇವ ಮಾನವಾದಿ ಸಪ್ತಜನ್ಮಗಳಲ್ಲಿ ಬರುವ ಎಂಭತ್ನಾಲ್ಕು ಲಕ್ಷವಿಧವಾದ ಶರೀರಗಳನ್ನು ಧರಿಸುತ್ತಾನೆ.

ಹೀಗೆ ಅನೇಕ ದೇಹಗಳನ್ನು ಧರಿಸಿದರೂ ಈ ಜೀವಾತ್ಮನು ವಸ್ತುತಃ ದೇವನಲ್ಲ, ಗಂಧರ್ವನಲ್ಲ, ಯಕ್ಷ–ರಾಕ್ಷಸನಲ್ಲ, ಖಗ–ಮೃಗ, ಸರೀಸೃಪ, ಮನುಷ್ಯನಲ್ಲ

ಮತ್ತು ಸ್ಥಾವರನೂ ಸಹ ಇವನಲ್ಲ (ಸಿ.ಶಿ., ೧೮-೧೨) ಎಂಬುದಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಜೀವಾತ್ಮನ ವಾಸ್ತವಿಕವಾದ ಅಸಂಗ ಸ್ವರೂಪವನ್ನು ತಿಳಿಯಪಡಿಸಿದ್ದಾರೆ. ಇದೂ ಅಲ್ಲದೆ ಈ ಆತ್ಮನು ಶರೀರ, ಇಂದ್ರಿಯ, ಮನಸ್ಸು, ಬುದ್ಧಿ ಮತ್ತು ಅಹಂಕಾರಕ್ಕಿಂತಲೂ ಭಿನ್ನನೂ, ಸನಾತನನೂ ಆಗಿರುವನೆಂಬ ವಿಚಾರವನ್ನೂ ಸಹ (ಸಿ.ಶಿ.. ೫. ೫೭-೫೮) ಪೂಜ್ಯಪಾದರು ಪ್ರಾರಬ್ಧಕರ್ಮಾನುಸಾರವಾಗಿ ದೊರೆಯುವ ದೇಹವನ್ನು ಧರಿಸಿಕೊಂಡಿರುವ ಈ ಜೀವನು ಸ್ತ್ರೀಯೂ ಅಲ್ಲ, ಪುರುಷನೂ ಸಹ ಇವನಲ್ಲ. ಅದೆಲ್ಲವೂ ಉಪಾಧಿರೂಪವಾದ ದೇಹಕ್ಕೆ ಸಂಬಂಧಪಟ್ಟಂಥಾದ್ದು. ಅಂತೆಯೇ ದೇವರ ದಾಸಿಮಾರ್ಯ ಹಾಗೂ ಅಂಬಿಗರ ಚೌಡಯ್ಯ ಮುಂತಾದ ಶರಣರು "ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಗಡ್ಡ-ಮೀಸೆ ಬಂದರೆ ಗಂಡೆಂಬರು ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ" ಎಂಬುದಾಗಿ ಹೇಳಿ ಆತ್ಮನು ಶರೀರಕ್ಕಿಂತಲೂ ಭಿನ್ನನು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಹೀಗೆ ಮೇಲಿನ ಎಲ್ಲ ವಿಚಾರಗಳಿಂದ ತಿಳಿದುಬರುವುದೇನೆಂದರೆ ಜೀವಾತ್ಮನು ಶರೀರಾದಿ ಉಪಾಧಿಗಳಿಗಿಂತ ಭಿನ್ನನಾಗಿದ್ದು ಅಣುಸ್ವರೂಪನಾಗಿ ಪ್ರತಿಯೊಂದು ಶರೀರದಲ್ಲಿ ಬೇರೆ ಬೇರೆಯಾಗಿ ನಿವಾಸಿಸಿದ್ದಾನೆ. ಅಂತೆಯೇ ಎಷ್ಟು ಶರೀರಗಳೋ ಅಷ್ಟು ಜೀವಾತ್ಮರೆಂದು ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ಜೀವರು ಅನೇಕರೆಂಬುದಾಗಿ ಹೇಳಲಾಗಿದೆ. ಈ ಸಂದರ್ಭದಲ್ಲಿ ಒಂದು ಜಿಜ್ಞಾಸೆಯುಂಟಾಗುವುದೇನೆಂದರೆ ಜೀವನನ್ನು ಅಣುವನ್ನಾಗಿ ಒಪ್ಪಿದರೆ ಅವನು ದೇಹದ ಯಾವುದೊಂದು ಭಾಗದಲ್ಲಿ ಇರುವವನಾಗೋಣದರಿಂದ ಸಂಪೂರ್ಣ ಶರೀರದಲ್ಲಾಗುವ ಸುಖದುಃಖಾದಿಗಳ ಪರಿಜ್ಞಾನವು ಅದು ಹೇಗೆ ಉಂಟಾಗುವುದು? ಈ ಜಿಜ್ಞಾಸೆಯನ್ನು ದೂರಮಾಡುವುದಕ್ಕಾಗಿಯೇ ಪೂಜ್ಯಪಾದರು - "ಅಶ್ನನ್ ಕರ್ಮಫಲಂ ಸರ್ವಮಾತ್ಮಾಸ್ಫುರತಿ ದೀಪವತ್" (ಸಿ.ಶಿ., ೧೮-೬) ಎಂದು ಹೀಗೆ ದೀಪದ ದೃಷ್ಟಾಂತವನ್ನು ಕೊಟ್ಟಿದ್ದಾರೆ. ದೀಪವು ಮನೆಯಲ್ಲಿ ಒಂದು ನಿಶ್ಚಿತಸ್ಥಾನದಲ್ಲಿದ್ದರೂ ಅದರ ಪ್ರಕಾಶವು ಮನೆತುಂಬ ವ್ಯಾಪಿಸಿಕೊಂಡಿರುವಂತೆ ಅಣುರೂಪನಾದ ಜೀವಾತ್ಮನು ಹೃದಯದಲ್ಲಿ ವಾಸಿಸುತ್ತಿದ್ದರೂ ಅವನ ಜ್ಞಾನಪ್ರಕಾಶವು ಶರೀರದ ತುಂಬೆಲ್ಲ ವ್ಯಾಪಿಸಿಕೊಂಡಿರುವುದರಿಂದ ಶರೀರದ ಪಾದದಿಂದ ಮೊದಲುಗೊಂಡು ಮಸ್ತಕ ಪರ್ಯಂತವಾಗಿ ಉಂಟಾಗುವ ಸುಖದುಃಖಗಳನ್ನು ಆತನು ಅರಿತುಕೊಳ್ಳುತ್ತಾನೆ. ಆದ್ದರಿಂದ ಆತ್ಮನನ್ನು ಅಣುವಾಗಿ ಒಪ್ಪುವುದರಿಂದ ಯಾವ ದೋಷವೂ ಬರುವುದಿಲ್ಲ. ಅವನು ಅಣುವಾಗಿರುವುದರಿಂದಲೇ ಕ್ರಿಮಿ-ಕೀಟಾದಿ ಅತಿ ಸೂಕ್ಷ್ಮ ಶರೀರಗಳಲ್ಲಿಯೂ ಸಹಜವಾಗಿ ಪ್ರವೇಶಿಸಬಲ್ಲನು.

ಜೀವಾತ್ಮ–ಪರಮಾತ್ಮರಲ್ಲಿರುವ ಭೇದಾಭೇದ :

ಪರಮಾತ್ಮನ ಅಂಶವೇ ಅವಿದ್ಯೆಯ ಆವರಣದಿಂದ ಜೀವನೆನಿಸಿಕೊಂಡು ಸಂಸಾರದಲ್ಲಿ ನಾನಾ ಯೋನಿಗಳಲ್ಲಿ ತಿರುಗುತ್ತಿರುತ್ತಾನೆ. ಹೀಗೆ ಜೀವನಿಗೆ ಪ್ರಾಪ್ತವಾದ ಈ ಅಣುಭಾವವು ಸ್ವಾಭಾವಿಕವಾದುದೇ ವಿನಹಾ ಅದನ್ನು ಔಪಾಧಿಕವೆಂದು ಕರೆಯಲಾಗುವುದಿಲ್ಲ. ಬೆಂಕಿಯಿಂದ ಹೊರ ಹೊರಟ ಕಿಡಿಗಳು ಆ ಬೆಂಕಿಯಿಂದ ಭಿನ್ನವಾಗಿರುವಂತೆ ಅಣುರೂಪನಾದ ಜೀವನು ಪರಮಾತ್ಮನಿಗಿಂತಲೂ ಸಂಸಾರಾವಸ್ಥೆಯಲ್ಲಿ ಭಿನ್ನನಾಗಿದ್ದು ಮುಕ್ತಾವಸ್ಥೆಯಲ್ಲಿ ಅಭಿನ್ನನಾಗುತ್ತಾನೆ. ಈ ತೆರನಾಗಿ ಜೀವಾತ್ಮನ ಅವಸ್ಥಾಭೇದದಿಂದ ವೀರಶೈವ ಆಚಾರ್ಯರು ಜೀವ–ಪರಮಾತ್ಮರಲ್ಲಿ ಭೇದಾಭೇದಗಳೆರಡನ್ನೂ ಒಪ್ಪಿಕೊಂಡಿರುತ್ತಾರೆ.

ಅಣುರೂಪನಾದ ಜೀವನು ಪರಮಾತ್ಮನಿಗಿಂತಲೂ ಒಮ್ಮೆ ಭಿನ್ನವೆಂದು ಹೇಳಿದ ಬಳಿಕ ಪುನಃ ಅವನನ್ನು ಅಭಿನ್ನವೆಂದು ಹೇಳುವುದು ಅದು ಹೇಗೆ ಸಾಧ್ಯವಾಗುವುದು? ಎಂಬ ಪ್ರಶ್ನೆಯು ಜಿಜ್ಞಾಸುಗಳ ಮನಸ್ಸಿನಲ್ಲಿ ಒಡಮೂಡುವುದು ಸಹಜ. ಇದರ ಪರಿಹಾರವೆಂತೆಂದರೆ–ವೀರಶೈವ ಸಿದ್ಧಾಂತವು ಭೇದಾಭೇದವಾದಿ ಸಿದ್ಧಾಂತವಾಗಿರುತ್ತದೆ. ಅಂದರೆ ಭೇದವೂ ಸತ್ಯವಾದದ್ದು ಮತ್ತು ಅಭೇದವೂ ಸಹ ಸತ್ಯವಾದದ್ದು. ಈ ಎರಡು ಸಂಬಂಧಗಳನ್ನು ಭಿನ್ನಭಿನ್ನ ಅವಸ್ಥೆಯಲ್ಲಿ ಹೇಳಲಾಗುವುದರಿಂದ ಇಲ್ಲಿ ಪರಸ್ಪರ ವಿರೋಧವು ಉಂಟಾಗುವುದಿಲ್ಲ. ಜೀವಾತ್ಮನು ಆಣವ, ಮಾಯಾ ಮತ್ತು ಕಾರ್ಮಿಕಗಳೆಂಬ ಮಲತ್ರಯಗಳಿಂದ ಆವೃತವಾಗಿ ಸಂಸಾರಿಯೆಂದು ಕರೆಯಿಸಿಕೊಂಡಾಗ ಆತನು ಪರಮಾತ್ಮನಿಗಿಂತಲೂ ವಾಸ್ತವಿಕವಾಗಿ ಭಿನ್ನನಾಗಿರುತ್ತಾನೆ. ಅಂತೆಯೇ ಆ ಅವಸ್ಥೆಯಲ್ಲಿ ಅವರೀರ್ವರಲ್ಲಿ ಪೂಜ್ಯ – ಪೂಜಕರೂಪವಾದ ಸಂಬಂಧವಿರುತ್ತದೆ. ಪರಮಾತ್ಮನು ಪೂಜ್ಯನಾದರೆ ಜೀವಾತ್ಮನು ಪೂಜಕನಾಗಿರುತ್ತಾನೆ. ಈ ವಿಧವಾದ ಭೇದವನ್ನು ಒಪ್ಪದೇ ಹೋದರೆ ಪೂಜಾದಿ ಕ್ರಿಯೆಗಳು ಸಂಭವಿಸಲಾರವು. ಅಂತೆಯೇ ಪೂಜ್ಯಪಾದರು –

> **ಪೂಜ್ಯ ಪೂಜಕಯೋರ್ಲಿಂಗ ಜೀವಯೋರ್ಭೇದವರ್ಜನೇ ।**
> **ಪೂಜಾಕರ್ಮಾದ್ಯಸಂಪತ್ತೇರ್ಲಿಂಗನಿಷ್ಠಾ ವಿರೋಧತಃ ॥**

(ಸಿ.ಶಿ., ೧೦–೩೭)

ಎಂಬುದಾಗಿ ಹೇಳಿ ಜೀವ–ಪರಮಾತ್ಮರಲ್ಲಿಯ ಅಭೇದವನ್ನು ನಿಷೇಧಿಸಿ ಭೇದವನ್ನು ಪ್ರತಿಪಾದಿಸಿದ್ದಾರೆ. ಶಿವನು ಪ್ರೇರಕನು ನಾನು ಪ್ರೇರ್ಯನು ಎಂಬ ಭೇದಬುದ್ಧಿಯನ್ನಿಟ್ಟುಕೊಂಡೇ ಪೂಜಿಸಬೇಕೇ ವಿನಃ ಪೂಜಾಕಾಲದಲ್ಲಿ ಅದ್ವೈತ ಭಾವನೆಯನ್ನು ತಾಳಕೂಡದು. ಪರಮಾತ್ಮನು ಪತಿಯಾದರೆ ಜೀವಾತ್ಮನು

ಪಶುವಾಗಿರುತ್ತಾನೆ. ಅಂತೆಯೇ ಅವರೀರ್ವರಲ್ಲಿ ಸ್ವಾಮಿಭೃತ್ಯಭಾವವು ಸಿದ್ಧಿಸುತ್ತದೆ. ಒಂದು ವೇಳೆ ಈರ್ವರಲ್ಲಿ ಅಭೇದವನ್ನು ಹೇಳಿದರೆ. ಈ ಸ್ವಾಮಿ ಭೃತ್ಯ ಭಾವವು ಅದು ಹೇಗೆ ತಾನೇ ಸಂಭವಿಸೀತು? (ಸಿ.ಶಿ., ೧೦. ೩೯–೪೦) ಎಂಬುದು ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಆಶಯವಾಗಿದೆ.

ಇನ್ನು ಗುರುದೀಕ್ಷೆಯನ್ನು ಹೊಂದಿ ಗುರುವಿನಿಂದ ತತ್ತ್ವೋಪದೇಶವನ್ನು ಪಡೆದಾಗ ಜೀವಾತ್ಮನ ಆಣವಾದಿ ಮಲತ್ರಯಗಳು ದೂರಾಗಿ ಅವನ ಸಂಕುಚಿತಗಳಾದ ಶಕ್ತಿಗಳೆಲ್ಲ ಪುನಃ ವಿಕಾಸಗೊಂಡು ಆತನು ಪರಮಾತ್ಮನೊಂದಿಗೆ ಸಾಮರಸ್ಯ ಸ್ಥಿತಿಯನ್ನು ಹೊಂದುತ್ತಾನೆ. ಈ ಅವಸ್ಥೆಯಲ್ಲಿ ಅವನು ಪರಮಾತ್ಮನೊಂದಿಗೆ ಅಭೇದವನ್ನು ಹೊಂದುತ್ತಾನೆ. (ಸಿ.ಶಿ., ೧೦–೪೧; ೧೮–೧೭). ಸಂಸಾರಾವಸ್ಥೆಯಲ್ಲಿ ಇರುವ ಆ ವಾಸ್ತವಿಕವಾದ ಭೇದವು ಮುಕ್ತಾವಸ್ಥೆಯಲ್ಲಿ ಇಲ್ಲದಾಗಿ ಆಗ ವಾಸ್ತವಿಕವಾದ ಅದ್ವೈತ ಸ್ಥಿತಿಯೇ ಪ್ರಾಪ್ತವಾಗುವುದು.

ಭಾಷ್ಯಾಕಾರರಾದ ಶ್ರೀಪತಿ ಪಂಡಿತಾರಾಧ್ಯರು– "ಯಥಾ ನದ್ಯಃ ಸ್ಯಂದಮಾನಾಃ ಹ್ಯಸ್ತಂ ಗಚ್ಛಂತಿ ನಾಮರೂಪೇ ವಿಹಾಯ" ಎಂಬ ಶೃತಿಯನ್ನು ಉದಾಹರಿಸುತ್ತ ಮೇಲೆ ಹೇಳಿದ ಭೇದಾಭೇದವಾದವನ್ನು ಹೃದಯಂಗಮವಾಗಿ ಸಿದ್ಧಪಡಿಸಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಗಂಗಾ–ಯಮುನಾ ಮುಂತಾದ ಅನೇಕ ನದಿಗಳು ನಾಮ–ರೂಪಗಳಿಂದ ಪರಸ್ಪರ ಭಿನ್ನವಾಗಿರುವುವಲ್ಲದೇ ಸಮುದ್ರದಿಂದಲೂ ಭೇದವ್ಯವಹಾರವು ಅದೆಂದೂ ಸಂಭವಿಸುವುದಿಲ್ಲ. ಇದೇ ಪ್ರಕಾರವಾಗಿ ಪರಮಾತ್ಮನಿಂದ ಸಂಸಾರಾವಸ್ಥೆಯಲ್ಲಿ ಸಂಪೂರ್ಣವಾಗಿ ನಾಮರೂಪಾದಿಗಳಿಂದ ಭಿನ್ನರಾಗಿದ್ದ ಜೀವಿಗಳು ಸಾಮರಸ್ಯಾವಸ್ಥೆಯಲ್ಲಿ ತಮ್ಮ ಮೊದಲಿನ ಸ್ವರೂಪವನ್ನು ಕಳೆದುಕೊಂಡು ಪರಶಿವನೊಂದಿಗೆ ಸಮರಸವಾದ ಬಳಿಕ ಪುನಃ ಎಂದೂ ಭಿನ್ನರಾಗಿ ತೋರುವುದಿಲ್ಲ. ಹೀಗೆ ಜೀವಿಗಳ ಅವಸ್ಥಾ ಭೇದದಿಂದ ಈ ಭೇದಾಭೇದ ವ್ಯವಸ್ಥೆಯನ್ನು ಮಾಡಲಾಗಿದೆ. ಈ ವಿಷಯದಲ್ಲಿ ಭ್ರಮರ–ಕೀಟನ್ಯಾಯವನ್ನೂ ಸಹ ಬಳಸುವುದುಂಟು. ಅಂದರೆ ಸ್ವಭಾವತಃ ಭ್ರಮರಕ್ಕಿಂತ ಭಿನ್ನವಾದ ಆ ಕೀಟವು ನಿರಂತರವಾದ ಭ್ರಮರ ಧ್ಯಾನದಿಂದ ಭ್ರಮರ ಸ್ವರೂಪವೇ ಆಗುವಂತೆ ಜೀವಾತ್ಮನೂ ಸಹ ಪರಶಿವ ಸ್ವರೂಪದ ಚಿಂತನೆಯಿಂದ ಪರಶಿವಸ್ವರೂಪನೇ ಆಗುತ್ತಾನೆ. ಇದುವೇ ಭೇದಾಭೇದದ ರಹಸ್ಯವು.

ಜೀವನ ಮೂರು ಅವಸ್ಥೆಗಳು :

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀಸಿದ್ಧಾಂತಶಿಖಾಮಣಿಯಲ್ಲಿ ಆತ್ಮ, ಅಂತರಾತ್ಮ ಮತ್ತು ಪರಮಾತ್ಮ ಎಂಬುದಾಗಿ ಜೀವಾತ್ಮನ ಕ್ರಮವಾದ ಮೂರು

ಅವಸ್ಥೆಗಳನ್ನು ಪ್ರತಿಪಾದಿಸಿದ್ದಾರೆ. ಅವರ ಉಪದೇಶದ ಪ್ರಕಾರ ಆಣವಾದಿ ಮಲತ್ರಯಗಳಿಂದ ಆವೃತವಾಗಿ ಅಣುರೂಪವನ್ನು ತಾಳಿ ಪ್ರತಿಯೊಂದು ಪ್ರಾಣಿಗಳ ಅಂತಃಕರಣದಲ್ಲಿ ಆಶ್ರಯವನ್ನು ಪಡೆದು ಕರ್ಮಯಂತ್ರದಲ್ಲಿ ಸಿಲುಕಿ ಸುಖ–ದುಃಖಾದಿಗಳನ್ನು ಅನುಭವಿಸುವವನಿಗೆ ಆತ್ಮನೆಂದೂ ಅರ್ಥಾತ್ ಜೀವಾತ್ಮನೆಂದೂ (ಸಿ.ಶಿ.. ೧೮. ೬–೧೭) ಕರೆಯಲಾಗಿದೆ. ಇನ್ನು ಈ ಮಲಾವೃತನಾದ ಜೀವನು ಗುರುವಿಗೆ ಶರಣಾಗತನಾಗಿ ದೀಕ್ಷಾತ್ರಯವನ್ನು ಪಡೆದು ಯಾವಾಗ ಮಲತ್ರಯಗಳಿಂದ ನಿವೃತ್ತನಾಗುವನೋ ಆಗ ಇವನಿಗೆ ಅಂತರಾತ್ಮನೆಂದು ಕರೆಯುತ್ತಾರೆ. ಈ ಅವಸ್ಥೆಯಲ್ಲಿ ಇವನು ಶರೀರದಲ್ಲಿದ್ದರೂ ಶರೀರಾದಿಗಳ ಕರ್ಮಗಳಿಂದ ಅಸಂಗನಾಗಿರುತ್ತಾನೆ. ಗೂಡಿನೊಳಗಿರುವ ಪಕ್ಷಿಯು ಗೂಡಿನೊಳಗಿದ್ದೇ ಗೂಡಿಗಿಂತಲೂ ಭಿನ್ನವಾಗಿರುವಂತೆ, ನೀರಿನಲ್ಲಿ ಜನಿಸಿದ ಕಮಲವು ನೀರಿನಲ್ಲಿದ್ದೂ ನೀರನ್ನು ಸೋಂಕದಿರುವಂತೆ ಮತ್ತು ಮೇಘಗಳಿಂದ ಆಚ್ಛನ್ನನಾದ ಚಂದ್ರನು ಮೇಘಗಳ ಸಂಗವನ್ನು ಹೊಂದದಿರುವಂತೆ ಈ ಅಂತರಾತ್ಮಾವಸ್ಥೆಯ ಜೀವನು ಅಹಂಕಾರ–ಮಮಕಾರ ಶೂನ್ಯನಾಗಿ ದೇಹದಲ್ಲಿದ್ದೂ ಸದಾ ಶಿವಯೋಗದ ಮೂಲಕ ಶಿವನನ್ನೇ ನೋಡುತ್ತಿರುತ್ತಾನೆ. (ಸಿ.ಶಿ., ೧೮. ೧೮–೨೯)

ಇನ್ನು ಈ ಪೂರ್ವದಲ್ಲಿ ಹೇಳಿದ ಅಂತರಾತ್ಮಾವಸ್ಥೆಯ ಜೀವನು ಶಿವಾದ್ವೈತ ಜ್ಞಾನವನ್ನು ಪಡೆದು ಶಿವನೊಂದಿಗೆ ಯಾವಾಗ ಸಾಮರಸ್ಯ ಸ್ಥಿತಿಯನ್ನು ಪಡೆಯುವನೋ ಆಗ ಇವನಿಗೆ ಪರಮಾತ್ಮನೆಂದು ಕರೆಯಲಾಗುತ್ತದೆ. ಈ ಅವಸ್ಥೆಯನ್ನು ಹೊಂದಿದ ಇವನು ಉಳಿದೆಲ್ಲ ಸಾಂಸಾರಿಕ ಜೀವಿಗಳಿಗಿಂತಲೂ ಸರ್ವೋತ್ಕೃಷ್ಟನಾಗಿ ತೋರುತ್ತಿರುತ್ತಾನೆ. ಇವನೇ ಸಕಲ ಬ್ರಹ್ಮಾಂಡಗಳ ಉತ್ಪತ್ತಿ, ಸ್ಥಿತಿ ಮತ್ತು ಲಯಾದಿಗಳಿಗೆ ಆಧಾರನಾಗುತ್ತಾನೆ. ಹೀಗೆ ಪರಮಾತ್ಮನೊಂದಿಗೆ ಸಮರಸನಾದ ಇವನು ಪರಮಾತ್ಮರೂಪನೇ ಆಗಿರುವುದರಿಂದ ಇವನಿಗೆ ಪರಮಾತ್ಮನೆಂದೂ ಕರೆಯಲಾಗಿದೆ. (ಸಿ.ಶಿ., ೧೮. ೨೮–೩೫)

ಭಾಷ್ಯಕಾರರಾದ ಶ್ರೀಪತಿ ಪಂಡಿತಾರಾಧ್ಯರು ಈ ಪೂರ್ವದಲ್ಲಿ ಹೇಳಿದ ಆತ್ಮನ ಮೂರು ಅವಸ್ಥೆಗಳನ್ನು ಬದ್ಧ, ಶುದ್ಧ ಮತ್ತು ಮುಕ್ತ ಎಂಬುದಾಗಿ ಪ್ರತಿಪಾದಿಸಿದ್ದಾರೆ. ಇವರ ಅಭಿಪ್ರಾಯದಂತೆ ಗುರುದೀಕ್ಷಾರಹಿತನಾದ ಮತ್ತು ಕರ್ಮಬದ್ಧನಾದ ಜೀವನನ್ನು ಬದ್ಧಜೀವನೆಂತಲೂ, ಇನ್ನು ಗುರುದೀಕ್ಷೆಯನ್ನು ಹೊಂದಿ ಆಪ್ತ, ಅಂಗ ಮತ್ತು ಸ್ಥಾನಾದಿಗಳೆಂಬ ಸೇವಾವ್ರತವನ್ನಾಚರಿಸಿ ಶಾಂತ್ಯಾದಿ ಸದ್ಗುಣಗಳನ್ನು ಪಡೆದು ರಾಗರಹಿತನಾಗಿ ಶಿವನಿಗೆ ಅಧೀನನಾಗಿ ಮುಮುಕ್ಷುವೆನಿಸಿದ ಜೀವನೇ ಶುದ್ಧಜೀವನೆಂದು ಕರೆಯಲ್ಪಡುವನು. ಇದರಂತೆ ಶಿವಯೋಗ

ಸಾಧನೆಯಿಂದ ಶಿವಾದ್ವೈತ ಜ್ಞಾನವನ್ನು ಹೊಂದಿ ಪರಿಶುದ್ಧವಾದ ಕರ್ಪೂರದ ದೀಪವು ಪ್ರಖರವಾದ ಸೂರ್ಯಪ್ರಕಾಶದಲ್ಲಿ ವಿಲೀನವಾಗಿ ಹೋಗುವಂತೆ ಕೋಟಿಸೂರ್ಯರ ಪ್ರಕಾಶಕ್ಕೆ ಸಮಾನವಾದ ಪರಶಿವಚೈತನ್ಯದಲ್ಲಿ ತನ್ನೆಲ್ಲ ಚಿತ್ರ–ವೃತ್ತಿಗಳನ್ನೆಲ್ಲ ವಿಲೀನಗೊಳಿಸಿಕೊಂಡ ಜೀವನೇ ಮುಕ್ತಜೀವನೆಂದು ಕರೆಯಲ್ಪಡುತ್ತಾನೆ. (ಬ್ರ. ಸೂ. ಶ್ರೀಕರಭಾಷ್ಯ., ೨–೩–೪೬)

ಒಟ್ಟಿನಲ್ಲಿ ವೀರಶೈವ ಸಿದ್ಧಾಂತದೊಳಗೆ ಜೀವನು ಶಿವನ ಸಂಕುಚಿತ ಶಕ್ತಿಯಿಂದ ಕೂಡಿದ ಅವನ ಅಂಶರೂಪನಾಗಿದ್ದಾಗ ಈತನು ಅಣುರೂಪನಾಗಿದ್ದರಿಂದಲೇ ನಿತ್ಯನೂ, ಪ್ರತಿ ಶರೀರ ಭಿನ್ನನೂ ಆಗಿರುವನು. ಇವನು ಶಿವನೊಂದಿಗೆ ಸಂಸಾರಾವಸ್ಥೆಯಲ್ಲಿ ಭಿನ್ನನಾಗಿದ್ದು ಮುಕ್ತಾವಸ್ಥೆಯಲ್ಲಿ ಶಿವನೊಂದಿಗೆ ಸಾಮರಸ್ಯವನ್ನು ಪಡೆದು ತತ್ ಸ್ವರೂಪನೇ ಆಗಿರುತ್ತಾನೆ. ಇದುವೇ ಸಿದ್ಧಾಂತಶಿಖಾಮಣಿ ಸಮ್ಮತವಾದ ವೀರಶೈವರ ಜೀವಸ್ವರೂಪವೆಂಬುದಾಗಿ ತಿಳಿದುಕೊಳ್ಳಬೇಕು.

ಶ್ರೀ ಸಿದ್ಧಾಂತಶಿಖಾಮಣಿಯಲ್ಲಿಯ ಸೃಷ್ಟಿ ಮೀಮಾಂಸೆ :

ಭಾರತೀಯ ತತ್ತ್ವಶಾಸ್ತ್ರಜ್ಞರು ಮುಖ್ಯವಾಗಿ ಈಶ್ವರ, ಜೀವ ಮತ್ತು ಜಗತ್ತುಗಳೆಂಬ ಈ ಮೂರು ಪದಾರ್ಥ ವಿಷಯಕವಾಗಿ ಬಹಳಷ್ಟು ವಿಚಾರಿಸಿದ್ದುಂಟು. ಇಲ್ಲಿಯವರೆಗೆ ನಾವಾದರೂ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಪ್ರತಿಪಾದಿಸಲ್ಪಟ್ಟ ಈಶ್ವರ ಮತ್ತು ಜೀವಾತ್ಮರ ವಿಷಯಕವಾಗಿ ವಿಚಾರ ಮಾಡಲಾಗಿದ್ದು ಇನ್ನು ಕ್ರಮ ಪ್ರಾಪ್ತವಾದ ಸೃಷ್ಟಿಯ ಬಗ್ಗೆ ವಿವೇಚಿಸೋಣ.

ಈ ಜಗತ್ತಿನ ಸೃಷ್ಟಿ ಸ್ವರೂಪವನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ತತ್ವಜ್ಞಾನಿಗಳು ಸತ್ಕಾರ್ಯವಾದ ಮತ್ತು ಅಸತ್ಕಾರ್ಯವಾದವೆಂಬುದಾಗಿ ಎರಡು ಮಾರ್ಗಗಳನ್ನು ಅವಲಂಬಿಸಿರುತ್ತಾರೆ. ಇವುಗಳಲ್ಲಿ ಸತ್ಕಾರ್ಯವಾದವು ಪರಿಣಾಮವಾದ ಮತ್ತು ವಿವರ್ತವಾದ ಎಂಬುದಾಗಿ ಎರಡು ವಿಧವಾಗಿರುತ್ತದೆ. ಸಾಂಖ್ಯ ಮತ್ತು ವೀರಶೈವ ದರ್ಶನದಲ್ಲಿ ಪರಿಣಾಮವಾದವು ಅಂಗೀಕರಿಸಲ್ಪಟ್ಟಿದೆ. ಆದರೂ ಸಾಂಖ್ಯರು ಪ್ರಕೃತಿ ಪರಿಣಾಮವಾದಿಗಳಾದರೆ ವೀರಶೈವರ ಶಕ್ತಿ ವಿಶಿಷ್ಟ ಪರಶಿವ ಪರಿಣಾಮವಾದಿಗಳಾಗಿರುತ್ತಾರೆ. ವೀರಶೈವರ ಈ ಪರಿಣಾಮವಾದವು ಅವಿಕೃತಪರಿಣಾಮವಾದವೆಂದು ಕರೆಯಲ್ಪಡುತ್ತದೆ.

ಇನ್ನು ನ್ಯಾಯ–ವೈಶೇಷಿಕ ದಾರ್ಶನಿಕರು ಸೃಷ್ಟಿಯ ವ್ಯವಸ್ಥೆಯನ್ನು ಅಸತ್ಕಾರ್ಯವಾದದ ಮೂಲಕ ಸಮರ್ಥಿಸುತ್ತಾರೆ. ಈ ಅಸತ್ಕಾರ್ಯವಾದುವೇ ಆರಂಭವಾದವೆಂತಲೂ ಕರೆಯಲ್ಪಡುತ್ತದೆ. ಇದೇ ಪ್ರಕಾರವಾಗಿ ಅದ್ವೈತ

ವೇದಾಂತಿಗಳು ವಿವರ್ತವಾದವನ್ನಂಗೀಕರಿಸಿ ಸೃಷ್ಟಿಯ ವಿಚಾರವನ್ನು ವ್ಯವಸ್ಥೆಗೊಳಿಸುತ್ತಾರೆ. ಸದ್ಯಃ ವೀರಶೈವ ಸಿದ್ಧಾಂತೋಚಿತವಾದ ಅವಿಕೃತಪರಿಣಾಮ ವಾದವನ್ನು ಕುರಿತು ಸೃಷ್ಟಿ ಮೀಮಾಂಸೆಯನ್ನು ಮಾಡಲಾಗುವುದು.

ಅವಿಕೃತಪರಿಣಾಮವಾದ : ಅವಿಕೃತಪರಿಣಾಮವಾದವೆಂದರೆ ಉಪಾದಾನ ಕಾರಣವು. ತನ್ನ ಮೂಲ ಸ್ವರೂಪದಲ್ಲಿ ಯಾವ ವ್ಯತ್ಯಾಸವಿಲ್ಲದೆ ಅರ್ಥಾತ್ ವಿಕಾರವಿಲ್ಲದೆ ಬೇರೊಂದು ರೂಪದಲ್ಲಿ ಪರಿಣಾಮವನ್ನು ಹೊಂದುವುದೇ ಆಗಿದೆ. ಈ ಸಿದ್ಧಾಂತದಲ್ಲಿ ಶಕ್ತಿಯ ವಿಕಾಸವೇ ಸೃಷ್ಟಿಯು ಮತ್ತು ಅದರ ಸಂಕೋಚವೇ ಪ್ರಲಯವೆಂಬುದಾಗಿ ಪ್ರತಿಪಾದಿಸಲಾಗಿದೆ. ಅರ್ಥಾತ್ ಜಗತ್ತಿನ ಸೃಷ್ಟಿ ಹಾಗೂ ಪ್ರಲಯಗಳು ಶಿವನಲ್ಲಿ ಅವಿನಾಭಾವ ಸಂಬಂಧಿನಿಯಾಗಿರುವ ಶಕ್ತಿಯ ವಿಕಾಸ ಹಾಗೂ ಸಂಕೋಚದಿಂದ ಉಂಟಾಗುವುವು. ಆಮೆಯು ಒಮ್ಮೆ ತನ್ನ ಕರಚರಣಾದಿ ಅವಯವಗಳನ್ನು ವಿಸ್ತರಿಸಿ ಭೂಮಿ ಇಲ್ಲವೆ ನೀರಿನಲ್ಲಿ ಸುತ್ತಾಡಿದರೆ, ಅದುವೇ ಇನ್ನೊಮ್ಮೆ ತನ್ನ ಅವಯವಗಳನ್ನು ಸಂಕೋಚಗೊಳಿಸಿಕೊಂಡು ಒಂದೆಡೆ ಸುಮ್ಮನೆ ಕುಳಿತುಬಿಡುತ್ತದೆ. ಇದರಂತೆ ಪರಶಿವನು ಸೃಷ್ಟಿಯ ಸಮಯದಲ್ಲಿ ತನ್ನ ಶಕ್ತಿಯನ್ನು ವಿಕಾಸಗೊಳಿಸಿ ಜಗಲ್ಲೀಲಾ ನಾಟಕವನ್ನು ರಚಿಸುತ್ತಾನೆ. ಅವನೇ ಇನ್ನೊಮ್ಮೆ ತನ್ನ ಲೀಲೆಯನ್ನು ತನ್ನ ಶಕ್ತಿಯನ್ನು ಸಂಕೋಚಗೊಳಿಸುವುದರ ಮೂಲಕ ಈ ಲೀಲಾನಾಟಕವನ್ನು ಪರಿಸಮಾಪ್ತ ಗೊಳಿಸುತ್ತಾನೆ. ಆಮೆಯು ತನ್ನ ಅವಯವಗಳ ಸಂಕೋಚ-ವಿಕಾಸಗಳನ್ನು ಮಾಡಿಕೊಂಡರೂ ಅದರ ಮೂಲ ಸ್ವರೂಪದಲ್ಲಿ ಯಾವುದೇ ವಿಕಾರವೂ ಆಗ ದಿರುವಂತೆ ಪರಶಿವನೂ ಸಹ ತನ್ನ ಶಕ್ತಿಯ ವಿಕಾಸ-ಸಂಕೋಚಗಳಿಂದ ಯಾವ ವಿಕಾರವನ್ನೂ ಹೊಂದುವುದಿಲ್ಲ. ಹೀಗೆ ಪರಶಿವನಲ್ಲಿ ವಿಕಾರವುಂಟಾಗದೆ ಶಕ್ತಿಯು ವಿಕಾಸ-ಸಂಕೋಚಗಳಿಂದ ಹೇಳುವ ಪರಿಣಾಮವಾದವೇ ಅವಿಕೃತ ಪರಿಣಾಮ ವಾದವು. ಇದನ್ನೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ॥

(ಸಿ.ಶಿ., ೧೦-೬೬)

ಎಂದು ಹೇಳಲಾಗಿದೆ. ತಾತ್ಪರ್ಯವೇನೆಂದರೆ ವಸ್ತ್ರದ ವಿಸ್ತಾರದಿಂದ ಬಿಡಾರವನ್ನು ಸಜ್ಜುಗೊಳಿಸಿ ಅದರ ಪ್ರಯೋಜನವು ಮುಗಿದೊಡನೆ ಅದನ್ನು ಪುನಃ ಸುತ್ತಿ ಇಡುತ್ತಾರೆ. ಹೀಗೆ ವಸ್ತ್ರದ ವಿಕಾಸ ಹಾಗೂ ಸಂಕೋಚಗಳಿಂದ ಬಿಡಾರದ ನಿರ್ಮಾಣ ಹಾಗೂ ಅದರ ಪರಿಸಮಾಪ್ತಿಗಳುಂಟಾದರೂ ಅದಕ್ಕೆ ಉಪಯೋಗಿಸುವ ವಸ್ತ್ರದಲ್ಲಿ

ಯಾವ ವಿಕಾರವೂ ಉಂಟಾಗುವುದಿಲ್ಲ. ಅಂದರೆ ಬಿಡಾರಕ್ಕೆ ಉಪಯೋಗಿಸುವ ವಸ್ತ್ರವನ್ನು ವಿಕಾಸಗೊಳಿಸಿದಾಗ ಬಿಡಾರವು ನಿರ್ಮಾಣವಾಗುವುದು. ಆ ವಸ್ತ್ರವನ್ನು ಸುತ್ತಿ ಇಟ್ಟಾಗ ಅದು ಇಲ್ಲವಾಗುವುದು. ಅದರಂತೆ ಶಿವನು ತನ್ನ ಶಕ್ತಿಯನ್ನು ವಿಕಾಸಗೊಳಿಸಿದಾಗ ಸೃಷ್ಟಿಯು ಅರ್ಥಾತ್ ಜಗತ್ತಿನ ನಿರ್ಮಾಣವಾಗುವುದು. ಆತನು ತನ್ನ ಶಕ್ತಿಯನ್ನು ಸಂಕೋಚಗೊಳಿಸಿಕೊಂಡಾಗ ಸೃಷ್ಟಿಯು ಇಲ್ಲವಾಗುವುದು. ಹೀಗೆ ಶಿವನ ಶಕ್ತಿಯ ವಿಕಾಸ–ಸಂಕೋಚಗಳಿಂದ ಸೃಷ್ಟಿಯ ಉತ್ಪತ್ತಿ ಮತ್ತು ಲಯಗಳುಂಟಾದರೂ ಶಿವನ ಸ್ವರೂಪದಲ್ಲಿ ಅದಾವ ಪರಿಣಾಮವೂ ಉಂಟಾಗುವುದಿಲ್ಲ. ಇದುವೇ ಅವಿಕೃತಪರಿಣಾಮವಾದವು.

ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಮೇಲೆ ಹೇಳಿದ ಅವಿಕೃತ ಪರಿಣಾಮವಾದಕ್ಕೆ ವೃಕ್ಷದ ಉದಾಹರಣೆಯನ್ನು ಸಹ ಕೊಡಲಾಗಿದೆ. ಅದನ್ನೇ ಪೂಜ್ಯಪಾದರು –

ಪತ್ರ ಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ ।
ತಥಾ ಭೂಮ್ಯಾದಿರೂಪೇಣ ಶಿವ ಏಕೋ ವಿರಾಜತೇ ॥

(ಸಿ.ಶಿ., ೧೦–೭೦)

ಎಂದು ವಿವರಿಸಿದ್ದಾರೆ. ಅಂದರೆ ಬೇರು, ಕಾಂಡ, ಶಾಖೆ, ಪತ್ರ, ಪುಷ್ಪ ಮತ್ತು ಫಲಗಳ ರೂಪದಲ್ಲಿ ಒಂದು ವೃಕ್ಷವು ಸಂಪೂರ್ಣವಾಗಿ ವಿಕಾಸಗೊಂಡು ತೋರುವಂತೆ ಶಿವನೂ ಸಹ ತನ್ನ ಶಕ್ತಿಯ ವಿಕಾಸದ ಮೂಲಕ ಪೃಥಿವ್ಯಾದಿಗಳ ರೂಪದಲ್ಲಿ ತೋರುತ್ತಿರುತ್ತಾನೆ. ಇಲ್ಲಿ ಶಿವನು ತನ್ನ ಧೃತಿಶಕ್ತಿಯಿಂದ ಭೂಮಿ, ಕಾರುಣ್ಯಶಕ್ತಿಯಿಂದ ಜಲ, ಉಜ್ವಲಶಕ್ತಿಯಿಂದ ತೇಜ(ಅಗ್ನಿ), ಪರಮಾನಂದ ಸ್ಪಂದ ಶಕ್ತಿಯಿಂದ ವಾಯು, ಚಿದ್ವ್ಯಾಪ್ತಿಶಕ್ತಿಯಿಂದ ಆಕಾಶ ಮತ್ತು ಚಿತಿ ಸಂಕೋಚ ರೂಪವಾದ ಚಿತ್‌ಶಕ್ತಿಯಿಂದ ಜೀವನಾಗಿ ವಿಕಾಸಗೊಂಡಿರುತ್ತಾನೆ.

ಒಂದು ಬೀಜವು ಕಾಲಶಕ್ತಿಯಿಂದ ಕ್ರಮವಾಗಿ ಅಂಕುರಗೊಂಡು ವಿಶಾಲವಾದ ವೃಕ್ಷರೂಪವನ್ನು ತಾಳುವಂತೆ ಶಕ್ತಿವಿಶಿಷ್ಟನಾದ ಶಿವನು ಸೃಷ್ಟಿಯ ಸಮಯದಲ್ಲಿ ತನ್ನಲ್ಲಿರುವ ಅನಂತ ಶಕ್ತಿಗಳ ವಿಕಾಸದಿಂದ ಈ ವಿರಾಟ್ ವಿಶ್ವರೂಪವಾಗಿ ತೋರುತ್ತಾನೆ ಎಂಬುದೇ ಪೂಜ್ಯಪಾದರ ಆಶಯವಾಗಿದೆ.

ಇಲ್ಲೊಂದು ಸಹಜವಾದ ಪ್ರಶ್ನೆಯು ಉದ್ಭವಿಸುವುದು. ಅದೇನೆಂದರೆ ವೃಕ್ಷವು ಅವಯವಗಳಿಂದ ಕೂಡಿಕೊಂಡಿರುತ್ತದೆ. ಆದ್ದರಿಂದ ಅದು ಬೇರು, ಕಾಂಡ ಮುಂತಾದವುಗಳ ರೂಪದಲ್ಲಿ ಪರಿಣಾಮ ಹೊಂದುವುದು ಆಶ್ಚರ್ಯವೇನಲ್ಲ. ಆದೆ ಪರಶಿವನು ನಿರವಯವನಾದ್ದರಿಂದ ಅವನು ಹೇಗೆ ತಾನೆ ಪ್ರಪಂಚರೂಪದಲ್ಲಿ ಪರಿಣಾಮವನ್ನು ಹೊಂದುವನು? ಈ ಪ್ರಶ್ನೆಗೆ ಸಮಾಧಾನವೇನೆಂದರೆ ಶಿವನಲ್ಲಿರುವ ಶಕ್ತಿಯೇ ವಿಶ್ವರೂಪವಾಗಿ ಪರಿಣಾಮವನ್ನು ಹೊಂದುತ್ತದೆಯೇ ವಿನಹ ಶಿವನು

ಪರಿಣಾಮವನ್ನು ಹೊಂದುವುದಿಲ್ಲ. ಆದ್ದರಿಂದ ಮೇಲಿನ ಪ್ರಶ್ನೆಗೆ ಶಿವಾದಿ ಭೂಮ್ಯಂತಗಳಾದ ಮೂವತ್ತಾರು ತತ್ತ್ವಗಳಲ್ಲಿ ಈಶ್ವರತತ್ತ್ವದಿಂದ ಮೊದಲುಗೊಂಡು ಪೃಥ್ವೀ ಪರ್ಯಂತಗಳಾದ ಮೂವತ್ನಾಲ್ಕು ತತ್ತ್ವಗಳು ಶಕ್ತಿಯ ವಿಕಾಸವೆಂದೇ ನಿರೂಪಿಸಲಾಗಿದೆ. ಶಕ್ತಿಯಲ್ಲಿ ಇಷ್ಟೊಂದು ಪರಿಣಾಮವಾದರೂ ಆ ಶಕ್ತಿವಿಶಿಷ್ಟವಾದ ಶಿವನಲ್ಲಿ ಅದಾವ ಪರಿಣಾಮವೂ ಅರ್ಥಾತ್ ವಿಕಾರವು ಉಂಟಾಗುವುದಿಲ್ಲ. ಅದನ್ನೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ರ್ಯಕಾರಿಣೀ ।
ಯಸ್ಮಿನ್ ಪ್ರತಿಷ್ಠಿತಂ ಬ್ರಹ್ಮ ತದಿದಂ ವಿಶ್ವಭಾಜನಮ್ ॥

(ಸಿ.ಶಿ., ೨೦–೩೬)

ಎಂದು ಹೇಳಲಾಗಿದೆ ಅಂದರೆ ವಿಶ್ವದ ಈ ವೈಚಿತ್ರ್ಯಕ್ಕೆ ಶಿವನಲ್ಲಿರುವ ವಿಮರ್ಶ ಶಕ್ತಿಯೇಕಾರಣೀಭೂತವಾಗಿರುತ್ತದೆ. ಶಿವನು ಮಾತ್ರ ಅದಾವ ವಿಕಾರವನ್ನೂ ಹೊಂದದೆ ವಿಶ್ವಕ್ಕೆಲ್ಲ ಭಾಜನನಾಗಿರುತ್ತಾನೆ. ಹೀಗೆ ಶಿವನಲ್ಲಿರುವ ಶಕ್ತಿಯ ವಿಕಾಸದಿಂದ ಸೃಷ್ಟಿಯಾದರೂ ಶಿವನಿಗೆ ಅದಾವ ವಿಕಾರವೂ ಉಂಟಾಗದ ಕಾರಣದಿಂದಾಗಿಯೇ ಇಲ್ಲಿ ಅವಿಕೃತಪರಿಣಾಮವಾದವನ್ನು ಪ್ರತಿಪಾದಿಸಲಾಗಿದೆ.

ಸೃಷ್ಟಿಗೆ ಶಿವನು ಅಭಿನ್ನನಿಮಿತ್ತೋಪಾದನಕಾರಣನು :

ಯಾವುದೊಂದು ಕಾರ್ಯವಾಗಬೇಕಾದರೆ ಉಪಾದಾನಕಾರಣ ಮತ್ತು ನಿಮಿತ್ತಕಾರಣಾದಿಗಳನ್ನು ಹೇಳಬೇಕಾಗುವುದು. ಒಬ್ಬ ಕುಂಭಕಾರನು ಒಂದು ಘಟವನ್ನು ನಿರ್ಮಿಸಬೇಕಾದರೆ ಅವನಿಗೆ ಮಣ್ಣು, ತಿಗರಿ, ನೀರು, ದಂಡ ಮುಂತಾದ ಸಾಮಗ್ರಿಗಳು ಬೇಕಾಗುತ್ತವೆ. ಘಟದ ನಿರ್ಮಾಣದಲ್ಲಿ ಮಣ್ಣು ಉಪಾದಾನಕಾರಣವಾಗಿರುತ್ತದೆ. ಕುಂಭಕಾರನು ನಿಮಿತ್ತಕಾರಣನಾಗಿರುತ್ತಾನೆ ಮತ್ತು ದಂಡ, ಚಕ್ರ (ತಿಗರಿ) ಆದಿಗಳು ಸಹಕಾರಿಕಾರಣಗಳಾಗಿರುತ್ತವೆ. ಇದೇ ಪ್ರಕಾರವಾಗಿ ಪ್ರತಿಯೊಂದು ಕಾರ್ಯಕ್ಕೂ ಈ ಸಾಮಾಗ್ರಿಗಳು ಬೇಕೇ ಬೇಕು. ಅಂದಾಗ ಇಂತಹ ವಿಶಾಲವಾದ ವಿಶ್ವದ ರಚನೆ ಯಾಗಬೇಕಾಗುತ್ತದೆ. ವೀರಶೈವಸಿದ್ಧಾಂತದಲ್ಲಿ ವಿಮರ್ಶಾಶಕ್ತಿ ವಿಶಿಷ್ಟನಾದ ಶಿವನೇ ನಿಮಿತ್ತ ಹಾಗೂ ಉಪಾದಾನಕಾರಣವಾಗಿದ್ದಾನೆಂದು ಒಪ್ಪಿಕೊಳ್ಳಲಾಗಿದೆ. ಸೃಷ್ಟಿಯ ಪೂರ್ವದಲ್ಲಿ ಬೇರೊಂದು ವಸ್ತುವೇ ಇಲ್ಲದಿರುವಾಗ ಶಿವನ ಹೊರತು ಬೇರೆ ಕಾರಣವನ್ನು ಅದು ಹೇಗೆ ತಾನೇ ಹೇಳಲಾದೀತು?

ಮುಂಡಕೋಪನಿಷತ್ತಿನಲ್ಲಿ – "ಯಥೋರ್ಣನಾಭಿಃ ಸೃಜತೇಗೃಹ್ಣತೇ ಚ" (೧–೧–೭), ಎಂಬುದಾಗಿ ಹೇಳಿ ಸೃಷ್ಟಿಗೆ ಶಿವನೋರ್ವನೇ ನಿಮಿತ್ತಕಾರಣನು

ಮತ್ತು ಉಪಾದಾನಕಾರಣನೆಂಬುದಾಗಿ ಪ್ರತಿಪಾದಿಸಲಾಗಿದೆ. ಜೇಡರ ಹುಳವು ತನ್ನ ಜಾಲವನ್ನು ನಿರ್ಮಿಸುವುದಕ್ಕಾಗಿ ಬೇರೆ ಎಲ್ಲಿಂದಲೋ ಅರಳೆ, ನೂಲು ಮುಂತಾದ್ದನ್ನು ತೆಗೆದುಕೊಂಡು ಬರದೇ ತಾನೇ ಎಳೆಯನ್ನು ನಿರ್ಮಾಣಗೊಳಿಸಿ ಆ ಎಳೆಯಿಂದ ತನ್ನ ಜಾಲವನ್ನು ತಾನೇ ನಿರ್ಮಿಸುವುದನ್ನು ಲೋಕದಲ್ಲಿ ಕಾಣುತ್ತೇವೆ. ಇಲ್ಲಿ ಆ ಜಾಲದ ನಿರ್ಮಾಣಕ್ಕೆ ಆ ಹುಳದ ಶರೀರದಲ್ಲಿರುವ ಚೈತನ್ಯವು ನಿಮಿತ್ತ ಕಾರಣವಾದರೆ, ಅದರ ದೇಹವು ಉಪಾದಾನಕಾರಣವಾಗಿರುತ್ತದೆ. ಅದೇ ಪ್ರಕಾರವಾಗಿ ಶಕ್ತಿ ವಿಶಿಷ್ಟನಾದ ಶಿವನಲ್ಲಿಯ ಶಕ್ತ್ಯಂಶವು ಸೃಷ್ಟಿಗೆ ಉಪಾದಾನಕಾರಣವಾದರೆ ಶಿವಾಂಶವು ನಿಮಿತ್ತಕಾರಣವಾಗುವುದು. ಹೀಗೆ ಶಕ್ತಿವಿಶಿಷ್ಟನಾದ ಶಿವನು ಈ ಸೃಷ್ಟಿಗೆ ಅಭಿನ್ನನಿಮಿತ್ತೋಪಾದಾನಕಾರಣವೆಂಬುದಾಗಿ ವೀರಶೈವಾಚಾರ್ಯರು ಒಪ್ಪಿಕೊಂಡಿರುತ್ತಾರೆ.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಶ್ರೀಸಿದ್ಧಾಂತಶಿಖಾಮಣಿಯಲ್ಲಿ – **"ತಥಾ ಶಿವಾತ್ ಸಮುತ್ಪನ್ನಂ ಶಿವ ಏವ ಚರಾಚರಮ್"** (ಸಿ.ಶಿ., ೧೦–೬೫), ಎಂಬುದಾಗಿ ಹೇಳಿ ಶಿವನು ಅಭಿನ್ನನಿಮಿತ್ತೋಪಾದಾನಕಾರಣನೆಂದು ಸಮರ್ಥಿಸಿದ್ದಾರೆ. ಈ ವಿಷಯವನ್ನು ಸ್ಪಷ್ಟಪಡಿಸಲೋಸುಗ ಪೂಜ್ಯಪಾದರು ಮಣ್ಣು, ಮಡಿಕೆ ಹಾಗೂ ತಂತು–ಪಟಗಳ ಉದಾಹರಣೆಯನ್ನು ಕೊಟ್ಟಿರುತ್ತಾರೆ. ಉಪಾದಾನಕಾರಣವಾದ ಮಣ್ಣಿನಿಂದ ನಿರ್ಮಾಣವಾದ ಮಡಿಕೆಯು ಮೃಣ್ಮಯವೇ ಆಗಿರುವಂತೆ ಮತ್ತು ತಂತುಗಳಿಂದ ಉತ್ಪನ್ನವಾದ ವಸ್ತ್ರವು ತಂತುಮಯವೇ ಆಗಿರುವಂತೆ ಶಿವನಿಂದ ಉತ್ಪನ್ನವಾದ ಈ ಪ್ರಪಂಚವು ಶಿವರೂಪವೇ ಆಗಿರುತ್ತದೆಂಬುದಾಗಿ ಹೇಳಿ ಶಕ್ತಿವಿಶಿಷ್ಟನಾದ ಶಿವನ ಅಭಿನ್ನನಿಮಿತ್ತೋಯೋಪಾದಾನ ಕಾರಣತ್ವವನ್ನು ಸ್ಪಷ್ಟಪಡಿಸಿದ್ದಾರೆ (ಸಿ.ಶಿ., ೧೦. ೬೩–೬೭)

ಷಟ್‌ತ್ರಿಶಂತ್ ತತ್ತ್ವಗಳು :

ವೀರಶೈವಸಿದ್ಧಾಂತದಲ್ಲಿ ಸೃಷ್ಟಿಯು ಶಿವರೂಪವೇ ಆಗಿರುವುದರಿಂದ ಸೃಷ್ಟಿಯಲ್ಲಿ ಬರುವ ಎಲ್ಲ ಪದಾರ್ಥಗಳಿಗೆ ಇಲ್ಲಿ ತತ್ತ್ವ ಎಂಬುದಾಗಿ ಕರೆಯಲಾಗಿದೆ. **"ಅನಾರೋಪಿತಂ ರೂಪಂ ತತ್ತ್ವಮ್"** ಎಂಬ ಉಕ್ತಿಗನುಸಾರವಾಗಿ ಆರೋಪಿತವಲ್ಲದ ಅರ್ಥಾತ್ ಸತ್ಯರೂಪವಾದ ಪದಾರ್ಥಕ್ಕೆ ತತ್ತ್ವ ಎಂಬುದಾಗಿ ಕರೆಯಲಾಗುತ್ತದೆ. ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಸೃಷ್ಟಿಯೊಳಗಿನ ಪದಾರ್ಥಗಳಿಗೆಲ್ಲ ತತ್ತ್ವ ಎಂಬುದಾಗಿ ಸಂಬೋಧಿಸಿ ಆ ತತ್ತ್ವಗಳು ಮೂವತ್ತಾರು ಪ್ರಕಾರವಾಗಿರುತ್ತವೆ. ಅಲ್ಲದೆ ಅವೆಲ್ಲ ಸಮುದ್ರದಿಂದ ನೆರೆ–ತೊರೆಗಳು ಉದ್ಭವಿಸುವಂತೆ ಶಿವನಿಂದ ಉದ್ಭವಿಸಿವೆ ಎಂಬುದನ್ನು –

ಯಸ್ಯೋರ್ಮಿಬುದ್ಬುದಾಭಾಸಃ ಷಟ್‌ತ್ರಿಂಶತ್ತತ್ತ್ವಸಂಚಯಃ ।
ನಿರ್ಮಲಂ ಶಿವನಾಮಾನಂ ತಂ ವಂದೇ ಚಿನ್ಮಹೋದಧಿಮ್ ॥

(ಸಿ.ಶಿ., ೧–೩)

ಎಂದು ಪ್ರತಿಪಾದಿಸಲಾಗಿದೆ. ಇಲ್ಲಿ ಬರುವ ಆ ಮೂವತ್ತಾರು ತತ್ತ್ವಗಳೆಂದರೆ ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ, ಮಾಯಾ, ಕಲಾ, ವಿದ್ಯಾ, ರಾಗ, ಕಾಲ, ನಿಯತಿ, ಪುರುಷ, ಪ್ರಕೃತಿ, ಮಹತ್, ಅಹಂಕಾರ, ಮನ, ಶ್ರೋತ್ರ, ತ್ವಕ್, ಚಕ್ಷು, ಜಿಹ್ವೆ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ.

ಇಲ್ಲಿ ಶಿವ ಮತ್ತು ಶಕ್ತಿ ಎಂಬೆರಡು ತತ್ತ್ವಗಳು ಕಾರಣರೂಪವಾಗಿದ್ದು ಉಳಿದ ಮೂವತ್ನಾಲ್ಕು ತತ್ತ್ವಗಳು ಕಾರ್ಯರೂಪವಾಗಿರುತ್ತವೆ. ಅಂತೆಯೇ ಶ್ರೀ ಶಿವಯೋಗಿ ಶಿವಾಚಾರ್ಯರು ಶ್ರೀ ಸಿದ್ಧಾಂತ ಶಿಖಾಮಣಿಯ ಶಕ್ತಿಸ್ತುತಿಯಲ್ಲಿ –

ಸದಾಶಿವಮುಖಾಶೇಷ ತತ್ತ್ವಮೌಕ್ತಿಕಶುಕ್ತಿಕಾಮ್ ।
ವಂದೇ ಮಾಹೇಶ್ವರೀಂ ಶಕ್ತಿಂ ಮಹಾಮಾಯಾದಿ ರೂಪಿಣೀಮ್ ॥

(ಸಿ.ಶಿ., ೨–೨)

ಎಂದು ಹೇಳಿ ಸದಾಶಿವ ತತ್ತ್ವದಿಂದ ಪೃಥ್ವೀ ತತ್ತ್ವದ ವರೆಗಿನ ಮೂವತ್ನಾಲ್ಕು ತತ್ತ್ವಗಳೆಂಬ ಮುತ್ತುಗಳ ಉತ್ಪತ್ತಿಗೆ ಶಕ್ತಿಯು ಶಿಂಪಿಯ ರೂಪವಾಗಿದ್ದಾಳೆಂದು ಹೇಳಿ ಶಕ್ತಿಯನ್ನು ಉಪಾದಾನಕಾರಣಕೋಟಿಯಲ್ಲಿ ಇರಿಸಿದ್ದಾರೆ. ಇದೇ ಪ್ರಕಾರವಾಗಿ–

ಸದಾಶಿವಮುಖಾಶೇಷತತ್ತ್ವೋನ್ಮೇಷವಿಧಾಯಿನೇ ।
ನಿಷ್ಕಲಂಕಸ್ವಭಾವಾಯ ನಮಃ ಶಾಂತಾಯ ಶಂಭವೇ ॥

(ಸಿ.ಶಿ., ೧–೫)

ಎಂಬ ಶಿವಸ್ತುತಿಯಲ್ಲಿ ಸದಾಶಿವ ತತ್ತ್ವವನ್ನೇ ಮೊದಲುಗೊಂಡು ಉಳಿದಿರುವ ಸರ್ವತತ್ತ್ವಗಳ ಉನ್ಮೇಷಕ್ಕೆ ಶಿವನು ಕಾರಣನೆಂಬುದಾಗಿ ಹೇಳಿ ಮತ್ತು ಆ ಶಿವನು ನಿಷ್ಕಳಂಕನೆಂಬುದಾಗಿ ಪ್ರತಿಪಾದಿಸಿರುವುದರಿಂದ ಶಿವನು ಸದಾಶಿವಾದಿ ಮೂವತ್ನಾಲ್ಕು ತತ್ತ್ವಗಳ ಉತ್ಪತ್ತಿಗೆ ನಿಮಿತ್ತಕಾರಣ ನೆಂಬುದಾಗಿ ಪ್ರತಿಪಾದಿಸಿದ್ದನ್ನಿಲ್ಲಿ ಕಾಣಬಹುದು. ಹೀಗೆ ಇಲ್ಲಿ ಉಲ್ಲೇಖಿಸಲ್ಪಟ್ಟಿರುವ ಮೊದಲಿನ ಶಿವ ಮತ್ತು ಶಕ್ತಿಯೆಂಬ ಎರಡು ತತ್ತ್ವಗಳು ಮುಂದಿನ ಮೂವತ್ನಾಲ್ಕು ತತ್ತ್ವಗಳಿಗೆ ಅಭಿನ್ನನಿಮಿತ್ತೋಪಾದಾನ ಕಾರಣಗಳಾಗಿರುತ್ತವೆಂಬುದನ್ನು ಸರ್ವರೂ ತಿಳಿದುಕೊಳ್ಳಬೇಕು. ತತ್ತ್ವಾತ್ಮಕವಾದ ಸೃಷ್ಟಿಯು ಸತ್ಯವಾದುದು.

ಒಟ್ಟಿನಲ್ಲಿ ವೀರಶೈವ ಸಿದ್ಧಾಂತದ ಪ್ರಕಾರವಾಗಿ ಈ ಸೃಷ್ಟಿಯು ತತ್ತ್ವಾತ್ಮಕವಾದುದು. ಈ ತತ್ತ್ವಗಳೆಲ್ಲ ಶಿವ–ಶಕ್ತಿಯರಂತೆ ಸತ್ಯವಾದುದೇ ವಿನಃ ಮಿಥ್ಯವಾದುದಲ್ಲ. ಅದ್ವೈತ ವೇದಾಂತಿಗಳು ಪರಮಾತ್ಮನನ್ನು ಸತ್ಯವೆಂಬುದಾಗಿ ಒಪ್ಪಿ ಜಗತ್ತನ್ನು ಮಿಥ್ಯ ಎಂಬುದಾಗಿ ಹೇಳುತ್ತಾರೆ. ಹೀಗೆ ಹೇಳೋಣದರಿಂದ ಮನುಷ್ಯನ ವ್ಯಾವಹಾರಿಕವಾದ ಬದುಕು ಸಂಪೂರ್ಣವಾಗಿ ನಿಷ್ಪ್ರಯೋಜಕ ವಾಗುವುದು. ಆದರೆ ಪಾರಮಾರ್ಥಿಕ ಜೀವನಕ್ಕೆ ಮಹತ್ತ್ವವಿದ್ದಷ್ಟು ವ್ಯಾವಹಾರಿಕ ಜೀವನಕ್ಕೂ ಸಹ ಅವಶ್ಯವಾಗಿ ಮಹತ್ತ್ವವನ್ನು ಕೊಡಬೇಕಾಗುವುದು. ಹಾಗಿಲ್ಲದೇ ಹೋದಲ್ಲಿ ಲೌಕಿಕ ಬದುಕಿಗೆ ಬೆಲೆಯೇ ಇಲ್ಲದಂತಾಗುವುದು. ಇದರಿಂದ ಬಹಳಷ್ಟು ಜನರು ಜವಾಬ್ದಾರಿಹೀನರು, ಪಲಾಯನವಾದಿಗಳು ಆಗುವರು. ಆದ್ದರಿಂದ ಆತ್ಮಜ್ಞಾನವಾದ ಬಳಿಕ ಲೌಕಿಕ ಜೀವನವನ್ನೂ ಸಹ ಚೆನ್ನಾಗಿ ಬದುಕಿ ತಮ್ಮ ಜೀವನವನ್ನು ಅನ್ಯರಿಗೆ ಮಾದರಿಯಾಗುವಂತೆ ನಡೆದುಕೊಳ್ಳಬೇಕೆಂಬ ಉದ್ದೇಶದಿಂದ ವೀರಶೈವ ಆಚಾರ್ಯರು ಜೀವ, ಶಿವ ಹಾಗೂ ಜಗತ್ತನ್ನು ಸತ್ಯವಾಗಿಯೇ ಒಪ್ಪಿಕೊಂಡಿರುತ್ತಾರೆ. ಅಂತೆಯೇ ಭಾಷ್ಯಕಾರರಾದ ಶ್ರೀಪತಿ ಪಂಡಿತಾರಾಧ್ಯರು –

ಜೀವಃ ಸತ್ಯಂ ಜಗತ್ ಸತ್ಯಂ ಶಿವಃ ಸತ್ಯಂ ಸ್ವಭಾವತಃ ।
ತಯೋರಭೇದಃ ಸತ್ಯಂ ವಾ ಕ್ರಿಮಿಭ್ರಮರಯೋರಿವ ॥

(ಬ್ರ.ಸೂ. ಶ್ರೀಕರ., ೨–೩–೪೦)

ಎಂದು ಹೇಳಿ ಆ ಮಾತನ್ನು ಸಮರ್ಥಿಸಿದ್ದುಂಟು. ಈ ವಿಧವಾಗಿ ಸೃಷ್ಟಿಯ ವಿಚಾರದಲ್ಲಿ ಬರುವ ಸರ್ವ ವಿಷಯಗಳನ್ನು ಕೂಲಂಕಷವಾಗಿ ವಿಚಾರ ಮಾಡಲು ತಿಳಿದುಬರುವುದೇನೆಂದರೆ ಕಾಣುವ ಚರಾಚರಾತ್ಮಕವಾದ ಸೃಷ್ಟಿಯು ಅಂದರೆ ಜಗತ್ತೂ ಸಹ ಪರಮಾತ್ಮನ ವ್ಯಕ್ತರೂಪವೆಂದು ತಿಳಿದುಕೊಂಡು ಅದರ ಮೇಲಿನ ಆಸಕ್ತಿಭಾವರಹಿತನಾಗಿ ಇರುವ ಸಾಧಕನು ಪ್ರಪಂಚದಲ್ಲಿದ್ದರೂ ಸರ್ವತ್ರ ಶಿವದರ್ಶನ ವನ್ನೇ ಮಾಡುತ್ತಿರುತ್ತಾನೆ.

ಶ್ರೀ ಸಿದ್ಧಾಂತಶಿಖಾಮಣಿಯಲ್ಲಿಯ ಬಂಧ–ಮೋಕ್ಷ ವಿಮರ್ಶೆ :

ಭಾರತೀಯ ತತ್ತ್ವಶಾಸ್ತ್ರಜ್ಞರು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷವೇ ಪರಮ ಪುರುಷಾರ್ಥವೆಂಬುದಾಗಿ ಪರಿಗಣಿಸಿದ್ದಾರೆ. 'ಮುಚ್' ಎಂಬ ಧಾತುವಿನಿಂದ ಉತ್ಪನ್ನವಾದ ಈ ಮೋಕ್ಷ ಶಬ್ದವು ಬಿಡುಗಡೆಯ ಅರ್ಥವನ್ನು ಸೂಚಿಸುತ್ತದೆ. ಯಾವುದರಿಂದ ಬಿಡುಗಡೆ ಎಂಬ ಪ್ರಶ್ನೆಯು ಉದ್ಭವಿಸಿದಾಗ ದುಃಖಕ್ಕೆ ಕಾರಣೀಭೂತವಾದ ಬಂಧನದಿಂದ ಎಂಬ ಅರ್ಥವನ್ನು ಎಲ್ಲರು ಒಪ್ಪಿಕೊಳ್ಳುತ್ತಾರೆ. ಆದರೆ ಬಂಧನದ ಸ್ವರೂಪ

ವಿಷಯದಲ್ಲಿ ಪ್ರತಿಯೊಬ್ಬ ದಾರ್ಶನಿಕರು ಭಿನ್ನಭಿನ್ನವಾಗಿ ಪ್ರತಿಪಾದಿಸಿದ್ದಾರೆ. ಮಿಥ್ಯಾ ಜ್ಞಾನವೇ ಬಂಧನವೆಂದು ನ್ಯಾಯ–ವೈಶೇಷಿಕಾಚಾರ್ಯರು ತಿಳಿಸಿದರು. ಸಾಂಖ್ಯ ಮತ್ತು ಯೋಗದರ್ಶನದ ಆಚಾರ್ಯರು ಅವಿವೇಕ ಖ್ಯಾತಿಯೇ ಬಂಧನವೆಂದು ಸಮರ್ಥಿಸುತ್ತಾರೆ. ಮಿಮಾಂಸಾಚಾರ್ಯರು ಭೋಗಾಯತನ, ಭೋಗಸಾಧನ ಮತ್ತು ಭೋಗ್ಯಗಳಾದ ಶರೀರ, ಇಂದ್ರಿಯ ಹಾಗೂ ವಿಷಯಗಳ ಸಂಬಂಧವೇ ಬಂಧನವೆಂಬುದಾಗಿ ನಿರೂಪಿಸುತ್ತಾರೆ. ಅದ್ವೈತ ವೇದಾಂತಿಗಳು ಅವಿದ್ಯೆಯೇ ಬಂಧನವೆಂದು ಕರೆದಿದ್ದಾರೆ. ಇನ್ನು ವೀರಶೈವ ಆಚಾರ್ಯರು ಆಣವಾದಿ ಮಲ ತ್ರಯಗಳೇ ಬಂಧನವೆಂದು ಉಪದೇಶಿಸಿದ್ದಾರೆ. ಇಲ್ಲಿ ಬಂಧನ ಶಬ್ದದ ಪರಿಭಾಷೆಯು ಭಿನ್ನಭಿನ್ನವಾಗಿ ಪ್ರತಿಪಾದಿಸಲ್ಪಟ್ಟಿದ್ದರೂ ಆಯಾ ಬಂಧನದಿಂದ ಬಿಡುಗಡೆಯನ್ನು ಹೊಂದುವುದೇ ಮೋಕ್ಷ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದಿಲ್ಲ.

ಮೋಕ್ಷದ ಪರ್ಯಾಯ ನಾಮಗಳು :

ಮೋಕ್ಷಕ್ಕೆ 'ನಿರ್ವಾಣ', 'ನಿಃಶ್ರೇಯಸ', 'ಅಪವರ್ಗ', 'ಮುಕ್ತಿ', 'ಕೈವಲ್ಯ' ಮತ್ತು 'ಸಾಮರಸ್ಯ' ವೆಂಬ ಅನೇಕ ಪರ್ಯಾಯನಾಮಗಳು ಅವರವರ ಸಿದ್ಧಾಂತದ ಸ್ವಾರಸ್ಯಾನುಸಾರವಾಗಿ ಪ್ರತಿಪಾದಿಸಲ್ಪಟ್ಟಿವೆ. ವೀರಶೈವ ಆಚಾರ್ಯರು ಮುಕ್ತಿ ಎಂದರೆ ಲಿಂಗಾಂಗ ಸಾಮರಸ್ಯವೆಂಬ ವಿಲಕ್ಷಣವಾದ ಪದದ ಬಳಕೆಯನ್ನು ಮಾಡಿರುವುದಾಗಿ ಕಾಣುತ್ತೇವೆ. ಒಬ್ಬನೆಯಾದ ಶಿವನು ತನ್ನ ವಿನೋದಕ್ಕಾಗಿ ಲಿಂಗ–ಅಂಗವೆಂಬ ಸ್ವರೂಪವನ್ನು ಕಾಣುತ್ತಾನೆ. ಇಲ್ಲಿ ಲಿಂಗವೆಂದರೆ ಶಿವನೆಂತಲೂ, ಅಂಗವೆಂದರೆ ಜೀವನೆಂತಲೂ ತಿಳಿದುಕೊಳ್ಳಬೇಕು. ಶಿವನಲ್ಲಿರುವ ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳು ಸಂಕೋಚಗೊಂಡು ಆಣವ, ಮಾಯಾ ಮತ್ತು ಕಾರ್ಮಿಕಗಳೆಂಬ ಮಲತ್ರಯಗಳಾಗಿ ಅಂಗವನ್ನು ಆವರಿಸಿದಾಗ ಅವನಿಗೆ ಬಂಧನವು ಪ್ರಾಪ್ತವಾಗುವುದು. ಈ ಬಂಧನದಿಂದ ಬಿಡುಗಡೆ ಹೊಂದಿ ಅಂಗನು ಲಿಂಗದೊಂದಿಗೆ ಸಮರಸನಾಗುವುದೇ ಲಿಂಗಾಂಗಸಾಮರಸ್ಯವು ಎಂಬುದು ವೀರಶೈವಾಚಾರ್ಯರ ಅಭಿಪ್ರಾಯವಾಗಿದೆ.

ಬಂಧ (ಮಲ) ಸ್ವರೂಪ :

ಈ ಪೂರ್ವದಲ್ಲಿ ಹೇಳಿದಂತೆ ಜೀವಾತ್ಮನಿಗೆ ಆಣವಾದಿ ಮಲತ್ರಯಗಳೇ ಬಂಧಗಳು. ಅಂತೆಯೇ ಪೂಜ್ಯಪಾದರು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ – "ಜೀವತ್ವಂ ದುಃಖಸರ್ವಸ್ವಂ ತದಿದಂ ಮಲಕಲ್ಪಿತಮ್" (ಸಿ.ಶಿ., ೧೮–೧೭) ಎಂಬುದಾಗಿ ಹೇಳಿ ದುಃಖದಾಯಕವಾದ ಜೀವನ ಬಂಧನವು ಮಲಗಳಿಂದ ಉಂಟಾದುದಾಗಿದೆ ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಮಲಗಳೇ

ಬಂಧವೆಂಬುದಾಗಿ ತಿಳಿದುಕೊಳ್ಳಬೇಕು. ಮಲವೆಂದರೆ ಶಕ್ತಿಯ ಸಂಕೋಚವೆಂದರ್ಥ. ಶಿವನಲ್ಲಿರುವ ಸ್ವಾಭಾವಿಕಗಳಾದ ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳು ಸಂಕೋಚಗೊಂಡು ಆಣವಾದಿ ಮಲತ್ರಯಗಳ ಸ್ವರೂಪವನ್ನೂ ತಾಳುತ್ತವೆ. ಇವುಗಳಲ್ಲಿ ಇಚ್ಛಾಶಕ್ತಿಯು ಸಂಕೋಚಗೊಂಡಾಗ ಆಣವ ಎಂಬ ಮಲವು ಉತ್ಪನ್ನವಾಗುವುದು. ಇದರ ಆವರಣದಿಂದ ತನ್ನ ವ್ಯಾಪಕ ಸ್ವರೂಪವನ್ನು ಮರೆತು ಜೀವಾತ್ಮನು ತನ್ನನ್ನು ಅಣುವನ್ನಾಗಿ ಭಾವಿಸುತ್ತಾನೆ. ಅಂತೆಯೇ ಕ್ಷೇಮರಾಜಾಚಾರ್ಯನು ಶಿವಸೂತ್ರದ ಮೇಲೆ ಬರೆದಿರುವ ಪ್ರತ್ಯಭಿಜ್ಞಾ ವ್ಯಾಖ್ಯಾನದಲ್ಲಿ – "ಅಪೂರ್ಣಂ ಮನ್ಯತಾರೂಪ ಮಾಣವಂ ಮಲಮ್" (ಶಿವಸೂತ್ರ–೯) ಎಂಬುದಾಗಿ ಆಣವಮಲದ ಲಕ್ಷಣವನ್ನು ಪ್ರತಿಪಾದಿಸಿದ್ದಾನೆ.

ಇದರಂತೆ ಪರಶಿವನ ಜ್ಞಾನಶಕ್ತಿಯ ಸಂಕೋಚವೇ ಮಾಯಾಮಲವು. ನಿಸ್ಸೀಮವಾದ ಜ್ಞಾನವು ಸಂಕುಚಿತಗೊಂಡಾಗ ಅದುವೇ ಬಂಧನಕಾರಕವಾಗುವುದು. ಅಂತೆಯೇ ಶಿವಸೂತ್ರದಲ್ಲಿ "ಜ್ಞಾನಂ ಬಂಧಃ" (೧–೨). ಎಂಬುದಾಗಿ ಹೇಳಲಾಗಿದೆ. ಇಲ್ಲಿ ಜ್ಞಾನವೆಂದರೆ ಸಂಕುಚಿತವಾದ ಕಿಂಚಿತ್ ಜ್ಞಾನವೆಂದರ್ಥ. ಈ ವಿಷಯವನ್ನು ವ್ಯಾಸನು ಶಿವಮಹಾಪುರಾಣದಲ್ಲಿ "ಜ್ಞಾನಮಿತ್ಯಾತ್ಮನಸ್ತಸ್ಯ ಕಿಂಚಿತ್ ಜ್ಞಾನಕ್ರಿಯಾತ್ಮಕಮ್" (ಶಿ. ಪು., ೬. ೧೬. ೪೬–೪೭) ಎಂಬುದಾಗಿ ಹೇಳಿ ಸಂಕುಚಿತವಾದ ಜ್ಞಾನವೇ ಬಂಧವೆಂದು ಮಾತನ್ನು ಸಮರ್ಥಿಸಿದ್ದಾನೆ. ಹೀಗೆ ಜ್ಞಾನಶಕ್ತಿಯು ಸಂಕೋಚಗೊಂಡು ಮಾಯಾಮಲದ ರೂಪದಿಂದ ಜೀವಾತ್ಮನನ್ನು ಆವರಿಸಲಾಗಿ ಆ ಜೀವಾತ್ಮನಲ್ಲಿಯ ತಾನು ಬೇರೆ ಹಾಗೂ ಶಿವನು ಬೇರೆಯೆಂಬ ಭೇದಜ್ಞಾನವು ಉತ್ಪನ್ನವಾಗುವುದು ಹೀಗೆ ಶಿವ–ಜೀವರಲ್ಲಿ ಭೇದಜ್ಞಾನವನ್ನುಂಟು ಮಾಡುವ ಮಲವೇ ಮಾಯಾಮಲವು. ಇದನ್ನೇ ಶ್ರೀ ಕ್ಷೇಮರಾಜಾಚಾರ್ಯನು ಶಿವಸೂತ್ರದ ವ್ಯಾಖ್ಯಾನದಲ್ಲಿ "ಭಿನ್ನವೇದ್ಯ ಪ್ರಥಾರೂಪಂ ಮಾಯೀಯಂ ಮಲಮ್" (ಶಿವ. ಸೂ., ೯) ಎಂಬುದಾಗಿ ನಿರೂಪಿಸಿದ್ದಾರೆ.

ಇದೇ ಪ್ರಕಾರವಾಗಿ ಪರಶಿವನ ಕ್ರಿಯಾಶಕ್ತಿಯು ಸಂಕೋಚಗೊಂಡು ಕಾರ್ಮಿಕಮಲವಾಗುತ್ತದೆ. ಇದು ಶುಭಾಶುಭವಾಸನಾರೂಪವಾದುದು. ಕ್ಷೇಮರಾಜಾಚಾರ್ಯನು – "ಶುಭಾಶುಭಾನುಷ್ಠಾನಮಯಂ ಕಾರ್ಮಮಲಮ್" (ಶಿವ. ಸೂ., ೯) ಎಂಬುದಾಗಿ ಹೇಳಿ ಕಾರ್ಮಮಲದ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾನೆ. ಈ ಕಾರ್ಮಿಕಮಲದ ಪರಿಣಾಮವಾಗಿಯೇ ಜೀವಿಗಳು ಸಂಸಾರದಲ್ಲಿ ನಾನಾ ಯೋನಿಗಳಲ್ಲಿ ಸಂಚರಿಸುತ್ತಿರುತ್ತಾರೆ. ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಈ ಕಾರ್ಮಿಕಮಲದ ಪ್ರಭಾವವನ್ನು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ಅವಿದ್ಯಾ ಮೋಹಿತಾ ಜೀವಾ ಬ್ರಹ್ಮೈಕ್ಯಜ್ಞಾನವರ್ಜಿತಾಃ ।
ಪರಿಭ್ರಮಂತಿ ಸಂಸಾರೇ ನಿಜಕರ್ಮಾನುಸಾರತಃ ॥
ದೇವತಿರ್ಯಙ್ಮನುಷ್ಯಾದಿ ನಾನಾಯೋನಿವಿಭೇದತಃ ।
ಚಕ್ರನೇಮಿಕ್ರಮೇಣೈವ ಭ್ರಮಂತಿ ಹಿ ಶರೀರಿಣಃ ॥
ಜಾತ್ಯಾಯುರ್ಭೋಗವೈಷಮ್ಯಕಾರಣಂ ಕರ್ಮಕೇವಲಮ್

(ಸಿ.ಶಿ., ೫. ೪೭–೪೯)

ಎಂದು ವಿವರಿಸಿದ್ದಾರೆ. ಅಂದರೆ ಈ ಕಾರ್ಮಿಕಮಲದ ಆವರಣದಿಂದ ಜೀವಾತ್ಮನು ದೇವ–ದಾನವಾದಿ ಯೋನಿಗಳಲ್ಲಿ ಸಂಚರಿಸುತ್ತ ಚಕ್ರದೋಪಾದಿಯಲ್ಲಿ ತಿರುಗುತ್ತಿರುತ್ತಾನೆ. ಈ ಅವಸ್ಥೆಯಲ್ಲಿ ಇವನಿಗೆ ಶಿವಸಾಮರಸ್ಯ ಜ್ಞಾನವಿರುವುದಿಲ್ಲ. ಇವನು ಮಾಡಿದ ಈ ಶುಭಾಶುಭವಾಸನಾರೂಪವಾದ ಕರ್ಮವೇ ಅರ್ಥಾತ್ ಕಾರ್ಮಿಕಮಲವೇ ಈತನ ಭೋಗ ವೈಷಮ್ಯಾದಿಗಳಿಗೆ ಕಾರಣವಾಗಿರುತ್ತದೆ. ಈ ಕಾರ್ಮಿಕಮಲದ ಆವರಣದಿಂದ ಇವನು ಕಿಂಚಿತ್ ಕರ್ತಾ ಅರ್ಥಾತ್ ಅಲ್ಪಕರ್ತಾ ಎಂಬುದಾಗಿ ಕರೆಯಲ್ಪಡುತ್ತಾನೆ.

ಹೀಗೆ ಆಣವಮಲವು ಅಖಂಡಸ್ವರೂಪವನ್ನು ಮರೆಯಿಸಿ ಅಣುಭಾವವನ್ನು ತಂದುಕೊಂಡುವುದರ ಮೂಲಕ, ಮಾಯಾಮಲವು ಶಿವ–ಜೀವರಲ್ಲಿ ಭೇದ ಬುದ್ಧಿಯನ್ನು ಹುಟ್ಟಿಸುವದರ ಮೂಲಕ ಮತ್ತು ಕಾರ್ಮಿಕಮಲವು ಶುಭಾಶುಭ ವಾಸನೆಗಳ ಮೂಲಕ ದೇವ–ಮಾನವಾದಿ ನಾನಾಯೋನಿಗಳಲ್ಲಿ ತಿರುಗಿಸುವುದರ ಮೂಲಕ ಜೀವಾತ್ಮನಿಗೆ ಬಂಧನಕಾರಕವಾಗಿರುತ್ತವೆ. ಈ ಮಲತ್ರಯಗಳು ಅನಾದಿರೂಪವಾದುವುಗಳು. ಆದ್ದರಿಂದ ಶಿವನು ಸ್ವಾಭಾವಿಕವಾಗಿ ಪರಿಪೂರ್ಣ ಗಳಾದ ಇಚ್ಛಾ–ಜ್ಞಾನ ಮತ್ತು ಕ್ರಿಯಾಶಕ್ತಿಗಳಿಂದ ಕೂಡಿಕೊಂಡಿದ್ದರೆ ಜೀವಾತ್ಮನು ಅನಾದಿಕಾಲದಿಂದ ಆ ಜ್ಞಾನಾದಿ ಶಕ್ತಿಗಳ ಸಂಕೋಚ ರೂಪವಾದ ಆಣವಾದಿ ಮಲತ್ರಯಗಳಿಂದ ಅವೃತನಾದವನಾಗಿರುತ್ತಾನೆ. ಹೀಗೆ ಜೀವನ ಈ ಮಲಬಂಧನವು ಅನಾದಿರೂಪವಾದುದು. ಈ ತ್ರಿವಿಧ ಮಲಗಳಿಗೇನೇ ತ್ರಿವಿಧ ಪಾಶಗಳೆಂತಲೂ ಸಹ ಕರೆಯಲಾಗುವುದು. ಈ ಪಾಶಬದ್ಧನಾಗಿರುವುದರಿಂದಲೇ ಜೀವನು ಪಶುವೆಂದು ಕರೆಯಿಸಿಕೊಳ್ಳುತ್ತಾನೆ. ಈ ಪಾಶಗಳ ನಿವೃತ್ತಿಯಾಗಲು ಅವನು ಪಶುಪತಿಯಾದ ಶಿವನೊಂದಿಗೆ ಸಾಮರಸ್ಯವನ್ನು ಹೊಂದುತ್ತಾನೆ.

ದೀಕ್ಷೆಯಿಂದ ಬಂಧನಿವೃತ್ತಿ :

ಈ ಪೂರ್ವದಲ್ಲಿ ಹೇಳಿದ ಜೀವಾತ್ಮನ ಬಂಧನಕಾರಕಗಳಾದ ಮಲತ್ರಯಗಳು ಗುರುವಿನಿಂದ ಅನುಗ್ರಹಿಸಲ್ಪಡುವ ದೀಕ್ಷಾತ್ರಯಗಳಿಂದಲೇ ನಿವೃತ್ತಿಯಾಗುವವು.

ಅಂತೆಯೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ – "ನಿರಸ್ಯತೇ ಗುರೋರ್ಬೋಧಾತ್ ಜ್ಞಾನಶಕ್ತಿಃ ಪ್ರಕಾಶ್ಯತೇ" (ಸಿ.ಶಿ., ೧೮–೧೭). ಎಂಬುದಾಗಿ ಉಪದೇಶಿಸಲಾಗಿದೆ. ತಾತ್ಪರ್ಯವೇನೆಂದರೆ ತ್ರಿವಿಧ ಮಲಗಳಿಂದುಂಟಾದ ದುಃಖದಾಯಕವಾದ ಜೀವಭಾವವು ಅರ್ಥಾತ್ ಬಂಧನವು ಗುರುವಿನ ದೀಕ್ಷೆ ಹಾಗೂ ಶಿಕ್ಷೆಗಳ ಮೂಲಕ ದೊರೆಯುವ ಶಿವಾದ್ವೈತ ಜ್ಞಾನದಿಂದ ಇಲ್ಲದಾಗಿ ಜೀವಾತ್ಮನಲ್ಲಿ ಜ್ಞಾನಶಕ್ತಿಯು ವಿಕಾಸಗೊಳ್ಳುವುದು. ಆದ್ದರಿಂದಲೇ ವೀರಶೈವ ಸಿದ್ಧಾಂತದಲ್ಲಿ ಈ ದೀಕ್ಷಾರೂಪವಾದ ಸಂಸ್ಕಾರವು ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ವಿಧಿಸಲಾಗಿದೆ.

ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ದೀಕ್ಷಾ ಶಬ್ದದ ಅರ್ಥವಿವರಣಾರೂಪವಾದ ಉಪದೇಶವು –

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಮ್ ।
ಯಸ್ಮಾದತಃ ಸಮಾಖ್ಯಾತಾ ದೀಕ್ಷೇತೀಯಂ ವಿಚಕ್ಷಣೈಃ ॥

(ಸಿ.ಶಿ., ೭–೧೧)

ಎಂದು ಮಾಡಲ್ಪಟ್ಟಿದೆ. ತಾತ್ಪರ್ಯವೇನೆಂದರೆ, ಶಿವಾದ್ವೈತಜ್ಞಾನವನ್ನುಂಟುಮಾಡುವ ಮತ್ತು ಆಣವಾದಿ ಮಲತ್ರಯಗಳ ರೂಪವಾದ ಪಾಶಬಂಧನವನ್ನು ಇಲ್ಲದಾಗಿಸುವ ಸಂಸ್ಕಾರ ವಿಶೇಷವೇ ದೀಕ್ಷೆಯೆಂದು ಶಿವಾಗಮಜ್ಞಾನಿಗಳು ಹೇಳುತ್ತಾರೆ. ಈ ದೀಕ್ಷೆಯನ್ನು ಅನುಗ್ರಹಿಸುವಾಗ ಗುರುವು ಶಿಷ್ಯನಲ್ಲಿರುವ ಶಕ್ತಿಪಾತ ಲಕ್ಷಣವನ್ನು ಪರೀಕ್ಷಿಸುತ್ತಾನೆಂಬ ವಿಷಯವನ್ನು ಈ ಪೂರ್ವದ ಆವರಣ ವಿಜ್ಞಾನ ಪ್ರಕರಣದಲ್ಲಿ ಬರುವ 'ಗುರು' ಎಂಬ ಆವರಣದ ವಿಶ್ಲೇಷಣೆಯಲ್ಲಿ ಮಾಡಲಾಗಿದೆ. ಜಿಜ್ಞಾಸುಗಳು ಅಲ್ಲಿ ನೋಡಿಕೊಳ್ಳಬೇಕು.

ಸದ್ಗುರುವು ತನಗೆ ಶರಣಾಗತನಾದ ಶಿಷ್ಯನಿಗೆ ವೇಧಾದೀಕ್ಷೆಯನ್ನು ಅನುಗ್ರಹಿಸುವ ಮೂಲಕ ಆಣವಮಲವನ್ನು ನಿವಾರಿಸಿ ಭಾವಲಿಂಗ ಬೋಧೆಯನ್ನು ಮಾಡುತ್ತಾನೆ. ಇದೇ ಪ್ರಕಾರವಾಗಿ ಮಂತ್ರದೀಕ್ಷೆಯ ಮೂಲಕ ಮಾಯಾಮಲವನ್ನು ಇಲ್ಲವಾಗಿಸಿ ಪ್ರಾಣಲಿಂಗವನ್ನರುಹುತ್ತಾನೆ. ಅದೇ ಪ್ರಕಾರವಾಗಿ ಕ್ರಿಯಾದೀಕ್ಷೆಯ ಮೂಲಕ ಕಾರ್ಮಿಕಮಲವನ್ನು ದೂರೀಕರಿಸಿ ಇಷ್ಟಲಿಂಗವನ್ನನುಗ್ರಹಿಸುತ್ತಾನೆ. ಹೀಗೆ ಶಿಷ್ಯನ ಮಲತ್ರಯಗಳ ನಿವೃತ್ತಿಗೆ ದೀಕ್ಷಾ ತ್ರಯಗಳು ಅವಶ್ಯವಾಗಿ ಬೇಕೇಬೇಕು. ಈ ಸಂಸ್ಕಾರದಿಂದ ಶುದ್ಧನಾದ ಸಾಧಕನು ಇಷ್ಟಲಿಂಗಪೂಜಾರೂಪವಾದ ನಿತ್ಯ ಕರ್ಮವನ್ನು ಸದಾ ಆಚರಿಸುತ್ತಾನೆ. ಗುರೂಪದಿಷ್ಟವಾದ ಶಿವಾದ್ವೈತ ಜ್ಞಾನದಿಂದ ತನ್ನ ಬಂಧನವನ್ನು ಕಳೆದುಕೊಂಡು ಮುಕ್ತನಾಗುವನು.

ಜ್ಞಾನ–ಕರ್ಮಗಳ ಸಮಸಮುಚ್ಚಯ :

ಭಾರತೀಯ ದಾರ್ಶನಿಕರಲ್ಲಿ ಪೂರ್ವಮೀಮಾಂಸಾಚಾರ್ಯರು ಕೇವಲ ಕರ್ಮದಿಂದಲೇ ಮೋಕ್ಷವೆಂದು ಹೇಳಿದರೆ, ನ್ಯಾಯ–ವೈಶೇಷಿಕ ಮತು ಅದ್ವೈತ ವೇದಾಂತಿಗಳು ಕೇವಲ ನ್ಯಾಯದಿಂದಲೇ ಮೋಕ್ಷವೆಂದು ಸಾಧಿಸುತ್ತಾರೆ. ಆದರೆ ಸಮನ್ವಯವಾದಿಗಳಾದ ವೀರಶೈವಾಚಾರ್ಯರು ಮೋಕ್ಷಕ್ಕೆ ಜ್ಞಾನ–ಕರ್ಮಗಳೆರಡೂ ಬೇಕೆಂಬುದಾಗಿ ಹೇಳಿ ಅವೆರಡರ ಸಮಸಮುಚ್ಚಯ ಸಿದ್ಧಾಂತವನ್ನು ಸ್ವೀಕರಿಸಿದ್ದಾರೆ. ಅಂತೆಯೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು–

ಅಂಧಪಂಗುವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ ತದ್ವಯಮಾಚರೇತ್ ॥

ಜ್ಞಾನೇ ಸಿದ್ಧೇಽಪಿ ವಿದುಷಾಂ ಕರ್ಮಾಪಿ ವಿನಿಯುಜ್ಯತೇ ।
ಫಲಾಭಿಸಂಧಿರಹಿತಂ ತಸ್ಮಾತ್ ಕರ್ಮ ನ ಸಂತ್ಯಜೇತ್ ॥

ಜ್ಞಾನಹೀನಂ ಸದಾ ಕರ್ಮ ಪುಂಸಾಂ ಸಂಸಾರಕಾರಣಮ್ ।
ತದೇವ ಜ್ಞಾನಯೋಗೇನ ಸಂಸಾರವಿನಿವರ್ತನಮ್ ॥

(ಸಿ.ಶಿ., ೧೬. ೧೧–೧೨, ೨೭)

ಹೀಗೆ ಜ್ಞಾನ–ಕರ್ಮಗಳ ಸಮಸಮುಚ್ಚಯವಾದವನ್ನು ವಿವರಿಸಿ ತಿಳಿಸಿದ್ದಾರೆ. ಅಂದರೆ ಅಂಧ–ಪಂಗು ನ್ಯಾಯದಂತೆ ಮೋಕ್ಷಕ್ಕೆ ಜ್ಞಾನ–ಕರ್ಮಗಳೆರಡೂ ಬೇಕಾಗುತ್ತವೆ. ಅಂಧ ಹಾಗೂ ಪಂಗು ವ್ಯಕ್ತಿಗಳು ಅಂದರೆ ಕುರುಡ ಮತ್ತು ಕುಂಟ ಅರ್ಥಾತ್ ಹೆಳವ ವ್ಯಕ್ತಿಗಳು ಅಂಗವಿಕಲರಾಗಿರುವುದರಿಂದ ಇವರೀರ್ವರೂ ಸ್ವತಂತ್ರರಾಗಿ ಒಂದು ಕಾರ್ಯವನ್ನು ಮಾಡಲು ಅಸಮರ್ಥರಾಗಿರುತ್ತಾರೆ. ಅಂದರೆ ಹೆಳವನು ನಡೆಯಲಾರನು, ಕುರುಡನು ನೋಡಲಾರನು. ಹೀಗಿರುವಾಗ ಅಂಧನ ಹೆಗಲೇರಿ ಕುಳಿತುಕೊಂಡ ಆತನ ಹೇಳುವಿಕೆಯಂತೆ ಅಂಧನು ನಡೆಯುತ್ತ ಹೋದರೆ ಅವರೀರ್ವರೂ ಅಪೇಕ್ಷಿತ ಸ್ಥಾನವನ್ನು ತಲುಪಬಹುದು. ಅದರಂತೆ ಸಾಧಕನು ಜ್ಞಾನ–ಕರ್ಮಗಳೆರಡನ್ನೂ ಸಮಾನವಾಗಿ ಆಚರಣೆಯಲ್ಲಿ ತಂದರೆ ತನಗಪೇಕ್ಷಿತವಾದ ಮೋಕ್ಷವನ್ನು ಅವಶ್ಯವಾಗಿ ಪಡೆದುಕೊಳ್ಳಬಲ್ಲನು.

ಶಿವಾದ್ವೈತ ಜ್ಞಾನವಿಲ್ಲದ ಕೇವಲ ಕರ್ಮವು ಸಂಸಾರದಲ್ಲಿ ಬಂಧನಕಾರಕ ವಾದರೆ ಅದುವೇ ಜ್ಞಾನದಿಂದ ಕೂಡಿಕೊಂಡಾಗ ಬಂಧನದ ಮುಕ್ತಿಗೆ ಪ್ರಯೋಜನವಾಗುವುದು. ಆದ್ದರಿಂದ ವೀರಶೈವ ಸಾಧಕರು ಮೇಲೆ ಹೇಳಿದ ಆಚಾರ್ಯರ ಆದೇಶದಂತೆ ಜ್ಞಾನ–ಕರ್ಮಗಳೆರಡನ್ನೂ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವೀರಶೈವಸಿದ್ಧಾಂತೋಪದಿಷ್ಟವಾದ ಇಷ್ಟಲಿಂಗಪೂಜೆ, ಭಸ್ಮ–

ರುದ್ರಾಕ್ಷಗಳ ಧಾರಣೆ ಮತ್ತು ಪಾದೋದಕ–ಪ್ರಸಾದಗಳ ಸೇವನಾರೂಪವಾದ ಈ ಕರ್ಮವು ಪತಿಕರ್ಮವೆಂದು ಕರೆಯಿಸಿಕೊಳ್ಳುವುದರಿಂದ ಈ ಕರ್ಮದೊಂದಿಗೆ ಜ್ಞಾನದ ಸಮ ಸಮುಚ್ಚಯವನ್ನು ಹೇಳಿದರೆ ಅದಾವ ದೋಷವೂ ಬರುವುದಿಲ್ಲ. ಇನ್ನು ಯಜ್ಞ–ಯಾಗಾದಿರೂಪವಾದ ಪಶುಕರ್ಮದೊಂದಿಗೆ ಶಿವಾದ್ವೈತಜ್ಞಾನದ ಸಮಸಮುಚ್ಚಯವನ್ನು ಹೇಳಲಾಗುವುದಿಲ್ಲವೆಂಬ ರಹಸ್ಯವನ್ನು ಮಾತ್ರ ಇಲ್ಲಿ ಸರ್ವರೂ ತಿಳಿದುಕೊಳ್ಳಬೇಕು.

ಪತಿಕರ್ಮ ಮತ್ತು ಪಶುಕರ್ಮ :

ಈ ಪೂರ್ವದಲ್ಲಿ ಇಷ್ಟಲಿಂಗಪೂಜಾದಿಗಳು ಪತಿಕರ್ಮಗಳೆಂತಲೂ ಯಜ್ಞಯಾಗಾದಿಗಳು ಪಶುಕರ್ಮಗಳೆಂತಲೂ ಹೇಳಲಾಗಿದೆ. ಇಲ್ಲಿರುವ ರಹಸ್ಯವೇನೆಂದರೆ ಇಷ್ಟಲಿಂಗಪೂಜೆ, ಭಸ್ಮ–ರುದ್ರಾಕ್ಷಿಗಳ ಧಾರಣೆ, ಗುರು–ಜಂಗಮರ ಸೇವೆ ಮತ್ತು ಪಾದೋದಕ–ಪ್ರಸಾದಗಳ ಸೇವನಾರೂಪವಾದ ನಿತ್ಯಕರ್ಮವನ್ನು ಆಚರಿಸುವುದರಿಂದ ಪತಿಯಾದ ಪರಮಾತ್ಮನ ಪ್ರಾಪ್ತಿಯುಂಟಾಗುವುದು. ಅಂತೆಯೇ ಇವುಗಳಿಗೆ ಪತಿಕರ್ಮವೆಂದು ಕರೆದಿದ್ದಾರೆ. ಇದೂ ಅಲ್ಲದೆ ಫಲಾಪೇಕ್ಷೆಯಿಲ್ಲದೆ ಮಾಡುವ ನಿಷ್ಕಾಮಕರ್ಮಗಲೂ ಸಹ ಪತಿಕರ್ಮವೆಂತಲೇ ಕರೆಯಿಸಿಕೊಳ್ಳುತ್ತವೆ. ಇನ್ನು ಕ್ಷಣಿಕವಾದ ಕ್ಷಯ–ಪತನಾದಿ ಭಯದಿಂದ ಕೂಡಿದ ಸ್ವರ್ಗಾದಿ ಫಲಗಳನ್ನು ಕೊಡುವ ಅಂತೆಯೇ ಕಾಮ್ಯಕರ್ಮಗಳೆಂದು ಕರೆಯಿಸಿಕೊಳ್ಳುವ ಯಜ್ಞ–ಯಾಗಾದಿಗಳಿಗೆ ಶ್ರೀ ನೀಲಕಂಠ ಶಿವಾಚಾರ್ಯರು ಕ್ರಿಯಾಸಾರದಲ್ಲಿ ಪಶುಕರ್ಮವೆಂದು ಕರೆದಿದ್ದಾರೆ– (ಕ್ರಿ. ಸಾ., ಭಾಗ–೧, ಪುಟ. ೧೬–೧೭)

ಕಾಮ್ಯಕರ್ಮಗಳಾದ ಯಜ್ಞಾದಿಗಳಿಗೆ ಪಶುಕರ್ಮವೆಂದು ಕರೆದಿರುವ ಉದ್ದೇಶವೇನೆಂದರೆ ಈ ಕರ್ಮಗಳನ್ನು ಮಾಡಿದ ಜೀವಿಯು ಕೈವಲ್ಯವನ್ನು ಪಡೆಯದೆ "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬ ಉಕ್ತಿಗನುಸಾರವಾಗಿ ಪುನಃ ಪುನಃ ಪುನಃ ಸಂಸಾರದಲ್ಲಿ ತಿರುಗುತ್ತ ಆಣವಾದಿ ಮಲತ್ರಯಗಳೆಂಬ ಪಾಶಗಳಿಂದ ಬಂಧಿಸಲ್ಪಡುತ್ತಾನೆ. ಹೀಗೆ ಪಾಶಬಂಧನಕ್ಕೆ ಕಾರಣವಾಗಿರುವುದರಿಂದ ಈ ಕರ್ಮಗಳಿಗೆ ಪಶುಕರ್ಮಗಳೆಂದು ಆಚಾರ್ಯರು ಕರೆದಿದ್ದಾರೆ.

ಇನ್ನು ಪೂರ್ವದಲ್ಲಿ ಹೇಳಿದ ಇಷ್ಟಲಿಂಗಧಾರಣೆ ನಿತ್ಯದಲ್ಲಿ ಮಾಡುವ ಅದರ ಪೂಜೆ ಪ್ರಾಣ ಹಾಗೂ ಭಾವಲಿಂಗಗಳ ಅನುಸಂಧಾನ. ಬೃಹಜ್ಜಾಬಾಲೋಪನಿಷತ್ತಿನಲ್ಲಿ ಹೇಳಿದ ಭಸ್ಮ–ರುದ್ರಾಕ್ಷಿಗಳ ಧಾರಣೆ, ಶೃತಿಶಿರೋರತ್ನವಾಗಿರುವ ಪಂಚಾಕ್ಷರ ಮಹಾಮಂತ್ರದ ಜಪ ಮತ್ತು ಗುರು–ಲಿಂಗ–ಜಂಗಮರ ಪಾದೋದಕ–ಪ್ರಸಾದ ಸೇವನೆಗಳು ಸಾಧಕನ ಪಾಶವಿಮೋಚನಕ್ಕೆ ಸಾಧನವಾಗುವುದರಿಂದ

ಇವುಗಳಿಗೆ ಪತಿಕರ್ಮವೆಂದು ಶ್ರೀ ನೀಲಕಂಠಶಿವಾಚಾರ್ಯರು (ಕ್ರಿ.ಸಾ., ಭಾಗ–೧, ಪುಟ–೧೭) ಹೇಳಿದ್ದಾರೆ.

ಹೀಗೆ ಇಲ್ಲಿ ಹೇಳಿರುವ ಪತಿಕರ್ಮದೊಂದಿಗೆ ಜ್ಞಾನದ ಸಮಸಮುಚ್ಚಯವನ್ನು ಹೇಳಿ ವೀರಶೈವಾಚಾರ್ಯರು ಜ್ಞಾನ–ಕರ್ಮಗಳ ಸಮಸಮುಚ್ಚಯ ರೂಪವಾದ ಸಮನ್ವಯಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಒಟ್ಟಿನಲ್ಲಿ ಆಚಾರ್ಯರ ಅಭಿಪ್ರಾಯದಂತೆ ಕೇವಲ ಜ್ಞಾನವಾಗಲಿ ಅಥವಾ ಕೇವಲ ಕರ್ಮವಾಗಲಿ ಮುಕ್ತಿಗೆ ಸಾಧನವಾಗಿರದೆ ಅವೆರಡರ ಸಮುಚ್ಚಯವೇ ಲಿಂಗಾಂಗ ಸಾಮರಸ್ಯ ರೂಪವಾದ ಮೋಕ್ಷಕ್ಕೆ ಕಾರಣವೆಂಬುದಾಗಿ ಸರ್ವರು ತಿಳಿದುಕೊಳ್ಳಬೇಕು

ಶಿವಾನುಗ್ರಹದಿಂದ ಮೋಕ್ಷ ಪ್ರಾಪ್ತಿ :

ಶಿವನು ಅತ್ಯಂತ ದಯಾಮಯನು. ಕರ್ತುಂ ಅಕರ್ತುಂ ಮತ್ತು ಅನ್ಯಥಾ ಕರ್ತುಂ ಸಮರ್ಥನೂ ಅಹುದು. ಸಾಧನ ಸಾಮಗ್ರಿ ಸಂಪನ್ನರಾದವರಿಗೆ ಮೋಕ್ಷವನ್ನು ದಯಪಾಲಿಸುವನಷ್ಟೇ ಅಲ್ಲ ಅದಾವ ಸಾಧನಸಾಮಗ್ರಿ ಇರದೇ ಇದ್ದರೂ ಕೇವಲ ಕೃಪಾಶೀರ್ವಾದ ಮಾತ್ರದಿಂದ ಜಗತ್ತಿನ ಜೀವಿಗಳನ್ನು ಆತನು ಉದ್ಧರಿಸಬಲ್ಲನು. ಇದೊಂದು ಶಿವನಿಗಿರುವ ಸರ್ವೋತ್ಕೃಷ್ಟವಾದ ಸಾಮರ್ಥ್ಯವು. ಅಂತೆಯೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ಶಂಭೋಃ ಶಿವಪ್ರಸಾದೇನ ಸಂಸಾರಚ್ಛೇದಕಾರಿಣಾ ।
ಮೋಹಗ್ರಂಥಿಂ ವಿನಿರ್ಭಿದ್ಯ ಮುಕ್ತಿಂ ಯಾಂತಿ ವಿವೇಕಿನಃ ॥

ವಿನಾ ಪ್ರಸಾದಮೀಶಸ್ಯ ಸಂಸಾರೋ ನ ನಿವರ್ತತೇ ।
ವಿನಾ ಸೂರ್ಯೋದಯಂ ಲೋಕೇ ಕುತಃ ಸ್ಯಾತ್ತಮಸೋ ಲಯಃ ॥

ಸರ್ವಾನುಗ್ರಾಹಕಃ ಶಂಭುಃ ಕೇವಲಂ ಕೃಪಯಾ ಪ್ರಭುಃ ।
ಮೋಚಯೇತ್ ಸಕಲಾನ್ ಜಂತೂನ್ ಕಿಂಚಿದಿಹ ಕಾರಣಮ್ ॥

(ಸಿ.ಶಿ., ೧೮. ೫೯–೬೧)

ಎಂದು ಹೇಳಲಾಗಿದೆ. ತಾತ್ಪರ್ಯವೇನೆಂದರೆ, ಶಿವನ ಅನುಗ್ರಹವು ಸಂಸಾರವನ್ನು ಧ್ವಂಸಮಾಡುವಂಥಾದ್ದಾಗಿರುತ್ತದೆ. ವಿವೇಕಿಗಳಾದವರು ಆ ಶಿವನ ಅನುಗ್ರಹವನ್ನು ಪಡೆದುಕೊಂಡೇನೇ ತಮ್ಮ ಮೋಹಗ್ರಂಥಿಯನ್ನು ಭೇದಿಸಿಕೊಂಡು ಮುಕ್ತಿಯನ್ನು ಪಡೆಯುತ್ತಾರೆ. ಸೂರ್ಯೋದಯವಾಗದೆ ಲೋಕದ ಕತ್ತಲೆಯು ನಿವಾರಣೆಯಾಗದಂತೆ ಶಿವನ ಅನುಗ್ರಹವಿಲ್ಲದೆ ಸಂಸಾರದ ನಿವೃತ್ತಿಯಾಗುವುದಿಲ್ಲ. ಅನುಗ್ರಹಶಕ್ತಿವಿಶಿಷ್ಟನಾದ ಶಿವನು ಕೇವಲ ತನ್ನ ಕೃಪಾಮಾತ್ರದಿಂದ ಸಕಲ ಜೀವ–ಜಂತುಗಳಿಗೆ ಮೋಕ್ಷವನ್ನೈದಿಸಬಲ್ಲನು. ಇಲ್ಲಿ ಬೇರೊಂದು ಕಾರಣದ ಅವಶ್ಯಕತೆಯೇ

ಇರುವುದಿಲ್ಲ ಎಂಬುದಾಗಿ ಉಪದೇಶಿಸಿದ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಅದಾವ ಯೋಗ್ಯತೆ ಇರದೇ ಇದ್ದರೂ ಜೀವಿಗಳು ಶಿವಾನುಗ್ರಹಮಾತ್ರ ದಿಂದ ಮುಕ್ತಿಯನ್ನು ಪಡೆಯಬಲ್ಲರೆಂಬುದನ್ನು ದೃಷ್ಟಾಂತ ಪೂರ್ವಕವಾಗಿ ತಿಳಿಯ ಪಡಿಸಿದ್ದಾರೆ. ಶ್ವೇತಾಶ್ವತರೋಪನಿಷತ್ತಿನಲ್ಲಿಯೂ ಸಹ ಶಿವನ ಅನುಗ್ರಹವಿಲ್ಲದೆ ಮುಕ್ತಿಯನ್ನು ಪಡೆಯುವುದೆಂದರೆ ಆಕಾಶವನ್ನು ಚರ್ಮದಂತೆ ಸುತ್ತಿದ ಹಾಗೆ ಎಂಬುದಾಗಿ ಪ್ರತಿಪಾದಿಸಲಾಗಿದೆ. ಅಂದರೆ ಆಕಾಶವನ್ನು ಸುತ್ತುವುದು ಹೇಗೆ ಅಸಂಭವವೋ ಹಾಗೆಯೇ ಶಿವನ ಅನುಗ್ರಹವಿಲ್ಲದೆ ಮುಕ್ತಿಯನ್ನು ಪಡೆಯುವುದೂ ಸಹ ಅಸಂಭವವೆಂದೇ ಭಾವಿಸಬೇಕೆಂಬುದು ಋಷಿಯ ಆಶಯವಾಗಿದೆ.

ಒಟ್ಟಿನ ಮೇಲೆ ಹೇಳುವುದಾದರೆ ಮೋಕ್ಷಕ್ಕೆ ಬೇಕಾಗುವ ಸಾಧನಗಳಿರಲಿ ಅಥವಾ ಇಲ್ಲದೇ ಇರಲಿ ಶಿವನಾನುಗ್ರಹವು ಮಾತ್ರ ಬೇಕೇ ಬೇಕೆಂಬುದು ಇಲ್ಲಿ ಸಿದ್ಧವಾಗುತ್ತದೆ. ಲೌಕಿಕ ವ್ಯವಹಾರದಲ್ಲಿ ನಮ್ಮ ದೇಶದ ಅತ್ಯುನ್ನತ ಸ್ಥಾನದಲ್ಲಿರುವ ಮಹಾಮಹಿಮ ರಾಷ್ಟ್ರಪತಿಗೆ ಬಹುದೊಡ್ಡ ಅಪರಾಧವನ್ನೆಸಗಿ ಸರ್ವೋಚ್ಚ ನ್ಯಾಯಾಲಯ (Supreme Court) ದಿಂದ ಮರಣದಂಡನೆಗೊಳಗಾದ ವ್ಯಕ್ತಿಗೆ ಕೇವಲ ತನ್ನ ದಯೆದೋರಿ ಅವನನ್ನು ಮರಣದಂಡನೆಯಿಂದ ಮುಕ್ತಗೊಳಿಸಬಲ್ಲ ಅಧಿಕಾರವಿರುವುದನ್ನು ಕಾಣುತ್ತೇವೆ. ಇದೇ ಪ್ರಕಾರವಾಗಿ ಶಿವನಿಗೂ ಸಹ ಅಂತಹ ವಿಶೇಷ ಅಧಿಕಾರವಿರುವುದನ್ನು ಇಲ್ಲಿ ನಿರೂಪಿಸಲಾಗಿದೆ. ಆದ್ದರಿಂದ ಪ್ರತಿಯೊಂದು ಜೀವಿಗಳ ಮುಕ್ತಿಗೆ ಶಿವಾನುಗ್ರಹವೇ ಮೂಲವೆಂಬುದಾಗಿ ಸರ್ವರೂ ತಿಳಿದುಕೊಳ್ಳ ಬೇಕು.

ಜ್ಞಾನಿಗೆ ನಿತ್ಯಕರ್ಮದ ಅವಶ್ಯಕತೆ :

ಶಿವಜೀವೈಕ್ಯಜ್ಞಾನವನ್ನು ಪಡೆದ ಜ್ಞಾನಿಗೆ ನಿತ್ಯಕರ್ಮಾದಿಗಳು ಇವೆಯೋ ಇಲ್ಲವೋ ಎಂಬುದರ ಬಗ್ಗೆ ಭಾರತೀಯ ತತ್ತ್ವಶಾಸ್ತ್ರಜ್ಞರು ಬಹಳಷ್ಟು ವಿಚಾರಿಸಿದ್ದನ್ನು ಕಾಣಬಹುದು. ಈ ವಿಚಾರಮಂಥನದಿಂದ ಜ್ಞಾನಿಯಾದವನಿಗೆ ತಾನು ಮಾಡುವ ಕರ್ಮದ ಪ್ರಯೋಜನವು ತನಗೇನೂ ಇರದೇ ಇದ್ದರೂ ಲೋಕಸಂಗ್ರಹಕ್ಕಾಗಿ ಯಾದರೂ ಮಾಡಬೇಕೆಂಬುದು ಕೆಲವು ದಾರ್ಶನಿಕರ ವಿಚಾರವಾಗಿದೆ. ಇನ್ನು ವೀರಶೈವ ಆಚಾರ್ಯರು ಲೋಕಸಂಗ್ರಹದ ಜೊತೆಗೆ ದೀಕ್ಷಾಕಾಲದಲ್ಲಿ ತಾನು ಮಾಡಿದ ಸಂಕಲ್ಪದ ಪೂರ್ತಿಗಾಗಿಯೂ ನಿತ್ಯಾದಿಕರ್ಮಗಳನ್ನು ಮಾಡಬೇಕೆಂಬುದಾಗಿ ಪ್ರತಿಪಾದಿಸಿದ್ದಾರೆ. ಅದನ್ನೇ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ –

ಧರ್ಮ ಏವ ಸಮಸ್ತಾನಾಂ ಯತಃ ಸಂಸಿದ್ಧಿಕಾರಣಮ್ ।
ನಿಸ್ಪೃಹೋऽಪಿ ಮಹಾಯೋಗೀ ಧರ್ಮಮಾರ್ಗಂ ಚ ನ ತ್ಯಜೇತ್ ॥

ಜ್ಞಾನಾಮೃತೇನ ತೃಪ್ತೋಽಪಿ ಯೋಗೀ ಧರ್ಮಂ ನ ಸಂತ್ಯಜೇತ್ ।
ಆಚಾರಃ ಮಹತಾಂ ದೃಷ್ಟ್ವಾ ಪ್ರವರ್ತಂತೇ ಹಿ ಲೌಕಿಕಾಃ ॥

(ಸಿ.ಶಿ., ೧೬. ೬೪-೬೫)

ಎಂದು ಹೇಳಲಾಗಿದೆ. ಅಂದರೆ ನಿತ್ಯಕರ್ಮರೂಪವಾದ ಧರ್ಮಾಚರಣೆಯೇ ಸರ್ವರಿಗೂ ಸಿದ್ಧಿದಾಯಕವಾಗಿರುತ್ತದೆ. ಅದಾವ ಫಲದ ಅಪೇಕ್ಷೆಯಿಲ್ಲದಿದ್ದರೂ ಮಹಾನ್ ಶಿವಯೋಗಿಯೂ ಸಹ ಧರ್ಮಾಚರಣೆಯ ಮಾರ್ಗವನ್ನು ತ್ಯಜಿಸಕೂಡದು. ಶಿವಯೋಗಿಯು ಜ್ಞಾನಾಮೃತಪಾನದಿಂದ ಅತ್ಯಂತ ಸಂತೃಪ್ತನಾಗಿದ್ದರೂ ಧರ್ಮಾಚರಣೆಯನ್ನು ಬಿಡಕೂಡದು. ಏಕೆಂದರೆ ದೊಡ್ಡವರ ಆಚರಣೆಯನ್ನು ನೋಡಿಕೊಂಡೇ ಜಗತ್ತಿನ ಸಾಮಾನ್ಯ ಜನರೂ ಸಹ ವರ್ತಿಸುತ್ತಿರುತ್ತಾರೆ. ಆದ್ದರಿಂದ ಜ್ಞಾನಿಯಾದವನು ಧರ್ಮಾಚರಣೆಯನ್ನು ಬಿಡಕೂಡದೆಂದು ಪೂಜ್ಯಪಾದರ ಉಪದೇಶದ ಆಶಯವಾಗಿದೆ.

ದೀಕ್ಷಾಕಾಲದಲ್ಲಿ ಸದ್ಗುರು ಪ್ರತಿಯೊಬ್ಬರಿಗೂ ತಾನು ಉಪದೇಶಿಸಿದ ನಿತ್ಯಕರ್ಮದ ಬಗೆಗೆ ಯಾವಜ್ಜೀವಂ ಮಾಡುವ ಸಂಕಲ್ಪವನ್ನು ಮಾಡಿಸುತ್ತಾನೆ. ಅಂದರೆ ತಾನು ಮಾಡುವ ನಿತ್ಯಕರ್ಮವನ್ನು ತನ್ನ ದೇಹದಲ್ಲಿ ಪ್ರಾಣವಿರುವವರೆಗೆ ಮಾಡುತ್ತೇನೆಂಬುದು ಅವನ ಸಂಕಲ್ಪವಾಗಿರುತ್ತದೆ. ಹೀಗೆ ಸಂಕಲ್ಪ ಮಾಡಿದ ಕರ್ಮಾನುಷ್ಠಾನವನ್ನು ಪ್ರಾರಂಭಿಸಿದ ಕೆಲವು ವರ್ಷಗಳ ನಂತರ ಅವನಿಗೆ ಆತ್ಮಜ್ಞಾನವು ಪ್ರಾಪ್ತವಾಗಲು ಇನ್ನು ಮುಂದೆ ಆ ನಿತ್ಯಕರ್ಮಾದಿಗಳನ್ನು ಮಾಡಬೇಕೋ ಮಾಡಬಾರದೋ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆಗ ನಿತ್ಯಕರ್ಮಾನುಷ್ಠಾನದ ಪ್ರಯೋಜನರೂಪವಾದ ಆತ್ಮಜ್ಞಾನವು ಪ್ರಾಪ್ತವಾಗಿದ್ದರೂ ಜೀವನವಿರುವವರೆಗೆ ಕರ್ಮವನ್ನು ಮಾಡುತ್ತೇನೆಂಬುದಾಗಿ ಮಾಡಿದ ಸಂಕಲ್ಪದ ಪೂರ್ತಿಗಾಗಿ ಆ ಕರ್ಮವನ್ನು ಮಾಡಬೇಕಾಗುವುದಲ್ಲದೆ ಅಜ್ಞರಾದ ಅನ್ಯ ಜೀವಿಗಳಿಗೆ ಮಾರ್ಗದರ್ಶನಕ್ಕಾಗಿಯೂ ಸಹ ಜ್ಞಾನಿಯಾದವನು ಕರ್ಮವನ್ನು ಮಾಡಬೇಕಾಗುತ್ತದೆ.

ಹೀಗೆ ಜ್ಞಾನಿಯಾದವನು ಕರ್ಮವನ್ನಾಚರಿಸಿದರೆ ಆ ಕರ್ಮದ ಫಲವಾಗಿ ಆತನು ಪುನಃ ಜನ್ಮಾದಿಗಳನ್ನು ಪಡೆಯಬೇಕಾದೀತಲ್ಲ? ಎಂಬ ಜಿಜ್ಞಾಸೆಯುಂಟಾಗಲು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ದಗ್ಧ ಬೀಜದ ಉದಾಹರಣೆಯಿಂದ ಅದನ್ನು ನಿರಾಕರಿಸಲಾಗಿದೆ. ಅಂದರೆ ಹುರಿದ ಬೀಜಗಳು ಪುನಃ ಅಂಕುರಿತವಾಗದಿರುವಂತೆ ಜ್ಞಾನಿಯ ಕರ್ಮಗಳೂ ಸಹ ಜ್ಞಾನಾಗ್ನಿಯಿಂದ ದಗ್ಧವಾಗಿರುವುದರಿಂದ ಅವು ಪುನರ್ಜನ್ಮಕ್ಕೆ ಕಾರಣವಾಗುವುದಿಲ್ಲ ಎಂಬುದಾಗಿ ತಿಳುಹಿಸಿದ ಪೂಜ್ಯರು ಆ ವಿಷಯವನ್ನು ಇನ್ನಷ್ಟು ಸ್ಪಷ್ಟಪಡಿಸಲೋಸುಗ ನಾಲಿಗೆಯ ನಿರ್ಲಿಪ್ತತೆಯನ್ನು

ಉದಾಹರಿಸಿದ್ದಾರೆ. ಅಂದರೆ ತುಪ್ಪ–ಎಣ್ಣೆ ಮುಂತಾದ ಜಿಗುಟು ಪದಾರ್ಥಗಳನ್ನು ನಾಲಿಗೆಯು ಅದೆಷ್ಟು ಭುಂಜಿಸಿದರೂ ಅವುಗಳ ಜಿಡ್ಡಿನ ಲೇಪವನ್ನೂ ಹೊಂದದಿರುವಂತೆ ಜ್ಞಾನಿಯಾದವನು ಕರ್ಮಗಳನ್ನು ಮಾಡಿದರೂ ಸಹ ಅದರ ಫಲದಿಂದ ಅಲಿಪ್ತನಾಗಿಯೇ ಇರುತ್ತಾನೆ (ಸಿ.ಶಿ.. ೧೯. ೩೦–೩೩)

ಈ ತೆರನಾಗಿ ಜ್ಞಾನಿಗಳು ತಾವು ಮಾಡಿದ ಸಂಕಲ್ಪದ ಪೂರ್ತಿಗಾಗಿ ಮತ್ತು ಲೋಕಸಂಗ್ರಹಕ್ಕಾಗಿ ವಿಹಿತಕರ್ಮಗಳನ್ನು ಆಚರಿಸಬೇಕೆಂಬ ವೀರಶೈವ ಆಚಾರ್ಯರ ಉಪದೇಶವು ಸಾರ್ವಕಾಲಿಕ ಸತ್ಯವಾಗಿದೆ. ಈ ವಿಧವಾಗಿ ಜ್ಞಾನ–ಕರ್ಮಗಳೆರಡನ್ನೂ ರೂಢಿಸಿಕೊಂಡ ಸಾಧಕನು ನಿಷ್ಠೆಯಿಂದ ಷಟ್‌ಸ್ಥಲೋಪಾಸನೆಯ ಮಾರ್ಗವನ್ನನುಸರಿಸಿ ಅಲ್ಲಿ ಬರುವ ನೂರೊಂದರ ನೆಲೆಯನ್ನು ಅನುಭವಿಸುತ್ತಾನೆ.

॥ ॥

ಪಂಚಮ ಅಧ್ಯಾಯ

ಶ್ರೀ ಸಿದ್ಧಾಂತಶಿಖಾಮಣಿಯಲ್ಲಿಯ ಏಕೋತ್ತರಶತಸ್ಥಲಗಳು

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಮಹರ್ಷಿಯಾದ ಅಗಸ್ತ್ಯನನ್ನು ಕುರಿತು ಶ್ರೀ ಸಿದ್ಧಾಂತಶಿಖಾಮಣಿಯ ಐದನೇ ಪರಿಚ್ಛೇದದಿಂದ ಇಪ್ಪತ್ತನೆಯ ಪರಿಚ್ಛೇದದವರೆಗಿನ ಗ್ರಂಥ ಭಾಗದಲ್ಲಿ ನಾಲ್ವತ್ನಾಲ್ಕು ಸ್ಥಲಗಳ ರೂಪವಾದ ಅಂಗ ಷಟ್‌ಸ್ಥಲವನ್ನು ಮತ್ತು ಐವತ್ತೇಳು ಸ್ಥಲಗಳ ರೂಪವಾದ ಲಿಂಗಷಟ್‌ಸ್ಥಲವನ್ನು ಬಹುವಿಸ್ತಾರವಾಗಿ ಉಪದೇಶಿಸಿದ್ದಾರೆ. ವೀರಶೈವ ಷಟ್‌ಸ್ಥಲ ಸಿದ್ಧಾಂತವನ್ನು ನೂರೊಂದು ಸ್ಥಲಗಳ ರೂಪದಲ್ಲಿ ವಿಸ್ತಾರಗೊಳಿಸಿದ ಪ್ರಪ್ರಥಮ ಗ್ರಂಥವೆಂದರೆ ಶ್ರೀ ಸಿದ್ಧಾಂತಶಿಖಾಮಣಿಯೇ ಆಗಿರುತ್ತದೆ. ಇದರ ಈ ವಿಸ್ತಾರದ ಶ್ರೇಯವು ಈ ಗ್ರಂಥಕಾರರಾದ ಶ್ರೀ ಶಿವಯೋಗಿ ಶಿವಾಚಾರ್ಯರಿಗೇನೇ ಸಲ್ಲಬೇಕು. ಇವರ ನಂತರ ಬಂದ ಅನೇಕ ರಚನಾಕಾರರು ಸಂಸ್ಕೃತ ಹಾಗೂ ಕನ್ನಡದಲ್ಲಿ ನೂರೊಂದು ಸ್ಥಲಗಳ ವಿಚಾರವಾಗಿ ಮಂಡಿಸಿದ್ದನ್ನು 'ಕೈವಲ್ಯಸಾರ' ಮತ್ತು 'ಗಣಭಾಷಿತ ರತ್ನಮಾಲೆ' ಮುಂತಾದ ಗ್ರಂಥಗಳಲ್ಲಿ ಕಾಣಬಹುದು.

ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವ ಪಿಂಡಸ್ಥಲವನ್ನೇ ಮೊದಲು ಮಾಡಿಕೊಂಡು ಜ್ಞಾನಶೂನ್ಯಸ್ಥಲದವರೆಗಿನ ಒಂದು ನೂರಾ ಒಂದು ಸ್ಥಲಗಳಲ್ಲಿ ಶಿವಯೋಗ ಸಾಧಕನ ಕ್ರಮಿತವಾದ ಆಧ್ಯಾತ್ಮಿಕ ವಿಕಾಸವು ಸೂಕ್ಷ್ಮಾತಿ ಸೂಕ್ಷ್ಮವಾಗಿ ನಿರೂಪಿಸಲ್ಪಟ್ಟಿದೆ. ಇದನ್ನು ಲಕ್ಷ್ಯ ಪೂರ್ವಕವಾಗಿ ಅಭ್ಯಾಸ ಮಾಡಿದಾಗ ಇದರಲ್ಲಿರುವ ಮನೋವಿಜ್ಞಾನವು ಕಂಡುಬರುತ್ತದೆ. ಅಂದರೆ ಜೀವಾತ್ಮನ ಬಂಧ-ಮೋಕ್ಷಗಳಿಗೆ ಮನಸ್ಸೇ ಕಾರಣವಾಗಿರುವುದರಿಂದ ಅನಾದಿಕಾಲದಿಂದ ಸಂಸಾರದಲ್ಲಿ ಬದ್ಧಿತವಾಗಿದ್ದ ಮನಸ್ಸು ಈ ನೂರೊಂದು ಸ್ಥಲಗಳಲ್ಲಿ ತನ್ನ ಬಂಧನದ ಪೊರೆಗಳನ್ನು ಒಂದೊಂದಾಗಿ ಕಳಚಿಕೊಳ್ಳುತ್ತ ಜ್ಞಾನಶೂನ್ಯಸ್ಥಲದಲ್ಲಿ ಜೀವಾತ್ಮನನ್ನು ಪರಮಾತ್ಮನೊಂದಿಗೆ ಅದು ಹೇಗೆ ತಾನೆ ಸಮರಸಗೊಳಿಸುತ್ತದೆ? ಎಂಬ ವಿಷಯವನ್ನು ಇಲ್ಲಿ ಬಹು ವೈಜ್ಞಾನಿಕವಾಗಿ ನಿರೂಪಿಸಲಾಗಿದೆ.

ಶ್ರದ್ಧಾಳುಗಳಾದ ಶಿವಯೋಗ ಸಾಧಕರು ಇಲ್ಲಿರುವ ನೂರೊಂದು ಸ್ಥಲಗಳನ್ನು ಅಭ್ಯಸಿಸುತ್ತ ತಮ್ಮ ಮನೋಸ್ಥಿತಿಯನ್ನು ಆಯಾ ಸ್ಥಲಗಳಲ್ಲಿ ಹೇಳಿದಂತೆ ಪರಿವರ್ತಿಸಿಕೊಳ್ಳುತ್ತ ಸಾಗಿದರೆ ಅಭ್ಯಾಸಕನೂ ಸಹ ಇಲ್ಲಿಯ ಲಿಂಗಾಂಗ ಸಾಮರಸ್ಯಾನುಭೂತಿಯನ್ನು ಪಡೆಯಬಹುದಾಗಿದೆ. ಅಂತೆಯೇ ಈ ಪ್ರಕರಣದಲ್ಲಿ ಈ ಗ್ರಂಥದಲ್ಲಿಯ ನೂರೊಂದು ಸ್ಥಲಗಳ ವಿಚಾರವನ್ನು ಸಂಕ್ಷಿಪ್ತ ಹಾಗೂ ಸಾರಗರ್ಭಿತವಾಗಿ ಪ್ರತಿಪಾದಿಸಲಾಗುವುದು. ವಾಚಕರು ಲಕ್ಷ್ಯಗೊಟ್ಟು ಅಧ್ಯಯನಗೈಯಬೇಕು.

ಅಂಗಷಟ್‌ಸ್ಥಲಾಂತರ್ಗತ ನಾಲ್ವತ್ನಾಲ್ಕು ಅಂಗಸ್ಥಲಗಳು :

ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಷಟ್‌ಸ್ಥಲಮಾರ್ಗವು ಎರಡು ವಿಧವಾಗಿ ಪ್ರತಿಪಾದಿಸಲ್ಪಟ್ಟಿದೆ. ಒಂದು ಅಂಗಷಟ್‌ಸ್ಥಲವಾದರೆ, ಇನ್ನೊಂದು ಲಿಂಗಷಟ್‌ಸ್ಥಲ ವೆಂದು ಕರೆಯಿಸಿಕೊಳ್ಳುವುದು. ಅಂಗಷಟ್‌ಸ್ಥಲದಲ್ಲಿ ಅಂಗನು ಅರ್ಥಾತ್ ಶುದ್ಧಜೀವನು ಲಿಂಗದೊಂದಿಗೆ ಐಕ್ಯವಾಗುವ ವಿಧಾನವು ನಿರೂಪಿಸಲಾಗಿದೆ. ಮುಂದಿನ ಲಿಂಗಷಟ್‌ಸ್ಥಲದಲ್ಲಿ ಲಿಂಗೈಕ್ಯ ಸ್ಥಿತಿಯನ್ನು ಹೊಂದಿದ ಶಿವಯೋಗಿಯ ಜೀವನ್ಮುಕ್ತಿಯ ವಿಲಕ್ಷಣವಾದ ಆನಂದವನ್ನನುಭವಿಸುವ ಸ್ಥಿತಿಯ ವಿಷಯವು ಪ್ರತಿಪಾದಿಸಲ್ಪಟ್ಟಿದೆ. ಸದ್ಯ ಕ್ರಮಪ್ರಾಪ್ತವಾದ ಅಂಗಷಟ್‌ಸ್ಥಲದ ನಾಲ್ವತ್ನಾಲ್ಕು ಸ್ಥಲಗಳ ಬಗ್ಗೆ ವಿವೇಚಿಸೋಣ

ಭಕ್ತಸ್ಥಲ

"ಶೈವೀ ಭಕ್ತಿಃ ಸಮುತ್ಪನ್ನಾ ಯಸ್ಯಾಸೌ ಭಕ್ತ ಉಚ್ಯತೇ" (ಸಿ.ಶಿ., ೫–೨೬) ಎಂಬ ಆಚಾರ್ಯರ ಆದೇಶಾನುಸಾರವಾಗಿ ಶಿವನಲ್ಲಿ ಭಕ್ತಿಯುಳ್ಳ ಸಾಧಕನು ಭಕ್ತನೆಂದು ಕರೆಯಿಸಿಕೊಳ್ಳುತ್ತಾನೆ. ಈತನು ಅನುಷ್ಠಿಸಬೇಕಾದ ಆಚರಣೆಗಳನ್ನು ನಿರೂಪಿಸುವ ಸ್ಥಲವೇ ಭಕ್ತಸ್ಥಲವು.

೧) ಪಿಂಡಸ್ಥಲ :

ಈ ಸ್ಥಲದಲ್ಲಿ ಹದಿನೈದು ಅವಾಂತರಸ್ಥಲಗಳು ಉಪದೇಶಿಸಲ್ಪಟ್ಟಿವೆ. ಅವುಗಳಲ್ಲಿ ಅನೇಕ ಜನ್ಮಜನ್ಮಾಂತರಗಳಲ್ಲಿ ಮಾಡಿದ ವಿಹಿತ ಧರ್ಮಾಚರಣೆಯಿಂದ ಉಂಟಾದ ಪುಣ್ಯದಿಂದ ಪಾಪವೆಲ್ಲವನ್ನು ಕಳೆದುಕೊಂಡು ಯಾವಾಗ ಜೀವನು ಪರಿಶುದ್ಧವಾದ ಅಂತಃಕರಣವುಳ್ಳವನಾಗುವನೋ ಆಗ ಅವನು ಪಿಂಡನೆಂದು ಕರೆಯಿಸಿಕೊಳ್ಳುವನು. ಈ ಪಿಂಡ ಪದವಾಚ್ಯನಾದ ಜೀವನು ಶಿವನ ಅಂಶರೂಪನಾಗುತ್ತಾನೆ. ಚಂದ್ರಕಾಂತ ಶಿಲೆಯಲ್ಲಿ ಜಲ, ಸೂರ್ಯಕಾಂತಶಿಲೆಯಲ್ಲಿ ಅಗ್ನಿ ಮತ್ತು ಬೀಜದಲ್ಲಿ ಅಂಕುರವಿರುವಂತೆ ಇವನ ಹೃದಯದಲ್ಲಿ ಶಿವನ ಅಸ್ತಿತ್ವವಿರುತ್ತದೆ. ಆ ಶಿವನು ಇವನ ಸರ್ವಕರ್ಮಗಳಿಗೆ

ಸಾಕ್ಷಿಯು, ಪ್ರೇರಕನೂ ಮತ್ತು ಹಿತಮಾರ್ಗೋಪದೇಶಕನೂ ಆಗಿರುತ್ತಾನೆ. ಇಂತಹ ಶಿವನಲ್ಲಿ ಭಕ್ತಿ ಸಂಪನ್ನನಾದ ಈ ಪಿಂಡಸ್ಥಲದ ಸಾಧಕನು ಅಂತ್ಯಶರೀರಿಯೆಂದು ಕರೆಯಲ್ಪಡುತ್ತಾನೆ. ಅಂದರೆ ಪಿಂಡಸ್ಥಲದ ಸ್ಥಿತಿಯನ್ನು ಪಡೆದ ಇವನು ಇದೇ ಜನ್ಮದಲ್ಲಿ ಮುಂದಿನ ಸ್ಥಲಗಳನ್ನು ಸಾಧಿಸಿ ಮುಕ್ತನಾಗುವನು (ಸಿ.ಶಿ., ೫. ೩೧–೫೪).

೨) ಪಿಂಡಜ್ಞಾನಸ್ಥಲ :

ಮೇಲೆ ಹೇಳಿದ ಈ ಪಿಂಡಸ್ಥಲಿಯು ಶರೀರ, ಇಂದ್ರಿಯ, ಬುದ್ಧಿ ಮತ್ತು ಮನಸ್ಸುಗಳೆಂಬ ಅನಾತ್ಮ ತತ್ತ್ವಕ್ಕಿಂತಲೂ ಆತ್ಮತತ್ತ್ವವು ಭಿನ್ನವಾಗಿರುತ್ತದೆ ಎಂಬ ಆತ್ಮಾನಾತ್ಮ ವಿವೇಕವನ್ನು ಪಡೆದುಕೊಂಡಾಗ ಪಿಂಡಜ್ಞಾನಿಯೆಂದು ಕರೆಯಲ್ಪಡುತ್ತಾನೆ. ಈ ಸ್ಥಿತಿಯಲ್ಲಿ ಇವನು ಶರೀರಾದಿಗಳಿಗಿಂತಲೂ ಆತ್ಮವು ಭಿನ್ನವಾಗಿರುತ್ತದೆ. ಆ ತನ್ನ ಆತ್ಮಕ್ಕಿಂತಲೂ ಪರಮಾತ್ಮನು ಭಿನ್ನನಾಗಿರುತ್ತಾನೆ ಮತ್ತು ತನಗೆ ಪ್ರೇರಕನಾಗಿರುತ್ತಾನೆ ಎಂಬುದಾಗಿ ತಿಳಿದುಕೊಂಡಿರುತ್ತಾನೆ. ಇದುವೇ ಪಿಂಡಜ್ಞಾನ ಸ್ಥಲವು (ಸಿ.ಶಿ., ೫. ೪೪–೬೦)

೩) ಸಂಸಾರಹೇಯಸ್ಥಲ :

ಮೇಲೆ ಹೇಳಿದ ಈ ಪಿಂಡಜ್ಞಾನಿಯು ನಿತ್ಯಾನಿತ್ಯ ವಿವೇಕವುಳ್ಳವನಾಗಲು ಇವನಿಗೆ ಸಂಸಾರದಲ್ಲಿ ಹೇಯಬುದ್ಧಿಯುಂಟಾಗುವುದು. ಶುದ್ಧಾಂತಃಕರಣಿಯೂ, ವಿವೇಕಿಯೂ ಆದ ಇವನಿಗೆ ಐಹಿಕ ಸುಖದಲ್ಲಾಗಲೀ ಮತ್ತು ಪಾರಲೌಕಿಕವಾದ ಬ್ರಹ್ಮಾದಿ ಪದವಿಗಳಲ್ಲಾಗಲೀ ಆಸಕ್ತಿಯು ಉಂಟಾಗುವುದಿಲ್ಲ. ಅಂದರೆ ಐಹಿಕ ಮತ್ತು ಪಾರಲೌಕಿಕ ಸುಖಗಳು ಅನಿತ್ಯವೆಂಬುದಾಗಿ ತಿಳಿದು ಅವುಗಳ ಬಗ್ಗೆ ವಿರಕ್ತಿಭಾವವನ್ನು ತಾಳಿಕೊಂಡಿರುತ್ತಾನೆ. ಇದುವೇ ಸಾಧಕನ ಸಂಸಾರಹೇಯಸ್ಥಲವು (ಸಿ.ಶಿ., ೫. ೬೧–೭೭).

೪) ಗುರುಕಾರುಣ್ಯಸ್ಥಲ :

ಈ ಸಂಸಾರಹೇಯಸ್ಥಲಿಯು ತನ್ನ ಸಾಂಸಾರಿಕ ದೋಷಗಳನ್ನು ನಿವಾರಣೆಗೊಳಿಸಿಕೊಳ್ಳುವುದಕ್ಕಾಗಿ ಶಿವಸಿದ್ಧಾಂತವನ್ನು ಬಲ್ಲ, ಸತ್ಕುಲ ಸಂಪನ್ನನಾದ, ಕುಮಾರ್ಗವರ್ಜಿತನಾದ ಮತ್ತು ವೀರಶೈವ ಸಿದ್ಧಾಂತವನ್ನು ಅರಿತು ಆಚರಿಸುತ್ತಿರುವ ಶಿವಾಚಾರ್ಯನ ಸಾನ್ನಿಧ್ಯಕ್ಕೆ ಹೋಗಿ ಆಪ್ತ–ಅಂಗಾದಿ ಸೇವೆಗಳಿಂದ ಆತನನ್ನು ಪ್ರಸನ್ನಗೊಳಿಸಿಕೊಂಡು ಅವನಿಂದ ವೇಧಾ, ಮಾಂತ್ರೀ ಮತ್ತು ಕ್ರಿಯಾದೀಕ್ಷೆಗಳನ್ನು ವಿಧಿವತ್ತಾಗಿ ಪಡೆದುಕೊಳ್ಳುತ್ತಾನೆ ಇದುವೆ ಗುರುಕಾರುಣ್ಯಸ್ಥಲವು (ಸಿ.ಶಿ., ೬. ೧–೨೧).

೫) ಲಿಂಗಧಾರಣಸ್ಥಲ :

ಮೇಲೆ ಹೇಳಿದಂತೆ ಗುರುಕಾರುಣ್ಯಕ್ಕೆ ಪಾತ್ರನಾದ ಈ ಸಾಧಕನು ಕ್ರಿಯಾದೀಕ್ಷೆಯಿಂದ ಇಷ್ಟಲಿಂಗವನ್ನು, ಮಂತ್ರದೀಕ್ಷೆಯಿಂದ ಪ್ರಾಣಲಿಂಗವನ್ನು ಮತ್ತು ವೇಧಾದೀಕ್ಷೆಯಿಂದ ಭಾವಲಿಂಗವನ್ನು ಪಡೆದುಕೊಳ್ಳುತ್ತಾನೆ. ಇದೂ ಅಲ್ಲದೆ ಗುರುವಿನ ಉಪದೇಶದಿಂದ ತನ್ನ ಮೂಲಾಧಾರ, ಹೃದಯ ಮತ್ತು ಭ್ರೂಮಧ್ಯಗಳಲ್ಲಿರುವ ಜ್ಯೋತಿರ್ಲಿಂಗಗಳ ಅರಿವನ್ನು ಕೂಡ ಪಡೆದುಕೊಳ್ಳುತ್ತಾನೆ. ಇದರ ಜೊತೆಗೆ ಈ ಲಿಂಗಧಾರಣೆಯ ಪರಂಪರೆ ಹಾಗೂ ಇದರ ವೇದಾಗಮ ಮೂಲಕತೆಯನ್ನು ತಿಳಿದುಕೊಳ್ಳುತ್ತಾನೆ. ಇದುವೇ ಲಿಂಗಧಾರಣಸ್ಥಲವು. (ಸಿ.ಶಿ., ೬. ೨೨–೬೩)

೬) ಭಸ್ಮಧಾರಣಸ್ಥಲ :

ಮೇಲೆ ಹೇಳಿದ ರೀತಿಯಲ್ಲಿ ಲಿಂಗಧಾರಿಯಾಗಿ, ಲಿಂಗವನ್ನು ಪೂಜಿಸುವ ಈ ಭಕ್ತನು ತನ್ನ ದೇಹದ ಮಸ್ತಕ, ಹಣೆ, ಎರಡೂ ಕಿವಿಗಳು, ಕಂಠ, ಎರಡು ಭುಜಗಳು, ಎದೆ, ನಾಭಿ, ಬೆನ್ನು, ಎರಡು ತೋಳುಗಳು, ಕುತ್ತಿಗೆ ಮತ್ತು ಎರಡೂ ಮುಂಗೈ – ಈ ಹದಿನೈದು ಸ್ಥಾನಗಳಲ್ಲಿ ಭಸ್ಮದ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು. ಇದೂ ಅಲ್ಲದೆ ಇದಕ್ಕಿಂತ ಪೂರ್ವದಲ್ಲಿ ಭಸ್ಮಸ್ನಾನ ಮತ್ತು ಭಸ್ಮೋದ್ಧೂಲನವನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ಭಸ್ಮವು ಶುದ್ಧವಾದ ಗೋಮಯದಿಂದ ಶಾಸ್ತ್ರದಲ್ಲಿ ಹೇಳಿದ ಪ್ರಕಾರ ಕಲ್ಪ, ಅನುಕಲ್ಪ, ಉಪಕಲ್ಪ ಮತ್ತು ಅಕಲ್ಪವೆಂಬ ವಿಧಿಗಳಲ್ಲಿ ಯಾವುದಾದರೊಂದು ವಿಧಿಯಿಂದ ನಿರ್ಮಿತವಾಗಿರಬೇಕು. ಈ ಭಸ್ಮವನ್ನು ಧರಿಸಿಕೊಳ್ಳು ವಾಗ ತೋರಬೆರಳು, ಮಧ್ಯಮ ಮತ್ತು ಅನಾಮಿಕಗಳೆಂಬ ಮೂರು ಬೆರಳುಗಳಿಂದ ಇಲ್ಲವೆ ಮಧ್ಯಮ, ಅನಾಮಿಕ ಮತ್ತು ಅಂಗುಷ್ಠಗಳಿಂದ ಅನುಲೋಮ ಮತ್ತು ವಿಲೋಮ ಪದ್ಧತಿಗನುಸಾರವಾಗಿಯೂ ಸಹ ಧರಿಸಿಕೊಳ್ಳಬಹುದು. ಇದುವೇ ಭಸ್ಮಧಾರಣಸ್ಥಲವು (ಸಿ.ಶಿ., ೭. ೧–೪೪)

೭) ರುದ್ರಾಕ್ಷಧಾರಣಸ್ಥಲ :

ಹೀಗೆ ಭಸ್ಮಧಾರಿಯಾದ ಶಿವಭಕ್ತನು ರುದ್ರಾಕ್ಷಗಳನ್ನೂ ಸಹ ಧರಿಸಿಕೊಳ್ಳಬೇಕು. ತ್ರಿಪುರದ ಸಂಹಾರಕಾಲದಲ್ಲಿ ರುದ್ರನ ತ್ರಿನೇತ್ರಗಳಿಂದ ಬಿದ್ದ ಜಲಬಿಂದುಗಳಿಂದ ಈ ರುದ್ರಾಕ್ಷಗಳು ಉತ್ಪನ್ನವಾಗಿರುತ್ತವೆ. ಅಂತೆಯೇ ರುದ್ರನಷ್ಟೇ ಇವು ಪವಿತ್ರವಾದುವುಗಳು. ರುದ್ರನ ಸೂರ್ಯನೇತ್ರದಿಂದ ಕಪಿಲವರ್ಣದ ಹನ್ನೆರಡು ಪ್ರಕಾರದ ರುದ್ರಾಕ್ಷಗಳು, ಚಂದ್ರನೇತ್ರದಿಂದ ಶುಭ್ರವರ್ಣದ ಹದಿನಾರು ಪ್ರಕಾರದ ರುದ್ರಾಕ್ಷಗಳು ಮತ್ತು ವಹ್ನಿನೇತ್ರ ದಿಂದ ಕೃಷ್ಣವರ್ಣದ ಹತ್ತು ಪ್ರಕಾರದ ರುದ್ರಾಕ್ಷಗಳು–

ಹೀಗೆ ಇವು ಒಟ್ಟು ಮೂವತ್ತೆಂಟು ಪ್ರಕಾರದವಗಳಾಗಿರುತ್ತವೆ. ಈ ರುದ್ರಾಕ್ಷಗಳು ಒಂದು ಮುಖದಿಂದ ಹದಿನಾಲ್ಕು ಮುಖದವರೆಗೆ ದೊರೆಯುತ್ತವೆ.

ವೀರಶೈವ ಶಿವಭಕ್ತನು ತನ್ನ ಇಷ್ಟಲಿಂಗ ಪೂಜಾಕಾಲದಲ್ಲಿ ಶಿಖೆಯಲ್ಲಿ ಒಂದು ಮುಖದ ಒಂದು ರುದ್ರಾಕ್ಷಿಯನ್ನು; ನೆತ್ತಿಯಮೇಲೆ ಎರಡು, ಮೂರು ಮತ್ತು ಹನ್ನೆರಡು ಮುಖದ ಮೂರು ರುದ್ರಾಕ್ಷಗಳನ್ನು ; ತಲೆಯ ಸುತ್ತಲೂ ಹನ್ನೊಂದು ಮುಖದ ಮೂವತ್ತಾರು ರುದ್ರಾಕ್ಷಗಳನ್ನು; ಎರಡೂ ಕಿವಿಗಳಲ್ಲಿ ಹತ್ತು, ಏಳು ಮತ್ತು ಐದು ಮುಖದ ಆರು–ಆರು ರುದ್ರಾಕ್ಷಗಳನ್ನು; ಕಂಠದಲ್ಲಿ ಆರು ಮತ್ತು ಎಂಟು ಮುಖದ ಮೂವತ್ತೆರಡು ರುದ್ರಾಕ್ಷಗಳನ್ನೂ; ಎದೆಯ ಮೇಲೆ ನಾಲ್ಕು ಮುಖದ ಐವತ್ತು ರುದ್ರಾಕ್ಷಗಳನ್ನು; ಎರಡೂ ಭುಜಗಳಲ್ಲಿ ಹದಿಮೂರು ಮುಖದ ಹದಿನಾರು–ಹದಿನಾರು ರುದ್ರಾಕ್ಷಗಳನ್ನೂ; ಎರಡೂ ಮುಂಗೈಗಳಲ್ಲಿ ಒಂಭತ್ತು ಮುಖದ ಹನ್ನೆರಡು–ಹನ್ನೆರಡು ರುದ್ರಾಕ್ಷಗಳನ್ನು ಮತ್ತು ಹದಿನಾಲ್ಕು ಮುಖದ ಒಂದು ನೂರು ಎಂಟು ರುದ್ರಾಕ್ಷಗಳ ಒಂದು ಮಾಲೆಯನ್ನು ಬಗಲಲ್ಲಿ ಧರಿಸಿಕೊಳ್ಳಬೇಕು. ಬ್ರಾಹ್ಮಣ, ಅಂತ್ಯಜ, ಮೂರ್ಖ ಮತ್ತು ಪಂಡಿತರೆಂಬ ಭೇದಭಾವನೆಯಿಲ್ಲದೆ ಸರ್ವರೂ ರುದ್ರಾಕ್ಷಗಳನ್ನು ಧರಿಸಬಹುದು. ಇದರ ಧಾರಣೆಯಿಂದ ಕೋಟಿಗೋದಾನದ ಫಲವು ದೊರೆಯುವುದಲ್ಲದೆ ಮೃತ್ಯುಕಾಲದಲ್ಲಿ ರುದ್ರಾಕ್ಷವನ್ನು ತೊಳೆದ ನೀರನ್ನು ಪಾನಮಾಡಿದರೆ ಅವನಿಗೆ ರುದ್ರಲೋಕವೇ ಪ್ರಾಪ್ತವಾಗುವುದು. (ಸಿ.ಶಿ., ೭. ೪೫–೬೭) ಇದುವೇ ರುದ್ರಾಕ್ಷಧಾರಣಸ್ಥಲವು.

೮) ಪಂಚಾಕ್ಷರಜಪಸ್ಥಲ :

ಉಪರ್ಯುಕ್ತ ಪದ್ಧತಿಯಂತೆ ಲಿಂಗ, ಭಸ್ಮ ಮತ್ತು ರುದ್ರಾಕ್ಷವನ್ನು ಧರಿಸಿಕೊಂಡ ವೀರಶೈವ ಸಾಧಕನು ಓಂಕಾರಯುಕ್ತವಾದ ಪಂಚಾಕ್ಷರ ಮಹಾಮಂತ್ರವನ್ನು ಜಪಿಸಬೇಕು. ಮಂತ್ರಶಾಸ್ತ್ರದಲ್ಲಿ ಬರುವ ಏಳುಕೋಟಿ ಮಂತ್ರಗಳಲ್ಲಿ ಇದು ಅತ್ಯಂತ ಶ್ರೇಷ್ಠವಾದುದು. ಇದರಲ್ಲಿರುವ 'ಓಂ'ಕಾರವು ಶಿವನ ನಿರ್ಗುಣಸ್ವರೂಪದ ಪ್ರತಿಪಾದಕವಾದರೆ, 'ನಮಃ ಶಿವಾಯ' ಎಂಬ ಪಂಚಾಕ್ಷರಗಳು ಅವನ ಸಗುಣಸ್ವರೂಪದ ನಿರೂಪಕಗಳಾಗಿವೆ. ಈ ಜಗತ್ತಿನಲ್ಲಿರುವ ಐದು ಸಂಖ್ಯೆಯ ಎಷ್ಟು ಪದಾರ್ಥ ಗಳಿವೆಯೋ ಅವೆಲ್ಲಕ್ಕೂ ಈ ಪಂಚಾಕ್ಷರಗಳೇ ಮೂಲಗಳಾಗಿರುತ್ತವೆ. ಈ ಮಂತ್ರಕ್ಕೆ ಮೂಲಮಂತ್ರ, ವಿದ್ಯಾಮಂತ್ರ, ಶಿವಮಂತ್ರ, ಶೈವಸೂತ್ರ ಮತ್ತು ಪಂಚಾಕ್ಷರಮಂತ್ರ ವೆಂಬುದಾಗಿ ಐದು ಹೆಸರುಗಳಿರುತ್ತವೆ. ಶಿವಯೋಗ ಸಾಧಕನು ಇಷ್ಟಲಿಂಗ ಪೂಜಾ ಸಮಯದಲ್ಲಿ ಪೂರ್ವ ಇಲ್ಲವೇ ಉತ್ತರಾಭಿಮುಖವಾಗಿ ಕುಳಿತು, ಆಚಮನ ಪ್ರಾಣಾಯಾಮಾದಿಗಳನ್ನು ಮಾಡಿ ಹೃದಯದಲ್ಲಿ ಶಿವನನ್ನು ಧ್ಯಾನಿಸುತ್ತ ಈ ಮಂತ್ರವನ್ನು ಜಪಿಸಬೇಕು.

ಈ ಜಪವು ವಾಚಕ, ಉಪಾಂಶು ಮತ್ತು ಮಾನಸಿಕವೆಂದು ಮೂರು ವಿಧವಾಗಿರುತ್ತದೆ. ಅನ್ಯರಿಗೆ ಕೇಳುವಂತೆ ಜಪಿಸುವುದು ವಾಚಕವು. ಕೇವಲ ತನ್ನ ಕಿವಿಗೆ ಮಾತ್ರ ಕೇಳುವಂತೆ ಮಂದವಾಗಿ ಮಂತ್ರವನ್ನುಚ್ಚರಿಸುವುದು ಉಪಾಂಶು ಜಪವು. ಇನ್ನು ತುಟಿ ಮತ್ತು ನಾಲಿಗೆಗಳ ಚಲನೆಯನ್ನು ಮಾಡದೆ ಕೇವಲ ಮನಸ್ಸಿನಲ್ಲಿಯೇ ಮಾಡಲ್ಪಡುವ ಜಪವು ಮಾನಸಿಕಜಪವೆಂದು ಕರೆಯಲಾಗುತ್ತದೆ. ಅತಿ ಕಠಿಣಗಳಾದ ವ್ರತಾಚರಣೆಗಳಿಗಿಂತಲೂ, ಬಹು ವಿಶಾಲಗಳಾದ ಯಜ್ಞಯಾಗಾದಿ ಕರ್ಮಫಲಗಳಿಗಿಂತಲೂ ಈ ಪಂಚಾಕ್ಷರ ಮಹಾಮಂತ್ರಜಪದ ಫಲವು ಅತ್ಯಧಿಕವಾಗಿರುತ್ತದೆ. ಇದನ್ನು ಕೇವಲ ಒಂದೇ ಸಾರಿ ಉಚ್ಚರಿಸಿದರೂ ಸಹ ಸರ್ವಪಾಪಗಳು ನಾಶವಾಗಿ ಹೋಗುತ್ತವೆ. ಸಾನಂದ, ಶತಾನಂದ, ಸಂಗಿರ, ಉಪಮನ್ಯು ಮತ್ತು ವಶಿಷ್ಠ ಮುಂತಾದ ಮಹರ್ಷಿಗಳು ಈ ಮಂತ್ರಜಪದಿಂದಲೇ ಸರ್ವಸಿದ್ಧಿಗಳನ್ನು ಪಡೆದವರಾಗಿರುತ್ತಾರೆ. ಈ ಮಂತ್ರಜಪದ ಮಹಾತ್ಮ್ಯದಿಂದಲೇ ಬ್ರಹ್ಮಾದಿ ದೇವತೆಗಳೂ ಸಹ ತಮ್ಮ ಸೃಷ್ಟ್ಯಾದಿಕಾರ್ಯಗಳನ್ನು ಮಾಡುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತಾರೆ. ಪ್ರಣವಸಹಿತವಾದ ಪಂಚಾಕ್ಷರ ಮಹಾ ಮಂತ್ರದಜಪದಿಂದ ಸಕಲ ದುರಿತಗಳೆಲ್ಲ ಅಡಗಿ ಮೋಕ್ಷಲಕ್ಷ್ಮಿಯು ಪ್ರಾಪ್ತವಾಗುವುದು. (ಸಿ. ಶಿ.. ೮. ೧–೪೯) ಇದುವೇ ಪಂಚಾಕ್ಷರಜಪಸ್ಥಲವು.

೯) ಭಕ್ತಮಾರ್ಗಕ್ರಿಯಾಸ್ಥಲ:

ಪೂರ್ವದಲ್ಲಿ ಹೇಳಿದಂತೆ ಲಿಂಗ, ರುದ್ರಾಕ್ಷ ಮತ್ತು ಭಸ್ಮವನ್ನು ದೇಹದ ಮೇಲೆ ಧರಿಸಿಕೊಂಡು ಸದಾ ಪಂಚಾಕ್ಷರ ಮಹಾಮಂತ್ರವನ್ನೂ ಜಪಿಸುತ್ತಿರುವ ಶಿವಯೋಗ ಸಾಧಕನು ತನಗೆ ಉಚಿತವಾದ ಕೆಲವು ಧಾರ್ಮಿಕ ಕ್ರಿಯೆಗಳನ್ನು ಆಚರಿಸಬೇಕಾಗುತ್ತದೆ. ಇವನು ಮೊದಲು ತನ್ನ ಭಕ್ತಿಯನ್ನು ಅಭಿವೃದ್ಧಿಗೊಳಿಸಿ ಕೊಳ್ಳಲೋಸುಗ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನಗಳೆಂಬ ನವವಿಧ ಭಕ್ತಿಗಳನ್ನು ಆಚರಿಸಬೇಕು. ಮುಖ್ಯವಾಗಿ ಬಾಹ್ಯ ಮತ್ತು ಅಂತರಂಗವೆಂದು ಭಕ್ತಿಯು ಎರಡು ವಿಧವಾಗಿರುತ್ತದೆ. ಬಹಿರಂಗದಲ್ಲಿ ಶಿವಲಿಂಗವನ್ನು ಪೂಜಿಸುವುದು ಬಾಹ್ಯ ಭಕ್ತಿಯಾದರೆ, ಅಂತರಂಗದಲ್ಲಿ ಪ್ರಾಣಲಿಂಗ–ಭಾವಲಿಂಗಗಳನ್ನು ಆರಾಧಿಸುವುದು ಅಂತರಂಗ ಭಕ್ತಿಯು. ವೀರಶೈವ ಶಿವಯೋಗಿಯು ತಪಸ್ಸು, ಕರ್ಮ, ಜಪ, ಧ್ಯಾನ ಮತ್ತು ಜ್ಞಾನಗಳೆಂಬ ಪಂಚವಿಧ ಯಜ್ಞವನ್ನು ಅರ್ಥಾತ್ ಪೂಜೆಯನ್ನು ಮಾಡಬೇಕು. ಶಿವಪೂಜೆಗಾಗಿ ಬೇಕಾಗುವ ಸಾಮಗ್ರಿಗಳನ್ನು ಸಂಗ್ರಹಿಸುವಲ್ಲಿ ಮತ್ತು ಕುಳಿತು ಪೂಜಿಸುವಲ್ಲಿ ಶರೀರಕ್ಕುಂಟಾಗುವ ಕಷ್ಟವನ್ನು ಸಹಿಸುವುದೇ ತಪೋಯಜ್ಞವು. ಇಷ್ಟಲಿಂಗವನ್ನು ಪೂಜಿಸುವುದೇ

ಕರ್ಮಯಜ್ಞವು. ಪ್ರಣವ, ಪಂಚಾಕ್ಷರ ಇಲ್ಲವೆ ಶ್ರೀರುದ್ರದ ಆವೃತ್ತಿಯನ್ನು ಮಾಡುವುದೇ ಜಪಯಜ್ಞವು. ಮನಸ್ಸಿನಲ್ಲಿ ಶಿವಸ್ವರೂಪವನ್ನು ಚಿಂತಿಸುವುದೇ ಧ್ಯಾನಯಜ್ಞವು. ಇನ್ನೂ ಶಿವಾಗಮಗಳ ಅಧ್ಯಯನವನ್ನು ಮಾಡಿ ಶಿವಸ್ವರೂಪಜ್ಞಾನವನ್ನು ಮಾಡಿಕೊಳ್ಳುವುದೇ ಜ್ಞಾನಯಜ್ಞವು. ಹೀಗೆ ಶಿವಭಕ್ತನಾದವನು ದಿನಾಲೂ ಈ ಐದು ಯಜ್ಞಗಳನ್ನು ಆಚರಿಸುತ್ತಿರಬೇಕು.

ವೀರಶೈವ ಶಿವಭಕ್ತನು ತನ್ನಂತೆ ಶಿವಭಕ್ತರಾದವರ ಮನೆಯಲ್ಲಿಯೇ ಅನ್ನ ನೀರುಗಳನ್ನು ಸೇವಿಸಬೇಕು. ಅನ್ಯದೇವರ ಪೂಜೆಯನ್ನಾಗಲಿ, ಆ ದೇವರ ಪ್ರಸಾದವನ್ನಾಗಲಿ ಸೇವಿಸಕೂಡದು. ತನ್ನ ಇಷ್ಟದೇವರ ನಿಂದೆಯನ್ನು ಎಂದೂ ಕೇಳಕೂಡದು. ಚರ್ಮದ ಪಾತ್ರೆಯಲ್ಲಿಯ ಜಲ–ತೈಲಾದಿಗಳನ್ನು ಉಪಯೋಗಿಸ ಕೂಡದು. ತನ್ನ ಮನೆಗೆ ಕನ್ಯೆಯನ್ನು ತರಬೇಕಾದರೆ ತನ್ನ ಮನೆಯ ಕನ್ಯೆಯನ್ನು ಅನ್ಯರಿಗೆ ಕೊಡಬೇಕಾದರೆ ತನಗೆ ಸಮಾನವಾದ ಆಚಾರ–ವಿಚಾರದವರೊಂದಿಗೇನೇ ವ್ಯವಹರಿಸಬೇಕು. ಇಷ್ಟಲಿಂಗವನ್ನು ಪೂಜಿಸುವ ಶಿವಭಕ್ತನಿಗೆ ಪಂಚಸೂತಕಗಳು ಇರುವುದಿಲ್ಲ. ಹೀಗೆ ಇಲ್ಲಿ ಹೇಳಿರುವ ಭಕ್ತನ ಆಚರಣೆಗೆ ಯೋಗ್ಯವಾದ ವಿಷಯಗಳನ್ನು ಪ್ರತಿಪಾದಿಸುವ ಈ ಸ್ಥಲಕ್ಕೆ ಭಕ್ತಮಾರ್ಗಕ್ರಿಯಾಸ್ಥಲವೆಂದು ಕರೆಯಲಾಗಿದೆ. (ಸಿ.ಶಿ., ೯. ೧–೫೦)

೧೦) ಉಭಯಸ್ಥಲ :

ಇಷ್ಟಲಿಂಗ ಮತ್ತು ಗುರುವಿನಲ್ಲಿ ಸಮಾನವಾದ ಶ್ರದ್ಧೆಯನ್ನಿರಿಸಿ ಶಿವನಂತೆ ಗುರುವನ್ನೂ ಸಹ ಅರ್ಚಿಸಬೇಕು. ಗುರುವನ್ನು ಅರ್ಚಿಸಿದರೆ ಸಾಕ್ಷಾತ್ ಶಿವನನ್ನೇ ಅರ್ಚಿಸಿದಂತೆ. ಶಿವನು ಮಾಯಾಶಕ್ತಿ ವಿಶಿಷ್ಟನಾಗಿರೋಣದರಿಂದ ಆತನು ಸರ್ವರಿಗೂ ಅಗೋಚರವಾಗಿರುತ್ತಾನೆ. ಅವನೇ ಈ ಭೂತಲದಲ್ಲಿ ಭಕ್ತರಿಗೆ ದರ್ಶನ ಭಾಗ್ಯವನ್ನು ಅನುಗ್ರಹಿಸುವುದಕ್ಕಾಗಿ ಗುರುವಾಗಿ ಬಂದಿರುತ್ತಾನೆ. ತನ್ನ ಉಪದೇಶಾಮೃತದಿಂದ ಶಿವಜ್ಞಾನವನ್ನುಂಟು ಮಾಡಿ ಈ ಘೋರವಾದ ಸಂಸಾರ ಸಾಗರದಿಂದ ದಾಟಿಸುವ ಗುರುವೇ ಸದಾ ವಂದನೀಯನಾಗಿದ್ದಾನೆ. ಯಾರ ಕೃಪಾಕಟಾಕ್ಷ ಮಾತ್ರದಿಂದ ಪರಮಾನಂದ ರೂಪವಾದ ಶಿವಸ್ವರೂಪವು ಪ್ರಾಪ್ತವಾಗುವುದೋ ಅಂತಹ ಗುರುವನ್ನು ಯಾರು ತಾನೇ ಅರ್ಚಿಸುವುದಿಲ್ಲ? ಅಂದರೆ ಸರ್ವರೂ ಅರ್ಚಿಸಿರುತ್ತಾರೆಂಬ ಭಾವವು. ಆದ್ದರಿಂದ ಸದಾ ತನ್ನ ಶರೀರ, ವಾಣಿ, ಮನಸ್ಸು ಮತ್ತು ಧನಗಳಿಂದ ಗುರುವಿಗೆ ಹಿತವನ್ನೇ ಮಾಡಬೇಕು. ಶ್ರೀಗುರುವಿನ ಆಜ್ಞೆಯನ್ನು ಸಾಧಕನಾದವನು ಅದೆಂದೂ ಉಲ್ಲಂಘಿಸಬಾರದು. ಗುರುವಿನ ಆಜ್ಞೆಯನ್ನು ಉಲ್ಲಂಘಿಸಿದರೆ ಶಿವನ ಆಜ್ಞೆಯನ್ನೇ ಉಲ್ಲಂಘಿಸಿದಂತಾಗುವುದು. ಹೀಗೆ ಶಿವ ಹಾಗೂ ಗುರು ಇವರೀರ್ವರಲ್ಲಿ

ಭೇದವನ್ನು ಮಾಡದೆ ಉಭಯತರಲ್ಲಿ ಸಮಾನವಾದ ಶ್ರದ್ಧೆಯಿಂದ ನಡೆದುಕೊಳ್ಳುವುದೇ ಉಭಯಸ್ಥಲವು. (ಸಿ.ಶಿ., ೯. ೫೧-೫೭)

೧೧) ತ್ರಿವಿಧಸಂಪತ್ತಿಸ್ಥಲ :

ಗುರು, ಲಿಂಗ ಹಾಗೂ ಜಂಗಮರಲ್ಲಿ ಸಮಾನವಾದ ಶ್ರದ್ಧೆಯನ್ನಿಟ್ಟು ಅವರನ್ನರ್ಚಿಸುವುದೇ ತ್ರಿವಿಧಸಂಪತ್ತಿಸ್ಥಲವು. ಒಬ್ಬನೇ ಆದ ಶಿವನು ಗುರು, ಲಿಂಗ ಮತ್ತು ಜಂಗಮರೂಪವಾಗಿ ಅಭಿವ್ಯಕ್ತನಾಗಿರುತ್ತಾನೆ. ಜಂಗಮನೆಂದರೆ ಸುಳಿದಾಡುವ ಲಿಂಗವೆಂದೇ ಭಾವಿಸಬೇಕು. ಇವನಿಗೆ ಶಿವಯೋಗಿಯೆಂತಲೂ ಕರೆಯುವರು. ಶಿಲಾಮಯ ಶಿವಲಿಂಗಗಳಲ್ಲಿ ಮಂತ್ರಸಂಸ್ಕಾರದಿಂದ ಶಿವನು ನಿವಾಸಿಸಿದರೆ ಜಂಗಮನಲ್ಲಿ ಸದಾ ಸನ್ನಿಹಿತನಾಗಿರುತ್ತಾನೆ. ಆದ್ದರಿಂದ ಶಿವಯೋಗಿಗೆ ಅರ್ಥಾತ್ ಜಂಗಮನಿಗೆ ಅದೇನನ್ನು ಸಮರ್ಪಿಸಿದರೂ ಅದರಿಂದ ಅಕ್ಷಯವಾದ ಫಲವು ಪ್ರಾಪ್ತವಾಗುವುದು. ಇಂತಹ ಮಹಿಮಾಶಾಲಿಯಾದ ಶಿವಯೋಗಿಗೆ ಎಂದೂ ಅಪಮಾನವೆಸಗಕೂಡದು. ಶಿವಯೋಗಿಯನ್ನು ಶಿವನೆಂದೇ ಭಾವಿಸಿ ಇಷ್ಟಲಿಂಗ ಹಾಗೂ ಗುರುಗಳನ್ನು ಪೂಜಿಸಿದಂತೆ ಅವನನ್ನೂ ಸಹ ಪೂಜಿಸಬೇಕು. ವೀರಶೈವ ಭಕ್ತನಿಗೆ ಈ ಗುರು-ಲಿಂಗ-ಜಂಗಮರೇ ಒಂದು ಸಂಪತ್ತು ಇದ್ದ ಹಾಗೆ. ಅಂತೆಯೇ ಈ ಸ್ಥಲಕ್ಕೆ ತ್ರಿವಿಧಸಂಪತ್ತಿಸ್ಥಲವೆಂದು ಕರೆದಿದ್ದಾರೆ. (ಸಿ.ಶಿ., ೯. ೫೮-೬೬)

೧೨) ಚತುರ್ವಿಧಸಾರಾಯಸ್ಥಲ :

ಈ ಮೊದಲು ಹೇಳಿದ ಗುರು-ಲಿಂಗ ಮತ್ತು ಜಂಗಮರನ್ನು ಆರಾಧಿಸಿ ಅವರ ಪಾದೋದಕ-ಪ್ರಸಾದಗಳನ್ನೂ ಸಹ ಸೇವಿಸುವುದು ಭಕ್ತನ ಕರ್ತವ್ಯವಾಗಿರುತ್ತದೆ. ಇಲ್ಲಿ ಗುರು-ಲಿಂಗ-ಜಂಗಮ ಮತ್ತು ಅವರ ಪಾದೋದಕ-ಪ್ರಸಾದಗಳೆಂಬ ಈ ನಾಲ್ಕು ತತ್ತ್ವಗಳು ಜೀವನದ ಸಾರಗಳಾಗಿರುತ್ತವೆ. ಅಂತೆಯೇ ಈ ಸ್ಥಲಕ್ಕೆ 'ಚತುರ್ವಿಧ ಸಾರಾಯಸ್ಥಲ'ವೆಂದು ಕರೆದಿದ್ದಾರೆ. ಗುರು-ಲಿಂಗ-ಜಂಗಮರ ಪಾದೋದಕವು ಸರ್ವಪಾಪವನ್ನು ನಾಶಗೊಳಿಸಿ ಸರ್ವವಿಧ ಮಂಗಲಗಳನ್ನು ಕೊಡುವಂತಹದ್ದಾಗಿದೆ. ಶಿವನಿಗೆ ಅರ್ಪಿಸುವ ಪತ್ರ-ಪುಷ್ಪಾದಿಗಳನ್ನು ಯಾರು ಮಸ್ತಕದ ಮೇಲಿರಿಸಿ ಕೊಳ್ಳುತ್ತಾರೆಯೋ ಅವರಿಗೆ ಪೌಂಡರೀಕ ಯಾಗದ ಫಲವು ಪ್ರಾಪ್ತವಾಗುವುದು. ಜಾಬಾಲೋಪನಿಷತ್ತಿನಲ್ಲಿ ರುದ್ರನಿಗೆ ಅರ್ಪಿಸಿದ ಅನ್ನ-ಜಲಾದಿಗಳನ್ನು ಸೇವಿಸಲು ಆದೇಶಿಸಲಾಗಿದೆ. ಅಂತೆಯೇ ವೀರಶೈವ ಭಕ್ತನು ಪತ್ರ-ಪುಷ್ಪ-ಫಲ-ಜಲ ಮತ್ತು ಅನ್ನಾದಿ ಸರ್ವಭೋಜ್ಯ ಪದಾರ್ಥಗಳನ್ನು ಗುರು-ಲಿಂಗ ಮತ್ತು ಜಂಗಮರಿಗೆ ಸಮರ್ಪಿಸಿ ಅವರಿಂದ ಪ್ರಾಪ್ತವಾದ ಪ್ರಸಾದವನ್ನು ಸೇವಿಸಬೇಕು. ಯಾರು ಶಿವನಲ್ಲಿ ಅತ್ಯಂತ ನಿಷ್ಠೆಯುಳ್ಳವರಾಗಿರುವರೋ ಅವರು ಮಾತ್ರ ಶಿವನಿರ್ಮಾಲ್ಯವನ್ನು

ಸೇವಿಸಲು ಅರ್ಹರಾಗಿರುತ್ತಾರೆ. ಇಷ್ಟಲಿಂಗವನ್ನು ಪೂಜಿಸಿ ಆ ಲಿಂಗಾರ್ಪಿತವಾದ ಪ್ರಸಾದವನ್ನು ಸೇವಿಸಿದರೆ ಒಂದೊಂದು ತುತ್ತಿಗೆ ಒಂದು ಅಶ್ವಮೇಧ ಯಜ್ಞದ ಫಲವು ದೊರೆಯುವುದು. ಶಿವನ ಈ ನಿರ್ಮಾಲ್ಯವೂ ಅತ್ಯಂತ ನಿರ್ಮಲವಾಗಿ ರುವುದರಿಂದ ನಿರ್ಮಲ ಮನಸ್ಸಿನ ಭಕ್ತರೇ ಇದನ್ನು ಸ್ವೀಕರಿಸಬೇಕು. ಹೀಗೆ ಈ ಶಿವಯೋಗ ಸಾಧಕನು ದಿನಾಲೂ ಗುರು–ಲಿಂಗ–ಜಂಗಮರನ್ನು ಅರ್ಚಿಸಿ ಅವರ ಪಾದೋದಕ–ಪ್ರಸಾದವನ್ನು ಸೇವಿಸುತ್ತಿರಬೇಕು (ಸಿ.ಶಿ., ೯. ೬೭–೭೮) ಇದುವೇ ಚತುರ್ವಿಧಸಾರಾಯಸ್ಥಲವು

೧೩) ಸೋಪಾಧಿದಾನಸ್ಥಲ :

ಶಿವಭಕ್ತನಾದವನು ಗುರು–ಲಿಂಗ–ಜಂಗಮರಿಗೆ ಭಕ್ತಿಯಿಂದ ತನ್ನ ಶಕ್ತ್ಯಾನುಸಾರವಾಗಿ ದಾನವನ್ನು ಮಾಡಬೇಕು. ಈ ದಾನವನ್ನು ಮಾಡುವಾಗ ಫಲಾಪೇಕ್ಷೆಯಿಂದ ಮಾಡಿದರೆ ಅದಕ್ಕೆ ಸೋಪಾಧಿಕದಾನವೆಂದು ಕರೆಯಲಾಗುತ್ತದೆ. ಇದು ಅಷ್ಟೊಂದು ಪ್ರಶಸ್ತವಾದ ದಾನವೆನಿಸಿಕೊಳ್ಳುವುದಿಲ್ಲ (ಸಿ.ಶಿ., ೯. ೭೯–೮೧)

೧೪) ನಿರುಪಾಧಿದಾನಸ್ಥಲ:

ತಾನು ದಾನವನ್ನು ಮಾಡುವಾಗ ಫಲದ ಅಪೇಕ್ಷೆಯನ್ನು ಇರಿಸದೆ ಕೇವಲ ಶಿವಾರ್ಪಣಬುದ್ಧಿಯಿಂದ ಮಾಡುವ ದಾನಕ್ಕೆ ದಾನವಿಶಾರದರು ನಿರುಪಾಧಿಕ ದಾನವೆಂದು ಕರೆದಿದ್ದಾರೆ. (ಸಿ.ಶಿ., ೯. ೮೨) ಈ ದಾನವು ಸೋಪಾಧಿಕ ದಾನಕ್ಕಿಂತಲೂ ಶ್ರೇಷ್ಠವಾದುದಾಗಿದೆ.

೧೫) ಸಹಜದಾನಸ್ಥಲ :

ನಾನು ಕೊಡುವವನು, ಅವನು ತೆಗೆದುಕೊಳ್ಳುವವನು, ಇದು ಕೊಡಲ್ಪಡುವ ವಸ್ತುವು ಎಂಬ ತ್ರಿಪುಟಿ ಭಾವವಿಲ್ಲದೇ ಎಲ್ಲವೂ ಶಿವಮಯವೆಂದು ಭಾವಿಸಿ ಅಂದರೆ ಕೊಡುವವನು ಶಿವನೇ, ಕೊಂಬುವವನು ಶಿವನೇ ಮತ್ತು ಕೊಡುವ ಪದಾರ್ಥವೂ ಸಹ ಶಿವರೂಪವೆಂಬ ಭಾವನೆಯಿಂದ ಸಹಜವಾಗಿ ಆಗುವ ದಾನಕ್ಕೆ ಸಹಜದಾನವೆಂದು ಕರೆಯುತ್ತಾರೆ. ಇದು ಎಲ್ಲ ದಾನಗಳಲ್ಲಿ ಉತ್ಕೃಷ್ಟವಾದುದು. ಇಂತಹ ದಾನವನ್ನು ಮಾಡುವುದರಿಂದ ದಾನಿಗೆ ಶಿವಜ್ಞಾನವು ಪ್ರಾಪ್ತವಾಗುವುದು. ಇದೂ ಅಲ್ಲದೆ ಶಿವನಿಗೆ ಅಥವಾ ಶಿವಭಕ್ತರಿಗೆ ನಾವು ಏನನ್ನೇ ಸಮರ್ಪಿಸಿದರೆ ಅದು ಸಹಜದಾನವೆಂದು ಕರೆಯಲ್ಪಡುತ್ತದೆ.

ಸತ್ಪಾತ್ರದಲ್ಲಿ ಸಾವಿರ ಸುವರ್ಣ ಮುದ್ರೆಗಳನ್ನು ಅರ್ಪಿಸಿದ ಫಲವು ಶಿವನಿಗೆ ಒಂದು ಪುಷ್ಪಾರ್ಚನೆಯನ್ನು ಮಾಡಿದ ಮಾತ್ರದಿಂದ ಲಭ್ಯವಾಗುವುದು. ಈ ಜಗತ್ತಿನಲ್ಲಿ

ಶಿವನೇ ಸರ್ವಶ್ರೇಷ್ಠವಾದ ಪಾತ್ರನಾಗಿದ್ದಾನೆ. ಅವನಿಗೆ ಅರ್ಪಿಸಿದ್ದೆಲ್ಲವೂ ಅನಂತ ಫಲದಾಯಕವಾಗುವುದು. ಇದೇ ಪ್ರಕಾರವಾಗಿ ಶಿವಯೋಗಿಯೂ ಸಹ ಸಾಕ್ಷಾತ್ ಶಿವಸ್ವರೂಪನೇ ಆಗಿರುವುದರಿಂದ ಅವನನ್ನು ಅನ್ನತೋಯಾದಿಗಳಿಂದ ತೃಪ್ತಿ ಪಡಿಸಿದರೆ ಸಾಕ್ಷಾತ್ ಶಿವನೇ ಸಂತೃಪ್ತನಾಗುವನು. ಶಿವನು ಸಂತೃಪ್ತನಾದನೆಂದರೆ ಚರಾಚರ ವಿಶ್ವವೆಲ್ಲವೂ ತೃಪ್ತಿಗೊಳ್ಳುವುದು. ಆದ್ದರಿಂದ ಸರ್ವಪ್ರಯತ್ನಪೂರ್ವಕವಾಗಿ ಶಿವಯೋಗಿಯನ್ನು ಸಂತೃಪ್ತಿಗೊಳಿಸಬೇಕು (ಸಿ.ಶಿ., ೯. ೮೩–೯೪) ಇದುವೇ ಸಹಜದಾನಸ್ಥಲವು.

ಇಲ್ಲಿಯವರೆಗೆ ಹೇಳಿದ ಪಿಂಡಸ್ಥಲವನ್ನು ಮೊದಲು ಮಾಡಿಕೊಂಡು ಸಹಜದಾನಸ್ಥಲದವರೆಗಿನ ಎಲ್ಲ ಆಚರಣೆಗಳನ್ನು ತನ್ನ ನಿತ್ಯ ಜೀವನದಲ್ಲಿ ಪ್ರತಿನಿತ್ಯ ಆಚರಿಸುವ ಈ ಷಟ್‌ಸ್ಥಲ ಸಾಧಕನಿಗೆ ಭಕ್ತನೆಂಬುದಾಗಿ ಕರೆಯುತ್ತಾರೆ. ಅಂದರೆ ಮೇಲಿನ ಎಲ್ಲ ಯೋಗ್ಯತಾ ಸಂಪನ್ನನೇ ಭಕ್ತನೆಂಬುದಾಗಿ ತಿಳಿದುಕೊಳ್ಳಬೇಕು.

ಮಾಹೇಶ್ವರಸ್ಥಲ

ಭಕ್ತಸ್ಥಲದ ಅನಂತರ ಬರುವಂತಹ ಎರಡನೆಯದಾದ ಸ್ಥಲವೇ ಮಾಹೇಶ್ವರ ಸ್ಥಲವು. ಮಹರ್ಷಿಯಾದ ಅಗಸ್ತ್ಯನು ಭಕ್ತನು ಮಾಹೇಶ್ವರನೆಂದು ಯಾವಾಗ ಕರೆಯಿಸಿಕೊಳ್ಳುತ್ತಾನೆ ಎಂಬುದಾಗಿ ಶ್ರೀ ಜಗದ್ಗುರು ರೇಣುಕ ಭಗವತ್ಪಾದರನ್ನು ಪ್ರಶ್ನಿಸಲು ಪೂಜ್ಯಪಾದರು–

ಕೇವಲೇ ಸಹಜೇ ದಾನೇ ನಿಷ್ಣಾತಃ ಶಿವತತ್ಪರಃ ।
ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃ ಸ್ಮೃತಃ ॥

(ಸಿ.ಶಿ., ೧೦–೨)

ಎಂದು ಉಪದೇಶಿಸಿದ್ದಾರೆ. ಈ ಪೂರ್ವದಲ್ಲಿ ಹೇಳಿದ ಸಹಜದಾನವನ್ನು ಸದಾ ಮಾಡುವ ಸ್ಥಿತಿಯನ್ನು ಇವನು ಯಾವಾಗ ಪಡೆಯುವನೋ ಆಗ ಭಕ್ತಸ್ಥಲದಿಂದ ಮಾಹೇಶ್ವರಸ್ಥಲವನ್ನು ಹೊಂದುವನು. ಅಂದರೆ ಕೊಡುವ–ಕೊಳ್ಳುವ ವ್ಯವಹಾರದಲ್ಲಿ ಸಂಪೂರ್ಣವಾದ ನಿರಭಿಮಾನತೆಯನ್ನು ಪಡೆದಾಗಲೇ ಭಕ್ತನು ಮಾಹೇಶ್ವರ ನಾಗುವನು. ಈ ಮಾಹೇಶ್ವರಸ್ಥಲದಲ್ಲಿಯೂ ಸಹ ಮಾಹೇಶ್ವರಪ್ರಶಂಸಾದಿ ಒಂಭತ್ತು ಅವಾಂತರಸ್ಥಲಗಳಿರುತ್ತವೆ. ಅವುಗಳನ್ನೇ ಇಲ್ಲಿ ಕ್ರಮವಾಗಿ ನಿರೂಪಿಸಲಾಗುವುದು.

೧೬) ಮಾಹೇಶ್ವರಪ್ರಶಂಸಾಸ್ಥಲ :

ಸಮಸ್ತ ದೇವ–ದಾನವಾದಿಗಳಲ್ಲಿ ಸರ್ವರನ್ನು ಅನುಗ್ರಹಿಸುವ ಶಿವನೇ ಎಲ್ಲರಿಗಿಂತಲೂ ದೊಡ್ಡವನು ಎಂಬುದಾಗಿ ಮಹೇಶ್ವರನಲ್ಲಿ ನಿಷ್ಠೆಯುಳ್ಳ ಭಕ್ತನೇ

ಮಾಹೇಶ್ವರನು. ಇವನು ಯಾವ ದೇವರನ್ನೂ ಶಿವನಿಗೆ ಸಮಾನವೆಂದು ಭಾವಿಸಲಾರನು. ಬ್ರಹ್ಮಾದಿ ದೇವತೆಗಳು ಮಾಯೆಯ ಮೋಹದಲ್ಲಿ ಸಿಲುಕಿ ಕೊಂಡಿರುತ್ತಾರೆ. ಅವರಾರೂ ಜೀವಿಗಳಿಗೆ ಮುಕ್ತಿ ಕೊಡಲು ಸಮರ್ಥರಲ್ಲ. ಅನಾದಿ ಮುಕ್ತನಾದ ಮಹೇಶ್ವರನೊಬ್ಬನೇ ಸರ್ವ ಜೀವಿಗಳಿಗೆ ಮುಕ್ತಿಯನ್ನು ದಯಪಾಲಿಸಬಲ್ಲನೆಂಬ ದೃಢಭಾವನೆಯುಳ್ಳವನೇ ಮಾಹೇಶ್ವರನು. ಬ್ರಹ್ಮ-ವಿಷ್ಣ್ವಾದಿ ಸ್ಥಾನಗಳು ಕ್ಷಯಾತಿಶಯಗಳಿಂದ ಕೂಡಿದವುಗಳೆಂದು ತಿಳಿದು ತೃಣದಂತೆ ಅವುಗಳ ಬಗ್ಗೆ ನಿರಪೇಕ್ಷೆಯುಳ್ಳ ಮಾಹೇಶ್ವರನು ವೀರಮಾಹೇಶ್ವರನೆಂದು ಕರೆಯಿಸಿಕೊಳ್ಳುವನು.

ಇವನು ಪರಸ್ತ್ರೀ, ಪರಧನದಿಂದ ಪರಾಙ್ಮುಖನಾಗಿರುವನು. ಶಿವಾಗಮ ಪಾರಂಗತನೂ, ಶುಚಿಯೂ, ನಿರಹಂಕಾರಿಯೂ, ಪಂಚಕ್ಲೇಶರಹಿತನೂ, ಮಾತ್ಸರ್ಯಾದಿ ದುರ್ಗುಣವರ್ಜಿತನೂ, ಸದಾ ಸಂತುಷ್ಟಹೃದಯನೂ, ಭೂತದಯಾಪರನೂ, ಶಿವನೋರ್ವನಲ್ಲಿಯೇ ಅತ್ಯಂತ ನಿಷ್ಠೆಯುಳ್ಳವನೂ ಆಗಿರುತ್ತಾನೆ. (ಸಿ.ಶಿ., ೧೦, ೧-೨೦) ಇದುವೇ ಮಾಹೇಶ್ವರಪ್ರಶಂಸಾಸ್ಥಲವು.

೧೭) ಲಿಂಗನಿಷ್ಠಾಸ್ಥಲ :

ಮಾಹೇಶ್ವರಸ್ಥಲದ ಸಾಧಕನು ಇಷ್ಟಲಿಂಗದಲ್ಲಿ ಅತ್ಯಂತ ನಿಷ್ಠೆಯುಳ್ಳವ ನಾಗಿರುತ್ತಾನೆ. ತನ್ನ ಸರ್ವಸ್ವವೂ ಅಪಹರಿಸಲ್ಪಡಲಿ ಅಥವಾ ಶಿರಚ್ಛೇದನವೇ ಆಗಲಿ ಆದರೆ ತನ್ನ ಲಿಂಗಪೂಜಾರೂಪವಾದ ಮಹಾವ್ರತವನ್ನು ಅವನೆಂದಿಗೂ ಬಿಡುವುದಿಲ್ಲ. ಲಿಂಗನಿಷ್ಠನಾದ ಈ ಮಾಹೇಶ್ವರನು ತನ್ನ ಹಸ್ತಗಳಿಂದ ಇಷ್ಟಲಿಂಗವನ್ನು ಪೂಜಿಸುತ್ತ, ತನ್ನ ವಾಣಿಯಿಂದ ಲಿಂಗದ ಸ್ತುತಿಗೈಯ್ಯುತ್ತ ಮತ್ತು ಮನಸ್ಸಿನಿಂದ ಲಿಂಗಧಾರಣವನ್ನೇ ಮಾಡುತ್ತಿರುತ್ತಾನೆ. ಹೀಗೆ ಇವನ ತ್ರಿಕರಣಗಳು ಲಿಂಗಸೇವೆಗಾಗಿಯೇ ಮೀಸಲಾಗಿರುತ್ತವೆ. (ಸಿ.ಶಿ., ೯. ೨೧-೨೯)

೧೮) ಪೂರ್ವಾಶ್ರಯನಿರಸನಸ್ಥಲ :

ಲಿಂಗನಿಷ್ಠನಾದ ಮಾಹೇಶ್ವರನು ತನ್ನ ಲಿಂಗನಿಷ್ಠೆಗೆ ವಿರೋಧಗಳಾಗಿ ತೋರುವ ಪೂರ್ವಾಶ್ರಮದ ಧರ್ಮಗಳನ್ನು ತ್ಯಜಿಸುವಂಥವನಾಗಿ ಪೂರ್ವಾಶ್ರಯ ನಿರಾಸಕನೆಂದು ಕರೆಯಲ್ಪಡುವನು. ಅಂದರೆ ಈ ಲಿಂಗದೀಕ್ಷೆಯನ್ನು ಪಡೆಯುವ ಪೂರ್ವದಲ್ಲಿ ತನ್ನ ಆಚರಣೆಯಲ್ಲಿದ್ದ ಸದ್ಯದ ಲಿಂಗ ನಿಷ್ಠೆಗೆ ವಿರೋಧವಾಗಿ ತೋರುವ ತನ್ನ ಮೊದಲಿನ ಕುಲಜಾತಿಯ ಆಚಾರ-ವಿಚಾರಗಳನ್ನು ಇವನು ತ್ಯಾಗ ಮಾಡುತ್ತಾನೆ. ಶಿವಸಂಸ್ಕಾರದಿಂದ ಪರಿಶುದ್ಧರಾದವರಿಗೆ ಪೂರ್ವಕಾಲದ ಪ್ರಾಕೃತಗಳಾದ ಧರ್ಮಾಚರಣೆಯಿಂದ ಅದಾವ ಪ್ರಯೋಜನವೂ ಇರುವುದಿಲ್ಲ. ಈ ಜಗತ್ತಿನಲ್ಲಿ ಶುದ್ಧವೆಂತಲೂ, ಪ್ರಾಕೃತವೆಂತಲೂ ಮನುಷ್ಯರು ಎರಡು ವಿಧವಾಗಿ

ಇರುತ್ತಾರೆ. ಶಿವಸಂಸ್ಕಾರವನ್ನು ಹೊಂದಿದವನು ಶುದ್ಧನೆಂದು ಕರೆಯಲ್ಪಟ್ಟರೆ ಉಳಿದವರು ಪ್ರಾಕೃತರೆನಿಸಿಕೊಳ್ಳುತ್ತಾರೆ. ಇಲ್ಲಿರುವ ವರ್ಣಾಶ್ರಮ ಪದ್ಧತಿಯೂ ಸಹ ಎರಡು ವಿಧವಾದುದಾಗಿರುತ್ತದೆ. ಒಂದು ಶಿವನಿಂದ ನಿರ್ದಿಷ್ಟವಾದುದು ಮತ್ತೊಂದು ಬ್ರಹ್ಮನಿಂದ ನಿರೂಪಿತವಾದುದು. ಶಿವಸಂಸ್ಕಾರಿಗಳಾದ ವೀರಶೈವರಿಗೆ ಶಿವೋಕ್ತ ವರ್ಣವ್ಯವಸ್ಥೆಯಾದರೆ ಉಳಿದವರಿಗೆ ಬ್ರಹ್ಮ ನಿರೂಪಿತವಾದ ವರ್ಣಾಶ್ರಮ ವ್ಯವಸ್ಥೆಯು ವಿಧಿಸಲ್ಪಡುತ್ತದೆ (ಸಿ.ಶಿ., ೧೦. ೩೦–೩೬). ಇಲ್ಲಿ ಶಿವಸಂಸ್ಕಾರವನ್ನು ಪಡೆದ ನಂತರ ತನ್ನ ಮೊದಲಿನ ವರ್ಣಾಶ್ರಮೋಚಿತಗಳಾದ ಆಚಾರಗಳನ್ನು ತ್ಯಜಿಸಿ ಶಿವಾಚಾರ ಸಂಪನ್ನನಾಗಿರಬೇಕೆಂಬುದಾಗಿ ಇಲ್ಲಿ ತಿಳಿಯಪಡಿಸಲಾಗಿದೆ.

೧೯) ಸರ್ವಾದ್ವೈತನಿರಸನಸ್ಥಲ

ಮಾಹೇಶ್ವರಸ್ಥಲದ ಸಾಧಕನು ಲಿಂಗಪೂಜಾನಿಷ್ಠನಾಗಿರುವುದರಿಂದ ಆ ಲಿಂಗನಿಷ್ಠೆಗೆ ವಿರೋಧವಾದ ಸರ್ವಾದ್ವೈತವನ್ನು ಆತನು ನಿರಸನಗೊಳಿಸುತ್ತಾನೆ. ಅಂತೆಯೇ ಅವನಿಗೆ ಸರ್ವಾದ್ವೈತ ನಿರಾಸಕನೆಂಬುದಾಗಿ ಕರೆಯಲಾಗಿದೆ. ಪೂಜಾದಿ ವ್ಯವಹಾರಗಳು ನಡೆಯಬೇಕಾದರೆ ಪೂಜ್ಯ–ಪೂಜಕರೆಂಬ ಭೇದವಿರಬೇಕಾಗುತ್ತದೆ. ಅದ್ವೈತವಿದ್ದಲ್ಲಿ ಈ ಪೂಜ್ಯ–ಪೂಜಕ ಭೇದವು ಸಂಭವಿಸುವುದಿಲ್ಲ. ಆದ್ದರಿಂದಲೇ ಈ ಮಾಹೇಶ್ವರನು ಅದ್ವೈತವನ್ನು ನಿರಾಕರಿಸುತ್ತಾನೆ. ಶಿವನು ಪತಿರೂಪನಾದರೆ ಜೀವನು ಪಶುರೂಪನಾಗಿರುತ್ತಾನೆ. ಇವರೀರ್ವರಲ್ಲಿರುವ ಈ ಸ್ವಾಮಿ–ಭೃತ್ಯಭಾವವು ಭೇದವಿದ್ದಾಗಲೇನೇ ಸಂಭವಿಸುವುದಲ್ಲದೆ ಅಭೇದವಿದ್ದಲ್ಲಿ ಸಂಭವಿಸಲಾರದು. ಇಷ್ಟಲಿಂಗಾದಿಗಳ ಪೂಜೆಯು ಒಂದು ಕರ್ಮವಾಗಿರುವುದರಿಂದ ಈ ಕರ್ಮ ವ್ಯವಹಾರಕ್ಕೆ ಭೇದಬುದ್ಧಿಯು ಅವಶ್ಯಕವಾದುದು. ಆದ್ದರಿಂದ ಲಿಂಗಪೂಜಾಸಕ್ತ ನಾದವನು ಅಂಗ–ಲಿಂಗಗಳಲ್ಲಿ ಅದ್ವೈತಭಾವನೆಯನ್ನು ತಾಳಕೂಡದು (ಸಿ.ಶಿ., ೧೦. ೩೭–೪೩) ಹೀಗೆ ಪೂಜಾರೂಪವಾದ ಕರ್ಮಕ್ಕೆ ವಿರೋಧವಾಗಿರುವ ಅದ್ವೈತವನ್ನು ನಿರಸನಮಾಡುವುದೇ ಸರ್ವಾದ್ವೈತನಿರಸನಸ್ಥಲ.

೨೦) ಆಹ್ವಾನನಿರಸನಸ್ಥಲ :

ಸದ್ಗುರುವು ಶಿವಕಲಾಸಂಯೋಜನ ಪೂರ್ವಕವಾಗಿ ಪ್ರಾಣಪ್ರತಿಷ್ಠಾಪನೆಯನ್ನು ಮಾಡಿ ಇಷ್ಟಲಿಂಗವನ್ನು ದಯಪಾಲಿಸಿದ ಮೇಲೆ ಈ ಮಾಹೇಶ್ವರಸ್ಥಲದ ಸಾಧಕನು ಪ್ರತಿದಿನವೂ ಆ ಇಷ್ಟಲಿಂಗಪೂಜೆಯನ್ನು ಮಾಡುವಾಗ ಅದರಲ್ಲಿ ಶಿವನನ್ನು ಆಹ್ವಾನಿಸುವುದಿಲ್ಲ. ಏಕೆಂದರೆ ಆ ಲಿಂಗದಲ್ಲಿ ಶಿವನ ನಿತ್ಯ ನಿವಾಸವಿರುವಾಗ ಅಲ್ಲಿ ಪುನಃ ಆಹ್ವಾನಿಸುವ ಅವಶ್ಯಕತೆಯಿರುವುದಿಲ್ಲ. ನೈಮಿತ್ತಿಕ ಪೂಜಾದಿಗಳನ್ನು ಮಾಡುವಾಗ ಅಡಿಕೆ ಮುಂತಾದ ಪದಾರ್ಥಗಳಲ್ಲಿ ಭಿನ್ನ ಭಿನ್ನ ದೇವರುಗಳನ್ನು

ಆಹ್ವಾನಿಸಿ ಪೂಜೆ ಮುಗಿದೊಡನೆ ಪುನಃ ವಿಸರ್ಜಿಸುವ ಪದ್ಧತಿಯಿರುತ್ತದೆ. ಆದರೆ ಇಷ್ಟಲಿಂಗದಲ್ಲಿ ಒಮ್ಮೆ ಗುರುವು ಶಿವನ ಆಹ್ವಾನವನ್ನು ಮಾಡಿಕೊಟ್ಟ ಬಳಿಕ ಅಲ್ಲಿ ವಿಸರ್ಜನೆಯೇ ಮಾಡಲ್ಪಡದಿರುವುದರಿಂದ ಅಲ್ಲಿ ಪುನಃ ಆಹ್ವಾನವನ್ನು ಮಾಡುವ ಪ್ರಸಂಗವು ಇರುವುದಿಲ್ಲ (ಸಿ.ಶಿ., ೧೦. ೪೪-೪೭) ಹೀಗೆ ಇಷ್ಟಲಿಂಗದಲ್ಲಿ ಪ್ರತಿಪತ್ತಿ ಅರ್ಥಾತ್ ಭಕ್ತಿಗೆ ವಿರೋಧವಾದ ಆಹ್ವಾನವನ್ನು ಅಲ್ಲಗಳೆಯುವ ಸ್ಥಲವೇ ಆಹ್ವಾನ ನಿರಸನಸ್ಥಲವು.

೨೧) ಅಷ್ಟಮೂರ್ತಿನಿರಸನಸ್ಥಲ :

ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಆತ್ಮ ಇವು ಎಂಟು ಶಿವನ ಅಷ್ಟತನುಗಳೆಂದು ಕರೆಯಲ್ಪಡುತ್ತವೆ. ಅಂದರೆ ಶಿವನೇ ಪೃಥಿವ್ಯಾದಿಗಳ ರೂಪದಲ್ಲಿ ವ್ಯಕ್ತನಾಗಿದ್ದಾನೆಂಬ ಭಾವವು. ಈ ವಿಚಾರದ ಪ್ರಕಾರವಾಗಿ ಪೃಥಿವ್ಯಾದಿ ಅಷ್ಟತನುಗಳೂ ಸಹ ಪೂಜ್ಯಗಳೆಂಬುದಾಗಿ ಹೇಳಬೇಕಾಗುತ್ತದೆ. ಮಾಹೇಶ್ವರಸ್ಥಲದ ಸಾಧಕನು ಇಷ್ಟಲಿಂಗದಲ್ಲಿ ಮಾತ್ರ ನಿಷ್ಠೆಯುಳ್ಳವನಾಗಿರುವುದರಿಂದ ಅವನು ಬೇರಾವುದನ್ನೂ ಪೂಜಿಸಬಾರದು. ಹಾಗೇನಾದರೂ ಅನ್ಯೋನ್ಯ ದೇವರನ್ನು ಪೂಜಿಸುತ್ತ ಹೋದರೆ ಅವನ ಲಿಂಗನಿಷ್ಠೆಗೆ ಬಾಧೆ ಬರುವುದು. ಅಂತೆಯೇ ಇಲ್ಲಿ ಶಿವನು ಅಷ್ಟಮೂರ್ತಿಯೆಂಬುದನ್ನು ನಿರಾಕರಿಸಲಾಗಿದೆ. ಆದ್ದರಿಂದ ಶಿವನು ಪೃಥಿವ್ಯಾದಿಗಳ ಸ್ವರೂಪನಾಗಿರದೆ ಪೃಥಿವ್ಯಾದಿಗಳ ಕರ್ತನಾಗಿರುತ್ತಾನೆ. ಕುಂಭಕಾರನು ತಾನು ಮಾಡಿದ ಮಡಿಕೆಯ ಸ್ವರೂಪನಾಗಿರದೆ ಅದಕ್ಕಿಂತಲೂ ಭಿನ್ನನಾಗಿರುವಂತೆ ಸೃಷ್ಟಿಕರ್ತನಾದ ಶಿವನು ಸೃಷ್ಟಿ ಸ್ವರೂಪನಾಗಿರದೆ ತದ್ಭಿನ್ನನಾಗಿರುತ್ತಾನೆ. ಪೃಥಿವ್ಯಾದಿಗಳು ಅಚೇತನ ಗಳಾಗಿರುವುದರಿಂದ ಮತ್ತು ಜೀವಾತ್ಮನು ಅಜ್ಞನೆನಿಸಿಕೊಂಡಿರುವುದರಿಂದ ಸರ್ವಜ್ಞನಾದ ಶಿವನೊಂದಿಗೆ ಅವುಗಳು ಅದು ಹೇಗೆ ತಾನೆ ಏಕರೂಪವಾಗಬಲ್ಲವು? ನಿತ್ಯವೂ ಚಿಂತನೆಗೈಯ್ಯುತ್ತ ಪರಮಾತ್ಮನನ್ನು ಪೃಥಿವ್ಯಾದಿಗಳಿಗಿಂತ ವಿಲಕ್ಷಣನೆಂಬುದಾಗಿ ತಿಳಿದುಕೊಂಡ ಮಾಹೇಶ್ವರನೇ ಅಷ್ಟಮೂರ್ತಿನಿರಾಸಕನೆಂದು ಕರೆಯಲ್ಪಡುತ್ತಾನೆ. (ಸಿ.ಶಿ., ೧೦. ೪೮-೫೪)

೨೨) ಸರ್ವಗತನಿರಸನಸ್ಥಲ :

ಶಿವನ ಸರ್ವತ್ರ ಸ್ಥಿತಿಯನ್ನು ನಿರಾಕರಿಸಿ ಕೇವಲ ಇಷ್ಟಲಿಂಗದಲ್ಲಿ ಮಾತ್ರ ನಿಷ್ಠೆಯನ್ನು ಹೇಳುವುದೇ ಸರ್ವಗತನಿರಸನಸ್ಥಲವು. ಒಂದು ವೇಳೆ ಶಿವನು ಸರ್ವತ್ರ ಇರುವನೆಂದು ಒಪ್ಪಿಕೊಂಡರೆ ಎಲ್ಲೆಡೆಯಲ್ಲಿ ಶಿವನನ್ನು ಆರಾಧಿಸ ಬೇಕಾಗುವುದು. ಆದ್ದರಿಂದ ಇಲ್ಲಿ ಶಿವನ ಸರ್ವಗತತ್ತ್ವವನ್ನು ನಿರಾಕರಿಸಲಾಗಿದೆ. ಯದ್ಯಪಿ ಶಿವನು ವ್ಯಾಪಕ ಸ್ವರೂಪನಾಗಿರುವುದರಿಂದ ಅವನ ಸ್ಥಿತಿಯು ಸರ್ವತ್ರ ಇರುವುದಾದರೂ

ಅವನು ತನ್ನ ಆಧಾರದಲ್ಲಿ ವಿಶೇಷವಾಗಿ ಅಭಿವ್ಯಕ್ತನಾಗುತ್ತಾನೆ. ಆದ್ದರಿಂದ ಮಾಹೇಶ್ವರನು ಅನ್ಯಸ್ಥಾನಗಳನ್ನು ಪರಿತ್ಯಜಿಸಿ ಇಷ್ಟಲಿಂಗವೊಂದರಲ್ಲಿಯೇ ಆತನನ್ನು ಅರ್ಚಿಸಬೇಕು. ಅಗ್ನಿಯು ಸರ್ವತ್ರ ವ್ಯಾಪಕವಾಗಿದ್ದರೂ ಶಮೀಕಟ್ಟಿಗೆಯಲ್ಲಿ ವಿಶೇಷವಾಗಿ ಅಭಿವ್ಯಕ್ತವಾಗುವಂತೆ ಸರ್ವತ್ರ ವ್ಯಾಪಕನಾದ ಶಿವನು ಇಷ್ಟಲಿಂಗದಲ್ಲಿ ವಿಶೇಷವಾಗಿ ಅಭಿವ್ಯಕ್ತವಾಗುತ್ತಾನೆ. ಸರ್ವಶಾಸ್ತ್ರಗಳಲ್ಲಿ ಶಿವನ ಸರ್ವಗತತ್ವವು ಪ್ರತಿಪಾದಿಸಲ್ಪಟ್ಟಿದ್ದರೂ ಇಷ್ಟಲಿಂಗದ ಪೂಜೆಗಾಗಿ ಇಲ್ಲಿ ಆತನ ಸರ್ವಗತತ್ವವನ್ನು ನಿರಾಕರಿಸಲಾಗಿದೆ. ಆದ್ದರಿಂದ ಮಾಹೇಶ್ವರನು ಸರ್ವಸ್ಥಾನ ಪರಾಙ್ಮುಖನಾಗಿ ಕೇವಲ ಇಷ್ಟಲಿಂಗವೊಂದರಲ್ಲಿಯೇ ಶಿವನನ್ನು ಪೂಜಿಸಬೇಕು. (ಸಿ.ಶಿ., ೧೦. ೫೫–೬೧) ಇದುವೇ ಸರ್ವಗತನಿರಸನಸ್ಥಲವು. ಕಲ್ಲುದೇವರು ದೇವರಲ್ಲ, ಮಣ್ಣು ದೇವರು ದೇವರಲ್ಲ ಎಂಬ ವಚನದಲ್ಲಿ ಶ್ರೀ ಬಸವಣ್ಣನವರು ಶಿವನ ಸರ್ವಗತತ್ವವನ್ನು ನಿರಾಕರಿಸಿ ಮಾಹೇಶ್ವರನ ಲಿಂಗನಿಷ್ಠೆಯನ್ನು ಪ್ರತಿಪಾದಿಸಿದ್ದು ಕಂಡುಬರುತ್ತದೆ.

೨೩) ಶಿವಜಗನ್ಮಯಸ್ಥಲ :

ಇಷ್ಟಲಿಂಗನಿಷ್ಠನಾದ ಮಾಹೇಶ್ವರನು ಪೂಜೆಯನ್ನು ಕೇವಲ ಇಷ್ಟಲಿಂಗಕ್ಕೆ ಮಾಡುತ್ತ ಶಿವನನ್ನು ಮಾತ್ರ ಸರ್ವವ್ಯಾಪಕನನ್ನಾಗಿ ಭಾವಿಸುವ ಸ್ಥಲವೇ ಶಿವಜಗನ್ಮಯ ಸ್ಥಲವು. ಮಣ್ಣಿನಿಂದ ಉತ್ಪನ್ನವಾದ ಮಡಿಕೆಯು ಮಣ್ಣಿಗಿಂತಲೂ ಭಿನ್ನವಾಗಿರದಂತೆ, ತಂತುವಿನಿಂದ ಉತ್ಪನ್ನವಾದ ಪಟವು ಅರ್ಥಾತ್ ವಸ್ತ್ರವು ತಂತುಮಯವಾಗಿರುವಂತೆ ಶಿವನಿಂದ ಉತ್ಪನ್ನವಾದ ಜಗತ್ತು ಶಿವಸ್ವರೂಪವೇ ಆಗಿರುತ್ತದೆ. ಪಟವು ಪ್ರಸಾರಣದಿಂದ ಕುಟೀರೂಪವನ್ನು ಅರ್ಥಾತ್ ಡೇರೆಯ ರೂಪವನ್ನು ತಾಳುವಂತೆ ಆತ್ಮಶಕ್ತಿಯ ವಿಕಾಸದಿಂದ ಶಿವನು ವಿಶ್ವ ಸ್ವರೂಪನಾಗಿರುತ್ತಾನೆ. ಪತ್ರೆ–ಶಾಖಾದಿಗಳ ರೂಪದಲ್ಲಿ ವೃಕ್ಷವೇ ತೋರುವಂತೆ ಭೂಮ್ಯಾದಿಗಳ ರೂಪದಲ್ಲಿ ಶಿವನೇ ತೋರುತ್ತಿರುತ್ತಾನೆ. ಹೀಗೆ ಶಿವನಿಂದ ಉತ್ಪನ್ನವಾದ ಈ ಜಗತ್ತು ಶಿವಮಯವೆಂದು ಹೇಳುವ ಸ್ಥಲವೇ ಶಿವಜಗನ್ಮಯಸ್ಥಲವು. (ಸಿ.ಶಿ., ೧೦. ೬೨–೭೦) "ಎತ್ತತ್ತ ನೋಡಿದತ್ತತ್ತ ನೀನೇ ದೇವಾ, ಸಕಲ ವಿಸ್ತಾರದ ರೂಹೂ ನೀನೇ ದೇವಾ" ಎಂಬ ಈ ವಚನದಲ್ಲಿ ಶ್ರೀ ಬಸವಣ್ಣನವರು ಮಾಹೇಶ್ವರನ ಶಿವಜಗನ್ಮಯಸ್ಥಿತಿಯನ್ನು ಕುರಿತು ವರ್ಣಿಸಿರುವುದನ್ನು ಕಾಣಬಹುದು.

೨೪) ಭಕ್ತದೇಹಿಕಲಿಂಗಸ್ಥಲ :

ಭಕ್ತನ ದೇಹದಲ್ಲಿ ಅರ್ಥಾತ್ ಹೃದಯದಲ್ಲಿ ಶಿವನ ಅಸ್ತಿತ್ವವನ್ನು ಹೇಳುವ ಸ್ಥಲವೇ ಭಕ್ತದೇಹಿಕಲಿಂಗಸ್ಥಲವು. ಪರಮೇಶ್ವರನು ಸಮಸ್ತವಾದ ಜಗತ್ತಿನಲ್ಲಿ ವ್ಯಾಪಿಸಿಕೊಂಡಿದ್ದರೂ ಆತನು ಭಕ್ತರ ಹೃದಯದಲ್ಲಿ ವಿಶೇಷವಾಗಿ

ವಿರಾಜಿಸುತ್ತಿರುತ್ತಾನೆ. ಕೈಲಾಸ ಪರ್ವತ, ಮಂದರಾಚಲ, ಹಿಮಾಲಯ, ಮೇರು ಪರ್ವತ ಮತ್ತು ಭಕ್ತರ ಹೃದಯಗಳು ಪರಮಾತ್ಮನ ವಿಶೇಷವಾದ ಅಭಿವ್ಯಕ್ತಿಯ ಸ್ಥಾನಗಳಾಗಿರುತ್ತವೆ. ಸರ್ವಾತ್ಮನಾದ ಶಿವನು ತನ್ನ ಲೀಲೆಯಿಂದ ಪರಿಚ್ಛಿನ್ನನಾಗಿ ಭಕ್ತರ ಹೃದಯದಲ್ಲಿ ವಾಸಿಸುತ್ತಿರುತ್ತಾನೆ. ಪವಿತ್ರರಾದ ವೈರಾಗ್ಯಶೀಲರಾದ, ವಿವೇಕಿಗಳಾದ ಮತ್ತು ಶಿವಲಾಂಛನಧಾರಿಗಳಾದ ಮಹಾತ್ಮರಲ್ಲಿ ಶಿವನು ಸದಾ ಇರುವಂಥವನಾಗಿರುತ್ತಾನೆ. ಇದೇ ಪ್ರಕಾರವಾಗಿ ಸದಾ ಸಂತುಷ್ಟಚಿತ್ತರಾಗಿರುವ ಕಲ್ಮಷಶೂನ್ಯರಾದ ಮಾಹೇಶ್ವರರ ಹೃದಯದಲ್ಲಿ ಅರ್ಥಾತ್ ಮಾಹೇಶ್ವರಸ್ಥಲದ ಸಾಧಕರ ಹೃದಯದಲ್ಲಿ ಪರಮೇಶ್ವರನು ನಿತ್ಯವೂ ವಾಸಿಸುವಂಥವನಾಗಿರುತ್ತಾನೆ. (ಸಿ.ಶಿ., ೧೦. ೭೧-೭೬) ಹೀಗೆ ಭಕ್ತನ ದೇಹದಲ್ಲಿ ಅರ್ಥಾತ್ ಹೃದಯದಲ್ಲಿ ಶಿವನ ಅಸ್ತಿತ್ವವನ್ನು ಹೇಳುವ ಸ್ಥಲವೇ ಭಕ್ತದೇಹಿಕಲಿಂಗಸ್ಥಲವು.

ಇಲ್ಲಿಯವರೆಗೆ ಮಾಹೇಶ್ವರನ ಪ್ರಶಂಸೆಯನ್ನೇ ಮೊದಲುಗೊಂಡು ಲಿಂಗ ದೇಹಿಕಸ್ಥಲದವರೆಗಿನ ಒಂಭತ್ತು ಅವಾಂತರಸ್ಥಲಗಳಲ್ಲಿ ಮಾಹೇಶ್ವರನ ಪರಿಪೂರ್ಣ ವಾದ ಸ್ಥಿತಿಯೂ ವಿವರಿಸಲ್ಪಟ್ಟಿದೆ. ಈ ಸ್ಥಲದ ಸಾಧಕನಲ್ಲಿ ನಿಷ್ಠಾಭಕ್ತಿಯು ವಿಶೇಷವಾಗಿ ಎದ್ದು ತೋರುವುದರಿಂದ ಆ ನಿಷ್ಠೆಗೆ ವಿರೋಧವಾಗುವ ವಿಚಾರಗಳನ್ನು ಅಲ್ಲಗಳೆದು ಅದಕ್ಕೆ ಅನುಕೂಲವಾಗುವ ವಿಷಯಗಳನ್ನು ಸಶಾಸ್ತ್ರೀಯವಾಗಿ ಪ್ರತಿಪಾದಿಸಲಾಗಿದೆ. ಅಂತೆಯೇ ಈ ಸ್ಥಲದ ಸಾಧಕನು ಪೂಜಾದಿಗಳನ್ನು ಇಷ್ಟಲಿಂಗಕ್ಕೆ ಮಾಡುತ್ತ ಶಿವನನ್ನು ಸರ್ವತ್ರ ಭಾವಿಸುವ ಸ್ಥಿತಿಯನ್ನು ಹೊಂದಿಕೊಂಡಿರುತ್ತಾನೆ. ಇದುವೇ ಮಾಹೇಶ್ವರಸ್ಥಲವು.

ಪ್ರಸಾದಿಸ್ಥಲ

ಮಹರ್ಷಿಯಾದ ಅಗಸ್ತ್ಯನು ಇಲ್ಲಿಯವರೆಗೆ ಮಾಹೇಶ್ವರಸ್ಥಲದ ವಿಚಾರ ವನ್ನರಿತು ಈ ಮಾಹೇಶ್ವರನೇ ಅದು ಹೇಗೆ ತಾನೇ ಮುಂದಿನದಾದ ಪ್ರಸಾದಿ ಸ್ಥಿತಿಯನ್ನು ಪಡೆದುಕೊಳ್ಳುವನು? ಎಂಬುದಾಗಿ ಪ್ರಶ್ನಿಸಲು ಪೂಜ್ಯಪಾದರಾದ ರೇಣುಕ ಭಗವತ್ಪಾದರು–

ಲಿಂಗನಿಷ್ಠಾದಿಭಾವೇನ ಧ್ವಸ್ತಪಾಪನಿಬಂಧನಃ ।
ಮನಃ ಪ್ರಸಾದಯೋಗೇನ ಪ್ರಸಾದೀತ್ಯೇಷ ಕಥ್ಯತೇ ॥

(ಸಿ.ಶಿ., ೧೧-೨)

ಎಂಬುದಾಗಿ ಉಪದೇಶಿಸಿದ್ದಾರೆ. ಅಂದರೆ ಲಿಂಗನಿಷ್ಠೆಯುಳ್ಳ ಮಾಹೇಶ್ವರನು ತನ್ನ ಪಾಪಗಳನ್ನೆಲ್ಲ ಕಳೆದುಕೊಂಡು ಮನಸ್ಸಿನಲ್ಲಿ ಸದಾ ಪ್ರಸನ್ನತೆಯನ್ನು ಯಾವಾಗ ಪಡೆದುಕೊಳ್ಳುವನೋ ಆಗ ಅವನು ಪ್ರಸಾದಿಯೆಂಬುದಾಗಿ ಕರೆಯಲ್ಪಡುತ್ತಾನೆ.

ಈ ಪ್ರಸಾದಿಸ್ಥಲದಲ್ಲಿಯೂ ಏಳು ವಿಧವಾದ ಅವಾಂತರಸ್ಥಲಗಳಿರುತ್ತವೆ. ಅವುಗಳನ್ನೇ ಇಲ್ಲಿ ಕ್ರಮವಾಗಿ ವಿವೇಚಿಸಲಾಗುವುದು.

೨೫) ಪ್ರಸಾದಿಸ್ಥಲ :

ಮನಸ್ಸಿನ ಪ್ರಸನ್ನತೆಯ ಲಕ್ಷಣಕ್ಕೆ ಪ್ರಸಾದವೆಂದು ಕರೆಯುತ್ತಾರೆ. ಲಿಂಗರೂಪನಾದ ಶಿವನ ಪ್ರಸಾದವನ್ನು ಸ್ವೀಕರಿಸುವುದರಿಂದ ಮನಸ್ಸು ಪ್ರಸನ್ನವಾಗುವುದು. ಶಿವನಿಗೆ ನಿವೇದಿಸಲ್ಪಟ್ಟ ಯಾವ ನಿರ್ಮಾಲ್ಯವಿರುವುದೋ ಅದಕ್ಕೆ ಶಿವಪ್ರಸಾದವೆಂದು ಕರೆಯುತ್ತಾರೆ. ಈ ಶಿವನಿರ್ಮಾಲ್ಯವೇ ಶಿವಭಕ್ತರ ಮನಸ್ಸಿನ ನಿರ್ಮಲತೆಗೆ ಕಾರಣವಾಗಿರುತ್ತದೆ. ಮನಸ್ಸನ್ನು ಪ್ರಸನ್ನಗೊಳಿಸುವ ಮತ್ತು ನಿರ್ಮಲವಾದ ಜ್ಞಾನವನ್ನುಂಟುಮಾಡುವ ಶಿವನ ಪ್ರಸಾದವನ್ನು ಸ್ವೀಕರಿಸುವವನು ಪ್ರಸಾದಿ ಎಂದು ಕರೆಯಲ್ಪಡುತ್ತಾನೆ. ಅನ್ನವು ಪರಿಶುದ್ಧವಾಗಿದ್ದರೆ ಅದನ್ನು ಸೇವಿಸಿದವರ ಮನಸ್ಸು ಪರಿಶುದ್ಧವಾಗಿರುತ್ತದೆ. ಅನ್ನ, ಜಲಾದಿಗಳು ಶುದ್ಧವಾಗ ಬೇಕಾದರೆ ಶಿವನಿಗೆ ಸಮರ್ಪಿಸಬೇಕಾಗುವುದು. ಹೀಗೆ ಲಿಂಗತತ್ಪರನಾದ ಈ ಪ್ರಸಾದಿಯು ಸದಾ ಈ ಲಿಂಗ ಪ್ರಸಾದವನ್ನು ಸೇವಿಸುವಂಥವನಾಗಿ ಜ್ಞಾನೋತ್ಪತ್ತಿಗೆ ಕಾರಣವಾದ ಮನಸ್ಸಿನ ಪ್ರಸನ್ನತೆಯನ್ನು ಪಡೆದುಕೊಳ್ಳುತ್ತಾನೆ. ತನ್ನ ಉಪಭೋಗಕ್ಕಾಗಿ ದೊರೆಯುವ ಪ್ರತಿಯೊಂದು ಪದಾರ್ಥವನ್ನು ತನ್ನ ಇಷ್ಟದೇವರಿಗೆ ಸಮರ್ಪಿಸಿ ಅದನ್ನು ಪ್ರಸಾದವನ್ನಾಗಿಸಿಕೊಂಡು ಸೇವಿಸಬೇಕು. ಹೀಗೆ ಮಾಡುವುದರಿಂದ ಚಿತ್ತವು ಪರಿಶುದ್ಧವಾಗುವುದು.

ಶಿವನು ಜನ್ಮ-ಮರಣರಹಿತನಾಗಿದ್ದು ಜೀವಿಗಳ ಜನ್ಮ-ಮರಣವೆಂಬ ಭವರೋಗವನ್ನು ದೂರಮಾಡುವ ವೈದ್ಯನಾಗಿರುತ್ತಾನೆ. ಅಂತಹ ವೈದ್ಯನಾಥ ರೂಪವಾದ ತನ್ನ ಇಷ್ಟಲಿಂಗಕ್ಕೆ ಅರ್ಪಿಸಿದ ಪ್ರಸಾದವೆಂದರೆ ಭವರೋಗವನ್ನು ಕಳೆಯುವ ಒಂದು ಶ್ರೇಷ್ಠವಾದ ರಸಾಯನ ಔಷಧವಿದ್ದಂತೆ. ಈ ಶಿವನ ಪ್ರಸಾದವನ್ನು ಸೇವಿಸುವುದರಿಂದ ಉತ್ತಮವಾದ ಆರೋಗ್ಯವು, ಅಂತಃಕರಣಗಳ ಶುದ್ಧಿಯು, ತಾಪತ್ರಯಗಳ ನಿವಾರಣೆಯು, ಉತ್ತಮವಾದ ಜ್ಞಾನವು, ಮೋಹದ ನಾಶವು, ವೈರಾಗ್ಯದ ಪ್ರಾಪ್ತಿಯು ಮತ್ತು ಪರಮಾನಂದದ ವೃದ್ಧಿಯೂ ಉಂಟಾಗುವುದು. ಇಂತಹ ಈ ಶಿವಪ್ರಸಾದವು ಪರಿಶುದ್ಧರಾದ ಶಿವಭಕ್ತರಿಗೆ ಸುಲಭವಲ್ಲದೆ ಪಾಪಿಗಳಿಗೆ ಅದೆಂದೂ ದೊರೆಯದು. ಬ್ರಹ್ಮಾದಿ ದೇವತೆಗಳು ಮತ್ತು ವಶಿಷ್ಠಾದಿ ಮಹರ್ಷಿಗಳು ಇಂತಹ ಶಿವಪ್ರಸಾದದಿಂದಲೇ ಅನಂತ ಐಶ್ವರ್ಯರೂಪಗಳಾದ ಸಿದ್ಧಿಗಳನ್ನು ಪಡೆದು ಕೊಂಡಿರುತ್ತಾರೆ. ಎಲೆ, ಹೂವು, ಹಣ್ಣು ಮತ್ತು ನೀರು ಇವುಗಳಲ್ಲಿ ಯಾವುದನ್ನಾದರೂ ಶಿವನಿಗೆ ನಿವೇದಿಸಿ ಆ ಶಿವಪ್ರಸಾದವನ್ನು ಸ್ವೀಕರಿಸಿದರೆ ಸರ್ವಪಾಪಗಳ

ಕ್ಷಯವಾಗುವುದು. ಈ ಪ್ರಸಾದಿಸ್ಥಲದ ಸಾಧಕನು ತನ್ನ ಲಿಂಗಪ್ರಸಾದವನ್ನು ಸೇವಿಸುವಂತೆ ಗುರು ಮತ್ತು ಜಂಗಮರ ಪ್ರಸಾದವನ್ನೂ ಸಹ ಸೇವಿಸಬೇಕು (ಸಿ.ಶಿ., ೧೧. ೩–೧೮). ಹೀಗೆ ವಿವರಿಸಿದ ಪ್ರಸಾದವನ್ನು ಸ್ವೀಕರಿಸುವವನೇ ಪ್ರಸಾದಿ ಎಂಬುದಾಗಿ ತಿಳಿದುಕೊಳ್ಳಬೇಕು.

೨೬) ಗುರುಮಾಹಾತ್ಮ್ಯಸ್ಥಲ :

ಈ ಜಗತ್ತಿನಲ್ಲಿ ಭೋಗ–ಮೋಕ್ಷಾದಿಗಳು ದೊರೆಯಬೇಕಾದರೆ ಗುರುವೇ ಮೂಲ ಕಾರಣನಾಗಿರುತ್ತಾನೆ. ಗುರುವಿಗಿಂತಲೂ ಅಧಿಕರಾರೂ ಇಲ್ಲ. ಸಾಕ್ಷಾತ್ ಪರಮೇಶ್ವರನೇ ಭೂಲೋಕದಲ್ಲಿ ಗುರುವಾಗಿ ಅವತರಿಸಿರುತ್ತಾನೆ. ಸಚ್ಚಿದಾನಂದ ಸ್ವರೂಪನಾದ ನಿಷ್ಕಲ್ಮಷನಾದ ಆ ಶಿವನೇ ಭಕ್ತರನ್ನು ಅನುಗ್ರಹಿಸುವುದಕ್ಕೋಸುಗ ಸಾಕಾರವಾಗಿ ಗುರುರೂಪನಾಗಿರುತ್ತಾನೆ. ಆದ್ದರಿಂದ ಶಿವನೇ ಗುರುವು, ಗುರುವೇ ಶಿವನು. ಇವರೀರ್ವರಲ್ಲಿ ಭೇದವನ್ನು ಮಾಡಕೂಡದು. ಈರ್ವರನ್ನು ಅಭೇದಬುದ್ಧಿಯಿಂದ ನೋಡುವ ಬುದ್ಧಿಶಾಲಿಯು ಶ್ರೇಷ್ಠವಾದ ಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಕರ–ಚರಣಾದಿ ಅವಯವಗಳ ಸಾಮ್ಯತೆಯಿಂದ ಗುರುವನ್ನು ಬೇರಾವ ನರನೊಂದಿಗೆ ಹೋಲಿಸಕೂಡದು. ತನ್ನನ್ನು ಆಶ್ರಯಿಸಿದ ಶಿಷ್ಯರಿಗೆ ಪರಿಶುದ್ಧವಾದ ಜ್ಞಾನವನ್ನು ಮಾಡಿಕೊಡುವ ಈ ಆಚಾರ್ಯನು ಸಾಕ್ಷಾತ್ ಶಿವಸ್ವರೂಪನೇ ಆಗಿರುತ್ತಾನೆ. ಗುರುವನ್ನು ಅಪಮಾನಗೊಳಿಸಿದರೆ ಶಿಷ್ಯನ ಎಲ್ಲ ಶ್ರೇಯಗಳು ಅಂದರೆ ಇಹಲೋಕದ ಭೋಗಭಾಗ್ಯಗಳು ಮತ್ತು ಪರಲೋಕದ ಮುಕ್ತಿಯು ಇಲ್ಲವಾಗಿ ಹೋಗುವುದು. ಆದ್ದರಿಂದ ತನ್ನ ಶ್ರೇಯಸ್ಸನ್ನು ಅಪೇಕ್ಷಿಸುವ ಶಿಷ್ಯನು ಸದಾ ಗುರುವಿಗೆ ವಿಧೇಯನಾಗಿ ಅವನನ್ನು ಪೂಜಿಸಿ ಅವನ ಅನುಗ್ರಹವನ್ನು ಪಡೆದುಕೊಳ್ಳಬೇಕು. ಗುರು–ಭಕ್ತಿ ಇಲ್ಲದವನಿಗೆ ಶಿವಭಕ್ತಿಯು ಅದೆಂದೂ ಉಂಟಾಗುವುದಿಲ್ಲ. ಆದ್ದರಿಂದ ಶಿವನಲ್ಲಿ ಶ್ರದ್ಧೆ ಇರುವಂತೆ ಅದಕ್ಕೂ ಪೂರ್ವದಲ್ಲಿ ಗುರುವಿನಲ್ಲಿ ಭಕ್ತಿ ಸಂಪನ್ನನಾಗಿರಬೇಕು (ಸಿ.ಶಿ., ೧೧. ೧೯–೨೪) ಇದುವೇ ಗುರುಮಾಹಾತ್ಮ್ಯಸ್ಥಲವು. ಶ್ರೀ ಬಸವಣ್ಣನವರು – “ಶಿವಪಥವನರಿವೊಡೆ ಗುರುಪಥವೇ ಮೊದಲು” ಎಂಬ ತಮ್ಮ ಈ ವಚನದಲ್ಲಿ ಪ್ರಸಾದಿಸ್ಥಲದ ಗುರುಮಹಾತ್ಮ್ಯವನ್ನು ಕುರಿತು ವರ್ಣಿಸಿದ್ದನ್ನು ಕಾಣಬಹುದು.

೨೭) ಲಿಂಗಮಾಹಾತ್ಮ್ಯಸ್ಥಲ :

ಗುರುವಿಗೆ ಮಹತ್ತ್ವವಿರುವಷ್ಟು ಲಿಂಗಕ್ಕೂ ಸಹ ಮಹತ್ತ್ವವನ್ನು ಹೇಳುವ ಸ್ಥಲವೇ ಲಿಂಗಮಾಹಾತ್ಮ್ಯಸ್ಥಲವು. ಗುರುವಿನಿಂದ ಬೋಧವನ್ನು ಪಡೆದಾಗ ಶಿಷ್ಯನ ಮನಸ್ಸಿನಲ್ಲಿ ಉಂಟಾಗುವ ಶಿವಜ್ಞಾನವೇ ಜ್ಞಾನರೂಪವಾದ ಲಿಂಗವೆಂದು ಕರೆಯಲ್ಪಡುತ್ತದೆ. ಈ ಜ್ಞಾನಲಿಂಗವೇ ಸರ್ವಕ್ಕೂ ಕಾರಣವಾಗಿರುತ್ತದೆ. ಆದ್ದರಿಂದ

ಸದ್ಗುರುವಿಗೆ ಶರಣಾಗತನಾಗಿ ಶಿವನ ಬೋಧರೂಪವಾದ ಈ ಲಿಂಗವನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು. ಈ ಬೋಧಕ್ಕೆ 'ಚಿಲ್ಲಿಂಗ' ವೆಂತಲೂ ಕರೆಯುತ್ತಾರೆ. ಇದು ಸರ್ವಶ್ರೇಷ್ಠವೂ, ಪರಮ ಪವಿತ್ರವೂ, ಸನಾತನವೂ, ಸಚ್ಚಿದಾನಂದ ಸ್ವರೂಪವೂ, ನಿರಂಕುಶರೂಪವೂ ಆಗಿರುತ್ತದೆ. ಈ ಲಿಂಗದಿಂದಲೇ ಸರ್ವಲೋಕಗಳೂ, ವೇದಾದಿ ಶಾಸ್ತ್ರಗಳು ಪ್ರಾದುರ್ಭವಿಸಿರುತ್ತವೆ. ಈ ಲಿಂಗದಿಂದ ಜನನ–ಮರಣರೂಪವಾದ ಸಂಸಾರಸಾಗರವು ಇಲ್ಲದಾಗುವುದು. ಜ್ಯೋತಿ ಸ್ವರೂಪವಾದ, ಅಗೋಚರವಾದ ಯೋಗಿಗಳಿಗೆ ಮಾತ್ರ ಅನುಭವಗೋಚರ ವಾಗುತ್ತಿರುವ ಇಂತಹ ಈ ಚಿಲ್ಲಿಂಗದ ಜ್ಞಾನವು ಮಹಾಗುರುವಿನ ಕರುಣೆಯಿಲ್ಲದೆ ದೊರೆಯಲಾರದು. ಪೂರ್ವಕಾಲದಲ್ಲಿ ಬ್ರಹ್ಮ ಮತ್ತು ವಿಷ್ಣುಗಳು ಆ ಜ್ಯೋತಿರ್ಲಿಂಗದ ಪಾದ–ಮಸ್ತಕಗಳನ್ನು ಕಾಣಲು ಪರಿಶ್ರಮಿಸಿ ಕೊನೆಗೂ ಕಾಣದಾದರು. ಇಂತಹ ಅಗೋಚರವಾದ, ಅಪರಿಚ್ಛಿನ್ನವಾದ ಆ ಲಿಂಗವನ್ನು ಯಾರು ತಾನೆ ತಿಳಿಯಲು ಸಮರ್ಥರಾದಾರು? ಅಂದರೆ ಗುರುವಿನ ಕೃಪೆಯಿಲ್ಲದೆ ಅದಾರೂ ತಿಳಿಯರಾರೆಂಬ ತಾತ್ಪರ್ಯವು. ಒಟ್ಟಿನಲ್ಲಿ ಹೇಳುವುದಾದರೆ ಸನಾತನವಾದ ಪರಶಿವಬ್ರಹ್ಮವೇ ಲಿಂಗವೆಂದು ತಿಳಿದುಕೊಳ್ಳಬೇಕು. ಮಹಾ ಮಹಾ ಶಿವಯೋಗಿಗಳು ಕೊನೆಗೆ ತಮ್ಮ ಎಲ್ಲ ಬಂಧನಗಳನ್ನು ಕಳೆದುಕೊಂಡು ಈ ಲಿಂಗದೊಂದಿಗೇನೇ ಸಮರಸ ವಾಗುವರು.

ಲಿಂಗದ ಪೀಠಿಕೆಯು ಶಕ್ತಿರೂಪವಾದರೆ ಮೇಲಿನ ಬಾಣವು ಸಾಕ್ಷಾತ್ ಶಿವ ಸ್ವರೂಪವಾಗಿರುತ್ತದೆ. ಹೀಗೆ ಶಿವ–ಶಕ್ತಿಸ್ವರೂಪವಾದ ಈ ವಿಶ್ವವೆಲ್ಲವೂ ಲಿಂಗರೂಪವೇ ಆಗಿರುತ್ತದೆ. ಬ್ರಹ್ಮಾದಿ ದೇವತೆಗಳು, ಶೌನಕಾದಿ ಮಹರ್ಷಿಗಳು ಇಂತಹ ಸರ್ವ ವ್ಯಾಪಕವಾದ ಶಿವಲಿಂಗದ ಅರ್ಚನೆಯಿಂದಲೇ ತಮ್ಮ ತಮ್ಮ ಸ್ಥಾನಗಳನ್ನು ಪಡೆದು ಕೊಂಡಿರುತ್ತಾರೆ. ಲಿಂಗರೂಪನಾದ ಶಿವನಿಗೆ ದೊರೆತಿರುವ ವಿಶ್ವಾಧಿಪತಿತ್ವವು ಸ್ವಾಭಾವಿಕ ವಾದುದು. ಅದರಿಂದಲೂ ಇವನಿಗೆ ಪ್ರಾಪ್ತವಾದುದಲ್ಲ. ಅಂತೆಯೇ ಈ ಸರ್ವವ್ಯಾಪಕವಾದ ಈ ಚಿಲ್ಲಿಂಗವೇ ಸರ್ವಶ್ರೇಷ್ಠ ಎಂಬುದಾಗಿ ತಿಳಿದುಕೊಂಡು ಅದನ್ನು ಅನುಸಂಧಾನಿಸುವುದೇ ಲಿಂಗಮಾಹಾತ್ಮ್ಯಸ್ಥಲವು (ಸಿ.ಶಿ., ೧೧. ೨೫– ೩೪) ಶ್ರೀ ಬಸವಣ್ಣನವರು – "ಜಗದಗಲ ಮುಗಿಲಗಲ............" ಎಂಬ ತಮ್ಮ ವಚನದಲ್ಲಿ ಈ ಲಿಂಗಮಾಹಾತ್ಮ್ಯವನ್ನು ಕುರಿತು ವಿವರಿಸಿದ್ದನ್ನು ಕಾಣಬಹುದು.

೨೮) ಜಂಗಮಮಾಹಾತ್ಮ್ಯಸ್ಥಲ :

ವಿಶ್ವವೆಲ್ಲವನ್ನು ಪ್ರಕಾಶಗೊಳಿಸುವ ಶಿವನನ್ನು ತನ್ನ ಆತ್ಮರೂಪವನ್ನಾಗಿ ತಿಳಿಯುವ ಶಿವಜ್ಞಾನಿಗೆ ಜಂಗಮನೆಂದು ಕರೆಯಲಾಗುತ್ತದೆ. ಇಂತಹ ಜಂಗಮನ

ಮಹಿಮೆಯನ್ನು ವಿವರಿಸುವ ಸ್ಥಲವೇ ಜಂಗಮಮಾಹಾತ್ಮ್ಯಸ್ಥಲವು. ಚರಾಚರಾತ್ಮಕವಾದ ಈ ಜಗತ್ತನ್ನು ಚಿಲ್ಲಿಂಗ ರೂಪದಲ್ಲಿ ಯಾರು ತಿಳಿದುಕೊಳ್ಳುತ್ತಾರೆಯೋ ಅಂತಹ ಜಂಗಮರಿಗೆ ಶಿವಯೋಗಿಗಳೆಂದು ಕರೆಯುತ್ತಾರೆ. ಇವರು ಸರ್ವವಿಧ ಮನರಹಿತರಾಗಿ ಸದಾ ನಿರ್ಮಲರಾಗಿರುತ್ತಾರೆ. ಘೋರ ಸಂಸಾರವೆಂಬ ಕತ್ತಲೆಯನ್ನು ಧ್ವಂಸಮಾಡುವ ಶ್ರೇಷ್ಠವಾದ ಶಿವಾದ್ವೈತ ಜ್ಞಾನವು ಯಾರಿಗೆ ಇರುವುದೋ ಅವರಿಗೆ ಶಿವಯೋಗಿ ಎಂದು ಕರೆಯಲಾಗುತ್ತದೆ. ಇಂತಹ ಈ ಶಿವಯೋಗಿಗಳು ಕಾಮ–ಕ್ರೋಧಾದಿಗಳನ್ನು ಗೆದ್ದವರು, ಮೋಹಗ್ರಂಥಿಯನ್ನು ಬಿಡಿಸಿಕೊಂಡವರೂ, ಮಣ್ಣು–ಹೊನ್ನುಗಳೆರಡನ್ನೂ ಸಮಾನವಾಗಿ ನೋಡುವವರೂ, ಶತ್ರು–ಮಿತ್ರನೆಂಬ ಭೇದ ಬುದ್ಧಿ ಇಲ್ಲದವರೂ, ನಿಸ್ಪೃಹರೂ ಮತ್ತು ನಿರಹಂಕಾರಿಗಳೂ ಆಗಿರುತ್ತಾರೆ. ಇಂತಹ ಈ ಶಿವಯೋಗಿಗಳು ಶಿವಸಾಕ್ಷಾತ್ಕಾರ ಸಂಪನ್ನರೂ ಆಗಿರುತ್ತಾರೆ. ಈ ಜಗತ್ತಿನಲ್ಲಿ ಶಿವಜ್ಞಾನ ಮತ್ತು ಶಿವಚಿಂತನೆಗಳು ಅತ್ಯಂತ ದುರ್ಲಭಗಳಾಗಿರುತ್ತವೆ. ಆದರೆ ಈ ಶಿವಯೋಗಿಗಳು ಸದಾ ಶಿವಜ್ಞಾನ–ಶಿವಚಿಂತನೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವುದರಿಂದ ಇವರು ಸಾಕ್ಷಾತ್ ಶಿವಸ್ವರೂಪರೇ ಆಗಿರುತ್ತಾರೆ. ಇಂತಹ ಶಿವಜ್ಞಾನ ಸಂಪನ್ನರಾದ ಶಿವಯೋಗಿಗಳ ಪಾದಧೂಳಿಯು ಯಾರ ಮನೆಗೆ ಸೋಂಕುವುದೋ ಗೃಹಸ್ಥರ ಆ ಮನೆಯು ಪಾವನವಾಗಿ ಹೋಗುವುದು. ಲೋಕಪಾವನರಾದ ಇಂತಹ ಶಿವಯೋಗಿಗಳ ದರ್ಶನದಿಂದ ಸಂಸಾರದ ಜೀವಿಗಳಿಗೆ ಏನೆಲ್ಲವೂ ಪ್ರಾಪ್ತವಾಗುವುದು. ಇಂತಹ ಶಿವಯೋಗಿಗಳ ಸ್ಪರ್ಶದಿಂದ ಪಾಪಶಮನವಾಗುವುದಲ್ಲದೆ ಅವರನ್ನು ಪೂಜಿಸುವುದರಿಂದ ಮುಕ್ತಿಯು ದೊರೆಯುವುದು. ಶಿವಾನಂದದಲ್ಲಿಯೇ ಸದಾ ತಲ್ಲೀನನಾಗಿರುವ ಇಂತಹ ಶಿವಯೋಗಿಗಳ ದರ್ಶನವು ದೊರೆಯಲು ಅದೇನು ತಾನು ದೊರೆಯಲಾರದು? ಅಂದರೆ ಸರ್ವವೆಲ್ಲವೂ ದೊರೆಯುವುದೆಂಬ ತಾತ್ಪರ್ಯವು (ಸಿ.ಶಿ., ೧೧. ೩೫–೪೪) ಇದುವೇ ಜಂಗಮ ಮಹಾತ್ಮ್ಯಸ್ಥಲವು

೨೯) ಭಕ್ತಮಾಹಾತ್ಮ್ಯಸ್ಥಲವು :

ಗುರು–ಲಿಂಗ ಮತ್ತು ಜಂಗಮರ ಮಹಿಮೆ ಇರುವಂತೆ ಭಕ್ತನೂ ಸಹ ಮಹಿಮಾ ಸಂಪನ್ನನೇ ಆಗಿರುತ್ತಾನೆ. ಭಕ್ತನ ಅಂತಹ ಮಹಿಮೆಯನ್ನು ನಿರೂಪಿಸುವ ಸ್ಥಲವೇ ಭಕ್ತಮಾಹಾತ್ಮ್ಯ ಸ್ಥಲವು. ತಮ್ಮ ಕಾಯಾ–ವಾಚಾ–ಮನಸಾ ಈ ತ್ರಿಕರಣಗಳಿಂದ ಲಿಂಗರೂಪನಾದ ಮಹಾದೇವನನ್ನು ಭಜಿಸುವವರೇ ಭಕ್ತರೆಂದು ಕರೆಯಲ್ಪಡುತ್ತಾರೆ. ಸಂಸಾರದ ಭಯವನ್ನು ಇಲ್ಲದಾಗಿಸುವ ಶಿವಭಕ್ತಿಯು ಅತ್ಯಂತ ದುರ್ಲಭವಾದುದು. ಅಂತಹ ಭಕ್ತಿಯು ಯಾರಲ್ಲಿರುವುದೋ ಅವನೇ ಭಕ್ತನು. ವೇದಗಳ ಜ್ಞಾನ, ಶಾಸ್ತ್ರಗಳ ಪರಿಣತೆ, ಯಜ್ಞಗಳ ಅನುಷ್ಠಾನ ಮತ್ತು ಕಠೋರವಾದ ವ್ರತಗಳನ್ನು

ಆಚರಿಸುವಿಕೆ ಇವೆಲ್ಲವುಗಳಿದ್ದರೂ ಶಿವನಲ್ಲಿ ಭಕ್ತಿಯೊಂದಿರದಿದ್ದರೆ ಅವೆಲ್ಲವುಗಳೂ ನಿಷ್ಫಲವಾಗಿ ಹೋಗುವವು. ಶಿವಭಕ್ತಿಯಿಲ್ಲದವನ ಪುಣ್ಯವೂ ಸಹ ನಿಷ್ಫಲವಾಗುವುದು. ಇಷ್ಟೇ ಅಲ್ಲ ಆ ಪುಣ್ಯವು ವಿಪರೀತ ಫಲವನ್ನೂ ಸಹ ಕೊಡುವಂತಹದ್ದಾಗಿರುತ್ತದೆ. ದಕ್ಷ ಪ್ರಜಾಪತಿಯು ಬಹುದೊಡ್ಡದಾದ ಪುಣ್ಯಕರ್ಮರೂಪವಾದ ಯಜ್ಞವನ್ನು ಮಾಡಿದರೂ ಸಹ ಶಿವಭಕ್ತಿಶೂನ್ಯನಾದ ಕಾರಣದಿಂದಾಗಿ ಅವನ ಯಜ್ಞವೆಲ್ಲವೂ ಧ್ವಂಸವಾಗಿ ಹೋಗಲಿಲ್ಲವೇ? ಪಾಪಕರ್ಮವನ್ನು ಆಚರಿಸುವವನೂ ಸಹ ಶಿವಭಕ್ತಿ ಸಂಪನ್ನನಾಗಿದ್ದರೆ ಅದರ ಪ್ರಭಾವದಿಂದ ಪರಿಶುದ್ಧನಾಗುವನು. ಪೂರ್ವಕಾಲದಲ್ಲಿ ಚಂಡನೆಂಬ ಭಕ್ತನು ತನ್ನ ತಂದೆಯನ್ನು ಕೊಂದರೂ ಸಹ ಶಿವಭಕ್ತಿಯ ಮಹಿಮೆಯಿಂದ ಶಿವಸ್ವರೂಪನೇ ಆಗಿಹೋದನು.

ಶಿವಭಕ್ತನಾದವನಿಗೆ ಸುಕೃತ – ದುಷ್ಕೃತಗಳೂ ಬಂಧನಕಾರಿಗಳಾಗಲಾರವು. ಆದರೆ ಶಿವಭಕ್ತಿಹೀನರಿಗೆ ಮಾತ್ರ ಈ ಕರ್ಮಪಾಶಬಂಧನವು ಉಂಟಾಗುವುದು. ಸೂರ್ಯನ ಕುದುರೆಗಳಿಗೆ ಕತ್ತಲೆಯ ಭಯವೇ ಇಲ್ಲದಿರುವಂತೆ ಶಿವಭಕ್ತಿಸಂಪನ್ನರಾದವರಿಗೆ ಕರ್ಮದ ಲೇಪವಾಗಲೀ ಅದರ ಶುಭಾಶುಭ ಫಲದ ಭಯವೂ ಇರುವುದಿಲ್ಲ. ಕಮಲದ ದೇಂಟಿನಿಂದ ನಿರ್ಮಿಸಲ್ಪಟ್ಟ ಸರಪಳಿಯಿಂದ ಮದೋನ್ಮತ್ತವಾದ ಆನೆಯನ್ನು ಕಟ್ಟಿಹಾಕುವುದು ಎಷ್ಟು ಹಾಸ್ಯಾಸ್ಪದವೋ ಅದರಂತೆ ಶಿವಭಕ್ತರನ್ನು ಕರ್ಮವು ಬಂಧಿಸುತ್ತದೆಯೆಂದು ಹೇಳುವುದೂ ಸಹ ಅಷ್ಟೇ ಹಾಸ್ಯಾಸ್ಪದವಾಗಿ ತೋರುವುದು. ಅಂದರೆ ಶಿವಭಕ್ತಿಸಂಪನ್ನರಿಗೆ ಅದಾವ ಕರ್ಮ ಬಂಧನವೂ ಇರುವುದಿಲ್ಲವೆಂಬ ತಾತ್ಪರ್ಯವು. ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರ ಮತ್ತು ಅಂತ್ಯಜ ಇವರ್‍ಯಾರೇ ಇದ್ದರೂ ಶಿವಭಕ್ತಿಯುಳ್ಳವರಾದರೆ ಶಿವನಂತೆಯೇ ಲೋಕದಲ್ಲಿ ಮಾನ್ಯರಾಗುತ್ತಾರೆ. ಅಗ್ನಿಯ ಸಂಪರ್ಕದಿಂದ ಕಟ್ಟಿಗೆಗಳು ತಮ್ಮ ಪೂರ್ವದ ಜಾತಿಗಳನ್ನು ಕಳೆದುಕೊಂಡು ನಿಗಿನಿಗಿಸುವ ಕೆಂಡವಾಗುವಂತೆ ಶಿವಭಕ್ತಿಯ ಪ್ರಾಪ್ತಿಯಿಂದ ಭಕ್ತನೂ ಸಹ ತನ್ನ ಮೊದಲಿನ ಜಾತಿಯನ್ನು ಕಳೆದುಕೊಳ್ಳುತ್ತಾನೆ. ಅಂದರೆ ಶಿವಭಕ್ತರಲ್ಲಿ ಜಾತಿಭೇದವನ್ನು ಮಾಡಬಾರದೆಂಬುದಾಗಿ ತಿಳಿದುಕೊಳ್ಳಬೇಕು. (ಸಿ.ಶಿ., ೧೧. ೪೫–೫೯) ಹೀಗೆ ಶಿವಭಕ್ತನ ಅಪಾರವಾದ ಮಹಿಮೆಯನ್ನು ವಿವರಿಸುವ ಈ ಸ್ಥಲಕ್ಕೆ ಭಕ್ತಮಾಹಾತ್ಮ್ಯಸ್ಥಲವೆಂದು ಕರೆಯಲಾಗಿದೆ.

೩೦) ಶರಣಮಾಹಾತ್ಮ್ಯಸ್ಥಲ :

ಗುರು–ಲಿಂಗ–ಜಂಗಮ ಮತ್ತು ಭಕ್ತರ ಮಹಿಮೆ ಇರುವಂತೆ ಶರಣನೂ ಸಹ ಮಹಿಮಾನ್ವಿತನಾಗಿರುತ್ತಾನೆ. ಅಂತಹ ಶರಣನ ಮಹತ್ತ್ವವನ್ನು ವಿವರಿಸುವ ಸ್ಥಲವೇ ಶರಣಮಾಹಾತ್ಮ್ಯಸ್ಥಲವು. ಇಲ್ಲಿ ಶರಣ ಎಂದರೆ ಸರ್ವವಿಧದಿಂದಲೂ

ಶಿವನೋರ್ವನಿಗೇನೇ ಶರಣಾಗತನಾದ ಭಕ್ತನಿಗೆ ಶರಣನೆಂದು ಕರೆಯಲಾಗುವುದು. ಶಿವನು ಸರ್ವಪ್ರಾಣಿಗಳಿಗೆ ಶರಣ್ಯನು. ಅಂದರೆ ಶರಣಾಗತ ರಕ್ಷಕನು ಎಂಬ ಭಾವದಿಂದ ಶಿವನಿಗೆ ಶರಣು ಹೋದವನೇ ಶರಣಾಗತನೆಂದು ಕರೆಯಲ್ಪಡುತ್ತಾನೆ. ಸಂಸಾರದ ಭೋಗಾಭಿಲಾಷೆಯನ್ನು ತೊರೆದು ಅನ್ಯದೇವರಲ್ಲಿ ಅನಾಸಕ್ತನಾಗಿ ಮೋಕ್ಷಕ್ಕಾಗಿ ಶಿವನ ಮೊರೆ ಹೊಕ್ಕವನಿಗೆ ಶರಣಾರ್ಥೀ ಎಂಬುದಾಗಿ ಕರೆಯಲಾಗುವುದು. ತನ್ನ ತ್ರಿಕರಣಪೂರ್ವಕವಾಗಿ ಶಿವನಿಗೆ ಶರಣಾಗತನಾದ ಶರಣನಿಗೆ ಬೇರಾವ ಕರ್ಮವನ್ನು ಮಾಡುವ ಅಥವಾ ಬೇರೆ ದೇವರಿಗೆ ತರ್ಪಣವನ್ನು ಕೊಡುವ ಅವಶ್ಯಕತೆಯಿರುವುದಿಲ್ಲ. ಯಜ್ಞ-ಯಾಗಾದಿಗಳನ್ನು ಮಾಡಿದರೆ ಕ್ಷಯ-ಪತನಗಳೆಂಬ ದೋಷಗಳಿಂದ ಕೂಡಿದ ಸ್ವರ್ಗಮಾತ್ರ ದೊರೆಯುವುದು. ಆದರೆ ಶಿವನನ್ನು ಆರಾಧಿಸಿದರೆ ಅಕ್ಷಯವಾದ ಮೋಕ್ಷಪದ ಲಭಿಸುವುದು. ಶರಣಾಗತರಾದವರಿಗೆ ಪರಮಾತ್ಮನು ಕಲ್ಪವೃಕ್ಷನಾಗಿರುತ್ತಾನೆ. ಆದ್ದರಿಂದ ಶಿವನಿಗೆ ಶರಣಾಗಿ ಪಾಪಿಗಳೂ ಸಹ ಸಮುದ್ಧಾರವಾಗಬಲ್ಲರು. ಈ ಜಗತ್ತಿನಲ್ಲಿ ಶಿವನಿಗೆ ಶರಣಾಗತನಾದವನ ಜನ್ಮವೇ ಸಾರ್ಥಕವಾದ ಜನ್ಮವು. ಉಳಿದವರೆಲ್ಲರ ಜನ್ಮಗಳು ನಿರರ್ಥಕವೆನಿಸುವುವು. ದುರ್ಲಭವಾದ ಮನುಷ್ಯಜನ್ಮದಲ್ಲಿ ಬಂದು ಶಿವನನ್ನು ಯಾರು ಭಜಿಸುವುದಿಲ್ಲವೋ ಅವರ ಆತ್ಮವು ಅರ್ಥಾತ್ ಅವರ ಜೀವನವು ನಿರರ್ಥಕವೇ ಸರಿ. ಶಿವನನ್ನು ಪೂಜಿಸುವವರ ಕುಲವೇ ಸತ್ಕುಲವು. ಅವನನ್ನು ಪೂಜಿಸುವವರ ಜೀವನವೇ ಸಫಲ ಜೀವನವು (ಸಿ.ಶಿ., ೧೧. ೫೭-೬೬) ಹೀಗೆ ಶಿವನಿಗೆ ಶರಣಾಗತನಾಗಲು ದೊರೆಯುವ ಫಲಾದಿಗಳನ್ನು ಇರಿಸಿ ತಿಳಿಸಿ ಶರಣಾಗತಿಯ ಮಹತ್ವವನ್ನು ವಿವರಿಸುವ ಸ್ಥಲವೇ ಶರಣಮಾಹಾತ್ಮ್ಯಸ್ಥಲವು.

೩೧) ಪ್ರಸಾದಮಾಹಾತ್ಮ್ಯಸ್ಥಲ :

ಗುರು-ಲಿಂಗ ಮತ್ತು ಜಂಗಮಾದಿಗಳ ಮಾಹಾತ್ಮ್ಯದ ಅನುಭವ ವಾಗಬೇಕಾದರೆ ಶಿವಪ್ರಸಾದವೇ ಅರ್ಥಾತ್ ಶಿವಾನುಗ್ರಹವೇ ಕಾರಣವು. ಅಂತಹ ಶಿವಾನುಗ್ರಹದ ಮಹಿಮೆಯನ್ನು ನಿರೂಪಿಸುವ ಸ್ಥಲವೇ ಪ್ರಸಾದಮಾಹಾತ್ಮ್ಯಸ್ಥಲವು. ಯಾರು ಯಾವಾಗಲೂ ಗುರು-ಲಿಂಗ ಮತ್ತು ಜಂಗಮಾದಿಗಳಲ್ಲಿ ನಿಷ್ಠೆಯುಳ್ಳವರಾಗಿ ಅವರನ್ನು ಪೂಜಿಸುತ್ತಾರೆಯೋ ಅಂಥವರಿಗೇನೇ ಶಿವಪ್ರಸಾದವು ಲಭಿಸುವುದು. ಈ ಘೋರ ಸಂಸಾರದ ಸಂತಾಪವನ್ನು ದೂರಮಾಡುವ ಶಿವನ ಈ ಪ್ರಸಾದವು ದುರ್ಲಭವಾದುದು. ದೊಡ್ಡ ದೊಡ್ಡ ಯಜ್ಞಗಳು, ಕಠಿಣವಾದ ತಪಸ್ಸುಗಳು ಮತ್ತು ಮಂತ್ರ-ಜಪಾದಿಗಳು ಶಿವನ ಅನುಗ್ರಹವನ್ನು ಪಡೆಯುವುದಕ್ಕಾಗಿಯೇ ವಿಧಿಸಲ್ಪಟ್ಟಿವೆ. ಎಲ್ಲ ವಿಧವಾದ ಭಕ್ತಿಗಳಿಗೆ ಶಿವನ ಅನುಗ್ರಹವೇ ಮೂಲಕಾರಣವು. ಅಂತಹ

ಶಿವಾನುಗ್ರಹವನ್ನು ಪಡೆಯದವರ ಭಕ್ತಿಯು ನಿರರ್ಥಕವಾದುದು. ಶಿವನ ಅನುಗ್ರಹ ಪೊಂದಿದ್ದರೆ ಗರ್ಭದಲ್ಲಿಯ ಶಿಶುವಾಗಲೀ, ಅದೇ ಆಗ ಜನಿಸುತ್ತಿರುವ ಮಗುವಾಗಲೀ, ಜನ್ಮ ತಾಳಿದ ಬಾಲನಾಗಲೀ, ಬ್ರಾಹ್ಮಣನೇ ಆಗಿರಲಿ ಅಥವಾ ಅಂತ್ಯಜನೇ ಆಗಿರಲಿ, ಶಿವನ ಅನುಗ್ರಹವಾಯಿತೆಂದರೆ ಅವನು ಯಾವ ಅವಸ್ಥೆಯಲ್ಲಿದ್ದರೂ ಅಥವಾ ಯಾವುದೇ ಜಾತಿಯಲ್ಲಿದ್ದರೂ ಮುಕ್ತನಾಗುತ್ತಾನೆ. ಶಿವನ ಅನುಗ್ರಹದಿಂದಲೇ ಬ್ರಹ್ಮಾದಿ ದೇವತೆಗಳು ತಮ್ಮ ತಮ್ಮ ಸ್ಥಾನಗಳನ್ನು ಪಡೆದು ಸಿದ್ಧಪುರುಷರಾಗಿದ್ದಾರೆ. ಪರಮಾನಂದವನ್ನು ಕೊಡುವ ಶಿವನ ಪ್ರಸಾದವು ದೊರೆಯಲು ಸರ್ವ ವಿಶ್ವವೆಲ್ಲ ಶಿವಮಯವಾಗಿಯೇ ತೋರುವುದು. ಇದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಈ ಸಂಸಾರಚಕ್ರಕ್ಕೆ ಕಾರಣೀಭೂತವಾದ ಜೀವಿಗಳ ಕರ್ಮವು ಶಿವನ ಅನುಗ್ರಹ ವಾದಾಗಲೇ ಕಳಚಿ ಹೋಗುವುದು. ಪ್ರಸಾದದ ವಿಷಯದಲ್ಲಿ ಹೆಚ್ಚಿಗೆ ಹೇಳುವುದೇನೂ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಶಿವನ ಅನುಗ್ರಹಕ್ಕಿಂತಲೂ ಅಧಿಕವಾದುದಾಗಲೀ ಅಥವಾ ಅದಕ್ಕೆ ಸಮಾನವಾದುದಾಗಲೀ ಬೇರಾವುದೂ ಈ ಪ್ರಪಂಚದಲ್ಲಿ ಇರುವುದಿಲ್ಲ. ಇಂತಹ ಶಿವಪ್ರಸಾದವು ದೊರೆಯಲು ಸರ್ವವೆಲ್ಲವೂ ಶಿವರೂಪವಾಗಿಯೇ ತೋರುವುದು (ಸಿ.ಶಿ., ೧೧. ೬೭-೭೭)

ಹೀಗೆ ಶಿವನ ಅನುಗ್ರಹರೂಪವಾದ ಪ್ರಸಾದದ ಮಹಿಮೆಯನ್ನು ಪತಿಪಾದಿಸುವ ಸ್ಥಲವೇ ಪ್ರಸಾದಮಾಹಾತ್ಮ್ಯ ಸ್ಥಲವು. ಇಲ್ಲಿಯವರೆಗೆ ಹೇಳಿದ ಈ ಪ್ರಸಾದಿಸ್ಥಲದ ಅವಾಂತರಸ್ಥಲಗಳಲ್ಲಿ ಬರುವ ವಿಷಯ ವಸ್ತುವನ್ನು ಮನನ ಮಾಡಿಕೊಂಡು ಆ ಭಾವನೆಯಿಂದ ಸಾಧನೆಯನ್ನು ಮಾಡುತ್ತಿರುವ ಸಾಧಕನಿಗೆ ಪ್ರಸಾದಿಯೆಂಬುದಾಗಿ ಕರೆಯಲಾಗುತ್ತದೆ.

ಪ್ರಾಣಲಿಂಗಿಸ್ಥಲ

ಇಲ್ಲಿಯವರೆಗೆ ಉಪದೇಶ ಮಾಡಿದ ಪ್ರಸಾದಿಸ್ಥಲದ ವಿಷಯವನ್ನೆಲ್ಲ ಆಲಿಸಿದ ಅಗಸ್ತ್ಯ ಮಹರ್ಷಿಯು ಪುನಃ ಶ್ರೀ ಜಗದ್ಗುರು ರೇಣುಕ ಭಗವತ್ಪಾದರನ್ನು ಕುರಿತು "ಹೇ ಗಣಾಧೀಶ್ವರನೇ! ಇಲ್ಲಿಯವರೆಗೆ ಹೇಳಿದ ಈ ಪ್ರಸಾದಿಸ್ಥಲದ ಸಾಧಕನು ಮುಂದಿನ ಪ್ರಾಣಲಿಂಗಿಸ್ಥಿತಿಯನ್ನು ಅದಾವಾಗ ಪಡೆದುಕೊಳ್ಳುವನು? ಎಂಬುದಾಗಿ ಪ್ರಶ್ನಿಸಲು ಪೂಜ್ಯಪಾದರು –

ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ ॥

(ಸಿ.ಶಿ., ೧೨-೩)

ಎಂದು ಉಪದೇಶಿಸಿದ್ದಾರೆ. ತಾತ್ಪರ್ಯವೇನೆಂದರೆ, ಲಿಂಗವು ಚಿದ್ರೂಪ ವಾಗಿರುತ್ತದೆ. ಅದರ ಶಕ್ತಿಯು ಪ್ರಾಣಶಕ್ತಿ ವಿಶಿಷ್ಟವಾದ ಆ ಚಿಲ್ಲಿಂಗವನ್ನು ಅರಿತುಕೊಂಡವನೇ

ಪ್ರಾಣಲಿಂಗಿಯು. ಈ ಪೂರ್ವದಲ್ಲಿ ಹೇಳಿದ ಭಕ್ತ, ಮಾಹೇಶ್ವರ ಮತ್ತು ಪ್ರಸಾದಿ ಸ್ಥಲಗಳು ಕ್ರಿಯಾ ಪ್ರಧಾನವಾಗಿದ್ದರೆ, ಈ ಮುಂದಿನ ಮೂರು ಸ್ಥಲಗಳಲ್ಲಿ ಜ್ಞಾನಯೋಗವು ಪ್ರಮುಖವಾಗಿರುತ್ತದೆ. ಈ ಪ್ರಾಣಲಿಂಗಿಸ್ಥಲದಲ್ಲಿಯೂ ಐದು ಅವಾಂತರಸ್ಥಲಗಳಿರುತ್ತವೆ. ಅವುಗಳನ್ನೇ ಕ್ರಮವಾಗಿ ಇಲ್ಲಿ ವಿಚಾರ ಮಾಡಲಾಗುವುದು.

೩೨) ಪ್ರಾಣಲಿಂಗಿಸ್ಥಲ :

ಪ್ರಾಣ ಹಾಗೂ ಅಪಾನವಾಯುಗಳ ಸಂಘಟ್ಟನವಾಗಲು ನಾಭಿಯ ಕಂದಮಧ್ಯದಿಂದ ಒಂದು ಜ್ಯೋತಿಯು ಉದ್ಭವಿಸುವುದು. ಊರ್ಧ್ವಮುಖವಾದ ಆ ಜ್ಯೋತಿಗೇನೇ ಶಿವಯೋಗಿಗಳು ಪ್ರಾಣಲಿಂಗವೆಂದು ಕರೆಯುತ್ತಾರೆ. ಅಂತಹ ಆ ಪ್ರಾಣಲಿಂಗವನ್ನು ಉಪಾಸಿಸುವವನೇ ಪ್ರಾಣಲಿಂಗಿಯು. ಸೂರ್ಯೋದಯ ವಾಗಲು ಆ ಸೂರ್ಯಪ್ರಕಾಶದಲ್ಲಿ ಮಂಜಿನಕಣಗಳು ಲಯವಾಗಿ ಹೋಗುವಂತೆ ಈ ಜ್ಯೋತಿರ್ಲಿಂಗದಲ್ಲಿ ಪ್ರಾಣವು ವಿಲಯವಾಗುವ ಕಾರಣ ಇದಕ್ಕೆ ಪ್ರಾಣಲಿಂಗವೆಂದು ಕರೆಯಲಾಗಿದೆ. ಶಿವಯೋಗವನ್ನು ಸಾಧಿಸುವ ಯೋಗಿಗಳ ಅಂತಃಕರಣದಲ್ಲಿ ಇದು ದೀಪದಂತೆ ಪ್ರಜ್ವಲಿಸುತ್ತಿರುತ್ತದೆ. ಇಂತಹ ಚಿದಾಕಾರವಾದ ಪರಶಿವ ಬ್ರಹ್ಮಲಿಂಗವು ಅಜ್ಞ ಜೀವಿಗಳಿಗೆ ಗೋಚರವಾಗುವುದಿಲ್ಲ. ಅಂತರಂಗದಲ್ಲಿರುವ ಇಂತಹ ಜ್ಯೋತಿರ್ಲಿಂಗಾನುಸಂಧಾನವನ್ನು ಮಾಡದೇ ಕೇವಲ ಬಹಿರ್ಲಿಂಗ ಪೂಜೆಯಲ್ಲಿ ಆಸಕ್ತರಾದವರು ಮೂಢರೆನಿಸಿಕೊಳ್ಳುತ್ತಾರೆ. ಬಾಹ್ಯವಸ್ತುಗಳಲ್ಲಿ ಪರಾಙ್ಮುಖನಾಗಿ ಅಂತರಂಗದ ಜ್ಯೋತಿರ್ಲಿಂಗವನ್ನು ಸದಾ ಅನುಸಂಧಾನಿಸುತ್ತಿರುವ ಯೋಗಿಯೇ ಪ್ರಾಣಲಿಂಗಿಯು. ಈ ವಿಶ್ವವೆಲ್ಲವೂ ಮಾಯಾಕಲ್ಪಿತವಾದುದು ಎಂಬುದಾಗಿ ತಿಳಿದು ಅದರಲ್ಲಿ ಹೇಯಬುದ್ಧಿಯನ್ನು ತಾಳಿ ಚಿದಾನಂದರೂಪವಾದ ಲಿಂಗದಲ್ಲಿ ವಿಲೀನವಾದ ಚಿತ್ತವುಳ್ಳ ಶಿವಯೋಗಿಯೇ ಪ್ರಾಣಲಿಂಗಿಯು. ಪ್ರಾಣರೂಪವಾದ ಶಕ್ತಿ ಮತ್ತು ಸದ್ರೂಪವಾದ ಲಿಂಗ ಇವೆರಡರ ಸಾಮರಸ್ಯ ಜ್ಞಾನವುಳ್ಳ ಶಿವಯೋಗಿಯೇ ಪ್ರಾಣಲಿಂಗಿಯು ಎಂಬುದಾಗಿ ತಿಳಿದುಕೊಳ್ಳಬೇಕು (ಸಿ.ಶಿ., ೧೨. ೬–೧೨) ಹೀಗೆ ಇಲ್ಲಿ ವಿವರಿಸಿದ ಪ್ರಾಣಲಿಂಗವನ್ನು ಅರಿತು ಅದನ್ನನುಭವಿಸುವವನೇ ಪ್ರಾಣಲಿಂಗಿಯು.

೩೩) ಪ್ರಾಣಲಿಂಗಾರ್ಚನಸ್ಥಲ :

ಅಂತರಂಗದಲ್ಲಿರುವ ಜ್ಯೋತಿಸ್ವರೂಪವಾದ ಪ್ರಾಣಲಿಂಗವನ್ನು ಭಾವಮಯ ಪುಷ್ಪಗಳಿಂದ ಅರ್ಚಿಸುವುದೇ ಪ್ರಾಣಲಿಂಗಾರ್ಚನೆಯು. ಶಿವಯೋಗಿಯು ತನ್ನ ನವದ್ವಾರಗಳನ್ನು ಬಂಧಿಸಿಕೊಂಡು ಧ್ಯಾನಸ್ಥನಾಗಿ ಕುಳಿತಾಗ ಆತನ ಬ್ರಹ್ಮರಂಧ್ರದಲ್ಲಿರುವ ಚಂದ್ರಮಂಡಲದಿಂದ ಅಮೃತಬಿಂದುವಿನ ವರ್ಷವಾಗಿ ಅತಿ ಶೀತಲವಾದ ಆತನ ಹೃದಯಾಕಾಶದಲ್ಲಿ ಶಿವಜ್ಞಾನರೂಪವಾದ ಜ್ಯೋತಿಯು

ಪ್ರಕಾಶಮಾನವಾಗಿ ತೋರುತ್ತದೆ. ಅದು ಶರೀರಾಂತರ್ಗತವಾದ ಪ್ರಾಣವಾಯುವಿನಿಂದ ವ್ಯಾಪಿಸಲ್ಪಟ್ಟಿರುತ್ತದೆ. ಹೀಗೆ ಅಂತರಂಗದಲ್ಲಿ ತೋರುವ ಆ ಪ್ರಕಾಶದ ಬೆಳಕಿನಲ್ಲಿ ಆತನ ಹೃದಯಸ್ಥ ದ್ವಾದಶದಲಕಮಲಕರ್ಣಿಕೆಯಲ್ಲಿ ಮಂಗಲಮಯವೂ, ಚಿದ್ರೂಪವೂ ಆದ ಪ್ರಾಣಲಿಂಗವು ವಿರಾಜಿಸುತ್ತಿರುವುದರ ಅನುಭವವಾಗುವುದು. ಈ ಪ್ರಾಣಲಿಂಗವನ್ನು ಮುಂದೆ ಹೇಳುವ ಭಾವಸಾಮಾಗ್ರಿಯಿಂದ ಪೂಜಿಸುವುದೇ ಪ್ರಾಣಲಿಂಗಾರ್ಚನೆಯು.

ಇಲ್ಲಿಯ ಪ್ರಕಾರ ಕ್ಷಮೆಯೇ ಅಭಿಷೇಕದ ಜಲವು, ವಿವೇಕವೇ ವಸ್ತ್ರವು, ಸತ್ಯನುಡಿವುದು ಆಭರಣವು, ವಿಷಯಗಳಲ್ಲಿ ವೈರಾಗ್ಯವೇ ಪುಷ್ಪಮಾಲೆಯು, ಗಂಧವೇ ಸಮಾಜ ಸಂಪತ್ತಿಯು, ನಿರಹಂಕಾರವೇ ಅಕ್ಷತೆಯು, ಶ್ರದ್ಧೆಯೇ ಧೂಪವು, ದಿವ್ಯಜ್ಞಾನವೇ ದೀಪವು, ಪ್ರಪಂಚದೊಳಗಿನ ಭ್ರಾಂತಿಯನ್ನು ಬಿಡುವುದೇ ನೈವೇದ್ಯವು, ಮೌನಾಚರಣೆಯೇ ಘಂಟಾನಾದವು, ಶಬ್ದಾದಿ ವಿಷಯಗಳನ್ನು ಸಮರ್ಪಿಸುವುದೇ ತಾಂಬೂಲವು, ಶಬ್ದ, ಸ್ಪರ್ಶಾದಿ ವಿಷಯಗಳಲ್ಲಿಯ ಭ್ರಾಂತಿಯನ್ನು ಕಳೆದುಕೊಳ್ಳುವುದೇ ಪ್ರದಕ್ಷಿಣೆಯು, ಬುದ್ಧಿಯನ್ನು ತದ್ರೂಪವಾಗಿಸುವುದೇ ನಮಸ್ಕಾರ ಕ್ರಿಯೆಯು. ಈ ಪ್ರಕಾರವಾದ ಅಂತರಂಗದ ಭಾವಪುಷ್ಪಗಳಿಂದ ಅಂತಸ್ಥವಾದ ಜ್ಯೋತಿರ್ಲಿಂಗವನ್ನು ಅರ್ಚಿಸುವುದೇ ಪ್ರಾಣಲಿಂಗಾರ್ಚನೆಯು (ಸಿ.ಶಿ., ೧೨. ೧೩–೨೦)

೩೪) ಶಿವಯೋಗಸಮಾಧಿಸ್ಥಲ :

ಶಿವ ಹಾಗೂ ಆತ್ಮರ ಏಕರೂಪತೆಯ ಧ್ಯಾನಕ್ಕೇನೇ ಶಿವಯೋಗಸಮಾಧಿಯೆಂದು ಕರೆಯಲಾಗಿದೆ. ಭೂಮ್ಯಾದಿ ಶಿವಪರ್ಯಂತಗಳಾದ ಮೂವತ್ತಾರು ತತ್ತ್ವಗಳನ್ನು ಮೀರಿನಿಂತಿರುವ ಸಚ್ಚಿದಾನಂದ ಸ್ವರೂಪವಾದ, ಸ್ವಯಂ ಪ್ರಕಾಶವಾದ, ವಾಣಿ–ಮನಗಳಿಗೆ ಅಗೋಚರವಾಗಿರುವ, ಉಮಾಶಕ್ತಿಯಿಂದೊಡಗೂಡಿದ, ಚಿದ್ರೂಪವಾದ, ಹಂಸರೂಪವಾದ ಆ ಪರಮ ತತ್ತ್ವವನ್ನು ಸೋऽಹಂ ಭಾವದಿಂದ ಅನುಸಂಧಾನಿಸುವುದೇ ಶಿವಯೋಗಸಮಾಧಿಯು. ಶರೀರದ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿಗಳೆಂಬ ಚಕ್ರಗಳು ಗುದ, ಗುಹ್ಯ, ನಾಭಿ, ಕಂಠ ಮತ್ತು ಭ್ರೂಮಧ್ಯಗಳಲ್ಲಿ ಅನುಭವಗೋಚರವಾಗುತ್ತವೆ. ಶಿವಯೋಗ ಸಾಧಕನು ಈ ಷಟ್‌ಚಕ್ರಗಳನ್ನು ದಾಟಿ ತನ್ನ ಮನೋವೃತ್ತಿಯನ್ನು ಭ್ರೂಮಧ್ಯದ ಊರ್ಧ್ವಭಾಗದಲ್ಲಿ ಅಂದರೆ ತನ್ನ ಮಸ್ತಕದಲ್ಲಿ ಸಹಸ್ರದಲಕಮಲವನ್ನು ಭಾವಿಸಿ ಆ ಸಹಸ್ರದಲಕಮಲದ ಮಧ್ಯದಲ್ಲಿ ಒಂದು ಸುನಿರ್ಮಲವಾದ ಚಂದ್ರಬಿಂಬವನ್ನೂ ಸಹ ಭಾವಿಸಬೇಕು. ಆ ಚಂದ್ರಬಿಂಬದ ಮಧ್ಯದಲ್ಲಿ ಅತ್ಯಂತ ಸೂಕ್ಷ್ಮವಾದ ಒಂದು ರಂಧ್ರವಿರುವುದು.

ಅದಕ್ಕೇನೇ ಕೈಲಾಸವೆಂದು ಕರೆಯುತ್ತಾರೆ. ಆ ಕೈಲಾಸದಲ್ಲಿ ಸರ್ವಕ್ಕೂ ಕಾರಣೀಭೂತನಾದ ಶಿವನನ್ನು ಭಾವಿಸಿ ಧ್ಯಾನಿಸಬೇಕು. ಇದುವೇ ಶಿವಯೋಗಸಮಾಧಿಯು.

ಬಹಿರ್ಮುಖರಾದ ವಾಸನಾಮಯ ಜೀವಿಗಳಿಗೆ ಬಹಿರಂಗದ ಪ್ರಪಂಚವು ತೋರುವುದು. ಆದರೆ ಅಂತರ್ಮುಖವಾದ ಚಿತ್ತವುಳ್ಳವರಿಗೆ ಪರಮಾನಂದ ಸ್ವರೂಪವಾದ ಪರಮಾತ್ಮನೇ ಅನುಭವಗೋಚರನಾಗುವನು. ಪಂಚಕ್ಲೇಶಾತ್ಮಕವಾದ ಈ ಸಂಸಾರವೆಂಬ ವಿಷವೃಕ್ಷವನ್ನು ಕತ್ತರಿಸಿ ಹಾಕಲು ಈ ಶಿವಭಾವನೆಯೇ ಕೊಡಲಿಯೋಪಾದಿಯಲ್ಲಿರುತ್ತದೆ. ಸಂಸಾರವೆಂಬ ಘೋರಾಂಧಕಾರವನ್ನು ಶಿವಜ್ಞಾನವೆಂಬ ಪ್ರಚಂಡಭಾಸ್ಕರನು ಇಲ್ಲದಾಗಿಸುತ್ತಾನೆ. ಆದ್ದರಿಂದ ಸಂಸಾರದ ದುಃಖವನ್ನು ದೂರಮಾಡಿಕೊಳ್ಳಲು ಶಿವಯೋಗಸಮಾಧಿಯನ್ನು ಸಾಧಿಸಬೇಕು. (ಸಿ.ಶಿ., ೧೨. ೨೧–೩೧)

೩೫) ಲಿಂಗನಿಜಸ್ಥಲ :

ತನ್ನ ಅಂತರಂಗದಲ್ಲಿರುವ ಜ್ಯೋತಿರೂಪವಾದ ಶಿವಲಿಂಗದ ಪ್ರತ್ಯಕ್ಷಾನುಭವವುಂಟಾಗಲು ಅದಕ್ಕೆ ಲಿಂಗನಿಜಸ್ಥಲವೆಂದು ಕರೆಯುತ್ತಾರೆ. ಅಂದರೆ ಲಿಂಗವೇ ತನ್ನ ನಿಜವಾದ ಸ್ವರೂಪವು ಎಂಬುದನ್ನು ಬೋಧಿಸುವ ಸ್ಥಲವೇ ಲಿಂಗನಿಜಸ್ಥಲವೆಂದು ತಿಳಿದುಕೊಳ್ಳಬೇಕು. ಬ್ರಹ್ಮ, ವಿಷ್ಣು, ಮೊದಲಾದ ಸರ್ವದೇವತೆಗಳು ಹಾಗೂ ಈ ಚರಾಚರವಾದ ವಿಶ್ವವು ಮತ್ತು ಎಲ್ಲ ವೇದ ಆಗಮಾದಿಗಳು ಕೊನೆಗೆ ಎಲ್ಲಿ ಲಯವಾಗುತ್ತಿವೆಯೋ ಅದುವೇ ಲಿಂಗವೆಂದು ಕರೆಯಲಾಗುತ್ತದೆ. ಸಚ್ಚಿದಾನಂದ ಸ್ವರೂಪನಾದ, ನಿರಂಜನನಾದ ಸಾಕ್ಷಾತ್ ಶಿವನೇ ಇಲ್ಲಿ ಲಿಂಗವೆಂದು ಭಾವಿಸಬೇಕು. ಒಟ್ಟಿನಲ್ಲಿ ಹೇಳುವುದಾದರೆ ಈ ಜಗತ್ತಿಗೆ ಆಧಾರವಾಗಿರುವ ಪರಶಿವಬ್ರಹ್ಮವೇ ಲಿಂಗವು. ಜ್ಯೋತಿರ್ಲಿಂಗವು ಪ್ರಕಾಶಿಸುತ್ತಿರಲು ಅದರ ಪ್ರಕಾಶದ ಮುಂದೆ ಸೂರ್ಯ, ಚಂದ್ರ, ಅಗ್ನಿ, ತಾರೆ ಮತ್ತು ವಿದ್ಯುತ್ತುಗಳ ಪ್ರಕಾಶವು ನಗಣ್ಯವಾಗಿರುವವು. ಇಂತಹ ಪರಂಜ್ಯೋತಿಸ್ವರೂಪವಾದ ಆ ಲಿಂಗದ ಬೆಳಕಿನಿಂದಲೇ ಸೂರ್ಯ–ಚಂದ್ರಾದಿಗಳೂ ಸಹ ಬೆಳಗುತ್ತಿರುತ್ತಾರೆ. ಇಂತಹ ಸಚ್ಚಿದಾನಂದ ಸ್ವರೂಪವೂ, ಪರಶಿವಬ್ರಹ್ಮರೂಪವಾದ ಲಿಂಗತತ್ತ್ವವನ್ನು ನಿಜರೂಪವನ್ನಾಗಿ ಅರ್ಥಾತ್ ಆತ್ಮರೂಪವೆಂಬುದಾಗಿ ಧ್ಯಾನಿಸಿ ಆ ಅವಸ್ಥೆಯಲ್ಲಿರುವುದೇ ಲಿಂಗನಿಜಸ್ಥಿತಿಯು. ಈ ಸ್ಥಿತಿಯನ್ನು ಪ್ರತಿಪಾದಿಸುವ ಸ್ಥಲವೇ ಲಿಂಗನಿಜಸ್ಥಲವು (ಸಿ.ಶಿ., ೧೨. ೩೨–೪೧)

೩೬) ಅಂಗಲಿಂಗಸ್ಥಲ :

ಅಂಗ ಹಾಗೂ ಲಿಂಗಗಳ ವಾಸ್ತವಿಕ ಸ್ವರೂಪವನ್ನು ತಿಳಿಯಪಡಿಸಿ ಅವೆರಡರ ಅಭೇದ ಚಿಂತನೆಯನ್ನು ನಿರೂಪಿಸುವ ಸ್ಥಲವೇ ಅಂಗಲಿಂಗಸ್ಥಲವು.

ತನ್ನಂತರಂಗದಲ್ಲಿರುವ ಜ್ಯೋತಿರೂಪವಾದ ಲಿಂಗವನ್ನರಿತು ಅದನ್ನು ಸ್ವಾತ್ಮರೂಪವಾಗಿ ಸದಾ ಭಾವಿಸುತ್ತ ಪೂಜಿಸುತ್ತಿರಬೇಕು. ಈ ಲಿಂಗಕ್ಕೇನೆ ಶಾಸ್ತ್ರಕಾರರು ಬ್ರಹ್ಮನೆಂತಲೂ, ವಿಶ್ವಧಾಮವೆಂತಲೂ, ಮುಕ್ತಿಯ ಪದವೆಂತಲೂ ಕರೆಯುತ್ತಾರೆ. ಲಿಂಗವು ಮುಕ್ತಿ ಸ್ವರೂಪವು ಎಂಬುದಾಗಿ ಯಾರು ಅರಿತುಕೊಂಡಿರುತ್ತಾರೆಯೋ ಅವರು ದೇಹದಲ್ಲಿದ್ದು ಮುಕ್ತರಾಗಿರುತ್ತಾರೆ. ಅಂಥವರಿಗೇನೇ ಜ್ಞಾನಿಯೆಂಬುದಾಗಿ ಮತ್ತು ಮಹಾಗುರು ಎಂಬುದಾಗಿ ಕರೆಯಲಾಗುತ್ತದೆ. ಉತ್ಪತ್ತಿ ವಿನಾಶ ರಹಿತವಾದ ಮತ್ತು ಜಗತ್ತಿನ ಉತ್ಪತ್ತ್ಯಾದಿಗಳಿಗೆ ಕಾರಣೀಭೂತವಾದ ಆ ಮಹಾಲಿಂಗವನ್ನು ಯಾರು ಅರಿಯುವುದಿಲ್ಲವೊ ಅವರು ಮೂಢರೆಂದು ಕರೆಯಲ್ಪಡುತ್ತಾರೆ. ಇಂಥ ಮೂಢರಿಗೆ ಅದೆಂದೂ ಮುಕ್ತಿಯು ಲಭಿಸುವುದಿಲ್ಲ (ಸಿ.ಶಿ., ೧೨. ೪೨–೪೮) ಇದುವೇ ಅಂಗಲಿಂಗಸ್ಥಲವು.

ಹೀಗೆ ಪ್ರಾಣಲಿಂಗಿಸ್ಥಲದ ಸಾಧಕನು ಇಲ್ಲಿ ಹೇಳಲ್ಪಟ್ಟ ಪ್ರಾಣಲಿಂಗಾರ್ಚನೆ, ಶಿವಯೋಗಸಮಾಧಿ, ಲಿಂಗನಿಜಸ್ಥಿತಿ ಮತ್ತು ಅಂಗಲಿಂಗಸ್ಥಿತಿಗಳನ್ನು ಅರಿತು ಅನುಭವಿಸುವಾಗ ಸಂಪೂರ್ಣವಾಗಿ ಪ್ರಾಣಲಿಂಗಿ ಸ್ವರೂಪವನ್ನು ತಾಳಿಕೊಂಡಿರುತ್ತಾರೆ.

ಶರಣಸ್ಥಲ

ಪ್ರಾಣಲಿಂಗಿಸ್ಥಲದ ಬಗ್ಗೆ ಕೂಲಂಕಷವಾಗಿ ಶ್ರವಣ ಮಾಡಿದ ಅಗಸ್ತ್ಯ ಮಹರ್ಷಿಯು ಶ್ರೀ ಜಗದ್ಗುರು ರೇಣುಕ ಭಗವತ್ಪಾದರನ್ನು ಕುರಿತು ಹೇ ಗಣೇಶ್ವರನೇ! ಈ ಪ್ರಾಣಲಿಂಗಿಯು ಶರಣನಾಗುವ ಪರಿಯೆಂತು? ಎಂಬುದಾಗಿ ಪ್ರಶ್ನಿಸಲು ಪೂಜ್ಯಪಾದರು –

ಅಂಗಲಿಂಗೀ ಜ್ಞಾನರೂಪಃ ಸತೀ ಜ್ಞೇಯಃ ಶಿವಃ ಪತಿಃ ।
ಯತ್ ಸೌಖ್ಯಂ ತತ್ಸಮಾವೇಶೇ ತದ್ವಾನ್ ಶರಣನಾಮವಾನ್ ॥

(ಸಿ.ಶಿ., ೧೩–೨)

ಎಂದು ಅಪ್ಪಣೆಕೊಡಿಸಿದ್ದಾರೆ. ಅಂದರೆ ಜ್ಞಾನಿಯಾದ ಪ್ರಾಣಲಿಂಗಿಯು ತನ್ನನ್ನು ಸತಿಯನ್ನಾಗಿ ಮತ್ತು ಶಿವನನ್ನು ಪತಿಯನ್ನಾಗಿ ತಿಳಿದುಕೊಂಡು ಈ ಅಲೌಕಿಕವಾದ ಸತಿ–ಪತಿ ಸುಖವನ್ನು ಯಾವಾಗ ಅನುಭವಿಸುವನೋ ಆಗ ಶರಣನೆಂದು ಕರೆಯಲ್ಪಡುವನು. ಈ ಶರಣಸ್ಥಲದಲ್ಲಿ ನಾಲ್ಕು ಅವಾಂತರ ಸ್ಥಲಗಳಿರುತ್ತವೆ. ಅವುಗಳ ವಿಷಯಕವಾಗಿ ಇಲ್ಲಿ ವಿವೇಚಿಸಲಾಗುವುದು.

೩೭) ಶರಣಸ್ಥಲ :

ಪತಿವ್ರತೆಯಾದ ಸತಿಯು ತನ್ನ ಪತಿಯಲ್ಲಿಯೇ ಆಸಕ್ತಳಾಗಿರುವಂತೆ ಶಿವನಲ್ಲಿಯೇ ಭಾವವನ್ನಿಟ್ಟಿರುವ ಈ ಸಾಧಕನು ಶರಣನೆಂಬುದಾಗಿ ಕರೆಯಲ್ಪಡುತ್ತಾನೆ. ಸಾಕ್ಷಾತ್ ಶಿವಜ್ಞಾನವು ಪ್ರಾಪ್ತವಾಗಲು ಅನ್ಯದೇವರಿಂದ ಬೇರೆ ಏನನ್ನೂ ಪಡೆಯುವ ಅಭಿಲಾಷೆ ಉಳಿಯುವುದಿಲ್ಲ. ಬಹುದೊಡ್ಡದಾದ ರತ್ನದ ರಾಶಿಯೇ ದೊರೆತಾಗ ಅನ್ಯರಿಂದ ಯಾರಾದರೂ ಗಾಜಿನ ಮಣಿಗಳನ್ನು ಅಪೇಕ್ಷಿಸಬಲ್ಲರೇ? ಗಂಗಾಮೃತ ವನ್ನು ಪರಿತ್ಯಜಿಸಿ ಮೃಗ–ಮರೀಚಿಕೆಯನ್ನು ಅದಾರೂ ಅಪೇಕ್ಷಿಸದಿರುವಂತೆ ಶಿವಾನಂದವು ಪ್ರಾಪ್ತವಾಗಲು ಅನ್ಯದೇವರ ಅಪೇಕ್ಷೆಯು ಅದು ಹೇಗೆ ತಾನೆ ಉಂಟಾದೀತು? ಉಂಟಾಗುವುದಿಲ್ಲ ಎಂಬ ಭಾವವು. ಹೊನ್ನೆಯ ಹುಳುಗಳು ಕತ್ತಲೆಯನ್ನು ದೂರಮಾಡಲು ಸಮರ್ಥವಾಗದೆ ಅದರ ನಿವಾರಣೆಗಾಗಿ ಸೂರ್ಯ ಪ್ರಕಾಶವೇ ಬೇಕಾಗುವಂತೆ ಅನ್ಯ ಬ್ರಹ್ಮಾದಿ ದೇವರುಗಳಿಂದ ಈ ಸಂಸಾರದ ನಿವೃತ್ತಿಯಾಗದು. ಅದಕ್ಕಾಗಿ ಶಿವನಿಗೇನೇ ಶರಣು ಹೋಗಬೇಕಾಗುವುದು.

ನೀರಡಿಸಿದ ಚಕೋರಪಕ್ಷಿಯು ಚಂದ್ರನ ಉದಯವನ್ನು ನಿರೀಕ್ಷಿಸುವುದೇ ವಿನಹ ತಾರೆಗಳ ಆವಿರ್ಭಾವವನ್ನಲ್ಲ. ಅದರಂತೆ ಸಂಸಾರ ತಾಪದಿಂದ ತಪ್ತನಾದ ಶರಣನು ಶಿವನಿಗೆ ಶರಣಾಗುವನೇ ವಿನಹಾ ಅನ್ಯ ಬ್ರಹ್ಮಾದಿ ದೇವರುಗಳತ್ತ ಹೊರಳಿಯೂ ಸಹ ನೋಡಲಾರನು. ಶಿವನೋರ್ವನೇ ಸರ್ವರಿಗೂ ಶರಣಾಗತರಕ್ಷಕ ನಾಗಿರುತ್ತಾನೆ. ಆದ್ದರಿಂದ ಸಂಸಾರವೆಂಬ ಉರಗಕಚ್ಚಿದ ಜೀವಿಗಳೆಲ್ಲ ಸರ್ವಜ್ಞನಾದ ಮತ್ತು ಸರ್ವರ ದೋಷಗಳನ್ನು ಕಳೆಯುವ ಶಿವನಿಗೇನೇ ಶರಣಾಗತರಾಗಬೇಕು. ಶಿವಜ್ಞಾನವುಂಟಾಗಲು ಪರಮಾನಂದವು ಲಭಿಸುವುದು. ಆದ್ದರಿಂದ ಶಿವಾಸಕ್ತನಾದ ಯೋಗಿಯು ಅನ್ಯತ್ರ ಎಲ್ಲಿಯೂ ರಮಿಸಲಾರನು. ಆದ್ದರಿಂದ ಎಲ್ಲ ವಿಧ ಪ್ರಯತ್ನ ಪೂರ್ವಕವಾಗಿ ಶರಣಾಗತನಾದ ಈ ಶರಣನು ಆ ಶಿವನ ಅನಂತಸುಖವನ್ನು ಪಡೆದು ಬೇರಾವುದರ ಚಿಂತೆಯಿಲ್ಲದೆ ನಿಶ್ಚಿಂತನಾಗಿರುತ್ತಾನೆ. (ಸಿ.ಶಿ., ೧೩. ೫– ೧೨)

೩೮) ತಾಮಸನಿರಸನಸ್ಥಲ :

ಈ ಪೂರ್ವದಲ್ಲಿ ಹೇಳಿದಂತೆ ಶಿವನಿಗೆ ಶರಣಾಗತನಾಗಿ ಆ ಶಿವನ ಪರಮಾನಂದವನ್ನು ಅನುಭವಿಸುವ ಈ ಶರಣನು ತನ್ನಲ್ಲುಂಟಾಗುವ ತಮೋಗುಣದ ವಿಕಾರಗಳನ್ನು ಯಾವಾಗ ದೂರಮಾಡಿಕೊಳ್ಳುವನೋ ಆಗ ಇವನಿಗೆ ತಾಮಸ ನಿರಾಸಕನೆಂದು ಕರೆಯಲಾಗುತ್ತದೆ. ಯಾರು ತಮೋಗುಣಿಯಾಗಿರುತ್ತಾರೆಯೋ ಅವರಿಗೆ ಪ್ರಗತಿಯು ಉಂಟಾಗುವುದಿಲ್ಲ. ಸತ್ವಗುಣವಿದ್ದಾಗಲೇ ಜ್ಞಾನದ

ಅಭಿವೃದ್ಧಿಯಾಗುವುದು ಎಂಬುದಾಗಿ ಜ್ಞಾನಿಗಳು ಪ್ರತಿಪಾದಿಸಿದ್ದಾರೆ. ಶಮೆ (ಅಂತರಿಂದ್ರಿಯ ನಿಗ್ರಹ) ದಮೆ, (ಬಹಿರಿಂದ್ರಿಯ ನಿಗ್ರಹ) ವಿವೇಕ, ವೈರಾಗ್ಯ, ಪರಿಪೂರ್ಣತೆ, ಶಾಂತಿ, ಕಾರುಣ್ಯ ಸಂಪತ್ತಿ, ಶ್ರದ್ಧೆ, ಶಿವಭಕ್ತಿ ಮತ್ತು ಉತ್ಕೃಷ್ಟವಾದ ಶಿವಾಚಾರ ಇವೆಲ್ಲವುಗಳು ಶಿವಜ್ಞಾನದ ಬಂಧುಗಳಾಗಿರುತ್ತವೆ. ಇವುಗಳಿಂದ ಕೂಡಿಕೊಂಡಿರುವ ಯೋಗಿಯು ಸಾತ್ವಿಕನೆಂಬುದಾಗಿ ಕರೆಯಲ್ಪಡುತ್ತಾನೆ. ಸಿಂಹದ ಮುಂದೆ ಆನೆಯು ಸಾತ್ವಿಕನೆಂಬುದಾಗಿ ಕರೆಯಲ್ಪಡುತ್ತಾನೆ. ಸಿಂಹದ ಮುಂದೆ ಆನೆಯು ಎದುರು ನಿಲ್ಲದಂತೆ ಶಿವಜ್ಞಾನಿಗೆ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯ ಎಂಬ ಅರಿಷಡ್ವರ್ಗಗಳು ಅದಾವ ದುಷ್ಪ್ರಭಾವವನ್ನೂ ಬೀರಲಾರವು.

ಶಿವಸ್ವರೂಪವಾದ ಈ ಪ್ರಪಂಚದಲ್ಲಿ ಯಾರೊಂದಿಗೆ ಎಲ್ಲಿಯೇ ದ್ವೇಷವನ್ನು ಮಾಡಿದರೂ ಶಿವನೊಂದಿಗೇನೇ ದ್ವೇಷವನ್ನು ಮಾಡಿದಂತಾಗುತ್ತದೆ. ಆದ್ದರಿಂದ ಈ ಶರಣನು ದ್ವೇಷಾದಿಗಳಿಗೆ ಕಾರಣೀಭೂತವಾದ ತಮೋಗುಣವನ್ನು ನಿರಾಕರಿಸುತ್ತಾನೆ. ಯಾವನು ಎಲ್ಲರನ್ನೂ ದ್ವೇಷಿಸುತ್ತಾನೆಯೋ ಯಾವಾಗಲೂ ಅಹಂಕಾರದಿಂದ ಕೂಡಿದವನಾಗಿರುತ್ತಾನೆಯೋ ಮತ್ತು ಸದಾ ಅಸದ್ ಭಾವನೆಯನ್ನು ಹೊಂದಿರುತ್ತಾನೆಯೋ ಅಂಥ ವ್ಯಕ್ತಿಗೆ ತಾಮಸನೆಂದು ಕರೆಯಲಾಗುತ್ತದೆ. ತಮೋ ಗುಣದಿಂದ ಹುಟ್ಟಿರುವ ರಾಗ–ದ್ವೇಷಗಳೆಂಬ ಗಿಡಗಳನ್ನು ಯಾವಾಗಲೂ ಶಿವಜ್ಞಾನ ವೆಂಬ ಕೊಡಲಿಯಿಂದ ಕತ್ತರಿಸುತ್ತಿರಬೇಕು. ಸಹಸ್ರಾರು ಸೂರ್ಯರ ಪ್ರಕಾಶಕ್ಕೆ ಸಮಾನವಾಗಿರುವ ಶಿವಜ್ಞಾನವುಂಟಾಗಲು ಈ ಶರಣನಿಗೆ ಅದು ಹೇಗೆ ತಾನೆ ಗಾಢಾಂಧಃಕಾರರೂಪಿಯಾದ ತಮೋಗುಣವು ವಿಕಾರವನ್ನುಂಟುಮಾಡೀತು? ಅಂದರೆ ಈ ಶಿವಜ್ಞಾನಿಯಾದ ಈ ಶರಣನಿಗೆ ತಮೋಗುಣದ ವಿಕಾರಗಳು ಉಂಟಾಗುವುದಿಲ್ಲವೆಂಬ ಭಾವವು (ಸಿ.ಶಿ., ೧೩. ೧೩–೨೧)

೩೯) ನಿರ್ದೇಶಸ್ಥಲ :

ಸಂಸಾರಕ್ಕೆ ಕಾರಣೀಭೂತವಾಗಿರುವ ತಮೋಗುಣವನ್ನು ನಿರಾಕರಿಸಿ ಯಾವ ಜ್ಞಾನವು ನಿರ್ದೇಶಿಸಲ್ಪಡುವುದೋ ಅರ್ಥಾತ್ ಉಪದೇಶಿಸಲ್ಪಡುವುದೋ ಅದಕ್ಕೆ ನಿರ್ದೇಶಸ್ಥಲವೆಂದು ಕರೆಯುತ್ತಾರೆ. ಅಂದರೆ ಗುರುವಿನಿಂದ ಉಪದೇಶಿಸುವ ವಿಧಾನವೇ ನಿರ್ದೇಶವೆಂದು ತಿಳಿಯಬೇಕು. ಸೂರ್ಯನ ಹೊರತಾಗಿ ಲೋಕದ ಕತ್ತಲೆಯನ್ನು ಕಳೆಯಲು ಅದಾರಿಗೂ ಸಾಮರ್ಥ್ಯವಿಲ್ಲದಿರುವಂತೆ ಗುರುವಿನ ಹೊರತಾಗಿ ಜೀವಿಗಳಿಗೆ ತತ್ತ್ವೋಪದೇಶವನ್ನು ಮಾಡಲು ಬೇರಾರು ಯೋಗ್ಯರಿರುವು ದಿಲ್ಲ. ರೋಗದ ನಿದಾನವನ್ನು ಬಲ್ಲ ವೈದ್ಯನಿಲ್ಲದೆ ರೋಗವು ನಿವೃತ್ತವಾಗದಂತೆ

ಗುರುವಿನ ಉಪದೇಶವಿಲ್ಲದೆ ಸಂಸಾರವು ಅದೆಂದೂ ತೊಲಗದು. ಅಜ್ಞಾನದಿಂದ ಮಲಿನವಾದ ಚಿತ್ತವೆಂಬ ದರ್ಪಣವನ್ನು ಜ್ಞಾನವೆಂಬ ವಿಭೂತಿಯಿಂದ ತಿಕ್ಕಿ ಅದನ್ನು ಹಸನಗೊಳಿಸುವವನಿಗೆ ಗುರುಶ್ರೇಷ್ಠನೆಂದು ಕರೆಯುತ್ತಾರೆ. ಪರಮ ತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡು ಜೀವನ್ಮುಕ್ತನಾಗಿರುವ ಗುರುವಿನ ಕೃಪಾಕಟಾಕ್ಷವು ಪ್ರಾಪ್ತ ವಾಗಿರಲು ಈ ಲೋಕದಲ್ಲಿ ಅವನಿಗೆ ದುರ್ಲಭವೆಂಬುದು ಅದಾವುದೂ ಉಳಿಯುವುದಿಲ್ಲ. ಅಂದರೆ ಗುರುಕೃಪೆಯನ್ನು ಪಡೆದವನಿಗೆ ಎಲ್ಲವೂ ಸುಲಭವಾಗುವುದು. ಕೈವಲ್ಯವನ್ನು ಕೊಡಲು ಕಲ್ಪತರುವಾಗಿರುವ, ಕರುಣೆಯ ಆಗರ ವಾಗಿರುವ, ಶಿವಾದ್ವೈತ ಜ್ಞಾನವನ್ನೂ ಪಡೆದುಕೊಂಡಿರುವ ಗುರುಗಳು ಈ ಜಗತ್ತಿನಲ್ಲಿ ಸಿಗುವುದು ಅತ್ಯಂತ ದುರ್ಲಭವಾಗಿದೆ. ಸಮುದ್ರಗಳಲ್ಲಿ ಕ್ಷೀರಸಾಗರವೂ, ಪರ್ವತಗಳಲ್ಲಿ ಸುಮೇರುವೂ, ಗ್ರಹಗಳಲ್ಲಿ ಸೂರ್ಯನೂ, ಮಣಿಗಳಲ್ಲಿ ಕೌಸ್ತುಭವೂ, ವೃಕ್ಷಗಳಲ್ಲಿ ಚಂದನದ ಗಿಡವೂ ಮತ್ತು ದೇವತೆಗಳಲ್ಲಿ ಶಂಕರನು ಶ್ರೇಷ್ಠನಾಗಿರುವಂತೆ ಉಳಿದೆಲ್ಲ ಪ್ರಾಕೃತ ಗುರುಗಳಿಗಿಂತ ಶಿವಾದ್ವೈತಜ್ಞಾನಸಂಪನ್ನನಾದ ಸದ್ಗುರುವೇ ಶ್ರೇಷ್ಠನಾಗಿರುತ್ತಾನೆ. (ಸಿ.ಶಿ., ೧೩. ೨೨-೨೮)

೪೦) ಶೀಲಸಂಪಾದನಸ್ಥಲ :

ಶಿವತತ್ತ್ವವನ್ನು ಅರಿಯಬೇಕೆನ್ನುವ ಉತ್ಕಟವಾದ ಜಿಜ್ಞಾಸೆಗೆ ಶೀಲವೆಂದು ಕರೆಯುತ್ತಾರೆ. ಇಂತಹ ಶೀಲವುಳ್ಳವನೇ ಶೀಲಿಯು. ಶರಣಾಗತರಕ್ಷಕನಾದ ಪರಮಾತ್ಮನಲ್ಲಿ ಸ್ಥಿರವಾದ ಭಾವನೆಯನ್ನು ಇಡುವುದೂ ಸಹ ಶೀಲವೆನಿಸಿಕೊಳ್ಳುವುದು. ಶಿವಧ್ಯಾನದಲ್ಲಿ ಏಕಾಗ್ರತೆ, ಶಿವಪ್ರಾಪ್ತಿಯಲ್ಲಿ ಉತ್ಕಂಠತೆ ಮತ್ತು ಶಿವಜ್ಞಾನವೊಂದನ್ನೇ ಪಡೆಯುವಿಕೆ, ಇವೆಲ್ಲವುಗಳು ಶೀಲಗಳೆಂದು ಕರೆಯಲ್ಪಡುತ್ತವೆ. ಇಂತಹ ಶೀಲವುಳ್ಳವನೇ ಶೀಲವಾನನು. ಶಿವನ ಹೊರತಾಗಿ ಬೇರಾವುದನ್ನೂ ತಿಳಿದುಕೊಳ್ಳದ ಅಪೇಕ್ಷೆಯಿಲ್ಲ ದಿರುವ ಕೇವಲ ಶಿವನನ್ನು ತಿಳಿದುಕೊಳ್ಳುವುದರಲ್ಲಿ ಆಸಕ್ತವಾದ ಮನೋವೃತ್ತಿ ಯುಳ್ಳವನಿಗೆ ಶೀಲಭಾಜನನೆಂದು ಕರೆಯುತ್ತಾರೆ. ಪತಿವ್ರತೆಯ ಶೀಲವು ಪತಿಯ ಮೇಲಿರುವ ಪ್ರೀತಿಯಿಂದ ಪ್ರಶಸ್ತವಾಗಿ ತೋರುವಂತೆ ಶಿವನಲ್ಲಿರುವ ಅತಿಯಾದ ಅನುರಾಗದಿಂದಿವನು ಸುಶೀಲನಾದ ಭಕ್ತನೆಂದು ಕರೆಯಿಸಿಕೊಳ್ಳುವನು.

ಪತಿವ್ರತೆಯಾದ ಸ್ತ್ರೀಗೆ ಪತಿಯ ಹೊರತಾಗಿ ಬೇರೆಯವರ ಸೇವೆಯು ನಿಷೇಧಿಸಲ್ಪಟ್ಟಿರುವಂತೆ ಈ ಶೀಲವಾನನಾದ ಶರಣನಿಗೆ ಶಿವನ ಹೊರತಾಗಿ ಅನ್ಯ ದೇವತೆಗಳ ಸೇವೆಯು ನಿಂದನೀಯವಾಗಿದೆ. ಈ ಶೀಲದ ವಿಷಯದಲ್ಲಿ ಹೆಚ್ಚಿಗೆ ಹೇಳುವುದಾದರೂ ಏನಿದೆ? ಕೇವಲ ಶಿವಜ್ಞಾನವನ್ನು ಪಡೆಯುವಲ್ಲಿ ಇರುವ ಏಕ ನಿಷ್ಠೆಯೇ ಇಲ್ಲಿ ಶೀಲವೆಂದೂ ಕರೆಯಲ್ಪಡುತ್ತದೆ. ಅದು ಉಳ್ಳವನೇ ಶೀಲವಾನ್ ನೆಂಬುದಾಗಿ ತಿಳಿದುಕೊಳ್ಳಬೇಕು (ಸಿ.ಶಿ., ೧೩. ೩೦-೩೭)

ಈ ವಿಧವಾಗಿ ಇಲ್ಲಿಯವರೆಗೆ ಹೇಳಲ್ಪಟ್ಟ ಶರಣಸ್ಥಲದಲ್ಲಿ ಬರುವ ನಾಲ್ಕು ಅವಾಂತರಸ್ಥಲಗಳನ್ನು ಅರಿತು ಅದರಂತೆ ಅನುಭವಿಸಿ ಆಚರಿಸುವವನೇ ಶರಣನೆಂಬುದಾಗಿ ತಿಳಿದುಕೊಳ್ಳ ಬೇಕು.

ಐಕ್ಯಸ್ಥಲ

ಮಹರ್ಷಿಯಾದ ಅಗಸ್ತ್ಯನು ಶರಣಸ್ಥಲದ ಅವಾಂತರಸ್ಥಲಗಳ ಬಗ್ಗೆ ಸರಿಯಾಗಿ ತಿಳಿದುಕೊಂಡವನಾಗಿ ಮುಂದಿನ ಸ್ಥಲವನ್ನು ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದ ಶ್ರೀ ಜಗದ್ಗುರು ರೇಣುಕ ಭಗವತ್ಪಾದರನ್ನು ಕುರಿತು – "ಹೇ ಗಣಶ್ರೇಷ್ಠನೇ! ಈ ಶರಣನು ಐಕ್ಯಸ್ಥಿತಿಯನ್ನು ಹೊಂದುವ ಪರಿ ಯಾವುದು? ಅದನ್ನು ತಿಳಿಸಿಕೊಡಬೇಕೆಂದು ಕೇಳಿಕೊಳ್ಳಲಾಗಿ ಪೂಜ್ಯಪಾದರು –

ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ ।
ಶರಣಾಖ್ಯಃ ಶಿವೇನೈಕ್ಯಭಾವನಾದೈಕ್ಯವಾನ್ ಭವೇತ್ ॥

(ಸಿ.ಶಿ., ೧೪–೨)

ಎಂದು ಉಪದೇಶಿಸಿದ್ದಾರೆ. ಅಂದರೆ ಈ ಪೂರ್ವದಲ್ಲಿ ಹೇಳಿದ ಶರಣನು ಪ್ರಾಣಲಿಂಗಾದಿಗಳ ಅನುಸಂಧಾನವನ್ನು ಮಾಡಿ ಸುಖಾತಿಶಯವನ್ನು ಪಡೆದು, ಕೊನೆಗೆ ಶಿವನೊಂದಿಗೆ ಐಕ್ಯಭಾವನೆಯನ್ನು ತಾಳಿದಾಗ ಐಕ್ಯನೆಂದು ಕರೆಯಲ್ಪಡುತ್ತಾನೆ. ಈ ಐಕ್ಯಸ್ಥಲದಲ್ಲಿಯೂ ಸಹ ನಾಲ್ಕು ಅವಾಂತರಸ್ಥಲಗಳಿರುತ್ತವೆ. ಅವುಗಳ ಸ್ವರೂಪವನ್ನು ಕ್ರಮವಾಗಿ ವಿವೇಚಿಸಲಾಗುವುದು.

೪೧) ಐಕ್ಯಸ್ಥಲ :

ಶಬ್ದ–ಸ್ಪರ್ಶಾದಿ ವಿಷಯಗಳ ಕ್ಷಣಿಕವಾದ ಸುಖದಲ್ಲಿ ನಿಸ್ಪೃಹನಾದ, ನಿರ್ಮಲ ವಾದ ಚಿತ್ತವುಳ್ಳ ಅಂತೆಯೇ ಶಿವಾನಂದರೂಪವಾದ ಮಹಾಸಿಂಧುವಿನಲ್ಲಿ ನಿಮಜ್ಜನ ಗೈಯ್ಯುವ ಆ ಪೂರ್ವದ ಶರಣನೇ ಇಲ್ಲಿ ಐಕ್ಯನೆಂದು ಕರೆಯಲ್ಪಡುತ್ತಾನೆ. ಆಣವಾದಿ ಮಲತ್ರಯಗಳನ್ನು ನಿವಾರಿಸಿಕೊಂಡಿರುವ, ನಿಷ್ಕಲಂಕವಾದ ಮನೋವೃತ್ತಿಯುಳ್ಳ ಶರಣನು 'ಶಿವೋಽಹಂ' ಎಂಬ ಭಾವನೆಯಿಂದ ನಿರೂಢನಾಗಲು ಅರ್ಥಾತ್ ಮುಕ್ತನಾಗಲು ಅವನು ಐಕ್ಯನೆನಿಸಿಕೊಳ್ಳುವನು. ಹೀಗೆ ಸಚ್ಚಿದಾನಂದ ಸ್ವರೂಪನಾದ ಶಿವನೊಂದಿಗೆ ಐಕ್ಯಸ್ಥಿತಿಯನ್ನು ಪಡೆದ ಈ ಐಕ್ಯಸ್ಥಲಿಯು ಮಾಯಾಕಲ್ಪಿತವಾದ ಈ ಜಗಜ್ಜಾಲವನ್ನು ನೋಡಲಾರನು. ಅರ್ಥಾತ್ ಸರ್ವತ್ರ ಶಿವದರ್ಶನವನ್ನೇ ಮಾಡುವನೆಂಬ ತಾತ್ಪರ್ಯವು. ಬ್ರಹ್ಮಾಂಡಗಳೆಂಬ ನೆರೆ–ತೊರೆಗಳ ಆವಿರ್ಭಾವದಿಂದ

ವೃದ್ಧಿಯನ್ನು ಹೊಂದಿರುವ ಮೂವತ್ತಾರು ತತ್ತ್ವಗಳೆಂಬ ತರಂಗಗಳುಳ್ಳ ಈ ಮಾಯಾ ಸಮುದ್ರವು ಶಿವೈಕ್ಯಸ್ಥಿತಿಯೆಂಬ ವಡಬಾನಲವು ಉದಯವಾಗಲು ಇಲ್ಲದಾಗಿ ಹೋಗುವುದು. ಅಂದರೆ ವಡವಾಗ್ನಿಯಿಂದ ಸಮುದ್ರವು ದಗ್ಧವಾಗಿ ಹೋಗುವಂತೆ ಶಿವನೊಂದಿಗೆ ಐಕ್ಯಸ್ಥಿತಿಯನ್ನು ಪಡೆದ ಈ ಐಕ್ಯಸ್ಥಲಿಗೆ ಈ ಮಾಯಾರೂಪವಾದ ಪ್ರಪಂಚವು ತೋರುವುದಿಲ್ಲವೆಂಬ ಭಾವವು.

ಶಿವನಲ್ಲಿ ಭೇದವನ್ನು ಕಲ್ಪಿಸುವ ಮಾಯಾಶಕ್ತಿಯ ಶಿರೋಧಾನವಾಗಲು ಅದ್ವೈತದ ಹೊರತಾಗಿ ಬೇರಾವುದೂ ಉಳಿಯಲಾರದು. ಪಶುಭಾವವಾಗಲಿ ಮತ್ತು ಪತಿಭಾವವಾಗಲಿ ಇವೆರಡೂ ಮಾಯಾ ಮೋಹದಿಂದ ಕಲ್ಪಿತವಾದವುಗಳು. ಈ ಮಾಯಾ ಮೋಹವೇ ಇಲ್ಲವಾಗಲು ಪಶು ಯಾರು? ಪತಿ ಯಾರು? ಭೇದವೆಂಬ ಹುತ್ತದೊಳಗೆ ವಾಸಿಸುವ ಘೋರ ಸಂಸಾರವೆಂಬ ಸರ್ಪವು ಪರಮಾದ್ವೈತ ಭಾವನೆಯಿಂದ ಬಾಧಿತವಾಗುವುದು. ಅಂದರೆ ಶಿವ–ಜೀವರ ಐಕ್ಯಸ್ಥಿತಿಯಿಂದ ಸಂಸಾರವು ನಿವೃತ್ತವಾಗುವುದು. ಭೇದಬುದ್ಧಿಯಿಂದ ಉತ್ಪನ್ನವಾದ ಸಂಸಾರವೆಂಬ ಮಹಾಸಾಗರವನ್ನು ಅದ್ವೈತಬುದ್ಧಿಯೆಂಬ ಹಡಗದಿಂದ ದೇಶಿಕನು ಅಂದರೆ ಐಕ್ಯಸ್ಥಿತಿಯನ್ನು ಪಡೆದವನು ದಾಟಿಹೋಗುತ್ತಾನೆ. ಅಜ್ಞಾನ ರೂಪವಾದ ಗಾಢಾಂಧಃಕಾರದಿಂದ ಹುಟ್ಟಿ ಕಾಮವ್ಯಾಪಾರ ರೂಪವಾದ ರಾಕ್ಷಸಕೃತ್ಯವನ್ನು ಮಾಡುತ್ತಿರುವ ಈ ಸಂಸಾರವೆಂಬ ಕಾಳರಾತ್ರಿಯು ಶಿವಾದ್ವೈತಜ್ಞಾನವೆಂಬ ಸೂರ್ಯನ ಉದಯವಾಗಲು ಒಡನೆ ಅಳಿದುಹೋಗುವುದು. ಆದ್ದರಿಂದ ಈ ಘೋರ ಸಂಸಾರದ ಪಾಪನಿವೃತ್ತಿಯ ಸಲುವಾಗಿ ಅದ್ವೈತ ಭಾವನೆಗೆ ಸಮಾನವಾದ ಬೇರೊಂದು ಉಪಾಯವಿರುವುದಿಲ್ಲ. ಒಂದು ಕ್ಷಣಮಾತ್ರದ ಅದ್ವೈತ ಭಾವನೆಯಿಂದ ಉಂಟಾಗುವ ಸುಖವು ಒಂದು ಕೋಟಿ ವರ್ಷದವರೆಗಿನ ಅನುಭವಿಸಿದ ರಾಜಭೋಗ ವಿಷಯಸುಖಕ್ಕಿಂತಲೂ ಮಿಗಿಲಾದದ್ದಾಗಿರುತ್ತದೆ. ತನ್ನ ಮನೋವ್ಯಾಪಾರದಲ್ಲಿ ಸಕಲ ಜಗತ್ತು ಅಡಗಿಹೋಗಿರುವ ಶಿವಯೋಗಿಗೆ ಶಿವಾದ್ವೈತಭಾವನೆಯಿಂದ ಉಂಟಾಗುವ ಆನಂದಾಭಿವ್ಯಕ್ತಿಯೇ ಮುಕ್ತಿಯೆಂದು ಕರೆಯಲಾಗುತ್ತದೆ. ಇದುವೇ ಐಕ್ಯನ ಐಕ್ಯಸ್ಥಿತಿಯು. (ಸಿ.ಶಿ., ೧೪. ೪–೧೫)

೪೨) ಆಚಾರಸಂಪತ್ತಿಸ್ಥಲ :

ಐಕ್ಯಸ್ಥಿತಿಯನ್ನು ಪಡೆದ ಶಿವಯೋಗಿಯು ತಾನು ಆಚರಿಸಿದ ಕರ್ಮಗಳಿಂದ ಅಲಿಪ್ತನಾಗಿರುವ ಸ್ಥಿತಿಯನ್ನು ಪ್ರತಿಪಾದಿಸುವ ಸ್ಥಲವೇ ಆಚಾರಸಂಪತ್ತಿಸ್ಥಲವು. ಶಿವಜ್ಞಾನಸಂಪನ್ನನಾದ ಶಿವಯೋಗಿಯು 'ಶಿವಸ್ವರೂಪನೇ ಆಗಿರುವುದರಿಂದ ಆತನು ದೇಹಧಾರಿಯಾಗಿದ್ದರೂ ದೇಹಾಭಿಮಾನಶೂನ್ಯನಾಗಿರುತ್ತಾನೆ. ಅಂತೆಯೇ ಆತನು

ತನ್ನಿಂದ ಆಚರಿಸಲ್ಪಟ್ಟ ಶುಭಾಶುಭ ಕರ್ಮಗಳ ಫಲದಿಂದ ಲಿಪ್ತನಾಗುವುದಿಲ್ಲ. ಶಿವನೊಂದಿಗೆ ಸಮರಸ ಭಾವವನ್ನು ಪಡೆದ ಮನಸ್ವೀಯಾದ ಶಿವಯೋಗಿಯಿಂದ ಯಾವುದೇ ಪ್ರಕಾರದ ಶುಭಾಶುಭಕರ್ಮಗಳು ಉಂಟಾಗಲಿ ಅಥವಾ ಆಗದಿರಲಿ ಆತನು ಅವುಗಳ ಫಲದಿಂದ ಅಲಿಪ್ತನೇ ಆಗಿರುತ್ತಾನೆ. ಶಿವಾದ್ವೈತಜ್ಞಾನವನ್ನು ಪಡೆದು, ಸಮದೃಷ್ಟಿ ಸಂಪನ್ನನಾದ ಶಿವಯೋಗಿಗೆ ಪಾಪಿಯೇ ಇರಲಿ, ಪುಣ್ಯಾತ್ಮನೇ ಇರಲಿ, ಬ್ರಾಹ್ಮಣನೇ ಇರಲಿ ಅಥವಾ ಅಂತ್ಯಜನಾಗಿರಲಿ ಇವರೆಲ್ಲರೂ ಇವನಿಗೆ ಸಮಾನರೇ ಆಗಿರುತ್ತಾರೆ. ನಿರ್ಮಲವಾದ ಜ್ಞಾನಾಗ್ನಿಯಿಂದ ಕರ್ಮ ಬೀಜಗಳನ್ನು ಹುರಿದುಕೊಂಡಿರುವ ಈ ಐಕ್ಯಸ್ಥಲಿಯು ದೇಹಿಯಂತೆ ತೋರುತ್ತಿದ್ದರೂ ಅವನ ಆ ದೇಹಯಾತ್ರೆಯು ಕೇವಲ ತೋರಿಕೆಗೆ ಮಾತ್ರವಾಗಿರುತ್ತದೆ. ಶಿವಾದ್ವೈತಜ್ಞಾನದಿಂದ ಉಂಟಾದ ದೃಢವಾದ ವೈರಾಗ್ಯವು ಯಾರ ಮನಸ್ಸಿನಲ್ಲಿ ಸುಸ್ಥಿರವಾಗಿರುತ್ತದೆಯೋ ಅಂತಹ ಆ ಶಿವಯೋಗಿಯು ನೀರಿನಲ್ಲಿರುವ ಕಮಲವು ನೀರಿನಿಂದ ಲಿಪ್ತವಾಗದಿರುವಂತೆ ಇವನು ತನ್ನ ಕರ್ಮಗಳಿಂದ ಲಿಪ್ತನಾಗುವುದಿಲ್ಲ.

ಶಿವಾದ್ವೈತ ಜ್ಞಾನಿಯಾದ ಈತನ ಸದಾ ಶಿವಾದ್ವೈತ ಭಾವವುಳ್ಳವನಾಗಿರೋಣದರಿಂದ ಈತನು ಹೋಗುತ್ತಿರಲಿ, ಕುಳಿತಿರಲಿ, ಮಲಗಿರಲಿ ಮತ್ತು ಎಚ್ಚರಾಗಿರಲಿ ಈ ಎಲ್ಲ ಅವಸ್ಥೆಗಳಲ್ಲಿ ಶಿವಪೂಜಾರತನೇ ಆಗಿರುತ್ತಾನೆ. ಈ ಶಿವಯೋಗಿಯು ಏನನ್ನೇ ನೋಡುತ್ತಿದ್ದರೂ ಶಿವದರ್ಶನವನ್ನೇ ಮಾಡುತ್ತಿರುತ್ತಾನೆ. ಇದೂ ಅಲ್ಲದೆ ಅವನು ಮಾಡುವ ಪ್ರತಿಯೊಂದು ವ್ಯವಹಾರವು ಶಿವಪೂಜೆಯೇ ಆಗಿರುತ್ತದೆ. (ಸಿ.ಶಿ., ೧೪. ೧೬-೨೭)

೪೩) ಏಕಭಾಜನಸ್ಥಲ:

ತನ್ನನ್ನು, ಶಿವನನ್ನು ಹಾಗೂ ಪ್ರಪಂಚವನ್ನು ಏಕರೂಪವಾಗಿ ಭಾವಿಸುವ ವಿಷಯವನ್ನು ಪ್ರತಿಪಾದಿಸುವ ಸ್ಥಲವೇ ಏಕಭಾಜನಸ್ಥಲವು. ಶಿವನಲ್ಲಿ ಜಗತ್ತು ಇರುವುದಲ್ಲದೆ ಜಗತ್ತಿನ ತುಂಬೆಲ್ಲ ಶಿವನೂ ಇದ್ದಾನೆ. ಹೀಗೆ ಪರಸ್ಪರ ಆಧಾರ-ಆಧೇಯಭಾವ ಸಂಬಂಧದಿಂದ ಶಿವ ಮತ್ತು ಜಗತ್ತುಗಳು ಇರುತ್ತವೆ. ಶಿವನೊಂದಿಗೆ ಐಕ್ಯಭಾವನೆಯನ್ನು ಹೊಂದಿದ ಅಂತೆಯೇ ಶಿವಾತ್ಮಕವಾದ ಚಿತ್ತವೃತ್ತಿಯುಳ್ಳ ಶಿವಯೋಗಿಗೆ ಮಾಯಾ ಮೂಲಕವಾದ ಈ ಪ್ರಾಪಂಚಿಕ ಭೇದದಿಂದ ಆವ ಪ್ರಯೋಜನವೂ ಇರುವುದಿಲ್ಲ. ಘಟ-ಪಟಾದಿ ಪ್ರಪಂಚವನ್ನೆಲ್ಲ ಚಿದ್ರೂಪನಾದ ಪರಮಾತ್ಮನೇ ಪ್ರಕಾಶನಗೊಳಿಸುವನು. ಶಿವನ ಆ ಪ್ರಕಾಶವಿರದಿದ್ದರೆ ಜಗತ್ತಿನ ಯಾವ ವಸ್ತುವೂ ತೋರುತ್ತಿರಲಿಲ್ಲ. ಹೀಗೆ ಚಿದ್ರೂಪನಾದ ಪರಮಾತ್ಮನಲ್ಲಿ ತೋರುವ ಈ ಪ್ರಪಂಚವೆಲ್ಲವೂ ಚಿನ್ಮಯವೇ ಆಗಿರುತ್ತದೆ. ಬಾಹ್ಯ ವ್ಯವಹಾರಗಳೆಲ್ಲ ಶೂನ್ಯವಾಗಿ

ತನ್ನ ಹೃದಯದಲ್ಲಿರುವ ಶಿವನಲ್ಲಿ ಯಾವಾಗ ಈ ಶಿವಯೋಗಿಯ ಚಿತ್ತವೃತ್ತಿಯು ಸದಾ ಲೀನವಾಗುವುದೋ ಆಗತಾನೇ ಆತನು ಜೀವನ್ಮುಕ್ತನೆಂದು ಕರೆಯಿಸಿ ಕೊಳ್ಳುತ್ತಾನೆ. (ಸಿ.ಶಿ., ೧೪. ೨೮–೩೩)

೪೪) ಸಹಭೋಜನಸ್ಥಲ :

ಐಕ್ಯಸ್ಥಲಗಳಲ್ಲಿ ಕೊನೆಯದಾದ ಸ್ಥಲವೇ ಸಹಭೋಜನಸ್ಥಲವು. ತನ್ನ ಗುರುವನ್ನು, ತನ್ನ ಆರಾಧ್ಯ ದೇವರನ್ನು ಮತ್ತು ತನ್ನನ್ನು ಹೀಗೆ ಈ ಮೂರನ್ನು ಸಮರಸವಾಗಿ ಅಂದರೆ ಏಕರೂಪವಾಗಿ ಭಾವಿಸುವ ಸ್ಥಲವೇ ಸಹಭೋಜನಸ್ಥಲ. ಇವನು ಶಿವನು, ಈತನು ಗುರುವು ಮತ್ತು ಇದು ಜಗತ್ತು ಇವೆಲ್ಲವುಗಳಿಗಿಂತಲೂ ನಾನು ಭಿನ್ನವಾಗಿರುವೆನೆಂಬ ಭೇದ ಪ್ರತೀತಿಯು ಯಾರಿಗಿರುತ್ತದೆಯೋ ಅವನಿಗೆ ಸಹಭೋಜೀ, ವಿಶ್ವಭೋಜಿಯೆಂದು ಕರೆಯಲಾಗುವುದಿಲ್ಲ. ನಾನು ಸೇವಕ, ಶಿವನು ಅಧಿಪತಿಯು. ನಾನು ಶಿಷ್ಯನು, ಇವರು ಗುರುಗಳು ಎಂಬ ಭೇದಬುದ್ಧಿಯು ಯಾವನಲ್ಲಿ ಅಳಿದುಹೋಗಿದೆಯೋ ಅವನೇ ಶಿವೈಕ್ಯರೂಪವಾದ ಅದ್ವೈತ ಸ್ಥಿತಿಯನ್ನು ಪಡೆದುಕೊಳ್ಳುವನು. ಪರಾಹಂತಾರೂಪವಾದ ಸ್ವಾತ್ಮಾಗ್ನಿಯಲ್ಲಿ ಅದೂ ಇದೂ ಎಂಬ ಭೇದಪ್ರತೀತಿರೂಪವಾದ ಪ್ರಪಂಚವೂ ನಾನೇ ಎಂಬುದಾಗಿ ಸರ್ವವೆಲ್ಲವನ್ನು ತನ್ನ ಆತ್ಮರೂಪವಾಗಿ ಅನುಭವಿಸುವುದೇ ಪೂರ್ಣಾಹಂತೆಯು.

ಯಾವಾತನು ಚಿದ್ರೂಪವಾದ ಆಧಾರಾಗ್ನಿಯಲ್ಲಿ ಜಗತ್ತಿನ ಭೇದಸಮೂಹ ವೆಂಬ ಹವಿಸ್ಸನ್ನು ಅರ್ಪಿಸಿ ಹೋಮ ಮಾಡುವನೋ ಅವನಿಗೆ 'ವಿಶ್ವಹವ್ಯಭುಕ್' ಎಂದು ಕರೆಯುತ್ತಾರೆ. ಊರ್ಧ್ವಹೃದಯಕಮಲದ ನಡುಗಡ್ಡೆಯಲ್ಲಿ ಇರುವ ಸೂಕ್ಷ್ಮ ರಂಧ್ರದಲ್ಲಿ ನಿತ್ಯಾನಂದಮಯವಾಗಿ ಹೊಳೆಯುತ್ತಿರುವ ಮಹಾಲಿಂಗವೆಂಬ ಸೂರ್ಯನಿಗೆ ಮನೋವ್ಯಾಪಾರದಲ್ಲಿ ಲೀನವಾಗಿರುವ ಈ ಐಕ್ಯಸ್ಥಲದ ಶಿವಯೋಗಿಗೆ ಈ ವಿಶ್ವದ ದ್ವಂದ್ವಾತ್ಮಿಕವಾದ ವ್ಯವಹಾರವು ಅನುಭವ ಗೋಚರವಾಗುವುದಿಲ್ಲ. ಈ ಸಹಭೋಜನಸ್ಥಲದ ಶಿವಯೋಗಿಗೆ ಜನನ–ಮರಣಾದಿ ಸಕಲ ಕ್ಲೇಶ ರೂಪ ದೋಷರಹಿತವಾದ ಜ್ಞಾನಾಕಾಶರೂಪವಾದ ಆ ಲಿಂಗತತ್ತ್ವದಲ್ಲಿ ತನ್ನನ್ನು ಸ್ವರೂಪ–ಹಾನಿ ವೃದ್ಧಿಗಳಿಲ್ಲದ ಸಜಾತೀಯ ಸಮಾನ ಸಮರಸಭಾವನೆಯಿಂದ ಸ್ಥಿರವಾಗಿ ಅಡಗಿಹೋದವನನ್ನಾಗಿ ಭಾವಿಸುತ್ತಾನೆ. ಈ ವಿಧವಾದ ಸಾಮರಸ್ಯವನ್ನು ಪ್ರಾಪ್ತಿಮಾಡಿಕೊಡುವ ವಿದ್ಯೆಯೇ ಪರಾವಿದ್ಯೆಯು. ಇದರಿಂದ ಜಗತ್ತಿನಲ್ಲಿಯ ಭೇದ ಭ್ರಾಂತಿಯು ದೂರವಾಗುವುದು. ಪರತರಮುಕ್ತಿಯು ಪ್ರಾಪ್ತವಾಗುವುದು. ಇಂತಹ ವಿದ್ಯೆಯನ್ನುಪಡೆದವನ ಜನ್ಮವೇ ಪಾವನವಾದುದು (ಸಿ.ಶಿ., ೧೪. ೩೪–೪೪)

ಹೀಗೆ ಐಕ್ಯಸ್ಥಲದಲ್ಲಿ ಹೇಳಲ್ಪಟ್ಟ ನಾಲ್ಕು ಅವಾಂತರಸ್ಥಲಗಳ ಸ್ವರೂಪವನ್ನು

ಅರಿತು ಅದರಂತೆ ಆಚರಿಸಿ ಅನುಭವಿಸುವವನೇ ಐಕ್ಯನೆಂದೆನಿಸಿಕೊಳ್ಳುವನು. ಈ ವಿಧವಾಗಿ ಈ ಅಂಗಷಟ್‌ಸ್ಥಲಗಳಲ್ಲಿ ಒಟ್ಟಾರೆ ನಾಲ್ವತ್ನಾಲ್ಕು ಅಂಗಸ್ಥಲಗಳು ಪ್ರತಿಪಾದಿಸಲ್ಪಟ್ಟಿವೆ. ಇನ್ನು ಮುಂದೆ ಐವತ್ತೇಳು ಪ್ರಕಾರವಾದ ಲಿಂಗಸ್ಥಲಗಳ ವಿಚಾರವನ್ನು ಮಾಡೋಣ.

ಲಿಂಗಷಟ್‌ಸ್ಥಲಗಳು

ಅಂಗನು ಐಕ್ಯಸ್ಥಲದಲ್ಲಿ ಲಿಂಗರೂಪನಾದ ಮೇಲೆ ಜೀವನ್ಮುಕ್ತಿಯ ವಿಲಕ್ಷಣವಾದ ಆನಂದವನ್ನನುಭವಿಸುವ ಸ್ಥಲಗಳೇ ಲಿಂಗಷಟ್‌ಸ್ಥಲಗಳೆಂದು ಕರೆಯಲಾಗುತ್ತದೆ. ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಇವುಗಲೂ ಸಹ ಭಕ್ತಾದಿ ಐಕ್ಯ ಸ್ಥಲಪರ್ಯಂತವಾಗಿ ಪುನಃ ಆರು ಸ್ಥಲಗಳನ್ನು ಪ್ರತಿಪಾದಿಸಲಾಗಿದೆ. ಈ ಆರು ಲಿಂಗಷಟ್‌ಸ್ಥಲಗಳನ್ನು ಪ್ರತಿಪಾದಿಸಲಾಗಿದೆ. ಈ ಆರು ಲಿಂಗಷಟ್ ಸ್ಥಲಗಳಲ್ಲಿಯೂ ಐವತ್ತೇಳು ಪ್ರಕಾರವಾದ ಅವಾಂತರ ಸ್ಥಲಗಳು ನಿರೂಪಿಸಲ್ಪಟ್ಟಿದೆ. ಅವುಗಳನ್ನೇ ಕ್ರಮವಾಗಿ ವಿವೇಚಿಸಲಾಗುವುದು.

ಭಕ್ತಸ್ಥಲ

ಮಹರ್ಷಿಯಾದ ಅಗಸ್ತ್ಯನು ಪೂರ್ವದಲ್ಲಿ ಹೇಳಿದ ಅಂಗಷಟ್‌ಸ್ಥಲಗಳನ್ನು ಅದರಲ್ಲಿ ಬರುವ ನಾಲ್ವತ್ನಾಲ್ಕು ಅವಾಂತರಸ್ಥಲಗಳನ್ನು ಶ್ರವಣ ಮಾಡಿದ ಬಳಿಕ ಶ್ರೀ ಜಗದ್ಗುರು ರೇಣುಕ ಭಗವತ್ಪಾದರನ್ನು ಕುರಿತು ಜೀವನ್ಮುಕ್ತಿಪರಗಳಾದ ಷಟ್‌ಸ್ಥಲ ಗಳು ಯಾವುವು? ಅವುಗಳ ಅವಾಂತರ ಸ್ಥಲಗಳು ಯಾವುವು? ಎಂಬುದಾಗಿ ಪ್ರಶ್ನಿಸಲು ಪೂಜ್ಯಪಾದರು ಲಿಂಗಷಟ್‌ಸ್ಥಲದೊಳಗಿನ ಭಕ್ತಸ್ಥಲವನ್ನು ಹಾಗೂ ಅದರ ಅವಾಂತರ ಸ್ಥಲಗಳನ್ನು ಪುನಃ ಉಪದೇಶಿಸಲು ಪ್ರಾರಂಭಿಸುತ್ತಾರೆ. ಹೇ ಅಗಸ್ತ್ಯ ಮಹರ್ಷಿಯೇ! ದೀಕ್ಷಾಗುರುಸ್ಥಲವನ್ನೇ ಮೊದಲು ಮಾಡಿಕೊಂಡು ಜ್ಞಾನಶೂನ್ಯಸ್ಥಲದವರೆಗೆ ಒಟ್ಟು ಐವತ್ತೇಳು ಅವಾಂತರಸ್ಥಲಗಳಲ್ಲಿ ಈ ಲಿಂಗ ಷಟ್‌ಸ್ಥಲಗಳು ನಿರೂಪಿಸಲ್ಪಟ್ಟಿವೆ. ಅದರಲ್ಲಿ ಮೊದಲನೆಯದಾದ ಸ್ಥಲವೇ ಭಕ್ತ ಸ್ಥಲವು. ಇದರಲ್ಲಿ ದೀಕ್ಷಾಗುರುಸ್ಥಲವನ್ನು ಮೊದಲು ಮಾಡಿಕೊಂಡು ಒಂಭತ್ತು ಅವಾಂತರಸ್ಥಲಗಳಿರುತ್ತವೆ. ಅವುಗಳನ್ನೇ ಕ್ರಮವಾಗಿ ಉಪದೇಶಿಸುತ್ತೇವೆ. ಏಕಾಗ್ರವಾದ ಮನಸ್ಸಿನಿಂದ ಆಲಿಸು ಎಂಬುದಾಗಿ ಹೇಳಿ ಉಪದೇಶವನ್ನು ಪ್ರಾರಂಭಿಸುತ್ತಾರೆ.

೪೫) ದೀಕ್ಷಾಗುರುಸ್ಥಲ :

ದೀಕ್ಷೆಯನ್ನು ಕೊಡುವ ಗುರುವೇ ದೀಕ್ಷಾಗುರುವು. ಪರಮಜ್ಞಾನವನ್ನು ಅನುಗ್ರಹಿಸುವ ಪಾಶಬಂಧನವನ್ನು ಕಳೆಯುವ ಸಂಸ್ಕಾರ ವಿಶೇಷಕ್ಕೆ ದೀಕ್ಷೆಯೆನ್ನಲಾಗಿದೆ.

ಈ ಸಂಸ್ಕಾರವನ್ನು ಮಾಡುವವನೇ ದೀಕ್ಷಾಗುರುವೆಂದು ತಿಳಿದುಕೊಳ್ಳಬೇಕು. ಪ್ರಾಕೃತಗುಣಗಳಿಲ್ಲದ, ಮಾಯಾರೂಪ ರಹಿತನಾದ ಪರಶಿವಸ್ವರೂಪವನ್ನು ತಿಳಿಸುವವನೇ ಗುರುವು, ಇವನಿಗೆ ಆಚಾರ್ಯನೆಂತಲೂ ಕರೆಯುತ್ತಾರೆ. ಸಕಲ ಶಾಸ್ತ್ರಗಳನ್ನು ಅಭ್ಯಸಿಸಿ ಆ ಶಾಸ್ತ್ರೋಕ್ತಗಳಾದ ಆಚರಣೆಗಳನ್ನು ಇವನು ಆಚರಿಸುತ್ತಿರುತ್ತಾನೆ. ಇವನಿಗೆ ವಿಶ್ವಗುರು, ದೇಶಿಕ ಎಂಬುದಾಗಿಯೂ ಕರೆಯಲಾಗುವುದು. ಸರ್ವವಸ್ತುಗಳಲ್ಲಿ ಅಖಂಡವಾದ ಪರಮತತ್ತ್ವವನ್ನೇ ಅನುಭವಿಸುತ್ತಾನಲ್ಲದೆ ಭಕ್ತರಿಗೂ ಸಹ ಅದನ್ನೇ ಉಪದೇಶಿಸುತ್ತಿರುತ್ತಾನೆ. ಇವನೇ ದೀಕ್ಷಾಗುರು (ಸಿ.ಶಿ., ೧೫. ೭–೧೧)

೪೬) ಶಿಕ್ಷಾಗುರುಸ್ಥಲ :

ಈ ಪೂರ್ವದಲ್ಲಿ ಹೇಳಿದ ಆ ದೀಕ್ಷಾಗುರುವೇ ಯಾವಾಗ ತನ್ನಿಂದ ದೀಕ್ಷಿತನಾದ ಶಿಷ್ಯನಿಗೆ ಶಾಸ್ತ್ರಗಳ ಅಭ್ಯಾಸವನ್ನು ಮಾಡಿಸಿ ಉತ್ತಮವಾದ ಶಿಕ್ಷಣವನ್ನು ಅನುಗ್ರಹಿಸುವನೋ ಆಗ ಅವನೇ ಶಿಕ್ಷಾಗುರುವೆಂದು ಹೇಳಿಸಿಕೊಳ್ಳುವನು. ಶರತ್ಕಾಲದ ಚಂದ್ರಕಿರಣಗಳು ಕತ್ತಲೆಯನ್ನು ಹೊಡೆದೋಡಿಸುವಂತೆ ಈತನ ಉಪದೇಶದ ವಾಕ್ಯಗಳು ಶಿಷ್ಯನ ಅಜ್ಞಾನಾಂಧಃಕಾರವನ್ನು ದೂರಮಾಡುತ್ತವೆ. ಈ ಉಪದೇಶದ ಮೂಲಕ ಶಿಷ್ಯನಿಗೆ ಪತಿಜ್ಞಾನವನ್ನನುಗ್ರಹಿಸಿ ಜಗತ್ತಿನ ಮೋಹಮಾಯೆಯನ್ನು ಇಲ್ಲದಾಗಿಸುತ್ತಾನೆ. ಅಂತೆಯೇ ಇವನಿಗೆ ಆಚಾರ್ಯನೆಂತಲೂ ಕರೆಯುವರು. ತನ್ನ ಉಪದೇಶಾಮೃತ ಧಾರೆಯಿಂದ ಶಿಷ್ಯನ ಸರ್ವಸಂದೇಹಗಳನ್ನು ದೂರಮಾಡುವ ಇವನಿಗೆ ಗುರುಗಳಲ್ಲಿಯೇ ಶ್ರೇಷ್ಠನೆಂಬುದಾಗಿ ಕರೆಯಲಾಗಿದೆ. ಯಾರ ಉಪದೇಶಾಮೃತದಿಂದ ಶಿಷ್ಯನಿಗೆ ಮೋಕ್ಷ ಲಭಿಸುವುದೋ ಅಂಥ ಗುರುವಿಗೆ ಭವತಾರಕನೆನ್ನುವರು. ಈತನು ಶಿಷ್ಯನ ಹೃದಯದಲ್ಲಿ ಜ್ಞಾನದೀಪವನ್ನು ಬೆಳಗಿಸಿ ಅವನಿಗೆ ಶಿವಾದ್ವೈತ ಸ್ಥಿತಿಯನ್ನು ತಂದುಕೊಡುತ್ತಾನೆ. (ಸಿ.ಶಿ., ೧೫. ೧೨–೨೦)

೪೭) ಜ್ಞಾನಗುರುಸ್ಥಲ :

ತನ್ನ ಉಪದೇಶದ ಮೂಲಕ ಶಿಷ್ಯನ ಸರ್ವ ಸಂದೇಹಗಳನ್ನು ನಾಶಗೊಳಿಸಿ ಸಮ್ಯಕ್ ಜ್ಞಾನವನ್ನು ಉಂಟುಮಾಡುವ ಗುರುವೇ ಜ್ಞಾನಗುರುವು. ಈ ಗುರುವಿಗೆ ನಿರ್ವಿಕಾರವಾದ, ನಿಷ್ಕಲಂಕನಾದ ಜ್ಞಾನಚಂದ್ರನೆಂಬುದಾಗಿ ಕರೆಯುತ್ತಾರೆ. ಮಣಿ ನಿರ್ಮಿತವಾದ ದೀಪವು ತನ್ನ ಸುತ್ತುಮುತ್ತಲಿನ ಕತ್ತಲೆಯನ್ನು ಕಳೆದರೆ ಈ ನಿರಂಕುಶವಾದ ಜ್ಞಾನದೀಪವು ಸಂಪೂರ್ಣವಾದ ಅಜ್ಞಾನರೂಪೀ ಅಂಧಕಾರವನ್ನು ಇಂತಹ ಜ್ಞಾನೋಪದೇಶವನ್ನು ಮಾಡಿದ ಇವನಿಗೆ ಜ್ಞಾನಾಚಾರ್ಯನೆಂತಲೂ, ಜ್ಞಾನಪಾರಗನೆಂತಲೂ ಮತ್ತು ದೇಶಿಕಭಾಸ್ಕರನೆಂತಲೂ ಕರೆಯುವರು. ಈ

ಜ್ಞಾನಸಾಗರನಾದ ಗುರುವಿನ ಜ್ಞಾನೋಪದೇಶವನ್ನು ಶ್ರವಣಮಾಡಿದ ಶಿಷ್ಯನಿಗೆ ಶಿವಾದ್ವೈತ ಜ್ಞಾನವು ಉಂಟಾಗಿ ಅವನು ಜೀವನ್ಮುಕ್ತನಾಗುವನು (ಸಿ.ಶಿ., ೧೫. ೨೧–೨೯)

೪೮) ಕ್ರಿಯಾಲಿಂಗಸ್ಥಲ :

ಗುರುವಿನಿಂದ ಅನುಗ್ರಹಿಸಲ್ಪಟ್ಟ ಜ್ಞಾನದಿಂದ ಎಲ್ಲ ವಿಧ ಕ್ರಿಯೆಗಳು ಎಲ್ಲಿ ಪರಿಸಮಾಪ್ತಗೊಳ್ಳುವವೋ ಅದಕ್ಕೇನೇ ಕ್ರಿಯಾಲಿಂಗವೆಂಬುದಾಗಿ ಆಗಮ ಪಾರಂಗತರಾದ ವೀರಶೈವ ಆಚಾರ್ಯರು ಹೇಳುತ್ತಾರೆ. ಸಚ್ಚಿದಾನಂದ ಸ್ವರೂಪವಾದ ಪರಶಿವಬ್ರಹ್ಮವೇ ಸದ್ರೂಪವನ್ನು ತಾಳಿ ಸಮಸ್ತ ಕ್ರಿಯೆಗಳಿಗೆ ಸಿದ್ಧಿಯನ್ನು ಕೊಡುವುದಕ್ಕಾಗಿ ಲಿಂಗರೂಪವನ್ನು ಅರ್ಥಾತ್ ಇಷ್ಟಲಿಂಗರೂಪವನ್ನು ತಾಳಿರುತ್ತದೆ. ಇಂತಹ ಪರಬ್ರಹ್ಮಸ್ವರೂಪವಾದ ಇಷ್ಟಲಿಂಗದ ಪೂಜೆಯಿಂದಲೇ ಸರ್ವಕರ್ಮಗಳ ಫಲಗಳು ದೊರೆಯುತ್ತವೆ. ಆದ್ದರಿಂದಲೇ ಸರ್ವ ಶಿವಯೋಗಿಗಳು ಉಳಿದೆಲ್ಲ ಕ್ರಿಯೆಗಳನ್ನು ಬಿಟ್ಟು ಲಿಂಗಪೂಜಾ ರೂಪವಾದ ಕ್ರಿಯೆಯಲ್ಲಿಯೇ ತತ್ಪರರಾಗಿರುತ್ತಾರೆ. ಯಜ್ಞ ಯಾಗಾದಿ ಉಳಿದೆಲ್ಲ ಕ್ರಿಯೆಗಳು ಈ ಲಿಂಗಪೂಜಾರೂಪವಾದ ಕ್ರಿಯೆಯ ಒಂದಂಶಕ್ಕೂ ಸಹ ಸಮಾನವಾಗಲಾರವು. ಅಂತೆಯೇ ಸನಕಾದಿ ಸಿದ್ಧರು ಕ್ರಿಯಾಲಿಂಗವನ್ನೇ ಪೂಜಿಸಿದ್ದಾರೆ. ಇಷ್ಟಲಿಂಗಾರ್ಚನೆಯಲ್ಲಿ ಕಲೆಯುಳ್ಳವರಿಗೆ ಬೇರಾವ ಯಜ್ಞಗಳ ಅಥವಾ ಕಠಿಣವಾದ ತಪಶ್ಚರ್ಯಗಳ ಅವಶ್ಯಕತೆಯಿರುವುದಿಲ್ಲ. ಅಂತೆಯೇ ಬ್ರಹ್ಮ–ವಿಷ್ಣು ಮುಂತಾದ ದೇವತೆಗಳೂ ಸಹ ಈ ಕ್ರಿಯಾಲಿಂಗದ ಅಂದರೆ ಇಷ್ಟಲಿಂಗದ ಪೂಜೆಯಿಂದಲೇ ತಮ್ಮ ತಮ್ಮ ಪದವಿಗಳನ್ನು ಪಡೆದು ಕೊಂಡಿರುತ್ತಾರೆ. (ಸಿ.ಶಿ., ೧೫. ೩೦–೩೬)

೪೯) ಭಾವಲಿಂಗಸ್ಥಲ :

ಯಾವ ಲಿಂಗದಲ್ಲಿ ಪೂಜಕನ ಭಾವನೆಯು ಲಯವಾಗುವುದೋ ಅದುವೇ ಭಾವಲಿಂಗವು. ಶಿವನು ನಿಜವಾಗಿಯೂ ಭಾವಗಮ್ಯನಾಗಿರುತ್ತಾನೆ. ಅಖಂಡ ಪರಮಾನಂದ ಬೋಧರೂಪವಾದ ಪರಶಿವನು ಭಕ್ತರಿಗೆ ಭಾವನಾಮಯ ಪೂಜೆಯಿಂದಲೇ ಪ್ರಸನ್ನನಾಗುವನು. ಮೃತ್ತಿಕಾ ಅರ್ಥಾತ್ ಮಣ್ಣು ಮತ್ತು ಶಿಲೆ ಮುಂತಾದವುಗಳಿಂದ ನಿರ್ಮಿಸಿದ ಕ್ರಿಯಾಲಿಂಗಕ್ಕಿಂತಲೂ ಸರ್ವದೋಷರಹಿತವಾದ ಭಾವಲಿಂಗವೇ ಶ್ರೇಷ್ಠವಾಗಿದೆ. ಈ ಭಾವಲಿಂಗವನ್ನು ಭಾವಮಯ ಪುಷ್ಪಗಳಿಂದ ಪೂಜಿಸುವ ಶಿವಯೋಗಿಯು ಭಾವಲಿಂಗಿಯೆಂಬುದಾಗಿಯೂ ಕರೆಯಲ್ಪಡುತ್ತಾನೆ. ತನ್ನ ಮೂಲಾಧಾರ, ಹೃದಯ ಮತ್ತು ಭ್ರೂಮಧ್ಯಗಳಲ್ಲಿ ದೀಪಾಕಾರವಾಗಿ ಕಂಗೊಳಿಸುವ ಈ ಭಾವಲಿಂಗವನ್ನು ಭಾವದ್ರವ್ಯಗಳಿಂದ ಈತನು ಆರಾಧಿಸುತ್ತಿರುತ್ತಾನೆ.

ಕೇವಲ ಕ್ರಿಯಾಲಿಂಗ ಪೂಜೆಯು ಪ್ರಾಥಮಿಕವಾದುದು. ಆದ್ದರಿಂದ ಅದನ್ನು ಪೂಜಿಸುವುದರ ಜೊತೆಗೆ ಜ್ಞಾನಿಗಳಾದವರು ಅಂತರಂಗದ ಭಾವಲಿಂಗಾನು ಸಂಧಾನದಲ್ಲಿ ಹೆಚ್ಚು ವೇಳೆಯನ್ನು ಕಳೆಯಬೇಕು (ಸಿ.ಶಿ., ೧೫. ೩೭–೪೪)

೫೦) ಜ್ಞಾನಲಿಂಗಸ್ಥಲ :

ಲಿಂಗವನ್ನು ಭಾವಿಸುವ ಜ್ಞಾನವು ಎಲ್ಲಿ ಲಯವಾಗುವುದೋ ಅದಕ್ಕೇನೇ ತತ್ತ್ವಕೋವಿದರಾದ ವೀರಶೈವ ಆಚಾರ್ಯರು ಜ್ಞಾನಲಿಂಗವೆಂಬುದಾಗಿ ಕರೆದಿದ್ದಾರೆ. ಅಂದರೆ ಕೊನೆಯದಾಗಿ ತಿಳಿದುಕೊಳ್ಳುವ ಲಿಂಗವೇ ಜ್ಞಾನಲಿಂಗವು. ತ್ರಿಮೂರ್ತಿರೂಪವಲ್ಲದ ಮತ್ತು ತ್ರಿಗುಣಾತೀತವಾದ ಪರಶಿವಬ್ರಹ್ಮವೇ ಇಲ್ಲಿ ಜ್ಞಾನಲಿಂಗವೆಂದು ಕರೆಯಲ್ಪಡುತ್ತದೆ. ಎಲ್ಲ ಕ್ರಿಯೆಗಳು ಎಲ್ಲಿ ಪರಿಸಮಾಪ್ತಿ ಯಾಗುವವೋ ಆ ಲಿಂಗವು ಕ್ರಿಯಾಲಿಂಗವು. ಸರ್ವಭಾವಗಳು ಎಲ್ಲಿ ಪೂರ್ಣಗೊಳ್ಳುವವೋ ಅದು ಭಾವಲಿಂಗವು. ಇನ್ನು ಜ್ಞಾನದ ಪರಿಸಮಾಪ್ತಿಯ ಸ್ಥಾನವೇ ಜ್ಞಾನಲಿಂಗವು. ಇದಕ್ಕೆ ಪರಾತ್ಪರಲಿಂಗ ಮತ್ತು ತೃಪ್ತಿಲಿಂಗವೆಂಬುದಾಗಿ ಕರೆಯುತ್ತಾರೆ. ಇಲ್ಲಿ ಕ್ರಿಯಾಲಿಂಗವು ಸ್ಥೂಲವಾದುದು. ಭಾವಲಿಂಗವು ಸೂಕ್ಷ್ಮವಾದುದು. ಈ ಜ್ಞಾನಲಿಂಗವನ್ನು ಅರಿತವನಿಗೆ ಜ್ಞಾನಲಿಂಗೀ ಎಂದು ಕರೆಯಲಾಗುತ್ತದೆ. ಈ ಜ್ಞಾನಲಿಂಗವನ್ನು ಭಜಿಸುವವನು ಜೀವನ್ಮುಕ್ತನೇ ಆಗಿರುತ್ತಾನೆ. (ಸಿ.ಶಿ., ೧೫. ೪೫–೫೦)

೫೧) ಸ್ವಯಸ್ಥಲ :

ಈ ಪೂರ್ವದಲ್ಲಿ ಹೇಳಿದ ಆ ಜ್ಞಾನವು ಯಾರಿಗೆ ಪ್ರಾಪ್ತವಾಗುವುದೋ ಅವನು ಜ್ಞಾನಿಗಳಿಂದ ಸ್ವಯಸ್ಥಲಿಯೆಂದು ಕರೆಯಿಸಿಕೊಳ್ಳುತ್ತಾನೆ. ಜ್ಯೋತಿರ್ಲಿಂಗ ಪರಾಯಣನಾದ ಈ ಮುನಿಶ್ರೇಷ್ಠನು ಸ್ವಚ್ಛಂದಾಚಾರಿಯಾಗಿರುತ್ತಾನೆ. ಅಹಂಕಾರ, ಮಮಕಾರ ಶೂನ್ಯನೂ, ಕ್ಲೇಶರಹಿತನೂ, ಸಮಬುದ್ಧಿಯೂ ಮತ್ತು ಭಿಕ್ಷಾನ್ನಸೇವಿಯೂ ಆದ ಸ್ವಯಸ್ಥಲದ ಈ ಮುನಿಯು ಮುಕ್ತಪ್ರಾಯನೇ ಆಗಿರುತ್ತಾನೆ. ಯದೃಚ್ಛಾಲಾಭಸಂತುಷ್ಟನಾದ, ಜಿತೇಂದ್ರಿಯನಾದ ಇವನು ರಾಜ ಮತ್ತು ಕಿಂಕರರಲ್ಲಿ ಸಮಬುದ್ಧಿಯುಳ್ಳವನಾಗಿರುತ್ತಾನೆ. ಸಂಸಾರದ ಎಲ್ಲ ಜೀವಿಗಳನ್ನು ಹಸನ್ಮುಖನಾಗಿಯೇ ನೋಡುತ್ತಿರುವ ಇವನು ಶಿವಧ್ಯಾನ, ಶಿವಜ್ಞಾನ, ಭಿಕ್ಷಾನ್ನ ಗ್ರಹಣ ಮತ್ತು ಏಕಾಂತವಾಸ, ಇವುಗಳ ಹೊರತು ಬೇರಾವುದನ್ನೂ ಮಾಡುತ್ತಿರುವುದಿಲ್ಲ. (ಸಿ.ಶಿ., ೧೫. ೫೧–೫೭)

೫೨) ಚರಸ್ಥಲ:

ಈ ಪೂರ್ವದಲ್ಲಿ ಹೇಳಿದ ಸ್ವಯಸ್ಥಲಿಯು ತಾನೇ ತಾನಾಗಿ ಸರ್ವತ್ರ ಚರಿಸುತ್ತಿರುವುದರಿಂದ ಇವನಗೆ ಚರಸ್ಥಲಿಯೆಂದು ಕರೆಯುತ್ತಾರೆ. ಕಾಮ-ಕ್ರೋಧಾದಿರಹಿತನೂ, ಶಾಂತಿ ದಾಂತಿ ಸಮನ್ವಿತನೂ ಆದ ಈ ಶಿವಯೋಗಿಯು ಸಮಬುದ್ಧಿಯಿಂದ ಸರ್ವತ್ರ ಸಂಚರಿಸುತ್ತಿರುತ್ತಾನೆ. ಇವನ ದೃಷ್ಟಿಯಲ್ಲಿ ಇದು ಮುಖ್ಯ ಇದು ಹೀನವೆಂಬ ಭಾವನೆಯು ಇರುವುದಿಲ್ಲ. ಮಾನ-ಅಪಮಾನಗಳಲ್ಲಿ ಈತನು ಕೂಟಸ್ಥನಂತೆ ಸಾಕ್ಷಿಯಾಗಿರುತ್ತಾನೆ. ತನ್ನಲ್ಲಿರುವ ವಿಲಕ್ಷಣಗಳಾದ ಸದ್ಗುಣಗಳಿಂದ ಜಗತ್ತಿನ ಯಾವುದೇ ಪ್ರಕಾರದ ವೈಷಮ್ಯಬುದ್ಧಿಯು ಇರುವುದಿಲ್ಲ. ಪ್ರಾಕೃತ ಐಶ್ವರ್ಯಗಳಿಂದ ಪರಾಙ್ಮುಖನಾದ ಈತನು ಚಿದಾನಂದರೂಪವಾದ ತನ್ನ ಆತ್ಮಸ್ಥಿತಿಯಲ್ಲಿಯೇ ಆನಂದವನ್ನು ಪಡೆಯುತ್ತಿರುತ್ತಾನೆ. (ಸಿ.ಶಿ., ೧೫. ೫೭-೬೩)

೫೩) ಪರಸ್ಥಲ :

ಈ ಪೂರ್ವದಲ್ಲಿ ಹೇಳಿದ ಚರಸ್ಥಲಿಗೆ ಪರ ಅಂದರೆ ಅನ್ಯವು ಅದಾವುದೂ ಇಲ್ಲವೆಂಬ ಬೋಧವುಂಟಾಗಲು ಅರ್ಥಾತ್ ಸರ್ವತ್ರ ತಾನೇ ತಾನಾಗಿ ತೋರುವ ಸ್ಥಿತಿಯು ಪ್ರಾಪ್ತವಾಗಲು ಅವನಿಗೆ ಪರಸ್ಥಲಿಯೆಂದು ಕರೆಯುತ್ತಾರೆ. ಈತನು ಸರ್ವಕೃತ್ಯಗಳಲ್ಲಿ ಸ್ವತಂತ್ರನಾಗಿರುತ್ತಾನೆ. ಪರತತ್ತ್ವದಲ್ಲಿ ಸಾಮರಸ್ಯವನ್ನು ಹೊಂದಿದ ಈ ಶಿವಯೋಗಿವರ್ಯನಿಗೆ ಈ ಜಗತ್ತೆಲ್ಲವೂ ಒಂದು ತೃಣಕ್ಕೆ ಸಮಾನವಾಗಿ ತೋರುವುದು. ಜಗತ್ತಿನ ವರ್ಣಾಶ್ರಮಾದಿ ವ್ಯವಸ್ಥೆಯಿಂದ ಪರಾಙ್ಮುಖನಾದ ಈತನು ಸರ್ವೋತ್ಕೃಷ್ಟವಾದ ತನ್ನ ಆತ್ಮವನ್ನೇ ಅನುಸಂಧಾನಿಸುತ್ತ ಆನಂದವಾಗಿರುತ್ತಾನೆ. ಪರಬ್ರಹ್ಮ ಸ್ವರೂಪವನ್ನು ತಾಳಿದ ಇವನಿಗೆ ಬ್ರಹ್ಮಾದಿ ದೇವತೆಗಳೂ ಸಹ ಏನನ್ನೂ ಮಾಡಲಾರರು. ಈತನು ತನ್ನ ಇಚ್ಛಾನುಸಾರವಾಗಿ ದೇಹಾಭಿಮಾನವಿಲ್ಲದೇ ಸಂಚರಿಸುತ್ತ ಕೇವಲ ತನ್ನ ದರ್ಶನ-ಸ್ಪರ್ಶನಗಳಿಂದಲೇ ಜೀವಿಗಳನ್ನು ಮುಕ್ತರನ್ನಾಗಿ ಮಾಡುತ್ತಾನೆ. (ಸಿ.ಶಿ., ೧೫. ೬೪-೭೧)

ಈ ಪೂರ್ವದಲ್ಲಿ ಹೇಳಿದ ಸ್ವಯ, ಚರ ಮತ್ತು ಪರ ಅವಸ್ಥೆಗಳು ಜ್ಞಾನಿಯಾದ ಜಂಗಮನ ಅವಸ್ಥೆಗಳಾಗಿರುತ್ತವೆ. ಆದ್ದರಿಂದ ಇಲ್ಲಿ ಸ್ವಯಜಂಗಮ, ಚರಜಂಗಮ ಮತ್ತು ಪರಜಂಗಮವೆಂಬುದಾಗಿಯೂ ಪೂರ್ವದ ಸ್ಥಲಗಳನ್ನು ಭಾವಿಸಬೇಕು. ಇವು ಮೂರು ಜೀವನ್ಮುಕ್ತನಾದ ಜಂಗಮನ ಅತಿ ಶ್ರೇಷ್ಠಗಳಾದ ಅವಸ್ಥೆಗಳಾಗಿರುತ್ತವೆ. ಹೀಗೆ ಲಿಂಗಷಟ್‌ಸ್ಥಲದಲ್ಲಿಯ ಭಕ್ತಸ್ಥಲದಲ್ಲಿ ಈ ಪೂರ್ವದಲ್ಲಿ ಹೇಳಿದ ದೀಕ್ಷಾ ಗುರುಸ್ಥಲವನ್ನೇ ಮೊದಲು ಮಾಡಿಕೊಂಡು ಪರಸ್ಥಲದವರೆಗಿನ ಒಂಭತ್ತು ಅವಾಂತರ

ಸ್ಥಲಗಳನ್ನು ಪ್ರತಿಪಾದಿಸಲಾಗಿದೆ. ಇದುವೇ ಭಕ್ತಸ್ಥಲವು.

ಮಾಹೇಶ್ವರಸ್ಥಲ

ಮಹರ್ಷಿಯಾದ ಅಗಸ್ತ್ಯನು ಈ ಪೂರ್ವದಲ್ಲಿ ಹೇಳಿದ ಲಿಂಗಷಟ್ ಸ್ಥಲದಲ್ಲಿಯ ಭಕ್ತಸ್ಥಲದ ವಿಚಾರವನ್ನು ಶ್ರವಣಮಾಡಿ ಈ ಭಕ್ತನು ಮುಂದೆ ಹೇಗೆ ಮಾಹೇಶ್ವರನಾಗುವನು? ಮತ್ತು ಅದರ ಅವಾಂತರಸ್ಥಲಗಳೆಷ್ಟು? ಎಂಬುದಾಗಿ ಪ್ರಶ್ನಿಸಲು ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಒಂಭತ್ತು ಅವಾಂತರ ಸ್ಥಲಗಳುಳ್ಳ ಮಾಹೇಶ್ವರಸ್ಥಲವನ್ನು ಉಪದೇಶಿಸಿದ್ದಾರೆ. ಆ ಅವಾಂತರಸ್ಥಲಗಳನ್ನೇ ಇಲ್ಲಿ ಕ್ರಮವಾಗಿ ವಿವೇಚಿಸಲಾಗುವುದು.

೩೪) ಕ್ರಿಯಾಗಮಸ್ಥಲ :

ಈ ಪೂರ್ವದಲ್ಲಿ ಹೇಳಿದ ಪರಸ್ಥಲದ ಶಿವಯೋಗಿಯೇ ಪರಮನು ಅರ್ಥಾತ್ ಸಾಕ್ಷಾತ್ ಪರಶಿವನು. ಅಂದರೆ ಪ್ರತ್ಯಕ್ಷನಾದ ಪರಮಾತ್ಮನು ಅವನ ಪೂಜೆಯೇ ಇಲ್ಲಿ ಕ್ರಿಯಾಗಮಯೆಂದು ಕರೆಯಿಸಿಕೊಳ್ಳುತ್ತದೆ. ಆ ಕ್ರಿಯೆಯನ್ನು ಉಪದೇಶಿಸುವ ಆಗಮವೇ ಕ್ರಿಯಾಗಮವು. ಅಂದರೆ ಆ ಶಿವಯೋಗಿಗೆ ಮಾಡುವ ಪೂಜಾದಿ ಕ್ರಿಯೆಗಳನ್ನು ತಿಳಿಯಪಡಿಸುವ ಸ್ಥಲವೇ ಕ್ರಿಯಾಗಮಸ್ಥಲವು. ಅರಣಿಮಂಥನವಿಲ್ಲದೆ ಅಗ್ನಿಯು ಉದ್ಭವಿಸದಿರುವಂತೆ ಕ್ರಿಯೆಯನ್ನು ಆಚರಿಸದೆ ಅಂತಸ್ಥವಾದ ಶಿವನು ಪ್ರಕಾಶಗೊಳ್ಳಲಾರನು. ಕ್ರಿಯೆಯನ್ನು ಮಾಡುವಾಗ ಆಗಮ ಶಾಸ್ತ್ರವನ್ನನುಸರಿಸಿ ವಿಧಿಯಲ್ಲಿ ಲೋಪವಾಗದಂತೆ ಮತ್ತು ದೇವರು ಪ್ರಸನ್ನವಾಗುವ ರೀತಿಯಲ್ಲಿ ಕರ್ಮವನ್ನು ಆಚರಿಸಬೇಕು. ವಿಧಿಯೆಂದರೆ ಶಿವನ ಆದೇಶವು. ಆದ್ದರಿಂದ ವಿಹಿತ ಕರ್ಮಗಳನ್ನಾಚರಿಸುವಾಗ ಶಿವಾರಾಧನಾ ಬುದ್ಧಿಯಿಂದಲೇ ಆಚರಿಸಬೇಕು. ಈ ಪೂಜೆಯನ್ನು ಮಾಡುವಾಗಲೂ ಸಹ ಗುರುವಿನ ಮಾರ್ಗದರ್ಶನವು ಅವಶ್ಯಕ ವಾದುದು. ಶಿವಪೂಜೆಗೆ ಬೇಕಾಗುವ ಸಾಮಗ್ರಿಗಳನ್ನು ಸಂಗ್ರಹಿಸುವಲ್ಲಿ ಸದಾ ವ್ಯಗ್ರಮನಸ್ಕನಾದ ಯೋಗಿಯೂ ಸಹ ಮುಕ್ತನೇ ಆಗುವನು. ಅಂಧ ಮತ್ತು ಪಂಗುಗಳಂತೆ ಜ್ಞಾನಕರ್ಮಗಳೆರಡೂ ಪರಸ್ಪರ ಸಾಪೇಕ್ಷಗಳಾಗಿರುತ್ತವೆ. ಆದ್ದರಿಂದ ಫಲದ ಆಸೆಯನ್ನು ಬಿಟ್ಟು ಕರ್ಮಜ್ಞಾನವೆರಡನ್ನೂ ಆಚರಿಸಬೇಕು. ಆಚರಣೆ ರೂಪವಾದ ಕರ್ಮವು ಮನುಷ್ಯನಿಗೆ ಒಂದು ಅಲಂಕಾರವಿದ್ದಂತೆ. ಆಚಾರಹೀನನಾದ ವ್ಯಕ್ತಿಯು ಲೋಕನಿಂದೆಗೆ ಗುರಿಯಾಗುತ್ತಾನೆ. ಇದೂ ಅಲ್ಲದೆ ಜ್ಞಾನಾಚರಣೆಗಳೆರಡೂ ಇದ್ದಾಗಲೇನೇ ಶಿವನು ಪ್ರಸನ್ನನಾಗುವನು. ಆದ್ದರಿಂದ ಜ್ಞಾನಿಯಾದವನು ತನ್ನ ಜೀವನದ ಕೊನೆಯ ಉಸಿರಿನವರೆಗೂ ಜ್ಞಾನ-ಕರ್ಮಗಳೆರಡನ್ನೂ ಆಚರಿಸಬೇಕು. (ಸಿ.ಶಿ., ೧೬. ೫-೧೪)

೫೫) ಭಾವಾಗಮಸ್ಥಲ :

ಈ ಪೂರ್ವದಲ್ಲಿ ಹೇಳಿದ ನಿಷ್ಕಾಮಕರ್ಮಿಯಾದ ಶಿವಯೋಗಿಯ ಮನಸ್ಸಿನಲ್ಲಿ ಯಾವ ಭಾವನೆಗಳು ಉದಯಿಸುತ್ತವೆಯೋ ಆ ಭಾವನೆಗಳು ಉಳಿದ ಸಾಮಾನ್ಯ ಜನರಿಗೂ ಸಹ ಅನುಕರಣೀಯಗಳಾಗಿರುತ್ತವೆ. ಅಂತೆಯೇ ಆ ಶಿವಯೋಗಿಯ ಭಾವನೆಗಳನ್ನು ಕುರಿತು ಉಪದೇಶಿಸಲ್ಪಡುವ ಈ ಸ್ಥಲಕ್ಕೆ ಭಾವಾಗಮ ಸ್ಥಲವೆಂದು ಕರೆಯಲಾಗಿದೆ. 'ಶಿವೋಽಹಂ' ಎಂಬ ಭಾವನೆಯೇ ನಮಗೆ ಶಿವಸ್ವರೂಪವನ್ನು ತಂದುಕೊಡುತ್ತದೆ. ಕೇವಲ ಶುಷ್ಕವಾದ ಜ್ಞಾನದಿಂದಾಗಲೀ ಅಥವಾ ಕೇವಲ ಸದಾಚಾರದಿಂದಾಗಲೀ ಶಿವತ್ವವು ಪ್ರಾಪ್ತವಾಗುವುದಿಲ್ಲ. ಆದ್ದರಿಂದ ಶಿವಯೋಗಿಯು ಶಿವಭಾವನೆಯುಳ್ಳವನಾಗಿರಬೇಕು. ಜ್ಞಾನವು ವಸ್ತುವಿನ ಸ್ವರೂಪವನ್ನು ತಿಳಿಸಿಕೊಡುತ್ತದೆ. ಆದರೆ ಭಾವನೆಯು ತದಾಕಾರ ಚಿಂತನೆಯನ್ನು ಮಾಡಲು ಸಹಾಯಕವಾಗುತ್ತದೆ. ಪರಮಾತ್ಮನು ಸಚ್ಚಿದಾನಂದಸ್ವರೂಪನಾಗಿದ್ದಾನೆ ಎಂಬ ಜ್ಞಾನಮಂತ್ರದಿಂದ ಅವನ ಸ್ವರೂಪದ ಆನಂದಾನುಭೂತಿಯು ಉಂಟಾಗುವುದಿಲ್ಲ. ಆದರೆ ಅವನನ್ನು ತನ್ನ ಆತ್ಮರೂಪವಾಗಿ ಭಾವಿಸಿದಾಗ ಆ ಆನಂದಾನುಭೂತಿ ಯಾಗುವುದು. ಆದ್ದರಿಂದ ಶಿವನ ಜ್ಞಾನವಾದರೂ ಶಿವಧ್ಯಾನವನ್ನು ಮಾಡಬೇಕು. ಅರ್ಥವಿಲ್ಲದ ಶಬ್ದ, ಪತಿಯಿಲ್ಲದ ಸತಿ, ಶೃತಿಸಮ್ಮತವಾಗಿರದ ಬುದ್ಧಿ ವ್ಯರ್ಥ ವಾಗಿರುವಂತೆ ಭಾವಹೀನವಾದ ಕ್ರಿಯೆಯೂ ಸಹ ವ್ಯರ್ಥವಾಗಿರುತ್ತದೆ. ಕಣ್ಣಿಲ್ಲದ ವ್ಯಕ್ತಿಯು ರೂಪವನ್ನು ನೋಡಲು ಅಸಮರ್ಥನಾಗಿರುವಂತೆ ಭಾವಹೀನನಾದ ಯೋಗಿಯೂ ಸಹ ಶಿವದರ್ಶನವನ್ನು ಪಡೆಯಲು ಅಸಮರ್ಥನಾಗುವನು. ಆದ್ದರಿಂದ ಭಾವಶುದ್ಧವಾದ ಮನಸ್ಸಿನಿಂದ ಶಿವನನ್ನು ಪೂಜಿಸಬೇಕು. ಭಾವಹೀನವಾದ ಪೂಜೆಯು ಅದೆಷ್ಟೇ ದೊಡ್ಡದಿದ್ದರೂ ಶಿವನು ಅದನ್ನು ಗ್ರಹಿಸುವುದಿಲ್ಲ. ಕೀಟವು ಭ್ರಮರವನ್ನು ಧ್ಯಾನಿಸಿ ಭ್ರಮರವೇ ಆಗುವಂತೆ ನಿರಂತರವಾದ ಶಿವಭಾವನೆಯಿಂದ ಶಿವಯೋಗಿಯು ಶಿವಸ್ವರೂಪನೇ ಆಗಿರುತ್ತಾನೆ. ನಿರ್ಗುಣನೂ. ನಿರಾಕಾರನೂ ಆದ ಪರಶಿವಬ್ರಹ್ಮಸ್ವರೂಪವನ್ನು ಧ್ಯಾನಿಸುವುದು ಆಗದಿದ್ದರೆ ಅರ್ಥಾತ್ ಅದರಲ್ಲಿ ಸಾಮರ್ಥ್ಯವಿರದಿದ್ದರೆ ಶಿವನ ಸರ್ವಜ್ಞತ್ವಾದಿ ಐಶ್ವರ್ಯಗಳನ್ನಾದರೂ ಮನಸ್ಸಿನಲ್ಲಿ ಭಾವಿಸುತ್ತಿರಬೇಕು. (ಸಿ.ಶಿ., ೧೬. ೧೫-೨೩)

೫೬) ಜ್ಞಾನಾಗಮಸ್ಥಲ :

ಈ ಪೂರ್ವದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಭಾವಾಗಮಸ್ಥಲದ ಶಿವಯೋಗಿಯಲ್ಲಿ ಕಂಡುಬರುವ ಜ್ಞಾನದ ಲಕ್ಷಣಗಳನ್ನು ಪ್ರತಿಪಾದಿಸುವ ಸ್ಥಲವೇ ಜ್ಞಾನಾಗಮಸ್ಥಲವು. ಕೇವಲ ಕರ್ಮದಿಂದ ಇಲ್ಲವೇ ಕೇವಲ ಭಾವನೆಯಿಂದ ಮುಕ್ತಿಯು ದೊರೆಯಲಾರದು.

ಆದರೆ ಭಾವ-ಕರ್ಮಗಳಿಂದೊಡಗೂಡಿದ ಜ್ಞಾನವೇ ಮುಕ್ತಿಯನ್ನು ಕೊಡಲು ಸಮರ್ಥವಾಗಿರುತ್ತದೆ. ಕರ್ಮದಿಂದಲೇ ಮುಕ್ತಿಯನ್ನು ಪಡೆಯಲು ಪ್ರಯತ್ನಿಸಿ ಒಂದುನೂರು ಕೋಟಿ ಜನ್ಮಗಳನ್ನು ಕಳೆದರೂ ಅದು ದೊರೆಯುವುದಿಲ್ಲ. ಮುಕ್ತಿಗೆ ಅಮೋಘವಾದ ಸಾಧನೆಯೆಂದರೆ ಜ್ಞಾನವೇ. ಜ್ಞಾನಹೀನನಾದ ವ್ಯಕ್ತಿಯು ಮಾಡಿದ ಕರ್ಮಗಳು ಅವನನ್ನು ಸಂಸಾರದಲ್ಲಿ ಕಟ್ಟಿಹಾಕುತ್ತವೆ. ಆದರೆ ಅವೇ ಕರ್ಮಗಳು ಜ್ಞಾನಿಯಿಂದ ಆಚರಿಸಲ್ಪಟ್ಟರೆ ಮುಕ್ತಿಯ ಸಾಧನಗಳಾಗುತ್ತವೆ. ಕೇವಲ ಕರ್ಮದ ಫಲವಾದ ಸ್ವರ್ಗಾದಿಲೋಕಗಳು ನಶ್ವರವಾದವುಗಳು. ಆದ್ದರಿಂದ ಶಾಶ್ವತವಾದ ಫಲವನ್ನು ಪಡೆದುಕೊಳ್ಳಲು ಜ್ಞಾನವನ್ನೇ ಮಾಡಿಕೊಳ್ಳಬೇಕು. ಸದ್ಗುರುಗಳ ಅನುಗ್ರಹ ದಿಂದ ನಿಗಿಮಾಗಮಾದಿ ವೀರಶೈವ ಶಾಸ್ತ್ರಗಳನ್ನು ಪ್ರಯತ್ನ ಪೂರ್ವಕವಾಗಿ ಅಭ್ಯಾಸಮಾಡಿ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಇದರ ಹೊರತು ಬೇರೆಲ್ಲವೂ ನಿಷ್ಪ್ರಯೋಜಕವಾಗುವುದು. ಈ ಜಗತ್ತಿನಲ್ಲಿ ಪರಶಿವಬ್ರಹ್ಮಕ್ಕಿಂತಲೂ ಭಿನ್ನವಾದದ್ದು ಬೇರೊಂದಾವುದೂ ಇಲ್ಲವೆಂಬ ನಿಶ್ಚಯಕ್ಕೆ ಜ್ಞಾನವೆಂದು ಕರೆಯುತ್ತಾರೆ. ಈ ಜಗತ್ತೆಲ್ಲವೂ ಶಿವಸ್ವರೂಪವಾಗಿದೆ. ಶಿವನಿಗಿಂತಲೂ ಭಿನ್ನವಾದದ್ದು ಬೇರೊಂದಿಲ್ಲ. 'ನಾನೂ ಸಹ ಶಿವಸ್ವರೂಪನೇ ಆಗಿದ್ದೇನೆ' ಎಂಬ ತಿಳುವಳಿಕೆಯೇ ಉತ್ತಮ ಜ್ಞಾನವೆಂದು ಕರೆಯಲ್ಪಡುತ್ತದೆ. ಅಂಧನು ತನ್ನ ಎದುರಿನ ವಸ್ತುವನ್ನು ನೋಡಲು ಅಸಮರ್ಥನಾಗಿರುವಂತೆ ಜ್ಞಾನಹೀನನು ತನ್ನೊಳಗಿನ ಶಿವನನ್ನು ಅರಿಯಲು ಅಕ್ಷಮನಾಗಿರುತ್ತಾನೆ. ಶಿವದರ್ಶನದಿಂದ ಜೀವಿಗಳ ಜನ್ಮ-ಮರಣಾದಿ ಭವರೋಗವು ನಿವೃತ್ತವಾಗುವುದು. ಇಂಥ ಈ ಶಿವದರ್ಶನವು ಜ್ಞಾನಚಕ್ಷುಗಳಿಗೆ ಸುಲಭವಾದು ದಾಗಿರುತ್ತದೆ. ದೀಪವಿಲ್ಲದೆ ಮನೆಯ ಕತ್ತಲೆಯು ದೂರಾಗದಂತೆ ಜ್ಞಾನವಿಲ್ಲದೆ ಚಿತ್ತದಲ್ಲಿಯ ಮೋಹವು ನಿವೃತ್ತಿಯಾಗದು. ಆದ್ದರಿಂದ ಭಾವಸಂಪನ್ನನೂ ಸಹ ಜ್ಞಾನ ಪಡೆದುಕೊಳ್ಳಬೇಕು. (ಸಿ.ಶಿ., ೧೬. ೨೪-೩೪)

೫೭) ಸಕಾಯಸ್ಥಲ :

ದೇಹವನ್ನು ಧರಿಸಿಕೊಂಡಿದ್ದರೂ ದೇಹಾಭಿಮಾನವು ಇಲ್ಲದಿರುವ ಸ್ಥಿತಿಯನ್ನು ಪ್ರತಿಪಾದಿಸುವ ಸ್ಥಲವೇ ಸಕಾಯಸ್ಥಲವು. ಈ ಪೂರ್ವದಲ್ಲಿ ಹೇಳಿದ ಜ್ಞಾನಾಗಮ ಸಂಪನ್ನ ಶಿವಯೋಗಿಯು ದೇಹವನ್ನು ಧರಿಸಿಕೊಂಡಿದ್ದರೂ ನಾನು ಸ್ಥೂಲನು, ನಾನು ಮಾಡುವವನು ಎಂದು ಮೊದಲಾದ ದೇಹ ಮತ್ತು ಅದರ ಕರ್ಮದ ಅಭಿಮಾನವನ್ನು ಸಾಮಾನ್ಯ ಜನರಂತೆ ಈತನು ಮಾಡಿಕೊಳ್ಳುವುದಿಲ್ಲ. ಹೀಗೆ ದೇಹಾಭಿಮಾನವಿರದಿದ್ದರೂ ದೇಹವನ್ನು ಧರಿಸಿಕೊಂಡಿರುವುದರಿಂದ ಸಕಾಯ ನೆಂದು ಕರೆಯಲ್ಪಡುತ್ತಾನೆ. ಈ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಕಾಯವು ಬೇಕೇಬೇಕು. ಅದಿಲ್ಲದಿದ್ದರೆ ಕ್ರಿಯೆಯಾಗಲಿ, ಧ್ಯಾನವಾಗಲಿ ಮತ್ತು ಜ್ಞಾನವಾಗಲಿ ಇವಾವುವೂ ಸಂಭವಿಸಲಾರವು. ಶಿವಾದ್ವೈತ ಜ್ಞಾನಸಂಪನ್ನನೂ, ಯೋಗಿಯೂ, ಮಹಾತ್ಮನೂ

ಆದ ಜ್ಞಾನಿಗೆ ಕಾಯವಿದ್ದಾಗಲೇನೇ ಭೋಗ ಹಾಗೂ ಮೋಕ್ಷಗಳು ಸಂಭವಿಸುವವು. ಅಗ್ನಿಯು ಪ್ರಕಟವಾಗಿ ತೋರಬೇಕಾದರೆ ಅದಕ್ಕೆ ಅವಲಂಬನರೂಪವಾದ ಕಟ್ಟಿಗೆ ಮುಂತಾದ ಇಂಧನವು ಅವಶ್ಯವಾಗಿ ಬೇಕಾಗುವಂತೆ ಶಿವಯೋಗಿಯ ಶರೀರವಿಲ್ಲದೆ ಅವನ ಆತ್ಮವು ಪ್ರಕಾಶಮಾನವಾಗಿ ತೋರಲಾರದು. ವಿಗ್ರಹಗಳ ಮೂಲಕ ದೇವರನ್ನು ಪೂಜಿಸುವಂತೆ ದೇಹದ ಮೂಲಕ ಯೋಗಿಗಳನ್ನು ಪೂಜಿಸಬೇಕಾಗುತ್ತದೆ. ನಿಷ್ಕಲನೂ, ಪರಿಪೂರ್ಣನೂ, ಸದಾ ಕಲ್ಯಾಣಕಾರಕನೂ ಆದ ಶಿವನು ಜಗತ್ತಿನ ಸೃಷ್ಟ್ಯಾದಿ ಕಾರ್ಯಗಳನ್ನು ನಿರ್ವಹಿಸಲು ದಿವ್ಯ ದೇಹಗಳನ್ನು ಧರಿಸಿಕೊಳ್ಳುತ್ತಾನೆ. ಬ್ರಹ್ಮಾದಿ ದೇವತೆಗಳು, ಮುಮುಕ್ಷುಗಳಾದ ಸಕಲ ಮುನಿಗಳು ಸರ್ವಾರ್ಥ ಸಾಧಕವಾದ ತಪಸ್ಸನ್ನು ಕಾಯದಿಂದಲೇ ಆಚರಿಸಿದ್ದಾರೆ. ಸರ್ವ ಸಿದ್ಧಿಗಳಿಗೆ ತಪಸ್ಸೇ ಮೂಲವಾದುದು. ಆ ತಪಸ್ಸಿಗೆ ಕಾಯವೇ ಮೂಲವು. ಆದ್ದರಿಂದ ಶಿವಯೋಗಿಯು ಸಕಾಯನಾಗಿರುತ್ತಾನೆ (ಸಿ.ಶಿ., ೧೬. ૩೫–೪೨)

೫೮) ಅಕಾಯಸ್ಥಲ :

ಈ ಪೂರ್ವದಲ್ಲಿ ಹೇಳಿದ ಸಕಾಯಸ್ಥಲದ ಶಿವಯೋಗಿಯು ಯಾವಾಗ ದೇಹದ ಅಭಿಮಾನವನ್ನು ಸಂಪೂರ್ಣವಾಗಿ ಇಲ್ಲದಾಗಿಸಿಕೊಳ್ಳುತ್ತಾನೆಯೋ ಆಗ ಅವನಿಗೇನೇ ಅಕಾಯನೆಂಬುದಾಗಿ ಕರೆಯಲಾಗುತ್ತದೆ. ಕಾಯವಿದ್ದರೂ ಅಕಾಯನಾಗಬೇಕಾದರೆ ಬೇಕಾಗುವ ಮೂರು ಮಹತ್ವದ ಉಪದೇಶಗಳನ್ನು ಇಲ್ಲಿ ಮಾಡಿದ್ದಾರೆ. ಮೊದಲನೆಯದು ಔಪಚಾರಿಕದೇಹತ್ವವು. ಅಂದರೆ ನಾವು ಯಾವ ದೇಹದಲ್ಲಿ ವಾಸಮಾಡಿರುತ್ತೇವೆಯೋ ಅದರೊಂದಿಗೆ ನಮ್ಮ ಸಂಬಂಧವು ಔಪಚಾರಿಕವಾಗಿರಬೇಕು. ಅಂದರೆ ತಾತ್ಕಾಲಿಕವಾಗಿರಬೇಕೇ ವಿನಹ ತಾದಾತ್ಮಿಕವಾಗಿರಬಾರದು. ಎರಡನೆಯದು ಜಗದಾತ್ಮತ್ವ ಭಾವನೆ ಅಂದರೆ ಸಂಪೂರ್ಣ ಜಗತ್ತನ್ನು ಶಿವಮಯವಾಗಿ ಭಾವಿಸುವುದು. ಮೂರನೆಯದು ಮಾಯಾ ಸಂಬಂಧರಾಹಿತ್ಯವು ಅಂದರೆ ಮಾಯೆಯ ಸಂಬಂಧದಿಂದ ದೂರವಿರುವುದು. ಈ ಮೂರು ವಿಧವಾದ ಆಚರಣೆಗಳನ್ನಳವಡಿಸಿಕೊಂಡಾಗ ಶಿವಯೋಗಿಯು ಅಕಾಯನೆನಿಸಿಕೊಳ್ಳುವನು.

ಶಿವನು ತನ್ನ ಲೀಲಾ ವಿನೋದಕ್ಕಾಗಿ ಅನೇಕ ದೇಹಗಳನ್ನು ಧರಿಸಿದರೂ ಆ ದೇಹ ಸಂಬಂಧಿಗಳಾದ ಕಾಮಾದಿ ವಿಕಾರಗಳು ಅವನಿಗೆ ಹೇಗೆ ಇರುವುದಿಲ್ಲವೋ ಅದರಂತೆ ಶಿವಯೋಗಿಗೆ ಶರೀರ ಸಂಬಂಧವಿದ್ದರೂ ಅದರ ವಿಕಾರಗಳು ಇವನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಾರವು. ಪರಮಾನಂದ ಸ್ವರೂಪವೂ, ಚಿದ್ರೂಪವೂ ಆದ ಪರಶಿವಲಿಂಗದಲ್ಲಿ ವಿಲೀನವಾದ ಮನೋವೃತ್ತಿಯುಳ್ಳ ಶಿವಯೋಗಿಗೆ ದೇಹದ ಸಂಬಂಧವೇ ಇರುವುದಿಲ್ಲ. ನೋಡುವವರಿಗೆ ಅವನು

ದೇಹಿಯಂತೆ ಕಾಣುತ್ತಿರುವುದು ಭ್ರಮೆ ಮಾತ್ರ. ದೇಹಾಭಿಮಾನಶೂನ್ಯವಾದ ಮತ್ತು 'ಶಿವೋऽಹಂ' ಭಾವನೆಯಲ್ಲಿ ಸ್ಥಿತನಾದ ಶಿವಯೋಗಿಗೆ ಇಡೀ ವಿಶ್ವವೇ ತನ್ನ ಶರೀರವಾಗಿ ತೋರುತ್ತಿರುವಾಗ ಇದೊಂದು ದೇಹದಿಂದ ಅದಾವ ಹಾನಿಯೂ ಉಂಟಾಗಲಾರದು. 'ಶಿವೋऽಹಂ' ಭಾವನೆಯಲ್ಲಿ ಅತ್ಯಂತ ನಿಷ್ಠೆಯುಳ್ಳ ಶರೀರಾದಿಗಳ ಪರಿಚ್ಛಿನ್ನ ಅಹಂಕಾರಾದಿಗಳಿಂದ ದೂರವಾದ ಶಿವಯೋಗಿಗೆ ಇಂದ್ರಿಯ ಜನ್ಯವಾದ ಯಾವ ದುಃಖವೂ ಅವನಿಗೆ ಉಂಟಾಗುವುದಿಲ್ಲ. ಆತ್ಮನು ಮನುಷ್ಯನಲ್ಲ, ದೇವನಲ್ಲ, ಮತ್ತು ಯಕ್ಷ–ರಾಕ್ಷಸನೂ ಅಲ್ಲ, ಇವೆಲ್ಲ ಆತ್ಮನಿಗೆ ಪ್ರಾಪ್ತವಾದ ಶರೀರಗಳು. ಯಾವ ಶಿವಯೋಗಿಯು 'ಶಿವೋऽಹಂ' ಭಾವನೆಯಲ್ಲಿ ನಿಷ್ಠನಾಗಿರುತ್ತಾನೆಯೋ ಅವನು ತನಗಿರುವ ದೇಹದ ಬಗ್ಗೆ ಅಭಿಮಾನವನ್ನು ತಾಳುವುದಿಲ್ಲ. (ಸಿ.ಶಿ., ೧೬. ೩೪–೪೮)

೫೯) ಪರಕಾಯಸ್ಥಲ :

'ಪರಃ ಕಾಯಃ ಯಸ್ಯ ಸಃ ಪರಕಾಯಃ ಅಂದರೆ ಪರಬ್ರಹ್ಮ ಸ್ವರೂಪವೇ ಯಾರ ಕಾಯವಾಗಿದೆಯೋ ಆ ಶಿವಯೋಗಿಗೆ ಪರಕಾಯನೆಂದು ಕರೆಯಲಾಗುತ್ತದೆ. ಇನ್ನೊಂದು ಅರ್ಥದಲ್ಲಿ ಅವನ ಕಾಯವೇ ಪರಬ್ರಹ್ಮಸ್ವರೂಪದಷ್ಟು ಪೂಜ್ಯವಾಗಿದೆ ಎಂಬುದಾಗಿ ಹೇಳಬಹುದು. ಈ ಪರಕಾಯ ಸ್ಥಿತಿಯನ್ನು ಪಡೆದುಕೊಂಡ ಶಿವಯೋಗಿಯು ಪ್ರಕೃತಿಯನ್ನು ತನ್ನ ವಶದಲ್ಲಿಟ್ಟುಕೊಂಡಿರುತ್ತಾನೆ. ಅಜ್ಞ ಜೀವಿಗಳು ಪ್ರಕೃತಿಯ ಅಧೀನವಾಗಿ ವ್ಯವಹರಿಸುತ್ತಿದ್ದರೆ ಈತನು ಅದನ್ನೇ ತನ್ನ ಅಧೀನದಲ್ಲಿಟ್ಟು ಕೊಂಡಿರುತ್ತಾನೆ. ಮಾಯೆಯನ್ನು ಮೀರಿನಿಂತ ಈತನು ಸತ್ಯಜ್ಞಾನ ಸುಖಾತ್ಮಕ ನಾಗಿರುತ್ತಾನೆ. ಪರಬ್ರಹ್ಮಸ್ವರೂಪವೇ ಯಾರಿಗೆ ಶರೀರವಾಗಿದೆಯೋ ಅಂತಹ ಪರಕಾಯನಾದ ಶಿವಯೋಗಿಗೆ ಈ ಪ್ರಾಕೃತವಾದ ಸ್ಥೂಲಶರೀರದಿಂದ ಅದಾವ ಹಾನಿಯೂ ಉಂಟಾಗುವುದಿಲ್ಲ. ತನಗುಂಟಾದ ಶಿವಾದ್ವೈತಜ್ಞಾನವೆಂಬ ಅಗ್ನಿಯಿಂದ ಜನ್ಮಬೀಜವನ್ನು ಹುರಿದು ಹಾಕಿದ ಮತ್ತು ಶಿವತತ್ತ್ವವನ್ನು ಅವಲಂಬಿಸಿರುವ ಶಿವಯೋಗಿಯೇ ಪರಕಾಯನೆನಿಸಿಕೊಳ್ಳುತ್ತಾನೆ. ಈ ಪರಕಾಯ ಶಿವಯೋಗಿಯು ಪರಾಅಹಂತೆಯನ್ನು ಪಡೆದು ಇಡೀ ವಿಶ್ವವನ್ನೆಲ್ಲ ಚಿನ್ಮಯವಾಗಿ ನೋಡುತ್ತಾನೆ. ಅಂತೆಯೇ ಅವನಿಗೆ ಶಿವಾತ್ಮತ್ವ ಭಾವನೆಯು ನಿಶ್ಚಿತವಾಗಿರುತ್ತದೆ. ಆದ್ದರಿಂದ ಅವನು ದೇಹಧಾರಿಯಾಗಿದ್ದನೆಂಬ ಭಾವನೆಯು ಭ್ರಮಾತ್ಮಕವಾದುದು. ಚಿದ್ರೂಪವಾದ ತನ್ನ ಆತ್ಮವನ್ನು ಸಾಕ್ಷಾತ್ಕರಿಸಿಕೊಂಡು ಸ್ವಸ್ವರೂಪದ ಚಿಂತನೆಯಲ್ಲಿರುವ ಶಿವಯೋಗಿಯು ದೇಹವನ್ನು ಧರಿಸಿಕೊಂಡಿದ್ದರೂ ನಿರ್ದೇಹಿಯಾದ ಜೀವನ್ಮುಕ್ತ ನಾಗಿರುತ್ತಾನೆ. ಸ್ವಸ್ವರೂಪಜ್ಞಾನ ಸಂಪನ್ನನಾದ ಶಿವಯೋಗಿಯ ಸ್ಥೂಲದೇಹವು ಅನೇಕ ಕಾಲದವರೆಗೆ ಇರಬಹುದು ಅಥವಾ ಇಲ್ಲದೇ ಇರಬಹುದು. ಆದರೂ

ಅವನ ಸಚ್ಚಿದಾನಂದ ಸ್ವರೂಪವನ್ನು ಪ್ರಕಾಶಗೊಳಿಸುವ ಜೀವನ್ಮುಕ್ತಿರೂಪವಾದ ಅವಸ್ಥೆಯು ತತ್‌ಕ್ಷಣದಲ್ಲಿಯೇ ಪ್ರಾಪ್ತವಾಗುವುದು. ಸೂರ್ಯೋದಯವಾದೊಡನೆ ಕತ್ತಲೆಯು ಇಲ್ಲವಾಗಿ ಹೋಗುವಂತೆ ಆತ್ಮಜ್ಞಾನವಾದೊಡನೆ ಸಂಸಾರದ ದುಃಖಗಳೆಲ್ಲ ನಿವೃತ್ತವಾಗುತ್ತವೆ. ಈ ಪರಕಾಯಸ್ಥಲದ ಶಿವಯೋಗಿಯು ದೇಹದ ಮೇಲಿನ ಅಭಿಮಾನವನ್ನು ತೊರೆದು ನಿವೃತ್ತಿಯಾದ ಕಲೆಗಳಿಗೆ ಅತೀತನಾಗಿರುವ ಆ ಪರಿಶಿವಬ್ರಹ್ಮವನ್ನು ಆಶ್ರಯಿಸಿದಂಥವನಾಗಿ ಪರಮಜ್ಞಾನಿಯಾದ ಅವನು ತನ್ನನ್ನು ಶರೀರ ಪರಿಮಿತನನ್ನಾಗಿ ಭಾವಿಸುವುದಿಲ್ಲ. (ಸಿ.ಶಿ., ೧೬. ೪೯–೫೭)

೬೦) ಧರ್ಮಾಚಾರಸ್ಥಲ :

ಈ ಪೂರ್ವದಲ್ಲಿ ಪ್ರತಿಪಾದಿಸಲ್ಪಟ್ಟ ಪರಕಾಯ ಸಂಪನ್ನನಾದ ಶಿವಯೋಗಿಯ ಆಚಾರಕ್ಕೇನೇ ಧರ್ಮವೆಂದು ಕರೆಯುತ್ತಾರೆ. ಅವನ ಆ ಧರ್ಮಗಳು ಲೋಕದ ಜನರಿಗೆ ಅನುಕರಣೀಯಗಳಾಗಿರುತ್ತವೆ. ಅನುಕರಣೀಯಗಳಾದ ಧರ್ಮಗಳನ್ನು ಪ್ರತಿಪಾದಿಸುವ ಸ್ಥಲವೇ ಧರ್ಮಾಚಾರಸ್ಥಲವು. ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ದಯಾ, ಕ್ಷಮಾ, ದಾನ, ಪೂಜಾ, ಜಪ ಮತ್ತು ಧ್ಯಾನಗಳೆಂಬ ಹತ್ತು ವಿಧ ಧರ್ಮಾಚರಣೆಗಳು ಇಲ್ಲಿ ಹೇಳಲ್ಪಟ್ಟಿವೆ. ಈ ಎಲ್ಲ ಧರ್ಮಾಚರಣೆಗಳು ಶಿವಾಗಮಗಳಲ್ಲಿ ಶಿವನಿಂದ ಉಪದೇಶಿಸಲ್ಪಟ್ಟಿರುತ್ತವೆ. ಆದ್ದರಿಂದ ಪ್ರತಿಯೊಬ್ಬ ಜ್ಞಾನಿಯೂ ಶಿವನ ಅನುಗ್ರಹದ ಪ್ರಾಪ್ತಿಗಾಗಿ ಈ ಧರ್ಮಾಚರಣೆಗಳನ್ನು ಆಚರಿಸಬೇಕು. ಅಧರ್ಮವನ್ನೆಂದೂ ಆಚರಿಸಕೂಡದು. ಶಾಸ್ತ್ರವಿಹಿತವಾದ ಧರ್ಮವನ್ನೇ ಆಚರಿಸಬೇಕು. ಆ ಧರ್ಮಾಚರಣೆಯನ್ನೂ ಸಹ ನಿಷ್ಕಾಮ ಭಾವನೆಯಿಂದ ಅರಿತು ಆಚರಿಸಬೇಕು. ಇದೆಲ್ಲವೂ ಒಬ್ಬನೇ ಆದ ಶಿವನೇ ಆಗಿದ್ದಾನೆಂಬ ದೃಢವಾದ ಜ್ಞಾನವುಳ್ಳವನಿಗೆ ಮಮಕಾರ ಭಾವನೆಯಿಲ್ಲವಾಗಿರುವಂತೆ ಸರ್ವಸಿದ್ಧಿಗಳಿಗೆ ಅರ್ಥಾತ್ ಭೋಗ–ಮೋಕ್ಷಗಳಿಗೆ ಧರ್ಮಾಚರಣೆಯೇ ಮೂಲವಾಗಿರುವುದರಿಂದ ನಿಸ್ಪೃಹನಾದ ಶಿವಯೋಗಿಯೂ ಸಹ ಧರ್ಮಮಾರ್ಗವನ್ನು ಬಿಡಕೂಡದು. ಜ್ಞಾನಾಮೃತದಿಂದ ತೃಪ್ತನಾಗಿದ್ದರೂ ಜ್ಞಾನಿಯು ಧರ್ಮಮಾರ್ಗವನ್ನು ಬಿಡಬಾರದು. ಏಕೆಂದರೆ ಅಜ್ಞರಾದ ಜೀವಿಗಳು, ಜ್ಞಾನಿಗಳ ಅಚರಣೆಗಳನ್ನೇ ಅನುಕರಿಸುತ್ತಿರುತ್ತಾರೆ. ಶಿವನು ಸದಾಚಾರ ಪ್ರಿಯನಾಗಿರುತ್ತಾನೆ. ಅವನು ಸದಾಚಾರದಿಂದಲೇ ಪೂಜೆಗೊಳ್ಳುವನು. ಸದಾಚಾರ ಸಂಪನ್ನರಲ್ಲದವರ ಮೇಲೆ ಅವನು ಎಂದೂ ಕೃಪೆಯನ್ನು ಸಹ ಮಾಡಲಾರನು (ಸಿ.ಶಿ., ೧೬. ೫೮–೬೬)

೬೧) ಭಾವಾಚಾರಸ್ಥಲ :

ಭಾವವೆಂದರೆ ಮನಸ್ಸಿನ ಒಂದು ವೃತ್ತಿಯು. ಇದು ಸಂಪೂರ್ಣ ಶಿವಮಯವಾಗಿರುತ್ತದೆ. ಧರ್ಮಾಚರಣೆಯನ್ನು ಮಾಡುವವನಿಗೆ ಭಾವವು ಅರ್ಥಾತ್

ಭಾವನೆಯು ಅವಶ್ಯವಾಗಿ ಬೇಕೇಬೇಕು. ಅಂತಹ ಭಾವನೆಯ ಬಗ್ಗೆ ತಿಳಿಸುವ ಸ್ಥಲವೇ ಭಾವಾಚಾರಸ್ಥಲವು. ಭಾವನೆಯಿಂದ ಆಚರಿಸಲ್ಪಟ್ಟ ಕರ್ಮವು ಅತ್ಯಂತ ಪಾವನವಾದುದು. ಆದ್ದರಿಂದ ಭಾವಯುಕ್ತವಾಗಿಯೇ ಧರ್ಮವನ್ನಾಚರಿಸಬೇಕು. ಭಾವದಿಂದಲೇ ಮನಸ್ಸಿನ ಶುದ್ಧಿಯು ಮತ್ತು ಮಾಡುವ ಪೂಜಾದಿ ಶ್ರೇಷ್ಠ ಕರ್ಮಗಳಿಂದ ಭಾವವು ಪರಿಶುದ್ಧವಾಗುವುದು. ಇದರ ಈ ಮರ್ಮವನ್ನರಿತ ಶಿವಯೋಗಿಯು ಅದೆಂದೂ ಭಾವವನ್ನು ತ್ಯಜಿಸಕೂಡದು. ಶಾಸ್ತ್ರೋಕ್ತಗಳಾದ ನಿತ್ಯ ಹಾಗೂ ನೈಮಿತ್ತಿಕಾದಿ ಕರ್ಮಗಳನ್ನು ಶಿವಭಾವನೆಯಿಂದ ಮಾಡಿದಾಗ ಅವುಗಳನ್ನು ಮಾಡುವ ಯೋಗಿಗೆ ಯಾವ ದೋಷಗಳೂ ಅಂಟಿಕೊಳ್ಳುವುದಿಲ್ಲ. ಹೃದಯಕಮಲದಲ್ಲಿ ಸದಾ ಪ್ರಕಾಶಿಸುತ್ತಿರುವ ಜ್ಞಾನವೆಂಬ ಸೂರ್ಯನನ್ನು ಭಾವನೆಯಿಂದ ಅನುಸಂಧಾನಿಸುವುದೇ ಸಂಧ್ಯಾವಂಧನೆಯು. ಅಂತರಂಗದ ಚಿದಗ್ನಿಯಲ್ಲಿ ಅಂತರ್ಮುಖನಾಗಿ ತನ್ನ ಮನಸ್ಸಿನಲ್ಲಿ ಬರುತ್ತಿರುವ ವಿಷಯಗಳ ಬಯಕೆಗಳನ್ನೆಲ್ಲ ಸಮರ್ಪಣ ಮಾಡುವುದೇ ಹೋಮಕ್ರಿಯೆ ಎಂದು ಕರೆಯಲ್ಪಡುವುದು. ನಿತ್ಯ ಹಾಗೂ ನೈಮಿತ್ತಿಕ ಕರ್ಮಗಳನ್ನು ಆಚರಿಸುವಾಗ ಮನಸ್ಸಿನಲ್ಲಿ ಬೇರಾವ ಪ್ರಯೋಜನೆಯ ಭಾವವನ್ನು ತಾಳದೆ ಶಿವಾರ್ಪಣಬುದ್ಧಿಯಿಂದ ಆಚರಿಸಿದರೆ ಆ ಆಚರಿಸುವ ವ್ಯಕ್ತಿಯು ಸಾಂಸಾರಿಕ ಬಂಧನದಿಂದ ಬದ್ಧನಾಗಲಾರನು. ವಿವೇಕಿಯಾದ ವ್ಯಕ್ತಿಯು ಕಾರ್ಯ ಹಾಗೂ ಅಕಾರ್ಯದ ಎಲ್ಲ ಭಾರವನ್ನು ಶಿವನ ಮೇಲಿರಿಸಿ ಕರ್ಮಗಳನ್ನು ಮಾಡುತ್ತ ಅಸಂಗನಾಗಿರುತ್ತಾನೆ. ಸಂಪೂರ್ಣವಾದ ವಿಶ್ವವನ್ನು ಮತ್ತು ಚಿದಾನಂದರೂಪವಾದ ಶಿವನನ್ನು ಯಾರು ಏಕಭಾವದಿಂದ ಸದಾ ಭಾವಿಸುತ್ತಿರುತ್ತಾರೆಯೋ ಅವರೇ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಆದ್ದರಿಂದ ಪ್ರತಿಯೊಂದು ಕ್ರಿಯೆಯಲ್ಲಿ ಭಾವನೆಯು ಅವಶ್ಯವಾಗಿ ಬೇಕೇಬೇಕು (ಸಿ.ಶಿ., ೧೬. ೬೨-೭೫)

೬೨) ಜ್ಞಾನಾಚಾರಸ್ಥಲ :

ಧರ್ಮಾಚಾರ ಹಾಗೂ ಭಾವಾಚಾರಗಳು ಮನುಷ್ಯನ ಆಧ್ಯಾತ್ಮಿಕ ಜೀವನಕ್ಕೆ ಎಷ್ಟು ಅವಶ್ಯಕವಾದವುಗಳೋ ಜ್ಞಾನವೂ ಸಹ ಅಷ್ಟೇ ಅವಶ್ಯಕವಾಗಿರುತ್ತದೆ. ಅಂತಹ ಜ್ಞಾನದ ಸ್ವರೂಪವನ್ನು ತಿಳಿಸುವ ಸ್ಥಲವೇ ಜ್ಞಾನಾಚಾರಸ್ಥಲವು. ಶಿವಾದ್ವೈತ ಜ್ಞಾನವೇ ಜ್ಞಾನವೆಂಬುದಾಗಿ ಕರೆಯಲಾಗಿದೆ. ಆ ಜ್ಞಾನವು ಪ್ರಾಪ್ತವಾದ ನಂತರ ಬೇರೊಂದು ಪ್ರಾಪ್ತವಾಗಲೀ ಅಥವಾ ಆಗದೇ ಇರಲಿ, ಅದರಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಶಿವಾದ್ವೈತ ಜ್ಞಾನವು ನಿರ್ಮಲವಾದುದಾಗಿದೆ. ಅಂತೆಯೇ ಅದರಿಂದ ಸರ್ವೋತ್ಕೃಷ್ಟವಾದ ಮೋಕ್ಷವು ಲಭಿಸುವುದು. ಈ ಜ್ಞಾನಕ್ಕಿಂತ ಭಿನ್ನವಾದ ಲೌಕಿಕ ಜ್ಞಾನವು ಯಾವುದೇ ಇದ್ದರೂ ಅದು ರಾಗ-ದ್ವೇಷಾದಿಗಳಿಂದ

ಕಲುಷಿತವಾಗಿರುವುದರಿಂದ ಅದುವೇ ಪುನಃ ಸಂಸಾರಕ್ಕೆ ಕಾರಣೀಭೂತ ವಾಗಿರುತ್ತದೆ. ಪರತತ್ತ್ವವನ್ನು ಪ್ರಕಾಶಗೊಳಿಸುವ ಪರಿಪೂರ್ಣವಾದ ಶಿವಾದ್ವೈತ ಜ್ಞಾನವನ್ನು ಅವಲಂಬಿಸಿ ಯಾವ ಆಚಾರವು ಪ್ರತಿಪಾದಿಸಲ್ಪಡುತ್ತವೆಯೋ ಅದಕ್ಕೆ ಜ್ಞಾನಾಚಾರವೆಂದು ಕರೆಯುತ್ತಾರೆ. ಇನ್ನು ನಿರವಯವನಾದ, ಭೇದರಹಿತನಾದ 'ಶಿವ' ಎಂಬ ಪರವಸ್ತುವಿನಲ್ಲಿ ಸಂಪೂರ್ಣವಾದ ಜಗಜ್ಜಾಲವನ್ನು ಅಭೇದ ಜ್ಞಾನದಿಂದ ಯಾರು ಸಂಬಂಧಗೊಳಿಸುವರೋ ಅವರಿಗೆ ಜ್ಞಾನಾಚಾರಿ ಎಂದು ಕರೆಯುತ್ತಾರೆ.

ಗುರುವಿನ ಕೃಪಾದೃಷ್ಟಿ ಪ್ರಸಾದದಿಂದ ಮುಕ್ತಿಪ್ರದವಾದ ಜ್ಞಾನವನ್ನು ಪಡೆದ ಬಳಿಕ ಸಂಸಾರದ ವೃದ್ಧಿಗೆ ಕಾರಣೀಭೂತವಾದ ಕರ್ಮವನ್ನು ಮಾಡಲು ಅದಾರಿಗೆ ತಾನೆ ಇಚ್ಛೆಯುಂಟಾದೀತು? ಯಾರಿಗೂ ಆಗುವುದಿಲ್ಲೆಂಬ ತಾತ್ಪರ್ಯವು. ಇನ್ನು ಸಂಸಾರದ ಪ್ರವಾಹಕ್ಕೆ ಮೂಲ ಕಾರಣವಾದ ಕರ್ಮವು ಜ್ಞಾನಾಗ್ನಿಯಿಂದ ದಗ್ಧವಾಗಿರುವುದರಿಂದ ಅದು ಮುಂದಿನ ಸಂಸಾರದ ಪ್ರವಾಹಕ್ಕೆ ಕಾರಣವಾಗಲಾರದು. ಜ್ಞಾನಹೀನನಾದ ವ್ಯಕ್ತಿಯು ಕರ್ಮಜಾಲದಿಂದ ಕಟ್ಟಲ್ಪಡುತ್ತಾನೆ. ಆದರೆ ಜ್ಞಾನಿಗಳಿಂದ ಆಚರಿಸಲ್ಪಟ್ಟ ಕರ್ಮಗಳು ನಿಷ್ಫಲಗಳಾಗಿರುವುದರಿಂದ ಅವುಗಳು ಬಂಧನಕಾರಿಗಳಾಗಲಾರವು (ಸಿ.ಶಿ., ೧೬. ೭೯–೮೪)

ಪ್ರಸಾದಿಸ್ಥಲ

ಹೀಗೆ ಲಿಂಗಷಟ್‌ಸ್ಥಲದಲ್ಲಿ ಬರುವ ಮಾಹೇಶ್ವರಸ್ಥಲದ ಒಂಭತ್ತು ಅವಾಂತರ ಸ್ಥಲಗಳ ಬಗ್ಗೆ ಮೇಲೆ ವಿವರಿಸಲಾಗಿದೆ. ಆ ವಿವರಣೆಯಂತೆ ಅರಿತು ಅಚರಿಸುವವನೇ ಲಿಂಗಷಟ್‌ಸ್ಥಲದ ಮಾಹೇಶ್ವರನೆಂದು ಕರೆಯಲ್ಪಡುತ್ತಾನೆ. ಈ ವಿಧವಾದ ಮಾಹೇಶ್ವರ ಸ್ಥಲದ ವಿಚಾರವನ್ನು ಶ್ರವಣ ಮಾಡಿದ ಅಗಸ್ತ್ಯ ಮಹರ್ಷಿಯು ಶ್ರೀ ಜಗದ್ಗುರು ರೇಣುಕ ಭಗವತ್ಪಾದರನ್ನು ಕುರಿತು –

ಸ್ಥಲಾನಿ ತಾನಿ ಚೋಕ್ತಾನಿ ಯಾನಿ ಮಾಹೇಶ್ವರಸ್ಥಲೇ ।
ವದಸ್ವ ಸ್ಥಲಭೇದಂ ಮೇ ಪ್ರಸಾದಿಸ್ಥಲಸಂಶ್ರಿತಮ್ ॥

(ಸಿ.ಶಿ., ೧೭–೧)

ಎಂದು ಪ್ರಾರ್ಥಿಸಿಕೊಂಡಿದ್ದಾನೆ. ಅಂದರೆ ಮಾಹೇಶ್ವರ ಸ್ಥಲದ ಅವಾಂತರಸ್ಥಲಗಳಂತೆ ಪ್ರಸಾದಿಸ್ಥಲದ ಅವಾಂತರಸ್ಥಲಗಳನ್ನು ಸಹ ಭೋದಿಸಬೇಕೆಂಬುದು ಮಹರ್ಷಿಯ ಪ್ರಾರ್ಥನೆಯಾಗಿದೆ. ಋಷಿಯ ಈ ಪ್ರಾರ್ಥನೆಯಂತೆ ಪೂಜ್ಯಪಾದರು ಪ್ರಸಾದಿ ಸ್ಥಲದಲ್ಲಿ ಬರುವ ಒಂಭತ್ತು ಅವಾಂತರಸ್ಥಲಗಳನ್ನು ಇಲ್ಲಿ ಪ್ರತಿಪಾದಿಸಿದ್ದಾರೆ. ಅವುಗಳ ಬಗ್ಗೇನೇ ಇಲ್ಲಿ ಕ್ರಮವಾಗಿ ವಿವರಿಸಲಾಗುವುದು.

೬೩) ಕಾಯಾನುಗ್ರಹಸ್ಥಲ :

ಈ ಪೂರ್ವದ ಜ್ಞಾನಾಚಾರ ಸಂಪನ್ನನಾದ ಶಿವಯೋಗಿಯು ತನ್ನ ಕಾಯದಲ್ಲಿದ್ದು ಸರ್ವ ಜನರನ್ನು ತಾನು ಅನುಗ್ರಹಿಸುವುದರಿಂದ ಅವನಿಗೆ ಕಾಯಾನು ಗ್ರಾಹಕನೆಂದು ಕರೆಯಲಾಗಿದೆ. ಶಿವನು ಮೂರ್ತಿಯೊಳಗೆ ನಿವಾಸಿಸುವಂಥವನಾಗಿ ಭಕ್ತರನ್ನು ಅನುಗ್ರಹಿಸುತ್ತಾನೆ. ಶಿವನು ಶಿಲಾಮಯ ಮೂರ್ತಿಯೊಳಗಿದ್ದರೂ ಆ ಶಿಲೆಯ ಸಂಗರಹಿತನಾಗಿರುವಂತೆ ಶಿವಯೋಗಿಯು ಶರೀರದಲ್ಲಿದ್ದರೂ ಸದಾ ಅದರ ಸುಖ-ದುಃಖಾದಿಗಳ ಸಂಗರಹಿತನಾಗಿರುತ್ತಾನೆ. ಭೇದರಹಿತವಾದ ಸ್ಥಿರವಾದ 'ಶಿವೋऽಹಂ' ಎಂಬ ದೃಢ ಭಾವನೆಯಿಂದ ಯುಕ್ತನಾದ ಈ ಶಿವಯೋಗಿಯು ಮಾಯಾ ಪ್ರಪಂಚರೂಪ ಕ್ಲೇಶರಹಿತನಾದಂಥವನಾಗಿ ಸಾಕ್ಷಾತ್ ಶಿವಸ್ವರೂಪನೇ ಆಗಿರುತ್ತಾನೆ. ಚಿತ್‌ಸುಖಸಾಗರನಾದ ಶಿವನಲ್ಲಿ ಚಿತ್ತವೃತ್ತಿಗಳೆಲ್ಲ ವಿಲೀನಗೊಳ್ಳಲು ಅವಿದ್ಯಾಕಲ್ಪಿತವಾದ ಯಾವುದೊಂದು ವಸ್ತುವನ್ನು ಈ ಸಂಯಮಿಯು ನೋಡಲಾರನು ಅರ್ಥಾತ್ ಇವನಿಗೆ ತೋರುವುದಿಲ್ಲವೆಂಬ ಭಾವನೆಯು. ಶುಕ್ತಿಯಲ್ಲಿ ಬೆಳ್ಳಿಯ ಪ್ರತೀತಿಯಾಗುತ್ತಿರುವಾಗ ಇದು ಬೆಳ್ಳಿಯಲ್ಲ ಎಂಬ ವಾಸ್ತವಿಕ ಜ್ಞಾನವಾಗಲು ಅಲ್ಲಿ ಶುಕ್ತಿಯೇ ಅರ್ಥಾತ್ ಸಿಂಪಿಯೇ ತೋರುವಂತೆ ಇದು ಜಗತ್ತಲ್ಲ ಎಂಬ ಜ್ಞಾನವಾದೊಡನೆ ಶಿವನೇ ಸರ್ವತ್ರ ಭಾಸಿಸತೊಡಗುತ್ತಾನೆ. ನಿದ್ದೆಯಿಂದ ಎಚ್ಚರವಾದೊಡನೆ ಸ್ವಪ್ನದ ವಸ್ತುಗಳೆಲ್ಲ ಇಲ್ಲದಾಗಿ ಹೋಗುವಂತೆ ಶಿವಜ್ಞಾನವಾದೊಡನೆ ಈ ಸಂಸಾರವು ಸಹ ಇಲ್ಲದಾಗುವುದು. ಈ ಸಂಸಾರದ ತೋರುವಿಕೆಗೆ ಅಜ್ಞಾನವೇ ಕಾರಣವಾಗಿರುವುದರಿಂದ ಆ ಅಜ್ಞಾನವು ನಿವೃತ್ತವಾಗಲು ಸಂಸಾರದರ್ಶನವು ಅದು ಹೇಗೆ ತಾನೆ ಆಗಬಲ್ಲದು? ಅಹಂಕಾರ - ಮಮಕಾರಗಳ ಗ್ರಂಥಿಯನ್ನು ಕಳೆದುಕೊಂಡ, ಕ್ರೀಡೆಗಾಗಿ ಸ್ವೀಕರಿಸಿದ ಶರೀರವುಳ್ಳ ಶಿವಯೋಗಿಯು ಜೀವನ್ಮುಕ್ತ ನಾಗಿದ್ದು ಲೋಕಾನುಗ್ರಹಕ್ಕಾಗಿ ಸಾಮಾನ್ಯರಂತೆ ಸಂಚರಿಸುತ್ತಿರುತ್ತಾನೆ.- (ಸಿ.ಶಿ., ೧೭. ೫-೧೩)

೬೪) ಇಂದ್ರಿಯಾನುಗ್ರಹಸ್ಥಲ :

ಕಾಯಾನುಗ್ರಹ ಸಂಪನ್ನನಾದ ಪರಕಾಯ ಶಿವಯೋಗಿಯ ದರ್ಶನದಿಂದ ಜೀವಿಗಳಿಗೆ ತಮ್ಮ ಇಂದ್ರಿಯಗಳ ವ್ಯವಹಾರದ ವಿಷಯದಲ್ಲಿ ವಿವೇಕವು ಉತ್ಪನ್ನ ವಾಗಿತ್ತದೆ. ಇದುವೇ ಇಂದ್ರಿಯಾನುಗ್ರಹವೆಂದು ಕರೆಯಲ್ಪಡುತ್ತದೆ. ಅಂದರೆ ಈ ಶಿವಯೋಗಿಯು ತನ್ನ ದಿವ್ಯದೃಷ್ಟಿಯ ಮೂಲಕ ಜೀವಿಗಳ ಇಂದ್ರಿಯಗಳ ಮೇಲೆ ಅನುಗ್ರಹವನ್ನುಂಟುಮಾಡುತ್ತಾನೆ. ಈ ಅನುಗ್ರಹದಿಂದಲೇ ಇಂದ್ರಿಯ ಮತ್ತು ವಿಷಯಗಳ ಬಗ್ಗೆ ವಿವೇಕವು ಉಂಟಾಗುತ್ತದೆ. ಇಂದ್ರಿಯಗಳು ಯಾವಾಗ ತಮ್ಮ

ವಿಷಯಗಳೊಂದಿಗೆ ಸಂಬಂಧವನ್ನು ಹೊಂದುತ್ತವೆಯೋ ಆಗ ರಾಗವಾಗಲಿ, ದ್ವೇಷವಾಗಲಿ ಉತ್ಪನ್ನವಾಗುತ್ತವೆ. ಆದರೆ ಶಿವಯೋಗಿಯು ಈ ರಾಗ–ದ್ವೇಷಗಳನ್ನು ಬಿಟ್ಟವನಾಗಿರಬೇಕು. ಇಂದ್ರಿಯಗಳ ಬಾಹ್ಯ ಪ್ರವೃತ್ತಿಯು ಸಂಸಾರಕ್ಕೆ ಕಾರಣವಾದರೆ ಅದುವೇ ಅಂತರ್ಮುಖವಾಗಿ ಶಿವನೊಂದಿಗೆ ಜೀವನು ಸಮರಸನಾಗಲು ನಿಷ್ಪ್ರಪಂಚವು ಅರ್ಥಾತ್ ಮೋಕ್ಷವು ಪ್ರಾಪ್ತವಾಗುವುದು. ಶಿವಯೋಗಿಯು ಒಂದು ಕ್ಷಣಕಾಲ ಅಂತರಂಗದಲ್ಲಿ ಶಿವನ ಸಾಕ್ಷಾತ್ಕಾರವನ್ನು ಪಡೆದರೆ ಮತ್ತೊಂದು ಕ್ಷಣದಲ್ಲಿ ಇಂದ್ರಿಯಾದಿಗಳಿಂದ ಒಳಗಿನ ಪದಾರ್ಥಗಳನ್ನು ಅನುಭವಿಸುತ್ತಿರುತ್ತಾನೆ. ಹೀಗೆ ಶಿವನಲ್ಲಿ ಆಸಕ್ತಚಿತ್ತನಾದ ಇವನು ಇಂದ್ರಿಯಗಳುಳ್ಳವನಾಗಿದ್ದರೂ ಆತನನ್ನು ಇಂದ್ರಿಯ ವಿಹೀನನೆಂದೇ ಭಾವಿಸಬೇಕು. ನಿರಭಿಮಾನಿಯೂ ಹಾಗೂ ಶಿವನಲ್ಲಿ ಆಸಕ್ತವಾದ ಸರ್ವೇಂದ್ರಿಯವುಳ್ಳವನಾದವನಿಗೆ ಜರಾ–ಮರಣಗಳಾಗಲೀ, ಕ್ಷುಧಾ–ಪಿಪಾಸೆಗಳಾಗಲೀ ಇರುವುದಿಲ್ಲ. ಸರ್ವೇಂದ್ರಿಯಗಳಲ್ಲಿ ಮನಸ್ಸೇ ಪ್ರಧಾನವಾದುದು. ಅದು ಎಲ್ಲಿ ಹೋಗುವುದೋ ಸಕಲೇಂದ್ರಿಯಗಳು ಅದನ್ನೇ ಹಿಂಬಾಲಿಸುತ್ತವೆ ಅಂದಾಗ ಮನಸ್ಸು ಶಿವನಲ್ಲಿ ಲೀನವಾಗಲು ಉಳಿದ ಇಂದ್ರಿಯಗಳು ಅದು ಹೇಗೆ ತಾನೆ ಭಿನ್ನ ವ್ಯವಹಾರಗಳನ್ನು ಮಾಡಬಲ್ಲವು? ಶಿವಯೋಗಿಯಾದವನು ಏನನ್ನು ನೋಡುವನೋ, ಯಾವುದನ್ನು ಕುರಿತು ಚಿಂತಿಸುವನೋ ಅದೆಲ್ಲವೂ ಶಿವರೂಪವಾಗಿಯೇ ತೋರುತ್ತದೆ. ತನ್ನ ಇಂದ್ರಿಯ ಸಹಿತವಾದ ಪ್ರಾಣವನ್ನು ಮನಸ್ಸಿನಲ್ಲಿ ಆ ಮನಸ್ಸನ್ನು ಯಾವ ಶಿವಯೋಗಿಯು ಪರಬ್ರಹ್ಮದಲ್ಲಿ ಸ್ಥಿರಗೊಳಿಸುವನೋ ಅವನು ಸಾಕ್ಷಾತ್ ಶಿವರೂಪನೇ ಆಗುವನು. ಅವನಿಗೆ ಜಗತ್ತಿನ ಭ್ರಮೆಯು ಉಂಟಾಗುವುದಿಲ್ಲ. ಸರ್ವೇಂದ್ರಿಯಗಳ ಪ್ರವೃತ್ತಿಯ ಮೂಲಕ ಒಳಹೊರಗೆಲ್ಲ ಶಿವನನ್ನೇ ಪೂಜಿಸುವ ಈ ಸಂಯಮಿಯು ಸರ್ವತ್ರ ಸುಖಿಯೇ ಆಗಿರುತ್ತಾನೆ. (ಸಿ.ಶಿ., ೧೭. ೧೪–೨೩)

೬೫) ಪ್ರಾಣಾನುಗ್ರಹಸ್ಥಲ :

ಈ ಪೂರ್ವದಲ್ಲಿ ಹೇಳಿದ ಇಂದ್ರಿಯಾನುಗ್ರಹ ಸಂಪನ್ನ ಶಿವಯೋಗಿಯು ಪ್ರಾಣವಾಯುವನ್ನು ಕಂಭಕದಿಂದ ನಿರೋಧಿಸಿ ಕಾಣುತ್ತಿರುವ ವಿಶ್ವವೆಲ್ಲವನ್ನೂ ಶಿವರೂಪವಾಗಿ ನೋಡುತ್ತಾನೆ ಮತ್ತು ಅದೇ ಪ್ರಕಾರವಾಗಿ ಅನುಸರಿಸಲು ಸರ್ವರ ಮೇಲೆ ಅನುಗ್ರಹವನ್ನೂ ಸಹ ಉಂಟುಮಾಡುತ್ತಾನೆ. ಇದುವೇ ಪ್ರಾಣಾನುಗ್ರಹಸ್ಥಲವು. ಅಂದರೆ ತನ್ನ ಪ್ರಾಣವನ್ನು ನಿರೋಧಿಸಿ ತಾನು ಯೋಗಸ್ಥನಾಗಿದ್ದುಕೊಂಡು ಅನ್ಯರನ್ನು ಅನುಗ್ರಹಿಸುವುದೇ ಪ್ರಾಣಾನುಗ್ರಹವೆಂದು ತಿಳಿದುಕೊಳ್ಳಬೇಕು. ಯಾರ ಪ್ರಾಣವು ಪರಮಕಾರಣನಾದ ಪರಶಿವನಲ್ಲಿ ವಿಷಯವನ್ನು ಹೊಂದುವುದೋ ಅವನಿಗೆ ಇಂದ್ರಿಯಸ್ಫೂರ್ತಿಯಾಗಲಿ, ಸಂಸಾರ ದರ್ಶನವಾಗಲಿ ಅದು ಹೇಗೆ ತಾನೆ ಉಂಟಾದೀತು? ಕೇವಲ ಕುಂ ಭದ ಮೂಲಕ ಶಿವನಲ್ಲಿ ಪ್ರಾಣವಾಯುವನ್ನು

ವಿಲೀನಗೊಳಿಸಲು ಶ್ರೋತ್ರಾದಿ ಇಂದ್ರಿಯಗಳೆಲ್ಲ ತಮ್ಮ ಶಬ್ದಾದಿ ವಿಷಯಗಳೊಂದಿಗೆ ಸಂಬಂಧವಾಗದೆ ಅವು ಸ್ವತಃ ಅಂತರ್ಮುಖವಾಗುತ್ತವೆ. ಹೀಗೆ ಅಂತರ್ಮುಖವಾದ ಇಂದ್ರಿಯವುಳ್ಳ ಆ ಶಿವಯೋಗಿಯು ತನ್ನ ಸರ್ವ ಇಂದ್ರಿಯಗಳನ್ನು ಪ್ರಾಣದಲ್ಲಿ ವಿಲೀನಗೊಳಿಸಿ ನಿಶ್ಚಲನೂ, ರಾಗ-ದ್ವೇಷಾದಿರಹಿತನೂ ಆಗಿ ತಾನೇ ತನ್ನಲ್ಲಿ ಶಾಂತನಾಗಿರುತ್ತಾನೆ.

ಹೀಗೆ ಪ್ರಾಣವಾಯುವಿನ ಸ್ಥಿರತೆಯಿಂದ ಮನಸ್ಸಿನ ಸಂಕಲ್ಪ-ವಿಕಲ್ಪಾತ್ಮಕ ವೃತ್ತಿಗಳೆಲ್ಲ ಇಲ್ಲದಾಗಿ ಹೋಗುತ್ತವೆ. ಅದರಿಂದ ಪ್ರಶಾಂತ ಮನಸ್ಕನಾದ ಶಿವಯೋಗಿಯು ಶಿವನ ಹೊರತಾಗಿ ಬೇರಾವುದನ್ನೂ ನೋಡುವುದಿಲ್ಲ. ಮನುಷ್ಯನ ದೇಹಧಾರಣಾದಿ ವ್ಯವಹಾರಗಳಿಗೆ ಪ್ರಾಣವೇ ಕಾರಣವಾಗಿರುತ್ತದೆ. ಆ ಪ್ರಾಣಕ್ಕೆ ಸರ್ವಕಾರಣನಾದ ಶಿವನೇ ಆಧಾರನಾಗಿರುತ್ತಾನೆ. ಶಿವನು ಸ್ವತಃ ನಿರಾಧಾರನಾಗಿದ್ದು ಸರ್ವ ಜಗತ್ತಿಗೆ ಆಧಾರನಾಗಿರುತ್ತಾನೆ. ಅವನೇ ಪ್ರಾಣಕ್ಕೂ ಸಹ ಆಧಾರನು. ಆ ಪ್ರಾಣ ತನುವಿಗೆ ಆಧಾರವಾಗಿರುತ್ತದೆ. ಹೀಗೆ ಪ್ರಾಣಯುಕ್ತವಾದ ತನುವಿನಿಂದಲೇ ಜೀವಾತ್ಮನ ಎಲ್ಲ ವ್ಯವಹಾರಗಳು ನಡೆಯುತ್ತಿರುತ್ತವೆ. ಯೋಗಿಗಳಾದವರು ಯೋಗಮಾರ್ಗದಿಂದ ಪ್ರಾಣವನ್ನು ಶಿವನಲ್ಲಿ ವಿಲೀನಗೊಳಿಸಿದರೂ ಪ್ರಾಣಶಕ್ತಿಯ ವಾಸನೆಯ ಬಲದಿಂದ ಜೀವಿಯು ದೇಹವನ್ನು ಧರಿಸಿಕೊಂಡಿರುತ್ತದೆ. ಹೀಗೆ ಶಿವನಲ್ಲಿ ಪ್ರಾಣವಾಯುವಿನಲ್ಲಿ ವಿಲಯ ಮೂಲಕ ವಿಲೀನಗೊಂಡ ಶಿವಯೋಗಿಯು ಎಲ್ಲಿಯೂ ಚಲನೆಯಿಲ್ಲದೆ ನಿಶ್ಚಲನಾಗಿರುತ್ತಾನೆ (ಸಿ.ಶಿ., ೧೭. ೨೪-೩೩)

೬೬) ಕಾಯಾರ್ಪಿತಸ್ಥಲ :

ಸರ್ವರನ್ನು ಅನುಗ್ರಹಿಸುವ ಪರಶಿವಬ್ರಹ್ಮದ ಅರ್ಚನೆಯಲ್ಲಿ ದೇಹಾಭಿಮಾನ ವನ್ನು ತ್ಯಾಗಮಾಡುವುದೇ ಕಾಯಾರ್ಪಿತವೆಂದು ಕರೆಯಲ್ಪಡುತ್ತದೆ. ಯೋಗಿಯು ಯಾವಾಗ ತನ್ನ ದೇಹವನ್ನು ಶಿವನಿಗೆ ಸಮರ್ಪಿಸುತ್ತಾನೆಯೋ ಆಗ ಅದು ಶಿವರೂಪವೇ ಆಗುತ್ತದೆ. ಇದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಶಬ್ದಾದಿ ವಿಷಯಗಳ ಸಂಗದಿಂದುಂಟಾದ, ಇಂದ್ರಿಯಗಳಿಗೆ ಪ್ರೀತಿದಾಯಕವಾದ ವೈಷಯಿಕ ಸುಖಗಳನ್ನು ಸುಖರೂಪನಾದ ಪರಮಾತ್ಮನಿಗೆ ಶಿವಯೋಗಿಯು ಸಮರ್ಪಿಸಬೇಕು. ನೋಡುವುದರಿಂದ, ಮುಟ್ಟುವುದರಿಂದ, ಭುಂಜಿಸುವುದರಿಂದ ಶ್ರವಣ ಮಾಡುವುದರಿಂದ ಮತ್ತು ಆಘ್ರಾಣಿಸುವುದರಿಂದ ಯಾವ ವೈಷಯಿಕ ಸುಖವು ಉತ್ಪನ್ನವಾಗುವುದೋ ಅದೆಲ್ಲವನ್ನೂ ಶಿವನಿಗೆ ಸಮರ್ಪಿಸಬೇಕು. ತನ್ನ ದೇಹದ

ಮೂಲಕ ಉಂಟಾಗುವ ಸರ್ವ ಸುಖಗಳನ್ನು ಶಿವನಿಗೆ ಸಮರ್ಪಿಸಿದ ಶಿವಯೋಗಿಯು ಸದಾ ನಿರ್ಮಲನಾಗಿರುತ್ತಾನೆ. (ಸಿ.ಶಿ., ೧೭. ೩೪-೩೮)

೬೭) ಕರಣಾರ್ಪಿತಸ್ಥಲ :

ತನ್ನ ಸಕಲೇಂದ್ರಿಯಗಳನ್ನು ಪರಾತ್ಪರನಾದ ಶಿವನಿಗೆ ಸಮರ್ಪಿಸುವುದೇ ಕರಣಾರ್ಪಿತವು. ಯಾವ ಯಾವ ಇಂದ್ರಿಯದಿಂದ ವಿಷಯ ಸುಖವನ್ನು ಅನುಭವಿಸುತ್ತಾನೆಯೋ ಅದೆಲ್ಲವನ್ನು ಶಿವನಿಗೆ ಸಮರ್ಪಿಸಲಾಗಿ ಇವನು ಕರಣಾರ್ಪಕನೆಂದು ಕರೆಯಲ್ಪಡುತ್ತಾನೆ. ಯಾವನು ಅಹಂಕಾರವೆಂಬ ಮದದಿಂದ ಕೂಡಿದ ಅಂತಃಕರಣವೆಂಬ ಆನೆಯನ್ನು ಶಿವನೆಂಬ ಗಜಾಲಂಬನಸ್ಥಂಭಕ್ಕೆ ಕಟ್ಟಿ ಹಾಕುವನೋ ಅವನೇ ಧೀರನೆನಿಸಿಕೊಳ್ಳುವನು. ಇಂದ್ರಿಯುಗಳಿಗೆಲ್ಲ ಮನಸ್ಸೇ ಅಧ್ಯಕ್ಷವಾಗಿರುವುದರಿಂದ ಅದೊಂದನ್ನು ಶಿವನು ವಶದಲ್ಲಿಟ್ಟರೆ ಸರ್ವವೆಲ್ಲವೂ ವಶೀಭೂತಗಳಾಗುವವು. ಇಂದ್ರಿಯಗಳನ್ನೆಲ್ಲ ವಶೀಭೂತಮಾಡಿಕೊಳ್ಳುವುದು ನಿವೃತ್ತಿಯೆಂದು ಕರೆಯಲ್ಪಡುತ್ತದೆ. ಹೀಗೆ ನಿವೃತ್ತಿಯುಂಟಾಗಲು ಪುನಃ ಸಂಸಾರ ಪ್ರಾಪ್ತಿಯಾಗುವುದಿಲ್ಲ. ಪುಣ್ಯ-ಪಾಪಗಳ ಉತ್ಪತ್ತಿಗೆ ಇಂದ್ರಿಯುಗಳೇ ಕಾರಣಗಳಾಗಿರುತ್ತವೆ. ಅವುಗಳನ್ನು ಪರಮಾತ್ಮನಿಗೆ ಸಮರ್ಪಿಸಲು ಅದಾವ ಕರ್ಮ ಬಂಧನವೂ ಉಂಟಾಗುವುದಿಲ್ಲ. ಒಳಹೊರಗೂ ಪ್ರಕಾಶಿಸುತ್ತಿರುವ ಚಿದ್ರೂಪವಾದ ಅಗ್ನಿಯಲ್ಲಿ ವಿಷಯಗಳನ್ನು ಸಮರ್ಪಿಸಿದ ವ್ಯಕ್ತಿಯು ಮುಕ್ತನೇ ಆಗುತ್ತಾನೆ. ಚಿದ್ರೂಪವಾದ ಅಗ್ನಿಯಲ್ಲಿ ಚಿತ್ತವೆಂಬ ದ್ರವ್ಯವನ್ನು ಮತ್ತು ಜಗಜ್ಜಾಲವೆಂಬ ಹವಿಸ್ಸನ್ನು ಹೋಮಮಾಡುವ ಶಿವಯೋಗಿಗೆ ಸಂಸಾರದ ಜಂಜಡವು ಇರುವುದಿಲ್ಲ. ಪ್ರಾಣವಾಯುವಿನಿಂದ ಪ್ರಕಾಶಿಸಲ್ಪಟ್ಟ ಚಿದ್ರೂಪವಾದ ಆತ್ಮಜ್ಯೋತಿಯಲ್ಲಿ ಸಮಸ್ತ ವಿಷಯಗಳನ್ನು ಹೋಮಮಾಡುವ ಶಿವಯೋಗಿಯು ಚಿತ್ ಸ್ವರೂಪನೇ ಆಗುತ್ತಾನೆ. ಸಮಸ್ತ ಇಂದ್ರಿಯಗಳನ್ನು ಮತ್ತು ಭೋಗಸಾಧನವಾದ ಶರೀರವನ್ನು ಶಿವಪೂಜೆಯ ಸಾಧನವನ್ನಾಗಿ ಭಾವಿಸಿದ ಯೋಗಿಯು ಮುಕ್ತನೇ ಆಗುವನು (ಸಿ.ಶಿ., ೧೭. ೩೯-೪೯)

೬೮) ಭಾವಾರ್ಪಿತಸ್ಥಲ :

ನಿಶ್ಚಲವಾದ ರೀತಿಯಲ್ಲಿ ತನ್ನೆಲ್ಲ ಭಾವನೆಗಳನ್ನು ಶಿವಾರ್ಪಿತವನ್ನಾಗಿ ಮಾಡುವುದೇ ಭಾವಾರ್ಪಿತವೆಂದು ಕರೆಯಲ್ಪಡುವುದು. ಇದನ್ನು ತಿಳಿಸುವ ಸ್ಥಲವೇ ಭಾವಾರ್ಪಿತಸ್ಥಲವು. ತನ್ನ ಚಿತ್ತದೊಳಗಿನ ಎಲ್ಲ ಪದಾರ್ಥಗಳ ಬಗ್ಗೆ ಇರುವ ಮನನವನ್ನು ಶಿವನಿಗೆ ಸಮರ್ಪಿಸುವುದೇ ಭಾವಾರ್ಪಿತವು. ಜೀವಿಗಳ ಬಂಧ-ಮೋಕ್ಷಗಳಿಗೆ ಭಾವವೇ ಕಾರಣವಾಗಿರುತ್ತದೆ. ಆ ಭಾವವು ಪರಿಶುದ್ಧವಾಗಿದ್ದರೆ

ಮುಕ್ತಿ ದೊರೆಯುವುದು. ಅದಿಲ್ಲದಿರೆ ಸಂಸಾರ ಪ್ರಾಪ್ತಿಯು. ಭಾವನೆಯು 'ಶಿವೋಽಹಂ' ರೂಪವನ್ನು ತಾಳಿದಾಗ ಪರಿಶುದ್ಧವೆನಿಸಿಕೊಳ್ಳುವುದು. ಇಂತಹ ಭಾವನೆಯು ಉಂಟಾಗದಿದ್ದರೆ ಅದೆಂತು ದುಃಖವು ದೂರವಾದೀತು? ಭೋಕ್ತಾ, ಭೋಗ್ಯ ಮತ್ತು ಭೋಜಯಿತಾ ಇದೆಲ್ಲವನ್ನು ಶಿವರೂಪವಾಗಿ ಭಾವಿಸುವವನು ಶಿವಸ್ವರೂಪನೇ ಆಗಿರುತ್ತಾನೆ. ವಿಶ್ವವೆಲ್ಲವನ್ನು ಮಿಥ್ಯ ಎಂದು ಭಾವಿಸಿ ವಿಶ್ವಾತೀತನಾದ ಮತ್ತು ಸಚ್ಚಿದಾನಂದ ಸ್ವರೂಪನಾದ ಶಿವನನ್ನು ಸ್ಮರಿಸುವವನಿಗೆ ಸಂಸಾರದ ಬಂಧನವು ಉಂಟಾಗುವುದಿಲ್ಲ. ತನ್ನ ಕರ್ಮಗಳೆಲ್ಲ ಶಿವನ ಪೂಜೆಯೆಂದು, ತನ್ನ ಮಾತುಗಳೆಲ್ಲ ಅವನ ಕೀರ್ತನೆಯೆಂದು ಭಾವಿಸುವ ಯೋಗಿಗೆ ಕರ್ಮಬಂಧನವು ಉಂಟಾಗುವುದಿಲ್ಲ. ತನ್ನ ಸರ್ವ ಇಂದ್ರಿಯಗಳಿಂದುಂಟಾಗುವ ಸೌಖ್ಯವನ್ನು ಮತ್ತು ಕರ್ಮದಿಂದುಂಟಾಗುವ ದುಃಖವನ್ನು ಶಿವಾರ್ಪಿತವೆಂದು ಭಾವಿಸುವ ಯೋಗಿಯು ಜೀವನ್ಮುಕ್ತನೇ ಆಗುತ್ತಾನೆ. (ಸಿ.ಶಿ., ೧೭. ೫೦–೫೭)

೬೯) ಶಿಷ್ಯಸ್ಥಲ :

ಈ ಪೂರ್ವದಲ್ಲಿ ಹೇಳಿದ ಭಾವಾರ್ಪಿತ ಶಿವಯೋಗಿಯಿಂದ ಶಾಸಿಸಲ್ಪಡುವವನು ಮತ್ತು ಅವನ ಪ್ರಸಾದದಿಂದ ಮೋಕ್ಷವನ್ನಪೇಕ್ಷಿಸುವವನು ಶಿಷ್ಯನೆಂದು ಕರೆಯಲ್ಪಡುತ್ತಾನೆ. ಗುಣಗಳಿಂದ ಉದಾರನಾಗಿರುವ ಅರ್ಥಾತ್ ಉದಾರಗುಣಗಳುಳ್ಳ ಗುರುವಿನಲ್ಲಿ ಯಾರ ಭಾವವು ಸ್ಥಿರವಾಗಿರುತ್ತದೆಯೋ, ಯಾವನು ಮನೋವಾಕ್ಕಾಯಗಳಿಂದ ಸೇವೆಗೈಯ್ಯುತ್ತಾನೆಯೋ ಅವನೇ ಶಿಷ್ಯನು. ಶಾಂತನೂ, ದಾಂತನೂ, ತಪಃಶೀಲನೂ, ಸತ್ಯವಾದಿಯೂ, ಗುರು ಮತ್ತು ಶಿವರನ್ನು ಸಮಾನವಾಗಿ ನೋಡುವವನೇ ಉತ್ತಮಶಿಷ್ಯನು. ಶಿವಾಚಾರ, ಶಿವಧ್ಯಾನ ಮತ್ತು ನಿರ್ಮಲವಾದ ಶಿವಜ್ಞಾನಗಳಲ್ಲಿ ಗುರುವಿನ ಆದೇಶದಂತೆ ನಡೆದುಕೊಳ್ಳುವವನೇ ಶಿಷ್ಯನು. ಅನೇಕ ಬ್ರಹ್ಮಾಂಡಗಳೆಂಬ ನೊರೆ–ತೆರೆಗಳಿಂದ ಕೂಡಿದ ಈ ಸಂಸಾರವೆಂಬ ಮಾಯಾ ಸಮುದ್ರವನ್ನು ಗುರುವಿನ ಕೃಪಾಕಟಾಕ್ಷವೆಂಬ ವಡವಾನಲವು ಒಣಗಿಸಿ ಬಿಡುತ್ತದೆ. ರಸಸಂಪರ್ಕದಿಂದ ಲೋಹವು ಹೇಮವಾಗುವಂತೆ ಗುರುವಿನ ಕೃಪಾಕಟಾಕ್ಷದಿಂದ ಮಾನವನು ಶಿವನಾಗುತ್ತಾನೆ. ಹೀಗೆ ತನಗೆ ಜ್ಞಾನವನ್ನು ದಯಪಾಲಿಸುವ ಗುರುವಿನ ಆಜ್ಞೆಯನ್ನು ಶಿಷ್ಯನಾದವನು ಎಂದೂ ಉಲ್ಲಂಘಿಸಬಾರದು. ಶಿವನಿಗಿಂತಲೂ ಜಗತ್ತು ಭಿನ್ನವಾಗಿರುವುದಿಲ್ಲ. ಶಿವನು ಸಾಕ್ಷಾತ್ ಚಿದ್ರೂಪನಾಗಿದ್ದಾನೆ. ಅಂತಹ ಶಿವನು ನೀನಾಗಿರುವಿ ಎಂದು ಗುರುವಿನಿಂದ ಉಪದೇಶಿಸಲ್ಪಟ್ಟ ಶಿಷ್ಯನು ಮುಕ್ತನೇ ಆಗಿರುತ್ತಾನೆ. ಸಂಸಾರವೆಂಬ ರೋಗವನ್ನು ದೂರಮಾಡುವ ಮಹಾಜ್ಞಾನವೆಂಬ ಔಷಧವನ್ನು ಪಡೆದ ಶಿಷ್ಯನು ಸುಖಿಯೂ

ಶಾಂತನೂ ಆಗಿರುವನಲ್ಲದೆ ಜೀವನ್ಮುಕ್ತನೂ ಸಹ ಆಗುತ್ತಾನೆ. (ಸಿ.ಶಿ., ೧೭. ೫೮–೬೭)

೭೦) ಶುಶ್ರೂಷುಸ್ಥಲ :

ಗುರುವಿನ ಉಪದೇಶಾಮೃತವನ್ನು ಕೇಳುವ ಅತ್ಯುತ್ಕಟವಾದ ಬಯಕೆಯುಳ್ಳ ಶಿಷ್ಯನೇ ಶುಶ್ರೂಷು ಎಂದು ಕರೆಯಲ್ಪಡುತ್ತಾನೆ. ಸತ್ಯವಾವುದು? ಅಸತ್ಯವಾವುದು? ಆತ್ಮವಾವುದು–ಪರಮಾತ್ಮವಾವುದು? ಎಂಬ ವಿಷಯಗಳ ಬಗ್ಗೆ ಕೇಳಲುತ್ಕಂಠತೆಯುಳ್ಳ ಶಿಷ್ಯನೇ ವಿಶಿಷ್ಟ ಶಿಷ್ಯನೆನಿಸಿಕೊಳ್ಳುವನು. ಶಿವಸಾಕ್ಷಾತ್ಕಾರವನ್ನುಂಟುಮಾಡುವ ಗುರುವಿನ ಉಪದೇಶ ವಾಕ್ಯವನ್ನು ಮೇಲಿಂದ ಮೇಲೆ ಕೇಳಿ ಯಾವ ಶಿಷ್ಯನು ತನ್ನೊಳಗೆ ತಾನು ಉಪಶಮೆಯನ್ನು ಹೊಂದುವನೋ ಅವನು ಮುಕ್ತಿಯನ್ನು ಪಡೆಯುವನು. ಸೂರ್ಯೋದಯವಾಗದೆ ಕಮಲವು ವಿಕಸಿತವಾಗದಂತೆ ಗುರುವಿನ ಉಪದೇಶ ವಾಕ್ಯವನ್ನು ಕೇಳದೆ ಶಿಷ್ಯನ ಮನಸ್ಸಿನಲ್ಲಿ ಜ್ಞಾನೋದಯವಾಗಲಾರದು. ಸೂರ್ಯೋದಯವಾದೊಡನೆ ಸೂರ್ಯಕಾಂತಮಣಿಯು ಪ್ರಕಾಶಿಸುವಂತೆ ಗುರುವಿನ ಆಲೋಕ ಅರ್ಥಾತ್ ನೋಟಮಾತ್ರದಿಂದ ಶಿಷ್ಯನು ಜ್ಞಾನದಿಂದ ಪ್ರಕಾಶಿಸುವವನಾಗುತ್ತಾನೆ. ತಿಳಿದುಕೊಳ್ಳಬೇಕಾದ ಪರಮತತ್ತ್ವವಾವುದು? ಯಾರಲ್ಲಿ ಈ ಸಂಪೂರ್ಣವಾದ ಜಗತ್ತು ಪ್ರತಿಷ್ಠಿತವಾಗಿದೆ? ಯಾರನ್ನು ಸಾಕ್ಷಾತ್ಕರಿಸಿಕೊಳ್ಳುವುದರಿಂದ ಮುಕ್ತಿಯು ಲಭಿಸುವುದು? ಈ ಪ್ರಕಾರವಾಗಿ ಶಿಷ್ಯನು ಪ್ರಶ್ನೆಯನ್ನು ಮಾಡಲು ಗುರುವಾದವನು ಅವನಿಗೆ ಈ ಪ್ರಕಾರವಾಗಿ ಉಪದೇಶ ಮಾಡಬೇಕು. ಅದೇನೆಂದರೆ– ಶಿವನೇ ಪರಮ ತತ್ತ್ವವು. ಅವನು ಸಚ್ಚಿದಾನಂದ ಸ್ವರೂಪನಾಗಿದ್ದಾನೆ. ಅವನ ಹೊರತು ಬೇರಾವುದಕ್ಕೂ ನಿತ್ಯತ್ವವಿರುವುದಿಲ್ಲ. ಈ ಸಂಪೂರ್ಣವಾದ ಪ್ರಪಂಚವು ಪರಮಾತ್ಮನಲ್ಲಿ ಪ್ರತಿಷ್ಠಿತವಾಗಿದೆ. 'ಶಿವೋಽಹಂ' ಎಂಬ ಭಾವನೆಯಿಂದ ಶಿವನನ್ನು ಸಾಕ್ಷಾತ್ಕರಿಸಿಕೊಂಡಾಗ ಮೋಹಗ್ರಂಥಿಯ ಭೇದನವಾಗಿ ಮುಕ್ತಿಯು ಲಭಿಸುವುದು. ಹೇ ಶಿಷ್ಯನೇ! ನೀನು ನಿನ್ನನ್ನು ಶಿವನನ್ನಾಗಿಯೇ ಭಾವಿಸು. ಶಿವನಿಗಿಂತ ಭಿನ್ನನನ್ನಾಗಿ ಭಾವಿಸಬೇಡ. ಇಂತಹ ಶಿವಾದ್ವೈತ ಭಾವವು ನಿನ್ನಲ್ಲಿ ಸ್ಥಿರವಾಗಲು ನೀನು ಜೀವನ್ಮುಕ್ತನೇ ಆಗುವಿ. ಈ ರೀತಿಯಾಗಿ ಗುಣಶಾಲಿಯಾದ ಗುರುವಿನಿಂದ ಉಪದೇಶಿಸಲ್ಪಟ್ಟ ಶಿಷ್ಯನು ಸಂಪೂರ್ಣವಾದ ಜಗತ್ತನ್ನು ಶಿವಮಯವಾಗಿ ಕಾಣುತ್ತಾನೆ. ಜೀವನ್ಮುಕ್ತನೇ ಆಗುತ್ತಾನೆ. (ಸಿ.ಶಿ., ೧೭. ೬೮–೮೦)

೭೧) ಸೇವ್ಯಸ್ಥಲ :

ಗುರುವಿನ ವ್ಯಾಖ್ಯಾಮೃತವನ್ನು ಶ್ರವಣಮಾಡಿ ಬೋಧರೂಪವಾದ ಮಹಾಫಲವನ್ನು ಪಡೆದುಕೊಂಡ ಈ ಶುಶ್ರೂಷುವೇ ಸರ್ವರಿಂದಲೂ ಸೇವ್ಯನಾಗಿರೋಣದರಿಂದ ಅವನಿಗೆ ಸೇವ್ಯನೆಂದು ಕರೆಯುತ್ತಾರೆ. ಅಂದರೆ ಜಗತ್ತಿನಲ್ಲಿ

ಪೂಜ್ಯನೆನಿಸುತ್ತಾನೆ ಎಂಬ ಭಾವವು ಗುರುವಿನ ಉಪದೇಶವನ್ನು ಕೇಳಿ ಮನಸ್ಸು ಸ್ಥಿರಗೊಂಡು ಶಿವನ ಸಾಕ್ಷಾತ್ಕಾರವನ್ನು ಪಡೆದ ಶಿಷ್ಯನೂ ಸಹ ಗುರುವಿನಂತೆಯೇ ಲೋಕಪೂಜ್ಯನಾಗುತ್ತಾನೆ. ಯಾವ ಜ್ಞಾನದಿಂದ ಗುರುವಿಗೆ ಆದಿಕ್ಯವು ಅರ್ಥಾತ್ ಶ್ರೇಷ್ಠತೆಯು ಪ್ರಾಪ್ತವಾಗಿದೆಯೋ ಆ ಜ್ಞಾನವೇ ಶಿಷ್ಯನಿಗೂ ದೊರೆತಾಗ ಅವನು ಗುರುವಿನಂತೆ ಪೂಜ್ಯನಾಗುತ್ತಾನೆ. 'ನಾನು ಶಿವನಿದ್ದೇನೆ' ಎಂಬ ಭಾವನೆಯನ್ನು ನಿರಂತರವಾಗಿ ಮಾಡೋಣದರಿಂದ ಶಿವಭಾವವು ಸ್ಥಿರವಾಗಲು ಅವನು ಶಿವನಂತೆ ಪೂಜ್ಯನೇ ಆಗುತ್ತಾನೆ.

ಶಿವಭಾವನೆಯಿಂದ ಕೂಡಿದ ಶುಶ್ರೂಷು ಶಿವಯೋಗಿಯು ವಿಷಯಸಂಗಿ ಯಾಗಿದ್ದರೂ ಅವನು ವಿಷಯಾಸಕ್ತನಿರುವುದಿಲ್ಲ. ಅಂದರೆ ಇಂದ್ರಿಯಗಳಿಗೆ ವಿಷಯ ಸಂಬಂಧವಾಗಿದ್ದರೂ ಅವನ ಚಿತ್ತವು ಮಾತ್ರ ಶಿವಾಸಕ್ತವಾಗಿರುತ್ತದೆ. ಇಂತಹ ಶಿವಭಾವಯುತನಾದ ಈ ಸೇವ್ಯ ಶಿವಯೋಗಿಯೂ ದ್ವಿತೀಯ ಶಿವನೇ ಆಗಿರುತ್ತಾನೆ. ನಾನು ಶಿವನು ಅಹುದೋ ಅಲ್ಲವೋ ಎಂಬ ಸಂಶಯರಹಿತನಾದ, ಪರಾತ್ಪರ ಮುಕ್ತಿದಾಯಕವಾದ ಶಿವಾದ್ವೈತ ಜ್ಞಾನದಲ್ಲಿ ಸ್ಥಿರಮನಸ್ಕನಾದ ಜೀವಿಗಳ ಅಜ್ಞಾನವನ್ನು ತನ್ನ ಕೃಪಾದೃಷ್ಟಿ ಮಾತ್ರದಿಂದ ಇಲ್ಲವಾಗಿಸಬಲ್ಲ ಸಚ್ಚಿದಾನಂದ ಸ್ವರೂಪವಾದ ಪರಮಾತ್ಮನಲ್ಲಿ ಲೀನಚಿತ್ತನಾದ ಈ ಶಿವಯೋಗಿಯು ಜಗತ್ತಿನ ಸರ್ವಜನರಿಂದ ಪೂಜೆಗೊಳ್ಳಲು ಯೋಗ್ಯನಾಗಿರುವುದರಿಂದ ಸೇವ್ಯನೆಂಬುದಾಗಿ ಕರೆಯಲ್ಪಡುತ್ತಾನೆ. ಇದುವೇ ಸೇವ್ಯಸ್ಥಲವು (ಸಿ.ಶಿ., ೧೭. ೮೧–೮೬)

ಈ ತೆರನಾಗಿ ಒಂಭತ್ತು ಅವಾಂತರಗಳಸ್ಥಲವುಳ್ಳ ಈ ಪ್ರಸಾದಿಸ್ಥಲದ ವಿಷಯವನ್ನರಿತು ಆಚರಿಸಿ ಅನುಭವಿಸಿದ ಶಿವಜ್ಞಾನಿಯಾದ ಶಿವಯೋಗಿಯು ಪ್ರಸಾದಿಯೆಂಬುದಾಗಿ ಕರೆಯಲ್ಪಡುತ್ತಾನೆ.

ಪ್ರಾಣಲಿಂಗಿಸ್ಥಲ

ಮಹರ್ಷಿಯಾದ ಅಗಸ್ತ್ಯನು ಇಲ್ಲಿಯ ವರೆಗೆ ಹೇಳಲ್ಪಟ್ಟ ಪ್ರಸಾದಿಸ್ಥಲದ ವಿಷಯಗಳನ್ನರಿತವನಾಗಿ ಮುಂದಿನದಾದ ಪ್ರಾಣಲಿಂಗಿಸ್ಥಲವನ್ನು ಅರಿಯಲೋಸುಗ–

ಪ್ರಸಾದಿಸ್ಥಲಸಂಬದ್ಧಾಃ ಫಲಭೇದಾಃ ಪ್ರಕೀರ್ತಿತಾಃ ।
ಪ್ರಾಣಲಿಂಗಿಸ್ಥಲಾರೂಢಾನ್ ಸ್ಥಲಭೇದಾನ್ ವದಸ್ವ ಮೇ ॥

(ಸಿ.ಶಿ., ೧೮–೧)

ಎಂದು ಪ್ರಾರ್ಥಿಸಿಕೊಂಡಿದ್ದಾನೆ. ಅಂದರೆ ಹೇ, ಮಹೇಶ್ವರನೇ! ಪ್ರಸಾದಿಸ್ಥಲದ ಸ್ಥಲಭೇದಗಳನ್ನು ಹೇಳಿದಂತೆ ಪ್ರಾಣಲಿಂಗಿಸ್ಥಲದ ಅವಾಂತರಸ್ಥಲಗಳನ್ನು ತಿಳಿಸಬೇಕು. ಮಹರ್ಷಿಯ ಈ ಪ್ರಾರ್ಥನೆಯನ್ನು ಮನ್ನಿಸಿ ಪೂಜ್ಯಪಾದರು ಪ್ರಾಣಲಿಂಗಿಸ್ಥಲದ

ಒಂಭತ್ತು ಅವಾಂತರಸ್ಥಲಗಳನ್ನು ಉಪದೇಶಿಸಿದ್ದಾರೆ. ಅವುಗಳನ್ನೇ ಇಲ್ಲಿ ಕ್ರಮವಾಗಿ ವಿವರಿಸಲಾಗುವುದು.

೭೨) ಆತ್ಮಸ್ಥಲ :

ಗುರುವಿನ ಉಪದೇಶವನ್ನು ಶ್ರವಣಮಾಡಿ ಯಾವಾಗ ಜೀವನು ಜೀವಭಾವವನ್ನು ತ್ಯಜಿಸಿ ತತ್ತ್ವವನ್ನು ಅಂದರೆ ಆತ್ಮತತ್ತ್ವವನ್ನು ತಿಳಿದುಕೊಳ್ಳುವನೋ ಆಗ ಇವನು ಆತ್ಮನೆಂದು ಕರೆಯಲ್ಪಡುತ್ತಾನೆ. ಈ ಆತ್ಮನು ಕೂದಲಿನ ಅಗ್ರಭಾಗದ ಶತಾಂಶದಷ್ಟು ಅನುರೂಪವಾಗಿದ್ದು ಜೀವಿಗಳ ಹೃದಯವಾಸಿಯಾಗಿ ಕರ್ಮ ಫಲಗಳನ್ನನುಭವಿಸುತ್ತಾನೆ. ಒಂದು ಸಣ್ಣ ದೀಪದಂತೆ ಮಿನುಗುತ್ತಿರುತ್ತಾನೆ. ಈತನು ಅಶರೀರಿಯೂ, ವ್ಯಾಪಕನೂ ಮತ್ತು ನಿರಂಜನನೂ ಆಗಿದ್ದರೂ ಮಾಯೆಯ ಶರೀರದಲ್ಲಿರುವಂಥವನಾಗಿ ಸಂಸಾರದಲ್ಲಿ ರಮಿಸುತ್ತಿರುತ್ತಾನೆ. ಯಾವಾಗ ಇವನು ಅನಾತ್ಮಗಳಾದ ದೇಹೇಂದ್ರಿಯಾದಿಗಳಿಗಿಂತಲೂ ಆತ್ಮವು ಭಿನ್ನವೂ, ಅಖಂಡವೂ ಆಗಿದೆಯೆಂದು ತಿಳಿದುಕೊಳ್ಳುವನೋ ಆಗ ಇವನಿಗೆ ಆತ್ಮ ಪ್ರಾಪ್ತಿಯಾಗುವುದು. ಇವನಿಗೆ ವಾಸ್ತವಿಕವಾಗಿ ಶರೀರ ಸಂಬಂಧವಿರದಿದ್ದರೂ ಅಜ್ಞಾನ ಹಾಗೂ ಕರ್ಮಗಳಿಂದಾಗಿ ಶರೀರಿ ಎನಿಸಿಕೊಳ್ಳುತ್ತಾನೆ. ವಸ್ತುತಃ ಇವನು ದೇವ, ಗಂಧರ್ವ, ಯಕ್ಷ–ರಾಕ್ಷಸ, ಮನುಷ್ಯ, ತಿರ್ಯಕ್ ಮತ್ತು ಸ್ಥಾವರ ಇದಾವುಗಳೂ ಇವನಲ್ಲ. ಇವೆಲ್ಲ ಇವನಿಗೆ ಪ್ರಾಪ್ತವಾದ ಭೋಗಾಯತನ ಶರೀರಗಳು. ತಾನು ಮಾಡಿದ ಕರ್ಮಾನುಸಾರವಾಗಿ ನಾನಾ ಯೋನಿಗಳಲ್ಲಿ ತಿರುಗುತ್ತಿರುವ ಈ ಜೀವನು ಅಸ್ವತಂತ್ರನೂ, ಅಲ್ಪಜ್ಞತ್ವಾದಿ ಗುಣವುಳ್ಳವನಾಗಿ ಶಿವನ ಲೀಲೆಗೆ ಪಾತ್ರನಾಗಿರುತ್ತಾನೆ. ಗುರುವಿನಿಂದ ಬೋಧಪ್ರಾಪ್ತವಾಗಲು ದುಃಖರೂಪವಾದ ಈ ಜೀವಭಾವವು ತೊಲಗಿಹೋಗುವುದು (ಸಿ. ಶಿ., ೧೮. ೫–೧೭)

೭೩) ಅಂತರಾತ್ಮಸ್ಥಲ :

ಗುರುವಿನ ಬೋಧದಿಂದ ಜೀವಭಾವವು ಅಳಿದುಹೋಗಲು ಇವನಿಗೆ ಅಂತರಾತ್ಮಭಾವವು ಪ್ರಾಪ್ತವಾಗುವುದು. ದೇಹದಲ್ಲಿದ್ದು ದೇಹಸಂಗವರ್ಜಿತನಾದ್ದರಿಂದ ಇವನಿಗೆ ಅಂತರಾತ್ಮನೆಂದು ಕರೆಯಲಾಗಿದೆ. ಜೀವಾತ್ಮ ಮತ್ತು ಪರಮಾತ್ಮರ ಮಧ್ಯದಲ್ಲಿ ಇವನ ಸ್ಥಿತಿಯು ಇರೋಣದರಿಂದ ಇವನಿಗೆ ಅಂತರಾತ್ಮನೆಂದು ಕರೆಯಲಾಗಿದೆ. ಗೂಡಿನಲ್ಲಿರುವ ಪಕ್ಷಿಯು ಗೂಡಿನಿಂದ ಭಿನ್ನವಾಗಿರುವಂತೆ, ಜಲದಲ್ಲಿರುವ ಕಮಲವು ಜಲದ ಸಂಗವಿರದಂತೆ. ಮೇಘಗಳಿಂದ ಆಚ್ಛನ್ನವಾದ ಚಂದ್ರನು ಮೇಘಸಂಬಂಧವಿಲ್ಲದಿರುವಂತೆ ಈ ಅಂತರಾತ್ಮನು ದೇಹದಲ್ಲಿದ್ದೂ ದೇಹಸಂಬಂಧವರ್ಜಿತನಾಗಿ ಅಹಂಕಾರ – ಮಮಕಾರಶೂನ್ಯನಾಗಿ ಶಿವಧ್ಯಾನಸ್ತ

ನಾಗಿರುವುದರಿಂದ ಇವನಿಗೆ ಅಂತರಾತ್ಮನೆಂದು ಕರೆಯಲಾಗಿದೆ (ಸಿ.ಶಿ., ೧೮. ೧೮–೨೭)

೭೪) ಪರಮಾತ್ಮಸ್ಥಲ :

ಗುರುವಿನ ಉಪದೇಶದಿಂದ ಮಲಗಳೆಲ್ಲ ಅಳಿದು ಶಿವಾದ್ವೈತ ಜ್ಞಾನವು ಉಂಟಾಗಿ ಶಿವನೊಂದಿಗೆ ಸಾಮರಸ್ಯ ಸ್ಥಿತಿಯನ್ನು ಪಡೆದುಕೊಂಡ ಆ ಅಂತರಾತ್ಮನೇ ಮುಂದೆ ಪರಮಾತ್ಮನೆಂದು ಕರೆಯಲ್ಪಡುತ್ತಾನೆ. ಸಂಸಾರದ ಉಳಿದೆಲ್ಲ ಆತ್ಮಗಳಿಗಿಂತ ಈತನು ತನ್ನ ತೇಜಸ್ಸಿನಿಂದ ಉತ್ಕೃಷ್ಟನಾಗಿರುವುದರಿಂದ ಇವನಿಗೆ ಪರಮಾತ್ಮನೆಂದು ಕರೆಯಲಾಗಿದೆ. ಸಕಲ ಭುವನ–ಬ್ರಹ್ಮಾಂಡಗಳೆಂಬ ಬುದ್‌ಬುದಗಳು ಯಾರ ಮಾಯಾಸಮುದ್ರದಲ್ಲಿ ಉದ್ಭವಿಸುತ್ತವೆಯೋ ಅವನೇ ಪರಮಾತ್ಮನು. ಜಗತ್ತಿನ ಎಲ್ಲಾ ಜ್ಯೋತಿಗಳ ಉತ್ಪತ್ತಿ–ವಿಲಯಗಳಿಗೆ ಕಾರಣನಾದವನೇ ಪರಮಾತ್ಮನು. ಸೂರ್ಯನು ತನ್ನ ಪ್ರಕಾಶದಿಂದ ಜಗತ್ತೆಲ್ಲವನ್ನೂ ವ್ಯಾಪಿಸಿರುವಂತೆ ತನ್ನ ಅನೇಕ ಶಕ್ತಿಗಳಿಂದ ಜಗತ್ತೆಲ್ಲವನ್ನು ವ್ಯಾಪಿಸಿ ಪ್ರಕಾಶಿಸುವವನೇ ಪರಮಾತ್ಮನು. ಇವನು ವಿಶ್ವದ ತುಂಬೆಲ್ಲ ಬೆಳಗುತ್ತಿದ್ದರೂ ವಿಶ್ವಮಾಯಾ ವಿಲಕ್ಷಣನಾಗಿರುತ್ತಾನೆ. (ಸಿ.ಶಿ., ೧೮. ೨೮–೩೫)

೭೫) ನಿರ್ದೇಹಾಗಮಸ್ಥಲ :

ಈ ಹಿಂದೆ ಹೇಳಿದಂತೆ ಪರಮಾತ್ಮ ಭಾವನೆಯಿಂದೊಡಗೂಡಿದ ಶಿವಯೋಗಿಯು ದೇಹದೊಳಗಿದ್ದರೂ ನಿರಹಂಕಾರಿಯಾದ ಇವನು ದೇಹ ಧರ್ಮಗಳಿಂದ ಮುಕ್ತನಾಗಿರುವುದಿಲ್ಲ. ಅಂತೆಯೇ ಇವನಿಗೆ ನಿರ್ದೇಹಾಗಮನೆಂದು ಕರೆಯಲಾಗಿದೆ. ಅಹಂಕಾರ–ಮಮಕಾರಗಳು ಗಲಿತವಾಗಿ ಅಂದರೆ ಕಳಚಿಹೋಗಿ 'ಪರಾಅಹಂತೆ'ಯನ್ನು ಪ್ರವೇಶಿಸಿದ ಇವನಿಗೆ ದೇಹವಾಗಲೀ, ದೇಹದ ರೀತಿಯಾಗಲೀ ಇರುವುದಿಲ್ಲ. ಆತ್ಮವು ಅಪರಿಚ್ಛಿನ್ನವೂ, ಚಿದಾಕಾಶರೂಪವೂ ಎಂಬುದಾಗಿ ಚಿಂತಿಸುವ ಶಿವಯೋಗಿಯು ಶರೀರದಲ್ಲಿದ್ದರೂ ಶರೀರದ ವಿಕಾರಗಳಿಗೆ ಅಂಟಿಕೊಳ್ಳುವುದಿಲ್ಲ. ಎಲ್ಲ ಪರಿಚ್ಛಿನ್ನಗಳಿಗೆ ಭೇದ ಬುದ್ಧಿಯೇ ಕಾರಣವಾಗಿರುತ್ತದೆ. ಆ ಭೇದಬುದ್ಧಿಯು ಅಳಿದುಹೋದಾಗ ಪರಿಚ್ಛಿನ್ನ ಭಾವನೆಯು ಉಳಿಯುವುದಿಲ್ಲ. 'ಶಿವೋಽಹಂ' ಎಂಬ ಭಾವನೆಯುಳ್ಳ ಈ ಶಿವಯೋಗಿಗೆ ಅದೆಂದೂ ದೇಹಸಂಬಂಧವು ಇರುವುದಿಲ್ಲ. ಇದುವೇ ನಿರ್ದೇಹಾಗಮ ಸ್ಥಲವು (ಸಿ.ಶಿ., ೧೮. ೩೬–೪೩)

೭೬) ನಿರ್ಭಾವಾಗಮಸ್ಥಲ :

ಆತ್ಮ ಚಿಂತನೆಯನ್ನು ಹೊರತುಪಡಿಸಿ ಬೇರಾವ ಭಾವನೆಗಳು ಉತ್ಪನ್ನವಾಗದಿರುವ ಸ್ಥಿತಿಯೇ ನಿರ್ಭಾವಾಗಮಸ್ಥಲವೆಂದು ಕರೆಯುತ್ತಾರೆ.

'ಶಿವೋऽಹಂ' ಎಂಬ ಒಂದೇ ಒಂದಾದ ಭಾವನೆಯು ಇರುತ್ತಿರುವಾಗ ಜಾತಿ ಮತ್ತು ದೇಹಾದಿಗಳ ಸಂಬಂಧವಾಗಲಿ ಅವುಗಳ ಬಗ್ಗೆ ಇರುವ ಭಾವನೆಗಳಾಗಲಿ ಉದಿಸಲಾರವು. ವಾಣಿ–ಮನಗಳಿಗೆ ಅಗೋಚರವಾದ, ಚಿದ್ರೂಪವಾದ ಆ ಶೂನ್ಯ ತತ್ತ್ವದಲ್ಲಿ ವಿಲೀನನಾದ ಶಿವಯೋಗಿಯ ಬೇರಾವ ಭಾವನೆಗಳ ಉದಯಕ್ಕೆ ಅವಕಾಶವೇ ಇರುವುದಿಲ್ಲ. ಸೂರ್ಯನ ಪ್ರಕಾಶವು ಶುದ್ಧಾಶುದ್ಧ ಭೇದವಿಲ್ಲದೆ ಸರ್ವತ್ರ ಸಮಾನವಾಗಿ ಪಸರಿಸುವಂತೆ ಇವನು ಸರ್ವತ್ರ ಸಮಬುದ್ಧಿಯುಳ್ಳವನಾಗಿರುತ್ತಾನೆ. ಇವನು ಜರಾ–ಮೃತ್ಯುಗಳಿಗೆ ಭಯಭೀತನಾಗುವುದಿಲ್ಲ, ಕ್ಷುಧಾ ಮತ್ತು ತೃಷೆಗಳಿಗೆ ವಶೀಭೂತನಾಗಿರುವುದಿಲ್ಲ. ಪರಿಪೂರ್ಣವಾದ ನಿಜಾನಂದವನ್ನು ಅನುಭವಿಸುತ್ತ ಅಚ್ಚ ಸುಖಿಯಾಗಿರುತ್ತಾನೆ. (ಸಿ.ಶಿ. ೧೮. ೪೪–೪೯)

೭೭) ನಷ್ಟಾಗಮಸ್ಥಲ:

ಜ್ಞಾತಾ–ಜ್ಞಾನ–ಜ್ಞೇಯಗಳೆಂಬ ಜ್ಞಾನದ ತ್ರಿಪುಟಿ ಭಾವನೆಗಳು ಇಲ್ಲದಾಗಿ ಅಖಂಡವಾದ ಬೋಧಸ್ಥಿತಿಯು ಒಂದೇ ಉಳಿಯಲು ಅದಕ್ಕೆ ನಷ್ಟಾಗಮಸ್ಥಲವೆಂದು ಕರೆಯುತ್ತಾರೆ. ಅದ್ವೈತ ಭಾವನೆಯಿಂದ ಅಂತರಾತ್ಮವನ್ನು ಅನುಸಂಧಾನಿಸುತ್ತಿರುವ ಯೋಗಿಗಳಿಗೆ ಜ್ಞಾತೃತ್ವಾದಿ ಭಾವನೆಗಳು ಉಂಟಾಗುವುದಿಲ್ಲ. ತನ್ನನ್ನು ಅಕರ್ತಾ, ಅವೇತ್ತಾ ಮುಂತಾಗಿ ತಿಳಿದುಕೊಂಡು ಚಿಂತಿಸುತ್ತಿರುವ ಈ ಶಿವಯೋಗಿಗೆ ಅಖಂಡವಾದ ಸಂವಿತ್ತು ಅರ್ಥಾತ್ ಜ್ಞಾನವೊಂದೇ ಪ್ರಕಾಶಿಸುತ್ತಿರುತ್ತದೆ. ಈ ಸ್ಥಿತಿಯಲ್ಲಿ ಯಾರು ಯಾವುದರಿಂದ ಏನನ್ನು ತಿಳಿದುಕೊಳ್ಳಬೇಕೆಂಬ ವಿಚಾರಗಳಿಗೆ ಆಸ್ಪದವಿರುವುದಿಲ್ಲ. ಇದುವೇ ನಷ್ಟಾಗಮಸ್ಥಲವು (ಸಿ.ಶಿ., ೧೮. ೫೦–೫೫)

೭೮) ಆದಿಪ್ರಸಾದಿಸ್ಥಲ :

ಸರ್ವಕ್ಕೂ ಅಧಿಷ್ಠಾನವಾಗಿರುವ ಶಿವನೇ ಆದಿರೂಪನು. ಅನೇಕ ಜನ್ಮಗಳಲ್ಲಿ ಪರಿಶುದ್ಧನಾದ ನಿರಹಂಕಾರ ಭಾವನೆಯಿಂದ, ಅಪ್ರಪಂಚಿಯಾದ ಶಿವಯೋಗಿಯ ಮೇಲೆ ಆದಿದೇವನಾದ ಶಿವನು ಪ್ರಸನ್ನನಾಗುತ್ತಾನೆ. ಶಿವನ ಈ ಪ್ರಸನ್ನತೆಯೇ ಮುಕ್ತಿಗೆ ಕಾರಣವಾಗಿರುತ್ತದೆ. ಶಿವನಿಗೆ ಈ ಪ್ರಸಾದವು ದೊರೆಯುವುದರಿಂದ ಶಿವನಿಗೆ ಅನ್ಯವಾದ ಜಗಜ್ಜಾಲವು ಇವನಿಗೆ ದೃಷ್ಟಿಗೋಚರವಾಗುವುದಿಲ್ಲ. ಶಿವನ ಪ್ರಸಾದದಿಂದಲೇ ವಿವೇಕಗಳು ತಮ್ಮ ಮೋಹಾದಿಗಳನ್ನು ಕಳೆದುಕೊಂಡು ಮುಕ್ತರಾಗುತ್ತಾರೆ. ಸೂರ್ಯೋದಯವಾಗದೆ ಕತ್ತಲೆಯು ಹೋಗದಂತೆ, ಶಿವನ ಅನುಗ್ರಹವನ್ನುಂಟು ಮಾಡುವ ಶಿವನು ಕೇವಲ ತನ್ನ ಕೃಪಾಪ್ರಸಾದ ಮಾತ್ರದಿಂದ ಜೀವಿಗಳನ್ನು ಮುಕ್ತರನ್ನಾಗಿ ಮಾಡುತ್ತಾನೆ. ಇಲ್ಲಿ ಬೇರೊಂದು ಕಾರಣದ ಅವಶ್ಯಕತೆಯಿರುವುದಿಲ್ಲ (ಸಿ.ಶಿ., ೧೮. ೫೬–೬೧)

೭೯) ಅಂತ್ಯಪ್ರಸಾದಿಸ್ಥಲ :

ಭೂಮ್ಯಾದಿ ಸರ್ವತತ್ತ್ವಗಳು ಕೊನೆಗೆ ಯಾವುದರಲ್ಲಿ ಅಂತ್ಯಗೊಳ್ಳುವವೋ ಆ ಪರಶಿವಕ್ಕೆ ಅಂತ್ಯವೆಂದು ಕರೆಯಲಾಗಿದೆ. ಆ ಅಂತ್ಯದ ಅನುಗ್ರಹವನ್ನು ಅರ್ಥಾತ್ ಪ್ರಸಾದವನ್ನು ಪಡೆಯುವುದನ್ನು ಪ್ರತಿಪಾದಿಸುವ ಸ್ಥಲವೇ ಅಂತ್ಯಪ್ರಸಾದಿಸ್ಥಲವು. ದೇವ, ತಿರ್ಯಕ್, ಮನುಷ್ಯಾದಿ ವ್ಯವಹಾರವು ಮಾಯಾಕಲ್ಪಿತವಾದುದು. ಆ ಮಾಯೆಯು ಲಯಗೊಳ್ಳಲು ಸರ್ವವೆಲ್ಲವೂ ಲಯಗೊಳ್ಳುವವು. ಗಾಢನಿದ್ರೆಯಲ್ಲಿರುವ ವ್ಯಕ್ತಿಗೆ ಯಾವುದೂ ಭಾಸವಾಗದಿರುವಂತೆ ಮುಕ್ತನಾದ ಶಿವಯೋಗಿಗೆ ಅದಾವುದೂ ತೋರುವುದಿಲ್ಲ. ಅವಿಚ್ಛಿನ್ನವಾದ ಆಕಾಶವು ನಿರ್ವಿಕಾರವಾಗಿರುವಂತೆ ಮುಕ್ತನೂ ಸಹ ನಿರ್ವಿಕಾರನೇ ಆಗಿರುತ್ತಾನೆ. ಶಿವಾದ್ವೈತಜ್ಞಾನದಿಂದ ಸರ್ವವೆಲ್ಲವೂ ಇಲ್ಲದಾದಾಗ ಕೇವಲ ಜ್ಞಾನವೊಂದೇ ಪ್ರಕಾಶಿಸುತ್ತಿರುತ್ತದೆ. ಆಗ ಬೇರೇ ಏನೊಂದರ ಪ್ರತೀತಿಯಾಗುವುದಿಲ್ಲ. (ಸಿ.ಶಿ., ೧೮. ೬೨–೬೮)

೮೦) ಸೇವ್ಯಪ್ರಸಾದಿಸ್ಥಲ :

ಈ ಜಗತ್ತಿನಲ್ಲಿ ಸರ್ವರಿಗೂ ಸೇವ್ಯನಾಗಿರುವವ ಗುರುವು ಶಿವಸ್ವರೂಪನೇ ಆಗಿರುತ್ತಾನೆ. ಇದರಲ್ಲಿ ಯಾವ ಸಂಶಯವಿರುವುದಿಲ್ಲ. ಅಂಥ ಸೇವ್ಯನಾದ ಸದ್ಗುರುವಿನ ಉಪದೇಶಾನುಭವದ ಪ್ರಸಾದವು ಗುರು ಮತ್ತು ಅವನ ಉಪದೇಶಾನುಭವವು ಇವೆರಡೂ ಶಿಷ್ಯನಲ್ಲಿ ಏಕೀಭಾವವಾದರೂ ಅಂದರೆ ಗುರುವನ್ನು ಮತ್ತು ಅವನ ಉಪದೇಶವನ್ನು ಒಂದಾಗಿ ಭಾವಿಸುವ ಶಿಷ್ಯನೇ ಸೇವ್ಯಪ್ರಸಾದಿಯೆನಿಸುವನು. ಅಖಂಡವೂ, ಸ್ವಸ್ವರೂಪವೂ ವಾಣಿ ಮತ್ತು ಮನಗಳಿಗೆ ಅಗೋಚರವೂ ಪರಮಾನಂದವನ್ನು ಅನುಭವಿಸುತ್ತಿರುವ ಶಿವಯೋಗಿಗೆ ಬೇರಾವ ವಿಷಯದಲ್ಲಿ ಪ್ರೀತಿಯುಂಟಾಗುವುದಿಲ್ಲ. ಇದರಿಂದ ನಿತ್ಯತೃಪ್ತನಾದ ಜೀವನ್ಮುಕ್ತನಿಗೆ ಬೇರಾವ ಭೋಗಸಾಧನಗಳ ಪ್ರಯೋಜನವಿರುವುದಿಲ್ಲ. ಶಿವೈಕ್ಯ ಜ್ಞಾನಸಂಪನ್ನನೂ, ದೇಹ ಭಾವರಹಿತನೂ ಆದ ಶಿವಯೋಗಿಗೆ ಬಾಹ್ಯಪೂಜಾಕರ್ಮವಾಗಲೀ, ಅಂತರಂಗ ದಲ್ಲಿ ಮಾಡುವ ಧ್ಯಾನವಾಗಲೀ ಯಾವುದೂ ಇರುವುದಿಲ್ಲ. ಶಿವಜ್ಞಾನಸಂಪನ್ನನಾದ ಶಿವಯೋಗಿಯು ಸರ್ವವನ್ನು ಶಿವಸ್ವರೂಪವನ್ನಾಗಿ ಭಾವಿಸುತ್ತ ತಾನೇ ತಾನಾಗಿ ಬೆಳಗುತ್ತಿರುವಾಗ ಬಾಹ್ಯ ಕ್ರಿಯೆಗಳಿಂದಾಗಲೀ, ಅಂತರಂಗದ ಧ್ಯಾನಾದಿಗಳಿಂದಾಗಲೀ ಆವ ಪ್ರಯೋಜನವಿರುವುದಿಲ್ಲ. ಒಂದು ವೇಳೆ ಈ ಶಿವಯೋಗಿಯು ಬಾಹ್ಯಪೂಜಾ ಕ್ರಿಯೆಗಳನ್ನು ಆಚರಿಸಿದರೆ ಅದು ಇತರರ ಉದ್ಧಾರಕ್ಕಲ್ಲದೆ ತನಗಾಗಿ ಇರುವುದಿಲ್ಲ. ಹೀಗೆ ಶ್ರೇಷ್ಠವಾದ ಸೇವ್ಯಪ್ರಸಾದಿಸ್ಥಲದ ಶಿವಯೋಗಿಗೆ ಹಠಯೋಗ, ರಾಜಯೋಗ,

ಮಂತ್ರಯೋಗ ಅಥವಾ ಬೇರಾವುದೇ ಯೋಗವನ್ನು ಮಾಡುವ ಅವಶ್ಯಕತೆಯಿರುವುದಿಲ್ಲ. ಇವನು ಈ ಎಲ್ಲ ಯೋಗಗಳನ್ನು ಮಾಡುವ ಯೋಗಿಗಳ ಆತ್ಮರೂಪನೇ ಆಗಿರುತ್ತಾನೆ. (ಸಿ.ಶಿ., ೧೮. ೬೯–೭೬)

ಹೀಗೆ ಒಂಭತ್ತು ಅವಾಂತರಸ್ಥಲಗಳಿಂದ ಕೂಡಿಕೊಂಡಿರುವ ಸ್ಥಲವೇ ಪ್ರಾಣಲಿಂಗಿಸ್ಥಲವು.

ಶರಣಸ್ಥಲ

ಮಹರ್ಷಿಯಾದ ಅಗಸ್ತ್ಯನು ಪ್ರಾಣಲಿಂಗಿಸ್ಥಲದ ಅವಾಂತರಸ್ಥಲಗಳ ವಿಷಯವನ್ನು ಶ್ರವಣಮಾಡಿದ ನಂತರ ಮುಂದಿನದಾದ ಸ್ಥಲವನ್ನು ಕುರಿತು "ಕಥಯ ಸ್ಥಲಭೇದಂ ಮೇ ಶರಣಸ್ಥಲಸಂಶ್ರಿತಮ್ (ಸಿ.ಶಿ., ೧೯–೧) ಅಂದರೆ ಶರಣ ಸ್ಥಲದ ಅವಾಂತರಸ್ಥಲಗಳ ಬಗ್ಗೆ ಉಪದೇಶಿಸಬೇಕೆಂದು ಕೇಳಿಕೊಂಡಾಗ ಪೂಜ್ಯರು ಈ ಶರಣಸ್ಥಲಗಳಲ್ಲಿರುವ ಹನ್ನೊಂದು ಅವಾಂತರಸ್ಥಲಗಳ ವಿಷಯವಾಗಿ ಪ್ರತಿಪಾದಿಸಿದ್ದಾರೆ. ಅವುಗಳ ಸ್ವರೂಪಗಳನ್ನೇ ಇಲ್ಲ ಕ್ರಮವಾಗಿ ವಿವರಿಸಲಾಗುವುದು.

೮೧) ದೀಕ್ಷಾಪಾದೋದಕಸ್ಥಲ :

ಚಿತ್ಕ್ರಿಯಾದೀಕ್ಷೆಯಿಂದುಂಟಾದ ಯಾವ ಅದ್ವೈತ ಜ್ಞಾನವುಂಟೋ ಅಂತಹ ಪಾದೋದಕದೊಡನೆ ಗುರು–ಶಿಷ್ಯರ ಆನಂದದ ಐಕ್ಯಸ್ಥಿತಿಯೇ ದೀಕ್ಷಾಪಾದೋದಕ ಸ್ಥಿತಿಯು. ಇದನ್ನು ತಿಳಿಸುವ ಸ್ಥಲವೇ ದೀಕ್ಷಾಪಾದೋದಕಸ್ಥಲವು. ಅಂದರೆ ಗುರುವಿಗಾದ ಆನಂದವು ಶಿಷ್ಯನಿಗೆ ಉಂಟಾಗಲು ಅವರೀರ್ವರ ಆನಂದದ ಐಕ್ಯಸ್ಥಿತಿಯು ಪ್ರಾಪ್ತವಾಗುವುದು. ಇದಕ್ಕೇನೇ ದೀಕ್ಷಾಪಾದೋದಕಸ್ಥಲವೆಂದು ಕರೆಯುತ್ತಾರೆ. ಪಾದವೆಂದರೆ ನಿರ್ಮಲವಾದ ಪರಮಾನಂದವೆಂದರ್ಥ. ಉದಕವೆಂದರೆ ಅದರ ಜ್ಞಾನವೆಂಬುದಾಗಿ ತಿಳಿದುಕೊಳ್ಳಬೇಕು ಅಥವಾ ಪಾದವೆಂದರೆ ಗುರುವೆಂತಲೂ, ಉದಕವೆಂದರೆ ಶಿಷ್ಯನೆಂತಲೂ ಸಹ ಪ್ರತಿಪಾದಿಸಲಾಗಿದೆ. ಈ ಗುರು–ಶಿಷ್ಯರ ಅಥವಾ ಆ ಆನಂದ–ಜ್ಞಾನಗಳ ಐಕ್ಯತೆಯು ಈ ಚಿತ್ಕ್ರಿಯಾದೀಕ್ಷೆಯಿಂದ ಪ್ರಾಪ್ತವಾಗುವುದರಿಂದ ಇದಕ್ಕೆ ದೀಕ್ಷಾಪಾದೋದಕವೆಂದು ಕರೆಯುತ್ತಾರೆ. ದೇಶ, ಕಾಲ, ಪರಿಚ್ಛೇದ ರಹಿತವಾದ ಇಂತಹ ನಿರ್ಮಲವಾದ ಆನಂದವನ್ನು ಜ್ಞಾನದಿಂದ ಪಡೆದ ಶಿವಯೋಗಿಯು ಬೇರಾವುದನ್ನೂ ಅಪೇಕ್ಷಿಸುವುದಿಲ್ಲ. ಗುರುಕರುಣೆಯಿಂದ ಪ್ರಾಪ್ತವಾದ ಅತಿಸ್ವಚ್ಛವಾದ ಸಾಂಸಾರಿಕ ದೋಷವಿಲ್ಲದಿರುವ ಜ್ಞಾನಾಮೃತವನ್ನು ಆಸ್ವಾದಿಸುತ್ತ ಯೋಗಿಯು ಅಲ್ಲಿಯೇ ರಮಿಸುತ್ತಿರುತ್ತಾನೆ. (ಸಿ. ಶಿ., ೧೯. ೬–೧೧)

೮೨) ಶಿಕ್ಷಾಪಾದೋದಕಸ್ಥಲ :

ಈ ಪೂರ್ವದಲ್ಲಿ ಹೇಳಿದಂತೆ ಗುರು–ಶಿಷ್ಯರ ಸ್ವರೂಪೈಕ್ಯ ಜ್ಞಾನವು ಗುರುವಿನ ಶಿಕ್ಷೆಯಿಂದ ಅರ್ಥಾತ್ ಬೋಧೆಯಿಂದ ದೊರೆಯಲು ಅದಕ್ಕೆ ಶಿಕ್ಷಾಪಾದೋದಕವೆನ್ನುತ್ತಾರೆ. ಯುಕ್ತಿಯೆಂಬ ಕಡಗೋಲಿನಿಂದ ಶಾಸ್ತ್ರವೆಂಬ ಸಮುದ್ರವನ್ನು ಗುರುವು ಮಥಿಸಲು ವಿವೇಕಿಗಳಿಗೆ ಬೋಧಾಮೃತವು ಪ್ರಾಪ್ತವಾಗುವುದು. ಪರಬ್ರಹ್ಮರೂಪವಾದ ಆಕಾಶದಲ್ಲಿ ಜ್ಞಾನಚಂದ್ರನು ಉದಯವಾಗಲು ಮುಕ್ತಿಯೆಂಬ ರಾತ್ರಿಯಲ್ಲಿ ಜ್ಞಾನಿಗಳು ಪರಮಾನಂದ ರೂಪವಾದ ಬೆಳದಿಂಗಳನ್ನು ಅನುಭವಿಸುತ್ತಾರೆ. ದೇಶ–ಕಾಲ–ವರ್ಜಿತವಾದ ಇಂತಹ ಪರಮಾನಂದವನ್ನು ಅನುಭವಿಸುವವರಿಗೆ ಬೇರಾವುದೂ ತಿಳಿಯಲಾಗಲಿ, ಅನುಭವಿಸಲಾಗಲಿ ಇರುವುದಿಲ್ಲ. ಗಂಗಾಜಲದಿಂದ ತೃಪ್ತನಾದವನು ಕೂಪೋದಕವನ್ನಪೇಕ್ಷಿಸದಂತೆ ಆತ್ಮಾನಂದದಲ್ಲಿ ತೃಪ್ತನಾದವನು ವಿಷಯಸುಖವನ್ನು ಅಪೇಕ್ಷಿಸುವುದಿಲ್ಲ. ಕಲಂಕರಹಿತವೂ, ಸುಂದರವೂ ಆದ ಗುರುವಿನ ಅನುಗ್ರಹವೆಂಬ ಚಂದ್ರನಿಂದ ಯಾರ ಮನಸ್ಸೆಂಬ ಕುಮುದವು ಅರಳಿರುವುದೋ ಅವನಿಗೆ ಯಾವ ಭ್ರಮೆಯೂ ಇರುವುದಿಲ್ಲ. (ಸಿ.ಶಿ., ೧೯. ೧೨–೧೮)

೮೩) ಜ್ಞಾನಪಾದೋದಕಸ್ಥಲ :

"ವಿಜ್ಞಾನಮಾನಂದಂ ಬ್ರಹ್ಮ" ಎಂಬ ಶೃತಿವಚನಾನುಸಾರವಾಗಿ ಪರಮಾತ್ಮನ ಆನಂದ ಸ್ವರೂಪ ವಿಜ್ಞಾನಕ್ಕೆ ಜ್ಞಾನಗುರುವೆಂದು ಕರೆಯುತ್ತಾರೆ. ಈ ಜ್ಞಾನ ಹಾಗೂ ಆನಂದಗಳ ಐಕ್ಯಸ್ಥಿತಿಗೇನೇ ಜ್ಞಾನಪಾದೋದಕವೆನ್ನುವರು. ಅಂದರೆ ಪರಮಾನಂದ ರೂಪವಾದ ಸ್ವರೂಪದ ಮನನದಲ್ಲಿ ತಾದಾತ್ಮ್ಯರೂಪವನ್ನು ತಾಳಿದ ಜ್ಞಾನವೇ ಜ್ಞಾನಪಾದೋದಕವು. ಅವಿದ್ಯೆಯೆಂಬ ರಾಹುವಿನಿಂದ ಬಿಡಲ್ಪಟ್ಟ ಸುನಿರ್ಮಲವಾದ ಜ್ಞಾನಚಂದ್ರನು ಪರಮಾತ್ಮನೆಂಬ ಆಕಾಶದಲ್ಲಿ ಪರಮಾನಂದ ಎಂಬ ಪ್ರಕಾಶದೊಂದಿಗೆ ಬೆಳಗುತ್ತಿರುತ್ತಾನೆ. ಅಜ್ಞಾನವೆಂಬ ಮೇಘದ ಆವರಣದಿಂದ ಮುಕ್ತರಾದ ಪೂರ್ಣಜ್ಞಾನರೂಪವಾದ ಚಂದ್ರನು ಆನಂದವೆಂಬ ಸಾಗರವನ್ನು ಉಕ್ಕೇರಿಸುತ್ತ ಕಂಗೊಳಿಸುತ್ತಾನೆ. ಜ್ಞಾನವೆಂಬ ಚಂದ್ರನ ಉದಯವಾಗಲು ಮೋಹವೆಂಬ ಕತ್ತಲೆಯು ಧ್ವಂಸವಾಗುತ್ತದೆ. ಆಗ ಯೋಗಿಗಳು ಸುಖಸ್ವರೂಪವಾದ ತಮ್ಮ ಸ್ಥಿತಿಯನ್ನು ಅನುಭವಿಸುವರು. ಜ್ಞಾನವೆಂಬ ಸೂರ್ಯನುದಯಿಸಲು ಮಾಯೆಯೆಂಬ ಕತ್ತಲೆಯು ಇಲ್ಲವಾಗಲು ಎಲ್ಲ ವ್ಯವಹಾರವನ್ನು ಬದಿಗಿರಿಸಿದ ಯೋಗಿಯು ಎಲ್ಲರಿಗೂ ಆಶ್ಚರ್ಯವಾಗುವ ರೀತಿಯಲ್ಲಿ ನಿದ್ರಿಸುತ್ತಿರುತ್ತಾನೆ. ಅಂದರೆ ಯಾವ ಸಾಂಸಾರಿಕ ವ್ಯವಹಾರದಲ್ಲಿ ಉಳಿದವರು ಎಚ್ಚರಾಗಿ ವ್ಯವಹರಿಸುತ್ತಾರೆಯೋ ಆ ವ್ಯವಹಾರದಿಂದ ಈತನು ಸಂಪೂರ್ಣವಾಗಿ ನಿರ್ಲಿಪ್ತನಾಗಿರುತ್ತಾನೆಂದು ಭಾವವು. ಅನಾದಿಯಾದ

ಅವಿದ್ಯೆಯು ವಿಚ್ಛಿನ್ನವಾಗಲು ಈ ಪರಶಿವಯೋಗಿಯು ಪ್ರಾಪಂಚಿಕ ಸಾಮಗ್ರಿಗಳಿಲ್ಲದೆ ಪರಮಾನಂದವನ್ನು ಅನುಭವಿಸುತ್ತಿರುತ್ತಾನೆ.

ನಿತ್ಯಾನಂದರೂಪವೂ, ನಿಜಸ್ವರೂಪವೂ ನಿರ್ಮಲವೂ ಆದ ಪರಶಿವ ತತ್ತ್ವದಲ್ಲಿ ವಿಲೀನವಾದ ಚಿತ್ತವೃತ್ತಿಯುಳ್ಳ ಶಿವಯೋಗಿಗೆ ವಿಶ್ವದ ಕಲ್ಪನೆಯೇ ಉಪಂಟಾಗುವುದಿಲ್ಲ. ಇಂತಹ ಈ ಶಿವಯೋಗಿಗೆ ರವಿ, ರುದ್ರ, ಬ್ರಹ್ಮ ಮತ್ತು ವಿಷ್ಣು ಮೊದಲಾದ ಯಾವ ದೇವರೂ ಸಹ ಸರಿಸಾಟಿಯಾಗಲಾರನು. ತನ್ನ ಆನಂದ ಸ್ವರೂಪವನ್ನು ಅಪರೋಕ್ಷವಾಗಿ ಅನುಭವಿಸುತ್ತಿರುವ ಮಹಾತ್ಮರಿಗೆ ಬ್ರಹ್ಮ ಮೊದಲಾದ ದೇವತೆಗಳೆಂದರೆ ಸ್ವಸ್ವರೂಪ ಸುಖದ ಒಂದಂಶವಿದ್ದಂತೆ. ಯಾವ ಆತ್ಮಾನಂದದ ಒಂದಂಶವನ್ನು ಹೊಂದಿದ ಕಾರಣದಿಂದಾಗಿ ವಿಶ್ವದ ಜನರೆಲ್ಲ ಆ ವಿಷಯಸುಖವನ್ನು ಅಪೇಕ್ಷಿಸುತ್ತಿರುತ್ತಾರೆ. ಇಂತಹ ಪ್ರಮಾಣಗೋಚರವೂ ಪರಮಾನಂದ ಸ್ವರೂಪವೂ ಆದ ಆ ಪರಮತತ್ತ್ವವನ್ನು ಯಾರು ತಾನೇ ಅಪೇಕ್ಷಿಸಲಾರರು? ಅಂದರೆ ಸರ್ವರೂ ಅಪೇಕ್ಷಿಸುತ್ತಾರೆ ಎಂಬ ಭಾವವು (ಸಿ.ಶಿ., ೧೯. ೧೯–೨೮)

೮೪) ಕ್ರಿಯಾನಿಷ್ಪತ್ತಿಸ್ಥಲ :

ಈ ಪೂರ್ವದಲ್ಲಿ ಹೇಳಿದಂತೆ ಜ್ಞಾನಪಾದೋದಕ ಸಂಪನ್ನನಾದ ಶಿವಯೋಗಿಯು ಯಾವುದೇ ಕರ್ಮವನ್ನು ಮಾಡಿದರೂ ಅದರ ನಿಷ್ಪತ್ತಿಯು ಅಂದರೆ ಫಲಪ್ರಾಪ್ತಿಯು ಅವನಿಗೆ ಆಗುವುದಿಲ್ಲ. ಹೀಗೆ ಕರ್ತೃತ್ವ ಭಾವವಿಲ್ಲದೆ ಕ್ರಿಯೆಯನ್ನು ಮಾಡಿದ ಶಿವಯೋಗಿಗೆ ಆ ಕ್ರಿಯಾಫಲವಿಲ್ಲವೆಂಬುದಾಗಿ ಹೇಳುವ ಈ ಸ್ಥಲವೇ ಕ್ರಿಯಾನಿಷ್ಪತ್ತಿಸ್ಥಲವು. ಹುರಿದ ಬೀಜದಿಂದ ಅಂಕುರವು ಉದಿಸಲಾರದಂತೆ ಜ್ಞಾನಿಯಿಂದ ಆಚರಿಸಲ್ಪಟ್ಟ ಅದಾವ ಕರ್ಮವೂ ಅವನ ಪುನರ್ಜನ್ಮಕ್ಕೆ ಕಾರಣವಾಗಲಾರದು. ಪ್ರತಿಬಿಂಬದಲ್ಲಿ ಉಂಟಾಗುವ ವಿಕಾರಗಳು ಬಿಂಬಕ್ಕೆ ಅಂಟಿಕೊಳ್ಳದಿರುವಂತೆ ನಿರಹಂಕಾರಿಯಾದ ಜ್ಞಾನಿಯಿಂದ ಆಚರಿಸಲ್ಪಟ್ಟ ಕರ್ಮಗಳೂ ಸಹ ಅವನಿಗೆ ಏನನ್ನೂ ಮಾಡಲಾರವು. ಚಲಿಸುತ್ತಿರುವ ಮೇಘದ ಸಂಬಂಧದಿಂದ ಚಂದ್ರನೇ ಚಲಿಸುವ ಹಾಗೆ ತೋರುವಂತೆ ಆತ್ಮನಿಗೆ ದೇಹ ಸಂಬಂಧವಾಗಿರುವುದರಿಂದ ದೇಹ–ಧರ್ಮಗಳು ಅವನಲ್ಲಿ ಆರೋಪಿತವಾಗಿ ತೋರುತ್ತವೆ. ನಾಲಿಗೆಯು ಅದೆಷ್ಟು ಜಿಡ್ಡಿನ ಪದಾರ್ಥಗಳನ್ನು ಸೇವಿಸಿದರೂ ಅವುಗಳ ಜಿಡ್ಡುತನವನ್ನು ತನ್ನ ಮೈಗೆ ಅಂಟಿಸಿಕೊಳ್ಳದಿರುವಂತೆ ಜ್ಞಾನಿಯು ಅನೇಕ ಕರ್ಮಗಳನ್ನು ಮಾಡಿದರೂ ಅವುಗಳ ಫಲದಿಂದ ಲಿಪ್ತನಾಗುವುದಿಲ್ಲ. ಪರಿಪೂರ್ಣವಾದ ಪರಮಾನಂದವನ್ನು ಅನುಭವಿಸುತ್ತಿರುವ ನಿರ್ಮಲಚಿತ್ತರಾದ ಯೋಗಿಗಳಿಗೆ ಅನೇಕ ಭೋಗಫಲವನ್ನು ಕೊಡುವುದು. ಕರ್ಮಗಳ ಪೀಡೆಯು ಉಂಟಾಗುವುದಿಲ್ಲ (ಸಿ.ಶಿ., ೧೯. ೨೯–೩೬)

೮೫) ಭಾವನಿಷ್ಪತ್ತಿಸ್ಥಲ :

ಭಾವದ ನಿಷ್‌ಪ್ರಯೋಜನತೆಯನ್ನು ಪ್ರತಿಪಾದಿಸುವ ಸ್ಥಲವೇ ಭಾವನಿಷ್ಪತ್ತಿ ಸ್ಥಲವು. ಕೇವಲ ಜ್ಞಾನಯೋಗಿಗೆ ಭಾವದಿಂದ ಅದಾವ ಸಂಬಂಧವಿರದೇ ಇದ್ದರೂ ಸಂಸಾರದಿಂದ ಮುಕ್ತಗೊಳಿಸುವ ಶಿವಭಾವನೆಯನ್ನು ಅವಶ್ಯವಾಗಿ ಮಾಡಬೇಕು. ಪರಿಪೂರ್ಣಜ್ಞಾನವು ಪ್ರಾಪ್ತವಾಗಿದ್ದರೂ ಪರಮಾತ್ಮನಲ್ಲಿ ಭಾವರಹಿತನಾಗಿರಬಾರದು. ಪರಮಾತ್ಮನ ವಿಷಯಕವಾದ ಆ ಭಾವನೆಯೇ ಸಂಸಾರದ ಬಿಡುಗಡೆಗೆ ಕಾರಣವಾಗಿರುತ್ತದೆ. ಅಗ್ನಿಯು ಕಟ್ಟಿಗೆಯನ್ನು ಉರುಹಿ ಕೊನೆಗೆ ತಾನು ಇಲ್ಲವಾಗಿ ಹೋಗುವಂತೆ ಈ ಶಿವಭಾವನೆಯು ಜನನ–ಮರಣ ದುಃಖವನ್ನು ದೂರಮಾಡಿ ಕೊನೆಗೆ ತಾನೂ ಇಲ್ಲವಾಗಿ ಹೋಗುತ್ತದೆ. ಭಾವನೆಯಿಲ್ಲದೆ ಜ್ಞಾನವಾಗಲಿ, ಜ್ಞಾನವಿಲ್ಲದೆ ಭಾವನೆಯಾಗಲಿ ಮೋಕ್ಷಕ್ಕೆ ಕಾರಣಗಳಾಗಲಾರವು. ಆದ್ದರಿಂದ ಶಿವಯೋಗಿಯು ಶಿವಜ್ಞಾನ–ಶಿವಭಾವನೆಗಳೆರಡನ್ನೂ ಉಳ್ಳವನಾಗಿರಬೇಕು. (ಸಿ.ಶಿ., ೧೯. ೩೭– ೪೩)

೮೬) ಜ್ಞಾನನಿಷ್ಪತ್ತಿಸ್ಥಲ :

ಸ್ವಸ್ವರೂಪ ಜ್ಞಾನದಲ್ಲಿ ವಿಲೀನನಾಗಿರುವ ಶಿವಯೋಗಿಗೆ ಬಾಹ್ಯ ಪ್ರಪಂಚದಲ್ಲಿ ತಿಳಿದುಕೊಳ್ಳಬೇಕಾದರೆ ಬೇರಾವ ವಸ್ತುವು ಇಲ್ಲದಿರುವುದರಿಂದ ಆತನ ವ್ಯಾವಹಾರಿಕ ಜ್ಞಾನವು ಸ್ವರೂಪಜ್ಞಾನದಲ್ಲಿಯೇ ವಿಲೀನವಾಗುತ್ತದೆ. ಹೀಗೆ ಸ್ವರೂಪಜ್ಞಾನದಲ್ಲಿ ವ್ಯಾವಹಾರಿಕ ಜ್ಞಾನದ ವಿಲಯಕ್ಕೇನೇ ಜ್ಞಾನನಿಷ್ಪತ್ತಿಯೆಂದು ಕರೆಯಲಾಗಿದೆ. ಅರ್ಥಾತ್ ಸ್ವರೂಪ ಜ್ಞಾನದ ಎದುರಿನಲ್ಲಿ ವ್ಯಾವಹಾರಿಕ ಜ್ಞಾನವು ನಿಷ್‌ಪ್ರಯೋಜಕ ವಾಗುವುದೇ ಜ್ಞಾನನಿಷ್ಪತ್ತಿಯು. ಮಲಗಿದ ವ್ಯಕ್ತಿಯು ಎಚ್ಚರಾಗಲು ಅವನಿಗೆ ಸ್ವಪ್ನದಲ್ಲಿ ತೋರುತ್ತಿದ್ದ ಪದಾರ್ಥಗಳು ಹಾಗೂ ಅವುಗಳ ಜ್ಞಾನವು ಇಲ್ಲವಾಗಿ ಹೋಗುವಂತೆ ಸ್ವಸ್ವರೂಪ ಜ್ಞಾನಸಂಪನ್ನನಾದ ಶಿವಯೋಗಿಗೆ ಬೇರೊಂದು ತಿಳಿದುಕೊಳ್ಳದ ಪದಾರ್ಥವಾಗಲಿ ಹಾಗೂ ಅದರ ಜ್ಞಾನವಾಗಲಿ ಉಳಿದಿರುವುದಿಲ್ಲ. ಈ ಜ್ಞಾನ ನಿಷ್ಪತ್ತಿಯ ಸ್ಥಿತಿಯಲ್ಲಿ ಅಖಂಡವಾದ ಸ್ವಸ್ವರೂಪ ಜ್ಞಾನಕ್ಕಿಂತಲೂ ಭಿನ್ನವಾದ ಬೇರಾವ ಜ್ಞಾನವೂ ಉಳಿಯುವುದಿಲ್ಲ.

ಪ್ರಪಂಚದ ಪ್ರತಿಯೊಂದು ವಸ್ತುವಿನಲ್ಲಿ ಸದ್ರೂಪವಾಗಿ ಒಂದೇ ಪರಶಿವ ಬ್ರಹ್ಮವು ಅನುಸ್ಯೂತವಾಗಿರುತ್ತದೆ. ಆ ಸದ್ರೂಪವನ್ನು ಹೊರತುಪಡಿಸಿ ಉಳಿದ ನಾಮ–ರೂಪಗಳೆಲ್ಲ ಮಿಥ್ಯಾ ಎಂದು ತಿಳಿದುಕೊಳ್ಳುವುದೇ ಜ್ಞಾನವು. ಕಾರ್ಯ– ಕಾರಣಭಾವ ರಹಿತವಾದ ಬೇರಾವ ಉಪಾಧಿಯಿಲ್ಲದಿರುವ ಪರಶಿವಬ್ರಹ್ಮವೇ ನಾನಾಗಿದ್ದೇನೆ ಮತ್ತು ಈ ಚರಾಚರ ಪ್ರಪಂಚವೂ ಸಹ ಪರಶಿವಬ್ರಹ್ಮವೇ ಆಗಿರುತ್ತದೆ

ಎನ್ನುವ ಶಿವಾದ್ವೈತ ಜ್ಞಾನವೇ ನಿಜವಾದ ಜ್ಞಾನವು. ಅಖಂಡವಾದ ಪರಶಿವಬ್ರಹ್ಮ ಸ್ವರೂಪವನ್ನು ತಿಳಿದುಕೊಂಡ ಮೇಲೆ ನಾನು ಜ್ಞಾತಾ, ಇದು ಜ್ಞೇಯವೆಂಬ ವ್ಯವಹಾರವು ಉಳಿಯುವುದಿಲ್ಲ. ಇಂತಹ ಅಖಂಡ ಜ್ಞಾನವನ್ನು ತಿಳಿಯಪಡಿಸುವ ಸ್ಥಲವೇ ಜ್ಞಾನನಿಷ್ಪತ್ತಿಸ್ಥಲವು (ಸಿ.ಶಿ., ೧೯. ೪೪–೫೦).

೮೭) ಪಿಂಡಾಕಾಶಸ್ಥಲವು :

ಅಖಂಡ ಪರಿಪೂರ್ಣವಾದ ಆಕಾಶವು ಪ್ರತಿಯೊಂದು ಪಿಂಡದಲ್ಲಿ ಅರ್ಥಾತ್ ದೇಹದಲ್ಲಿ ಭಿನ್ನ ಭಿನ್ನವಾಗಿ ತೋರುವಂತೆ ಆತ್ಮವೂ ಸಹ ರೂಪವಾಗಿ ಒಂದೇ ಇದೆಯೆಂಬ ವಿವೇಕವುಂಟಾಗಲು ಪಿಂಡಾಕಾಶವೆಂದು ಕರೆಯುತ್ತಾರೆ. ಘಟ–ಮಠಾದಿ ಉಪಾಧಿಗಳಿದ್ದಾಗಲೂ ಆಕಾಶವು ಪರಿಪೂರ್ಣವಾಗಿ ಒಂದೇ ಇರುವಂತೆ ಪ್ರತಿಯೊಂದು ಪಿಂಡದಲ್ಲಿ ಬೇರೆ ಬೇರೆಯಾಗಿ ತೋರುತ್ತಿರುವ ಆತ್ಮವೂ ಸಹ ಪರಿಪೂರ್ಣವಾಗಿ ಒಂದೇ ಆಗಿರುತ್ತದೆ. ಹೀಗೆ ತನ್ನೊಳಗಿರುವ ಆತ್ಮವನ್ನು ತನ್ನ ಮನಸ್ಸಿನಿಂದ ಅಖಂಡವೆಂಬುದಾಗಿ ಭಾವಿಸುತ್ತಿರುವುದೇ ಪಿಂಡಾಕಾಶವು. ಶಿವಾದಿ ಭೂಮ್ಯಂತಗಳಾದ ಮೂವತ್ತಾರು ತತ್ತ್ವಗಳೆಂಬ ಕಂಬ–ಗೋಡೆಗಳಿಂದ ನಿರ್ಮಾಣವಾಗಿರುವ ಹೃದಯವೆಂಬ ಕಮಲಾಸನವುಳ್ಳ ಜ್ಞಾನವೆಂಬ ದೀಪದಿಂದ ಬೆಳಗುತ್ತಿರುವ ಶಿವಯೋಗಿಯ ಈ ದೇಹವು ಒಂದು ಶಿವಮಂದಿರವಿದ್ದಂತೆ. ಇಂತಹ ದೇಹದಲ್ಲಿ ಪರಾಕಾಶ ರೂಪನಾದ ಪರಮೇಶ್ವರನು ಹೃದಯವೆಂಬ ಜ್ಞಾನಿಗಳಿಗೆ ಗೋಚರವಾಗುತ್ತಿರುತ್ತಾನೆ. ಸಪ್ತಧಾತುಗಳಿಂದ ಕೂಡಿದ ಈ ಶರೀರವು ಒಂದು ಶಿವಪುರವಿದ್ದಂತೆ. ಅದರಲ್ಲಿರುವ ಅತ್ಯಂತ ಸೂಕ್ಷ್ಮವಾದ ಹೃದಯ ಕಮಲವೇ ಅಂತಃಪುರವು. ಅದರಲ್ಲಿ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನು ನಿತ್ಯಸಿದ್ಧ ನಾಗಿರುತ್ತಾನೆ. ಅಖಂಡವಾದ ಆಕಾಶವು ಘಟೋಪಾಧಿಯಿಂದ ಘಟಾಕಾಶವೆಂದು ಕರೆಯಿಸಿಕೊಳ್ಳುವಂತೆ ಸಕಲ ಉಪಾಧಿರಹಿತವಾದ ಚಿನ್ಮಯರೂಪವಾದ ಪರಶಿವ ಬ್ರಹ್ಮವು ಸಹ ಹೃದಯೋಪಾಧಿಯಿಂದ ಪಿಂಡಾಕಾಶವೆಂಬುದಾಗಿ ಕರೆಯಲ್ಪಡುತ್ತದೆ. (ಸಿ.ಶಿ., ೧೯. ೫೧–೫೮)

೮೮) ಬಿಂದ್ವಾಕಾಶಸ್ಥಲವು :

ಆಕಾಶವು ಸರ್ವತ್ರ ವ್ಯಾಪಕವಾಗಿರುವಂತೆ ಆತ್ಮವೂ ಸಹ ವ್ಯಾಪಕವಾಗಿದೆ ಎಂಬುದಾಗಿ ಆಕಾಶದ ಉಪಮಾನದ ಮೂಲಕ ಆತ್ಮವನ್ನು ತಿಳಿಯಪಡಿಸುವ ಈ ಸ್ಥಲಕ್ಕೆ ಬಿಂದ್ವಾಕಾಶಸ್ಥಲವೆಂದು ಕರೆಯಲಾಗಿದೆ. ಒಂದೇ ಆದ ವಾಯುವು ಸರ್ವ ಪ್ರಾಣಿಗಳಲ್ಲಿ ಸಂಚರಿಸುತ್ತಿರುವಂತೆ ಒಂದೇ ಆತ್ಮವು ಸರ್ವರಲ್ಲಿ ವ್ಯಾಪಿಸಿಕೊಂಡಿರುತ್ತದೆ. ಅಪರಿಮಿತ ಸ್ವರೂಪದ ಒಂದೇ ಅಗ್ನಿಯು ದಾವಾಗ್ನಿ, ವಡವಾಗ್ನಿ, ವಿದ್ಯುದಾಗ್ನಿ,

ಆಕರಜಾಗ್ನಿ ಮತ್ತು ಕಾಲಾಗ್ನಿ ಮುಂತಾದ ಭಿನ್ನ ಭಿನ್ನ ರೂಪದಲ್ಲಿ ತೋರುತ್ತಿರುವಂತೆ ಒಬ್ಬನೇ ಆದ ಪರಮಾತ್ಮನು ಪರಿಚ್ಛೇದ ವರ್ಜಿತನಾಗಿ ಸರ್ವರ ಆತ್ಮರೂಪದಲ್ಲಿ ವಿರಾಜಿಸುತ್ತಿರುತ್ತಾನೆ. ವ್ಯಾಪಕನಾದ ಪರಮಾತ್ಮನು ಪ್ರತಿಯೊಬ್ಬ ಜೀವಿಗಳ ಚಿತ್ತವೆಂಬ ಜಲಪಾತ್ರೆಯಲ್ಲಿ ಪ್ರತಿಬಿಂಬರೂಪದಲ್ಲಿರುತ್ತಾನೆ. ಜ್ಞಾನಪ್ರಕಾಶರೂಪನಾದ ಒಬ್ಬನೇ ಆದ ಪರಮಾತ್ಮನು ಎಲ್ಲ ಪ್ರಾಣಿಗಳ ಹೃದಯದಲ್ಲಿ ವಾಸಿಸುವವನಾಗಿ ಪರಿಚ್ಛಿನ್ನನಂತೆ ತೋರುತ್ತಿದ್ದರೂ ಅವನು ಸರ್ವವ್ಯಾಪಕನೇ ಆಗಿರುತ್ತಾನೆ. ಒಬ್ಬನೇ ಆದ ಸೂರ್ಯನು ತನ್ನ ತೇಜಸ್ಸಿನಿಂದ ಸರ್ವತ್ರ ಪ್ರಕಾಶಿಸುತ್ತಿರುವಂತೆ ಒಬ್ಬನೇ ಆದ ಪರಮಾತ್ಮನು ತನ್ನ ಅನೇಕ ಶಕ್ತಿಗಳ ಮೂಲಕ ಸರ್ವತ್ರ ವ್ಯಾಪಕನಾಗಿರುತ್ತಾನೆ. ಪ್ರತಿಯೊಬ್ಬರ ಹೃದಯದಲ್ಲಿ ಬಿಂದುರೂಪನಾಗಿರುವ ಶಿವನು ಆಕಾಶದಂತೆ ವ್ಯಾಪಕನಾಗಿರುತ್ತಾನೆ ಎಂಬುದನ್ನು ತಿಳಿಸುವ ಸ್ಥಲವೇ ಬಿಂದ್ವಾಕಾಶಸ್ಥಲವು (ಸಿ.ಶಿ., ೧೯. ೫೯–೬೪)

೮೯) ಮಹಾಕಾಶಸ್ಥಲ :

ಪಿಂಡಾಂಡದೊಳಗಿನ ಆಕಾಶವು ಮಹಾಕಾಶಕ್ಕಿಂತಲೂ ಭಿನ್ನವಾದುದಲ್ಲ ಎಂಬುದಾಗಿ ತಿಳಿಸುವ ಸ್ಥಲವೇ ಮಹಾಕಾಶಸ್ಥಲವು. ಘಟ–ಮಠಾದಿಗಳಲ್ಲಿ ಒಂದೇ ಆಕಾಶವು ವ್ಯಾಪಿಸಿಕೊಂಡಿರುವಂತೆ ಪ್ರತಿಯೊಂದು ಪಿಂಡಾಂಡ ಹಾಗೂ ಬ್ರಹ್ಮಾಂಡದಲ್ಲಿ ಒಂದೇ ಆತ್ಮವು ವ್ಯಾಪಿಸಿಕೊಂಡಿರುತ್ತದೆ. ತೋರಿಸಲು ಬಾರದಿರುವ ಉಪಮಾನವಿಲ್ಲದ ವಾಣಿ–ಮನಗಳಿಗೆ ಅಗೋಚರವಾಗಿರುವ, ಸರ್ವತ್ರ ವ್ಯಾಪಕವಾಗಿರುವ, ಸಚ್ಚಿದಾನಂದ ಸ್ವರೂಪವಾದ ಕಾಲಾತೀತವಾದ, ಕಲಾತೀತವಾದ, ಎಲ್ಲಪ್ರಕಾಶಗಳ ಉದಯಕ್ಕೆ ಮೂಲಸ್ಥಾನವಾಗಿರುವ ಆ ಪರಶಿವಬ್ರಹ್ಮವೇ ಪರಮಾಕಾಶ ಅಥವಾ ಮಹಾಕಾಶ ಎಂದು ಕರೆಯಲ್ಪಡುತ್ತದೆ. ಅದಕ್ಕೇನೇ ಆಗಮ ಶಾಸ್ತ್ರಜ್ಞರು ಮಹಾಲಿಂಗವೆಂದು ಕರೆದಿದ್ದಾರೆ. ಅದುವೇ ಜಗತ್ತಿನ ಉತ್ಪತ್ತಿ ಮತ್ತು ವಿಲಯಾದಿಗಳಿಗೆ ಕಾರಣವಾಗಿರುತ್ತದೆ. ಸಚ್ಚಿದಾನಂದ ಸ್ವರೂಪವಾದ ಪರಮಾಕಾಶ ರೂಪವಾದ ಆ ಪರಮತತ್ತ್ವಕ್ಕೆ ಜ್ಯೋತಿರ್ಲಿಂಗವೆಂದು ಯೋಗಿಗಳು ಕರೆದಿದ್ದಾರೆ. ಎಲ್ಲ ಯೋಗಿಗಳ ನಿಲಯಕ್ಕೆ ಇದುವೇ ಕಾರಣವಾಗಿರುವುದರಿಂದ ಇದಕ್ಕೆ 'ಲಿಂಗ' ವೆಂಬುದಾಗಿ ಕರೆಯಲಾಗಿದೆ.

ಪರಮಾನಂದರೂಪವಾದ ಮತ್ತು ಸರ್ವೋತ್ಕೃಷ್ಟವಾದ ಈ ಜ್ಯೋತಿರೂಪ ವಾದ ಲಿಂಗಕ್ಕೆ ಸಂಶಯಶೂನ್ಯರಾದ ವಶಿಷ್ಠಾದಿ ಮಹರ್ಷಿಗಳು ಪರಮಾಕಾಶ ಅಥವಾ ಮಹಾಕಾಶವೆಂದು ಕರೆದಿದ್ದಾರೆ. ಸಮುದ್ರದಲ್ಲಿಯ ತರಂಗಗಳು

ಸಮುದ್ರಕ್ಕಿಂತಲೂ ಭಿನ್ನವಾಗದಿರುವಂತೆ ಈ ಚರಾಚರಾತ್ಮಕವಾದ ವಿಶ್ವವು ಶಿವನಿಂದ ಭಿನ್ನವಾಗಿರುವುದಿಲ್ಲ. ಕಾಂಡ, ಶಾಖೆ, ಪತ್ರ, ಪುಷ್ಪಾದಿಗಳು ವೃಕ್ಷಕ್ಕಿಂತಲೂ ಭಿನ್ನವಾಗದಿರುವಂತೆ ಅರ್ಥಾತ್ ವೃಕ್ಷರೂಪವೇ ಆಗಿರುವಂತೆ ಈ ಜಗತ್ತೂ ಸಹ ಶಿವನಿಂದ ಭಿನ್ನವಾಗಿರುವುದಿಲ್ಲ. ಆಕಾಶವೆಂಬ ಮಹಾಭೂತದಲ್ಲಿ ಅನೇಕ ಜ್ಯೋತಿರ್ಮಂಡಲಗಳು ಭಿನ್ನ ಭಿನ್ನವಾಗಿ ತೋರುವಂತೆ ಪರಮಾಕಾಶ ರೂಪನಾದ ಪರಮಾತ್ಮನಲ್ಲಿ ಸಕಲ ಬ್ರಹ್ಮಾಂಡಗಳು ತೋರುತ್ತಿರುತ್ತವೆ. ಸರ್ವ ಉಪಾಧಿರಹಿತವಾದ, ಮಲರಹಿತವಾದ, ಜ್ಞಾನರೂಪವಾದ, ಮಹಾಕಾಶ ರೂಪವಾದ ಪರಮತತ್ತ್ವವು ಈ ಜಗಜ್ಜಾಲವೆಂಬ ಚಿತ್ರವನ್ನು ಬರೆಯುವಲ್ಲಿ ಆಧಾರಭಿತ್ತಿಯಾಗಿರುತ್ತದೆ. (ಸಿ.ಶಿ., ೧೯. ೬೫–೭೫)

೯೦) ಕ್ರಿಯಾಪ್ರಕಾಶಸ್ಥಲ :

ಶಿವನು ಪರಿಪೂರ್ಣನೂ, ಜ್ಞಾನಾಕಾಶರೂಪನೂ ಆಗಿರುತ್ತಾನೆ. ಅಂತಹ ಶಿವ ಮತ್ತು ನಾನು ಇಬ್ಬರೂ ಒಂದೇ ಆಗಿರುತ್ತೇವೆ ಎಂಬುದಾಗಿ ಮನಸ್ಸಿನಲ್ಲಿ ನಿರಂತರ ಧ್ಯಾನವನ್ನು ಮಾಡುವ ಶಿವಯೋಗಿಗೆ ಕ್ರಿಯಾಪ್ರಕಾಶಕನೆಂಬುದಾಗಿ ಕರೆಯಲಾಗಿದೆ. ನಿಷ್ಕಲಂಕನೂ, ನಿರಾಕಾರನೂ ಮತ್ತು ನಿತ್ಯನೂ ಆದ ಪರಶಿವನ ತೇಜಸ್ಸಿನಲ್ಲಿ ತನ್ನ ಚಿತ್ತ ವ್ಯಾಪಾರವನ್ನು ವಿಲೀನಗೊಳಿಸಿಕೊಂಡ ಶಿವಯೋಗಿಯ ಸ್ವಸ್ವರೂಪಾನುಸಂಧಾನರೂಪವಾದ ಯಾವ ಕ್ರಿಯೆಯಿರುತ್ತದೆಯೋ ಆ ಕ್ರಿಯೆಯೂ ಸಹ ಶಿವನ ಕ್ರಿಯಾಶಕ್ತಿಯೆಂಬುದಾಗಿಯೇ ಕರೆಯಲ್ಪಡುತ್ತದೆ. ಸರ್ವಜ್ಞನೂ, ಸರ್ವಕರ್ತನೂ, ಸರ್ವವ್ಯಾಪಕನೂ ಆದ ಪರಶಿವನೊಂದಿಗೆ ಸಾಮರಸ್ಯಾನುಸಂಧಾನವನ್ನು ಮಾಡುವುದರಿಂದ ಶಿವಯೋಗಿಯು ಪರಮಾತ್ಮಸ್ವರೂಪನೇ ಆಗುತ್ತಾನೆ. ಶಿವಯೋಗಿಯು ಆಯಾ ಇಂದ್ರಿಯಗಳ ವ್ಯವಹಾರದಲ್ಲಿ ತೊಡಗಿದ್ದರೂ ಆತನ ಚಿತ್ತವು ಮಾತ್ರ ಅಂತರ್ಮುಖವಾಗಿ ಶಿವನನ್ನೇ ನೋಡುತ್ತ ಆನಂದಿತವಾಗುತ್ತಿರುತ್ತವೆ. ಕೂಟಸ್ಥವೂ, ಅಚಲವೂ, ಪ್ರಾಜ್ಞರೂಪವೂ, ಗುಣಾತೀತವೂ ಆದ ಪರಶಿವತತ್ತ್ವವನ್ನು ಸ್ವಸ್ವರೂಪವಾಗಿ ಅನುಸಂಧಾನಗೈಯ್ಯುತ್ತಿರುವ ಶಿವಯೋಗಿಯು ಸದಾ ಆನಂದಿತನಾಗಿಯೇ ಇರುತ್ತಾನೆ. ಪರಶಿವಸ್ವರೂಪನಾದ ಶಿವಯೋಗಿಯ ಸರ್ವಕ್ರಿಯೆಗಳು ಆಕಾಶದಲ್ಲಿ ತೋರುವ ಗಂಧರ್ವನಗರದಂತೆ ಪ್ರತೀತಿಯಾಗುತ್ತದೆ. ಅಂದರೆ ಕ್ರಿಯೆಗಳಿದ್ದರೂ ಕ್ರಿಯೆಗಳಲ್ಲದಂತೆ ತೋರುತ್ತಿರುತ್ತವೆ. ಹೀಗೆ ಶಿವಯೋಗಿಯ ಕ್ರಿಯೆಗಳು ವಾಸ್ತವಿಕವಾದ ಕ್ರಿಯೆಗಳಲ್ಲ ಎಂಬುದನ್ನು ಪ್ರಕಾಶಗೊಳಿಸುವ ಸ್ಥಲವೇ ಕ್ರಿಯಾಪ್ರಕಾಶನಸ್ಥಲವು (ಸಿ.ಶಿ., ೧೯. ೭೫–೮೨)

೯೧) ಭಾವಪ್ರಕಾಶಸ್ಥಲ :

ನೊರೆ–ತೆರೆ–ಬುದ್ಬುದಾದಿಗಳು ಸಮುದ್ರಕ್ಕಿಂತಲೂ ಭಿನ್ನವಾಗದಿರುವಂತೆ ಈ ಪೂರ್ವದಲ್ಲಿ ಹೇಳಿದ ಕ್ರಿಯಾಪ್ರಕಾಶಸ್ಥಿತಿ ಸಂಪನ್ನವಾದ ಶಿವಯೋಗಿಯ ಸರ್ವಭಾವನೆಗಳು ಅವನ ಆತ್ಮಸ್ವರೂಪಕ್ಕಿಂತಲೂ ಭಿನ್ನವಲ್ಲವೆಂಬುದಾಗಿ ತಿಳಿಸುವ ಸ್ಥಲವೇ ಭಾವಪ್ರಕಾಶಸ್ಥಲವು. ಈ ಜಗತ್ತೆಲ್ಲವೂ ಶಿವಸ್ವರೂಪವಾಗಿದೆ. ನಾನೂ ಕೂಡ ಶಿವರೂಪನೇ ಆಗಿದ್ದೇನೆ ಎಂಬುದಾಗಿ ಭಾವಿಸುವ ಪರಮಶಿವಯೋಗಿಯು ಭಾವದೋಷಗಳಿಂದ ಲಿಪ್ತನಾಗುವುದಿಲ್ಲ. ಶಿವಭಾವನೆಯು ಸ್ಥಿರಗೊಂಡಿರುವ ನಿರ್ಲಿಪ್ತನಾದ ಆ ಮಹಾಶಿವಯೋಗಿಯ ಸರ್ವಭಾವನೆಗಳೆಲ್ಲ ಶಿವರೂಪವೇ ಆಗಿರುತ್ತವೆ. ಅಜ್ಞಾನ ಬಂಧನವನ್ನು ಕಳೆದುಕೊಂಡು ಕೇವಲ ಆತ್ಮಾನುಭಾವದಲ್ಲಿ ತಲ್ಲೀನನಾದ ಶಿವಯೋಗಿಯ ಇಂದ್ರಿಯಗಳು ಎಲ್ಲೆಲ್ಲಿ ಆಸಕ್ತಗಳಾಗುವವೋ ಅಲ್ಲಲ್ಲೆಲ್ಲ ಅವುಗಳಿಗೆ ಶಿವರೂಪವೇ ಗೋಚರವಾಗುತ್ತವೆ. ರಾಗದ್ವೇಷಾತ್ಮಕಗಳಾದ ಭಾವನೆಗಳು ಸಂಸಾರ ಕ್ಲೇಶಕ್ಕೆ ಕಾರಣಗಳಾಗಿರುತ್ತವೆ. ಯಾವಾಗ ಈ ರಾಗ–ದ್ವೇಷಗಳು ಅಳಿದು ಹೋಗುವವೋ ಆಗ ಶಿವಾತ್ಮಕವಾದ ಭಾವನೆಯೊಂದೇ ಉಳಿದುಕೊಂಡಿರುತ್ತದೆ. ಕತ್ತಲೆಯು ಸೂರ್ಯನನ್ನು ಆಚ್ಛಾದಿಸಲು ಸಮರ್ಥವಾಗದಿರುವಂತೆ ಪ್ರಕಾಶರೂಪನಾದ ಆತ್ಮನನ್ನು ಅವಿದ್ಯೆಯೂ ಸಹ ಆಚ್ಛಾದಿಸಲಾಗದು (ಸಿ.ಶಿ., ೧೯. ೮೩–೮೯)

೯೨) ಜ್ಞಾನಪ್ರಕಾಶಸ್ಥಲ :

ಜೀವ ಹಾಗೂ ಶಿವ ಇವರ ಅಭೇದವನ್ನು ಬೋಧಿಸುವಾಗ ಅವರಿಗಿರುವ ಉಪಾಧಿಗಳ ಮೂಲಕ ವಾಚ್ಯಾರ್ಥದಲ್ಲಿ ಅಭೇದವೂ ಸಂಭವಿಸದಿರುವಾಗ ಲಕ್ಷ್ಯಾರ್ಥ ಮೂಲಕವಾಗಿ ಅವರ ಅಭೇದವನ್ನು ಬೋಧಿಸುವ ಸ್ಥಲವೇ ಜ್ಞಾನಪ್ರಕಾಶಸ್ಥಲವು. ಜೀವನ್ಮುಕ್ತನಾದ ಶಿವಯೋಗಿಗೆ ಲಕ್ಷ್ಯಾರ್ಥ ಜ್ಞಾನವು ಯಾವಾಗ ಉಂಟಾಗುವುದೋ ಆಗ ಅವನಿಗೆ ಬೇರೊಂದು ಜ್ಞೇಯ ಪದಾರ್ಥವು ಉಳಿಯುವುದಿಲ್ಲ. ಪರಮಾತ್ಮನು ಸ್ವಯಂಪ್ರಕಾಶರೂಪನಾಗಿರುವುದರಿಂದ ಅವನು ಜ್ಞಾನಕ್ಕೆ ವಿಷಯನಾಗಲಾರನು. ಅಂತಹ ಪರಮಾತ್ಮನೊಂದಿಗೆ ಆತ್ಮದ ಐಕ್ಯಾನುಸಂಧಾನವನ್ನು ಮಾಡುವುದೇ ಇಲ್ಲಿ ಜ್ಞಾನವೆಂಬುದಾಗಿ ಕರೆಯಲ್ಪಡುತ್ತದೆ. ಅಪರಿಚ್ಛಿನ್ನವೂ, ಅಪರಿಮಿತವೂ, ಸದ್ರೂಪವೂ ಆದ ಆನಂದರೂಪದಲ್ಲಿ ಈ ಸಂಪೂರ್ಣವಾದ ಜಗತ್ತು ಲಯವಾಗುವುದು. ಅಂತಹ ಆ ಪರಮತತ್ತ್ವಕ್ಕೆ ಬ್ರಹ್ಮವೆಂಬುದಾಗಿ ಕರೆಯಲಾಗಿದೆ. ಆ ಬ್ರಹ್ಮದ ಅರಿವೇ ಬ್ರಹ್ಮಜ್ಞಾನವೆಂದು ಕರೆಯಲ್ಪಡುತ್ತದೆ. ಇಂತಹ ಬ್ರಹ್ಮಜ್ಞಾನವು ಉತ್ಪನ್ನವಾಗಲು ಸರ್ವವೆಲ್ಲವೂ ಸಂವಿತ್

ರೂಪವಾಗಿಯೇ ಭಾವಿಸುವುದು. ಅದರ ಹೊರತು ಬೇರಾವುದೂ ಪ್ರತೀತಿಯಾಗುವುದಿಲ್ಲ. ಇಂತಹ ಅದ್ವೈತ ಜ್ಞಾನವು ಅಪವರ್ಗಕ್ಕೆ ಕಾರಣವಾಗಿರುತ್ತದೆ. ಆದ್ದರಿಂದ ಇಂತಹ ಜ್ಞಾನವನ್ನು ಸದಾ ಭಾವಿಸುವ ಶಿವಯೋಗಿಯು ಸಂಸಾರದಲ್ಲಿ ಲಿಪ್ತನಾಗುವುದಿಲ್ಲ. (ಸಿ.ಶಿ., ೧೯. ೯೦–೯೭)

ಹೀಗೆ ಇಲ್ಲಿ ದೀಕ್ಷಾಪಾದೋದಕಸ್ಥಲವನ್ನೇ ಮೊದಲುಗೊಂಡು ಜ್ಞಾನಪ್ರಕಾಶ ಸ್ಥಲದವರೆಗಿನ ಹನ್ನೆರಡು ಆವಾಂತರಸ್ಥಲಗಳನ್ನೊಳಗೊಂಡ ಮುಖ್ಯವಾದ ಸ್ಥಲವೇ ಶರಣಸ್ಥಲವು. ಇಲ್ಲಿ ಹೇಳಿದ ಎಲ್ಲ ಅವಾಂತರಸ್ಥಲಗಳ ವಿಷಯ ವಸ್ತುವನ್ನು ಅರಿತು ಅನುಭವಿಸುವವನೇ ಶರಣನೆಂಬುದಾಗಿ ತಿಳಿದುಕೊಳ್ಳಬೇಕು.

ಐಕ್ಯಸ್ಥಲ

ಮಹರ್ಷಿಯಾದ ಅಗಸ್ತ್ಯನು ಶ್ರೀ ಜಗದ್ಗುರು ರೇಣುಕ ಭಗವತ್ಪಾದರಿಂದ ಶರಣಸ್ಥಲ ವಿಶ್ಲೇಷಣೆಯನ್ನು ಶ್ರವಣಮಾಡಿದ ನಂತರ ಮುಂದಿನವಾದ ಐಕ್ಯಸ್ಥಲದ ಜಿಜ್ಞಾಸೆಯುಳ್ಳವನಾಗಿ "ಐಕ್ಯಸ್ಥಲಗತಾನ್ ಬ್ರೂಹಿ ಸ್ಥಲಭೇದಾನ್ ಗಣೇಂದ್ರ ಮೇ" (ಸಿ.ಶಿ., ೨೦. ೧) ಎಂಬುದಾಗಿ ಪ್ರಾರ್ಥಿಸಿಕೊಂಡನು. ತಾತ್ಪರ್ಯವೇನೆಂದರೆ "ಹೇ ಗಣೇಂದ್ರನೇ! ಇಲ್ಲಿಯವರೆಗೆ ಶರಣಸ್ಥಲದ ಭೇದವನ್ನು ಉಪದೇಶಿಸಿರುವೆ. ಸದ್ಯಃ ಐಕ್ಯಸ್ಥಲದಲ್ಲಿ ಬರುವ ಸ್ಥಲಭೇದವನ್ನು ಕುರಿತು ತಿಳಿಸುವಂಥವನಾಗು" ಇದು ಅಗಸ್ತ್ಯ ಮಹರ್ಷಿಯ ಪ್ರಾರ್ಥನೆಯು. ಆಗ ಪೂಜ್ಯಪಾದರು ಈ ಐಕ್ಯ ಸ್ಥಲದಲ್ಲಿ ಬರುವ ಒಂಭತ್ತು ವಿಧಗಳಾದ ಅವಾಂತರಸ್ಥಲಗಳನ್ನು ಇಲ್ಲಿ ಬೋಧಿಸಿದ್ದಾರೆ. ಅವುಗಳ ಸ್ವರೂಪವನ್ನೇ ಇಲ್ಲಿ ಕ್ರಮವಾಗಿ ವಿವರಿಸಲಾಗುವುದು.

೯೩) ಸ್ವೀಕೃತಪ್ರಸಾದಿಸ್ಥಲ :

ಈ ಪೂರ್ವದಲ್ಲಿ ಹೇಳಿದ ವಾಚ್ಯಾರ್ಥ–ಲಕ್ಷ್ಯಾರ್ಥಗಳೆರಡನ್ನೂ ಬಿಟ್ಟು ನಿರಂಕುಶನಾಗಿ ಜ್ಞಾನರೂಪ ಪ್ರಸಾದವನ್ನು ಸ್ವೀಕರಿಸಿದ ಶಿವಯೋಗಿಯೇ ಸ್ವೀಕೃತ ಪ್ರಸಾದಿಯೆಂಬುದಾಗಿ ಕರೆಯಲ್ಪಡುತ್ತಾನೆ. ಪೂರ್ಣಜ್ಞಾನರೂಪವಾದ ಪ್ರಸಾದವನ್ನು ಪಡೆದ ಶಿವಯೋಗಿಯು ಪ್ರಮಾತೃ–ಪ್ರಮಾಣಾದಿ ತ್ರಿಪುಟಿ ವ್ಯವಹಾರಕ್ಕೆ ಕಾರಣೀಭೂತವಾಗಿರುವ ಚಿಚ್ಛಕ್ತಿಯ ಸಾಕ್ಷಾತ್ಕಾರವನ್ನು ಪಡೆದವನಾಗಿ ಸ್ವಸ್ವರೂಪಾನುಸಂಧಾನದಲ್ಲಿ ಸ್ಥಿರವಾಗಿರುತ್ತಾನೆ. ಶಿವಾದ್ವೈತ ಜ್ಞಾನಪ್ರಸಾದದ ಮಹಿಮೆಯಿಂದ ಲಿಂಗಾಂಗಗಳ ಭೇದಭಾವವನ್ನು ದೂರಮಾಡಿಕೊಂಡು ನಿರ್ಮಲವಾದ ಜ್ಞಾಪ್ರಕಾಶವನ್ನು ಅಪರೋಕ್ಷವಾಗಿ ಅನುಭವಿಸುತ್ತಿರುವ ಈ ಶಿವಯೋಗಿಗೆ ಪಾಶ–ಪಂಚಕಗಳ ಬಂಧನವು ಅದೆಂದೂ ಉಂಟಾಗಲಾರದು.

ಅಗ್ನಿಯಲ್ಲಿ ಹಾಕಿದ ಕಟ್ಟಿಗೆಗಳು ಅಗ್ನಿರೂಪಗಳೇ ಆಗುವಂತೆ ಶಿವನಲ್ಲಿ ಇರಿಸಲ್ಪಟ್ಟ ಈ ಚರಾಚರಾತ್ಮಕವಾದ ಜಗತ್ತೂ ಸಹ ಶಿವಸ್ವರೂಪವಾಗಿಯೇ ತಿಳಿಯಲ್ಪಡುತ್ತದೆ. ಶಿವನ ಸಾಕ್ಷಾತ್ಕಾರವಾಗಲು ಈ ಭೂತಭೌತಿಕ ಸೃಷ್ಟಿಯೆಲ್ಲವೂ ಶಿವರೂಪವೇ ಆಗುವುದರಿಂದ ಪೃಥಿವ್ಯಾದಿಗಳು ಪುನಃ ಭಿನ್ನರೂಪವಾಗಿ ತೋರಲಾರವು. ತನ್ನ ಹೃದಯದ ಅಷ್ಟದಲಕಮಲದ ಮಧ್ಯದಲ್ಲಿ ಯಾವಾಗಲೂ ಪ್ರಕಾಶಿಸುತ್ತಿರುವ ಚಿದ್ರೂಪವಾದ ಮಹಾಲಿಂಗದಲ್ಲಿ ಶಿವಾದಿ ಭೂಮ್ಯಂತಗಳಾದ ಮೂವತ್ತಾರು ತತ್ತ್ವಗಳ ಲಯಚಿಂತನೆಯನ್ನು ಮಾಡುತ್ತಿರುವ ಶಿವಯೋಗಿಯು ಈ ಜಗತ್ತಿನಲ್ಲಿ ಸದಾ ನಿರ್ಲಿಪ್ತನಾಗಿರುತ್ತಾನೆ. ತನ್ನ ಆತ್ಮವೆಂಬ ಚಿಜ್ಯೋತಿಯಲ್ಲಿ ಅಂತರ್ಮುಖನಾದ ಈ ಶಿವಯೋಗಿಯು ಸರ್ವವಿಷಯಗಳ ಆಹುತಿಯನ್ನು ಕೂಡುವವನಾಗಿ ಸದಾ ಸಂತುಷ್ಟನಾಗಿರುತ್ತಾನೆ. ಸಚ್ಚಿದಾನಂದ ಸ್ವರೂಪವಾದ ಶಿವನೆಂಬ ಜಲಧಿಯಲ್ಲಿ ಸರ್ವ ವಿಷಯರೂಪ ಪದಾರ್ಥಗಳನ್ನರ್ಪಿಸಿ ಅವುಗಳನ್ನು ಪ್ರಸಾದವಾಗಿಸಿಕೊಂಡು ಸೇವಿಸುತ್ತಿರುತ್ತಾನೆ. ಅಂತೆಯೇ ಇವನಿಗೆ ಸ್ವೀಕೃತಪ್ರಸಾದಿಯೆಂಬುದಾಗಿ ಕರೆಯಲಾಗಿದೆ. (ಸಿ.ಶಿ.. ೨೦. ೬–೧೩)

೯೪) ಶಿಷ್ಟೋದನಸ್ಥಲ :

ಈ ಜಗತ್ತಿನಲ್ಲಿಯ ಎಲ್ಲ ಜೀವಿಗಳಿಗೆ ಅವರವರಿಗೆ ಅನುಕೂಲವಾಗಿರುವ ತನು, ಕರಣ, ಭುವನ ಮತ್ತು ಭೋಗಗಳ ರೂಪದಲ್ಲಿ ಮಾಯೆಯೇ ರೂಪದಳೆದಿರುತ್ತದೆ. ಇಂತಹ ಈ ಮಾಯೆಯು ಕೊನೆಗೆ ಚಿನ್ಮಯಲಿಂಗದಲ್ಲಿ ವಿಲಯಗೊಳ್ಳುವುದು. ಅಂತಹ ಈ ಮಾಯೆಯು ಸ್ವೀಕೃತಪ್ರಸಾದಿಗೆ ಶಿಷ್ಟೋದನ ರೂಪದಲ್ಲಿ ಉಳಿದಿರುವುದರಿಂದ ಇದಕ್ಕೆ ಶಿಷ್ಟೋದನವೆಂದು ಕರೆಯಲಾಗಿದೆ. ಅಂದರೆ ಶಿವಾದ್ವೈತ ಜ್ಞಾನದಿಂದ ಅವಿದ್ಯೆಯು ದೂರವಾಗಲು ಈ ಅವಿದ್ಯೆಯ ಲೇಶವು ಅರ್ಥಾತ್ ಕಿಂಚಿದಂಶವು ಉಳಿದುಕೊಂಡಿರುತ್ತದೆ. ಅದರಿಂದಲೇ ಜೀವನ್ಮುಕ್ತನಾದ ಶಿವಯೋಗಿಯ ದೇಹಾದಿ ವ್ಯವಹಾರಗಳು ನಡೆಯುತ್ತಿರುತ್ತವೆ. ಹೀಗೆ ಜ್ಞಾನೋತ್ತರದಲ್ಲಿ ನಡೆಯುವ ವ್ಯವಹಾರಗಳಿಗೆ ಕಾರಣೀಭೂತವಾದ ಅವಿದ್ಯಾಲೇಶಕ್ಕೆ ಇಲ್ಲಿ ಶಿಷ್ಟೋದನವೆಂದು ಕರೆಯಲಾಗಿದೆ. ಅಂದರೆ ಜೀವನ್ಮುಕ್ತನಿಗೆ ಅವಿದ್ಯೆಯು ದೂರವಾಗಿದ್ದರೂ ಅದರ ಒಂದಂಶವು ಉಳಿದುಕೊಂಡು ಅದರಿಂದಲೇ ಕೆಲಕಾಲ ಪರ್ಯಂತರ ವ್ಯವಹಾರವು ನಡೆಯುತ್ತದೆ ಎಂಬುದಾಗಿ ತಿಳಿದುಕೊಳ್ಳಬೇಕು.

ಅಖಂಡ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮ ಸ್ಥಿತಿಯನ್ನು ಪ್ರಾಪ್ತಿ ಮಾಡಕೊಂಡ ಜೀವನ್ಮುಕ್ತನಾದ ಆ ಧೀರ ಪುರುಷನಿಗೆ ಈ ಅವಿದ್ಯಾಲೇಶವು

ಕಿಂಕರವಾಗಿರುತ್ತದೆ. ಅಂದರೆ ಅವನ ಮೇಲೆ ಅದಾವ ದುಷ್ಪ್ರಭಾವವನ್ನು ಬೀರುವುದಿಲ್ಲ. ವಿಶ್ವವನ್ನೇ ಸಂಮ್ಮೋಹನಗೊಳಿಸುವ ಅಂತರಶಕ್ತಿಯುತವಾದ ಈ ಮಾಯೆಯು ಶಿವಾದ್ವೈತಜ್ಞಾನವನ್ನು ಪಡೆದ ಶಿವಯೋಗಿಗಳ ಎದುರಿನಲ್ಲಿ ಅದೆಂದೂ ನಿಲ್ಲುವುದಿಲ್ಲ. ಚಿದ್ರೂಪ ಜ್ಯೋತಿರ್ಲಿಂಗದಲ್ಲಿ ನಿಮಗ್ನವಾದ ಮನಸ್ಸುಳ್ಳ ಶಿವಯೋಗಿಗಳಿಗೆ ಅವರಿಂದ ಅನುಭವಿಸಲ್ಪಡುವ ಶಬ್ದಾದಿವಿಷಯಗಳು ತಮ್ಮಿಂದ ತಾವೇ ಆತ್ಮದಲ್ಲಿ ಲಯವಾಗುತ್ತವೆ. ಸೂರ್ಯನು ತನ್ನೆಲ್ಲ ಕಿರಣಗಳನ್ನು ತನ್ನಲ್ಲಡಗಿಸಿಕೊಂಡು ಕೊನೆಗೆ ತಾನು ಅಸ್ತಂಗತನಾಗುವಂತೆ ಈ ಶಿವಯೋಗಿಯೂ ಸಹ ಎಲ್ಲ ಪದಾರ್ಥಗಳನ್ನು ಸ್ವಸ್ವರೂಪವಾಗಿ ಉಪಭೋಗಿಸುತ್ತ ಕೊನೆಗೆ ಪರಮಶಾಂತಿಯನ್ನು ಹೊಂದುವನು. (ಸಿ.ಶಿ., ೨೦. ೧೪–೨೦)

೯೫. ಚರಾಚರಲಯಸ್ಥಲ :

ಶಿವನೊಂದಿಗೆ ಸಾಮರಸ್ಯವನ್ನು ಹೊಂದಿದ ಆ ಶಿವಯೋಗಿಯು ಚರಾಚರ ಪ್ರಪಂಚವೆಲ್ಲವನ್ನು ಶಿವರೂಪವಾಗಿ ಚಿಂತಿಸುತ್ತಿರುವುದರಿಂದ ಈ ಚರಾಚರ ಪ್ರಪಂಚವೆಲ್ಲವೂ ಅವನಲ್ಲಿಯೇ ವಿಲಯಗೊಳ್ಳುವುದು. ಹೀಗೆ ಚರಾಚರ ಪ್ರಪಂಚದ ಲಯ ಚಿಂತನೆಯನ್ನು ಮಾಡುವ ಸ್ಥಲವೇ ಚರಾಚರಲಯಸ್ಥಲವು. ಶಿವನ ಅನಾದಿಯಾದ ಈ ಮಾಯೆಯೇ ಜಗದ ಪ್ರತೀತಿಗೆ ಮೂಲಕಾರಣ ವಾಗಿರುತ್ತದೆ. ಅಂತಹ ಆ ಮಾಯಾಶಕ್ತಿಯೇ ಇಲ್ಲವಾಗಿ ಹೋದಾಗ ಅದರ ಕಾರ್ಯರೂಪವಾದ ಚರಾಚರ ಪ್ರಪಂಚದ ದರ್ಶನವು ಅದು ಹೇಗೆ ತಾನೇ ಉಂಟಾದೀತು? ಅಂದರೆ ಅವಿದ್ಯೆಯನ್ನು ಇಲ್ಲದಾಗಿಸಿಕೊಂಡ ಈ ಶಿವಯೋಗಿಗೆ ಪ್ರಪಂಚದ ದರ್ಶನವಾಗುವುದಿಲ್ಲವೆಂಬ ಭಾವವು. ಆಕಾಶದಲ್ಲಿ ಉತ್ಪನ್ನಗಳಾದ ಮೇಘಗಳು ಕೊನೆಗೆ ಆಕಾಶದಲ್ಲಿಯೇ ಲಯಗೊಳ್ಳುವಂತೆ ಆತ್ಮದಲ್ಲಿ ಉತ್ಪನ್ನವಾಗಿ ತೋರುವ ಶಬ್ದಾದಿ ವಿಷಯಗಳು ಕೊನೆಗೆ ಅಲ್ಲಿಯೇ ಲಯಗೊಳ್ಳುವವು. ಸ್ವಪ್ನದ ಪದಾರ್ಥಗಳು ಎಚ್ಚರದೊಡನೆ ವಿಲಯವಾಗಿ ಹೋಗುವಂತೆ ಆತ್ಮಜ್ಞಾನವಾದೊಡನೆ ಸಾಂಸಾರಿಕ ವಸ್ತುಗಳೆಲ್ಲವೂ ಇಲ್ಲವಾಗುವವು.

ಜಾಗ್ರತಾದಿ ಮೂರು ಅವಸ್ಥೆಗಳನ್ನು ಮೀರಿ ನಿಂತು ಖೇಚರಿಮುದ್ರೆಯ ಸಾಧನೆಯಿಂದ ತುರೀಯ ಅವಸ್ಥೆಯನ್ನು ಹೊಂದಿರುವ ಈ ಶಿವಯೋಗಿಗೆ ಪ್ರಮಾತೃ–ಪ್ರಮಾಣಾದಿ ತ್ರಿಪುಟಿ ವ್ಯವಹಾರವು ಇರುವುದಿಲ್ಲ. ಹೀಗೆ ಇನ್ನೂ ಮುಂದೆ ಇರುವ ವಾಙ್ಮನಸ್ಸುಗಳಿಗೆಲ್ಲ ಅಗೋಚರವಾಗಿರುವ ತುರ್ಯಾತೀತ ಪದವನ್ನು ಪ್ರವೇಶಿಸಿದ ಯೋಗಿಯು ಪುನಃ ಪ್ರಪಂಚವನ್ನು ನೋಡಲಾರನು. ಒಮ್ಮೆ ಸಚ್ಚಿದಾನಂದರೂಪವಾದ ಶಿವದರ್ಶನವಾಯಿತೆಂದರೆ ಆ ಯೋಗಿವರೇಣ್ಯನು

ಬೇರಾವುದನ್ನೂ ನೋಡುವ, ಕೇಳುವ ಮತ್ತು ತಿಳಿದುಕೊಳ್ಳುವ ವಿಚಾರಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಶಿವಯೋಗಿಯು ಚರಾಚರವಾದ ಈ ಜಗತ್ತನ್ನು ಶಿವನಿಗೆ ಭಿನ್ನವೆಂಬುದಾಗಿ ಭಾವಿಸದಿರುವುದರಿಂದ ಅರ್ಥಾತ್ ಚರಾಚರವೆಲ್ಲವನ್ನೂ ಶಿವನಲ್ಲಿಯೇ ಲಯ-ಚಿಂತನೆಯನ್ನು ಮಾಡುವುದರಿಂದ ಇವನಿಗೆ ಚರಾಚರ ಲಯಸ್ಥಲಿ ಎಂಬುದಾಗಿ ಕರೆಯಲಾಗುತ್ತದೆ. (ಸಿ.ಶಿ., ೨೦. ೨೧-೨೮)

೯೬) ಭಾಂಡಸ್ಥಲ :

ಅನಂತಕೋಟಿ ಬ್ರಹ್ಮಾಂಡಗಳ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ಕಾರಣೀಭೂತವಾದ ಪರಾಬಿಂದು ಅರ್ಥಾತ್ ಪರಾಶಕ್ತಿಗೇನೇ ಇಲ್ಲಿ ಭಾಂಡವೆಂದು ಕರೆಯಲಾಗಿದೆ. ಆ ಭಾಂಡದ ಸ್ವರೂಪವನ್ನು ತಿಳಿಸುವ ಸ್ಥಲವೇ ಭಾಂಡಸ್ಥಲವು. ಶಿವನ ವಿಮರ್ಶರೂಪವಾದ ಶಕ್ತಿಯು ಷಡಧ್ವಗಳ ಉತ್ಪತ್ತಿಗೆ ಕಾರಣವಾಗಿರುತ್ತದೆ. ಸಕಲ ಜಗತ್ತಿನ ತೋರುವಿಕೆಗೆ ಈ ವಿಮರ್ಶಶಕ್ತಿಯೇ ಕಾರಣಭೂತವಾಗಿರುತ್ತದೆ. ಇದುವೇ ಎಲ್ಲ ಜೀವಿಗಳ ತನು, ಕರಣ, ಭುವನ ಮತ್ತು ಭೋಗ ರೂಪವಾಗಿ ಪ್ರಕಾಶಿಸುತ್ತಿರುತ್ತದೆ. ವಿಮರ್ಶಶಕ್ತಿಯ ಬಗ್ಗೆ ಈ ವಿಧವಾಗಿ ಚಿಂತಿಸುವುದೇ ಭಾಂಡಸ್ಥಲವು. ಈ ಜಗತ್ತಿನ ಉತ್ಪತ್ತಿ-ವಿಲಯಗಳಿಗೆ ಕಾರಣೀಭೂತವಾದುದೂ, ಆತ್ಮ ತತ್ತ್ವವನ್ನು ಚಿದ್ರೂಪವಾಗಿ ಪ್ರಕಾಶಿಸುವಂಥದೂ ಮತ್ತು ಸ್ವತಃ ಸಚ್ಚಿದಾನಂದ ಸ್ವರೂಪಿಣಿಯಾದ ಶಕ್ತಿಯೇ ವಿಮರ್ಶಶಕ್ತಿಯೆಂಬುದಾಗಿ ಕರೆಯಲ್ಪಡುತ್ತದೆ. ಈ ವಿಮರ್ಶಶಕ್ತಿಯಿಂದ ಯುಕ್ತನಾಗಿರುವುದರಿಂದಲೇ ಶಿವನು ಸರ್ವಜ್ಞನೂ, ಸರ್ವಕರ್ತನೂ ಮತ್ತು ಸರ್ವಸಾಕ್ಷಿಯೂ ಎನಿಸಿಕೊಂಡು ಪರಿಪೂರ್ಣ ವಿಮರ್ಶವಾನ್ ಎಂಬುದಾಗಿ ಕರೆಯಲ್ಪಡುತ್ತಾನೆ. ಪರಶಿವನ ಈ ವಿಮರ್ಶಶಕ್ತಿಗೆ ಶಿವಾದ್ವೈತ ಜ್ಞಾನಿಗಳು 'ಪರಾ ಅಹಂತಾ' ಎಂಬುದಾಗಿ ಕರೆಯುತ್ತಾರೆ. ಮಾಯಾಪಾಶದಿಂದ ಮುಕ್ತನಾದ ಶಿವಯೋಗಿಯು ಶಕ್ತಿತತ್ತ್ವವನ್ನೇ ಮೊದಲುಗೊಂಡು ಪೃಥ್ವಿತತ್ತ್ವಪರ್ಯಂತರವಾದ ಸರ್ವತತ್ತ್ವಗಳನ್ನು ವಿಮರ್ಶಶಕ್ತಿಯೆಂಬ ಭಾಂಡದೊಳಗೆ ಅರ್ಥಾತ್ ಪಾತ್ರದೊಳಗೆ ಇರಿಸಿ ತಾನು ಅಂತರ್ಮುಖನಾಗಿ ಸ್ವಸ್ವರೂಪದಲ್ಲಿ ಸ್ಥಿರಗೊಳ್ಳುತ್ತಾನೆ. ಶಿವಯೋಗಿಯ ಈ ಸ್ಥಿತಿಗೆ ಭಾಂಡಸ್ಥಿತಿಯೆಂದು ಕರೆಯುತ್ತಾರೆ. ಅದನ್ನು ತಿಳಿಯಪಡಿಸುವ ಸ್ಥಲವೇ ಭಾಂಡಸ್ಥಲವು (ಸಿ.ಶಿ., ೨೦. ೨೯-೩೪).

೯೭) ಭಾಜನಸ್ಥಲ :

ಸಮಸ್ತ ಭುವನ ಬ್ರಹ್ಮಾಂಡಗಳ ಉತ್ಪತ್ತ್ಯಾದಿಗಳಿಗೆ ಕಾರಣೀಭೂತವಾದ ವಿಮರ್ಶಶಕ್ತಿಯು ಯಾವ ಪರಶಿವಬ್ರಹ್ಮದಲ್ಲಿ ಪ್ರಕಾಶಿಸುತ್ತಿರುತ್ತದೆಯೋ ಈ

ಪರಶಿವಬ್ರಹ್ಮಕ್ಕೇನೇ ಭಾಜನವೆಂದು ಕರೆಯುತ್ತಾರೆ. ಅಂದರೆ ವಿಮರ್ಶಶಕ್ತಿಗೆ ಅಧಿಷ್ಠಾನವಾದ ಪರಶಿವನೇ 'ಭಾಜನ' ಎಂಬುದಾಗಿ ತಿಳಿದುಕೊಳ್ಳಬೇಕು. ವಿಶ್ವ ವಸ್ತುಗಳನ್ನು ಪ್ರಕಾಶಿಸುವ ಚಂದ್ರಿಕೆಯು ಚಂದ್ರನಲ್ಲಿ ಸ್ಥಿರವಾಗಿರುವಂತೆ ವಿಮರ್ಶರೂಪವಾದ ಈ ಶಕ್ತಿಯೂ ಸಹ ಪರಶಿವಬ್ರಹ್ಮದಲ್ಲಿ ಸ್ಥಿರವಾಗಿರುತ್ತದೆ. 'ಅಕಾರಕ್ಕೆ ಶಿವನೆಂತಲೂ' 'ಹ'ಕಾರಕ್ಕೆ ಶಕ್ತಿಯೆಂತಲೂ ಕರೆಯುತ್ತಾರೆ. 'ಅಹಂ' ಎನ್ನುವ ಇದೊಂದೇ ಪದದಲ್ಲಿ ಶಿವ-ಶಕ್ತಿಯರೀರ್ವರೂ ವಾಸಮಾಡುವುದರಿಂದ ಈ 'ಅಹಂ' ಪದಕ್ಕೆ ಪರಬ್ರಹ್ಮವೇ ವಾಚ್ಯವಾಗಿರುತ್ತದೆ. ಶಿವಶಕ್ತಿರೂಪವಾದ ಪರಾಅಹಂತೆಯುನ್ನು ಪಡೆದ ಶಿವಯೋಗಿಯು ಬ್ರಹ್ಮಸ್ವರೂಪನಾಗಿ ವಿಶ್ವಾತ್ಮರೂಪದಲ್ಲಿ ಪ್ರಕಾಶಿಸುತ್ತಿರುತ್ತಾನೆ. ವಟವೃಕ್ಷದ ಬೀಜದಲ್ಲಿ ಈ ವೃಕ್ಷದ ಶಾಖಾದಿ ಸರ್ವ ಅವಯವಗಳೆಲ್ಲ ಅಡಗಿಕೊಂಡಿರುವಂತೆ ಪರಶಿವಬ್ರಹ್ಮದ ಹೃದಯದಲ್ಲಿ ಈ ವಿಶ್ವವೆಲ್ಲವೂ ಅಡಗಿಕೊಂಡಿರುತ್ತದೆ. (ಸಿ.ಶಿ., ೨೦. ೩೫-೪೧).

೯೮) ಅಂಗಾಲೇಪಸ್ಥಲ :

ಪರಶಿವಬ್ರಹ್ಮಸ್ಥಿತಿಯನ್ನು ಪ್ರಾಪ್ತಮಾಡಿಕೊಂಡಿರುವ ಶಿವಯೋಗಿಯ ಸ್ವರೂಪವು ದೇಶಕಾಲಾದಿ ಪರಿಚ್ಛೇದ ರಹಿತವಾಗಿದ್ದು ಸಚ್ಚಿದಾನಂದ ಸ್ವರೂಪವೂ ಮತ್ತು ವ್ಯಾಪಕವೂ ಆಗಿರುತ್ತದೆ. ಇಂತಹ ಸ್ವರೂಪ ಸಂಪನ್ನನಾದ ಶಿವಯೋಗಿಯು ಶರೀರಕ್ಕೆ ಸಂಬಂಧಪಟ್ಟ ಕರ್ಮಗಳಿಂದ ಅಲಿಪ್ತನಾಗಿರುತ್ತಾನೆ. ಅಂತಹ ಅಲಿಪ್ತಸ್ಥಿತಿಗೇನೇ ಅಂಗಾಲೇಪವೆಂದು ಕರೆಯುತ್ತಾರೆ. ಇದನ್ನು ತಿಳಿಸುವ ಸ್ಥಲವೇ ಅಂಗಾಲೇಪಸ್ಥಲವು. ಆಕಾಶವು ತನ್ನಲ್ಲಿ ಸಂಚರಿಸುತ್ತಿರುವ ಹೊಗೆ ಮತ್ತು ಮೋಡ ಮೊದಲಾದವುಗಳಿಂದ ಸದಾ ನಿರ್ಲಿಪ್ತವಾಗಿರುವಂತೆ ಮಹಾಬುದ್ಧಿಶಾಲಿಯಾದ ಜ್ಞಾನಸ್ವರೂಪಿಯಾದ ಶಿವಯೋಗಿಯು ಸಮಸ್ತ ಪ್ರಪಂಚದ ತುಂಬೆಲ್ಲ ವ್ಯಾಪಕನಾಗಿದ್ದರೂ ಸಂಸಾರದ ಪಾಪಕರ್ಮಗಳಿಂದ ಅಲಿಪ್ತನಾಗಿರುತ್ತಾನೆ. ಪ್ರಾಕೃತ ಕರ್ಮ ಪ್ರವೃತ್ತಿಯಿಂದ ದೂರನಾಗಿರುವ ಮತ್ತು ಕೇವಲ ಚಿತ್ತಸುಖ ಸ್ವರೂಪನಾದ ಶಿವಯೋಗಿಗೆ ಯಾವುದೇ ಕರ್ಮದ ವಿಧಿಯಾಗಲಿ, ನಿಷೇಧವಾಗಲಿ ಇರುವುದಿಲ್ಲ. ಇದೂ ಇಲ್ಲದೆ ಇವನ ಮನಸ್ಸಿನಲ್ಲಿ ಇದನ್ನು ಮಾಡಬೇಕು, ಇದನ್ನು ಮಾಡಬಾರದು ಎಂಬ ವಿಕಲ್ಪ ವೃತ್ತಿಯಾಗಲಿ ಅಥವಾ ಯಾವುದೇ ಪ್ರಕಾರದ ವಾಸನೆಯಾಗಲಿ ಇರುವುದಿಲ್ಲ. ಅನೇಕ ಘಟಗಳ ಉಪಾಧಿಯಿಂದ ಆಕಾಶವು ಭಿನ್ನಭಿನ್ನವಾಗಿ ತೋರಿದರೂ ವಸ್ತುತಃ ಅದು ಭಿನ್ನವಾಗಿರದಂತೆ ಉಪಾಧಿಮೂಲಕ ನಾನಾರೂಪ ವಾಗಿ ತೋರುತ್ತಿರುವ ಪರಬ್ರಹ್ಮವೂ ಸಹ ವಾಸ್ತವಿಕವಾಗಿ ಭಿನ್ನಭಿನ್ನವಾಗಿರುವುದಿಲ್ಲ. ಆಕಾಶವು ಅವಿನಾಶಿಯೂ, ಉಪಮಾತೀತವೂ ಆಗಿರುವಂತೆ ಪರಬ್ರಹ್ಮವೂ ಸಹ

ವಾಸ್ತವಿಕವಾಗಿ ಭಿನ್ನಭಿನ್ನವಾಗಿರುವುದಿಲ್ಲ. ಆಕಾಶವು ಅವಿನಾಶಿಯೂ, ಉಪಮಾತೀತವೂ ಆಗಿರುವಂತೆ ಪರಬ್ರಹ್ಮವೂ ಸಹ ಅವಿನಾಶಿಯೂ, ಉಪಮಾತೀತವೂ ಆಗಿರುತ್ತದೆ. ಆದರೂ ಆಕಾಶದಲ್ಲಿ ಜ್ಞಾನಶಕ್ತಿಯಿಲ್ಲದಿರುವುದರಿಂದ ಅದು ಜಡವಾಗಿ ತೋರುತ್ತದೆ. ಆದರೆ ಈ ಪರಶಿವಬ್ರಹ್ಮವು ದೃಕ್–ಕ್ರಿಯಾರೂಪ ಕಲಾಶಕ್ತಿಯಿಂದ ಯುಕ್ತವಾಗಿವುದರಿಂದ ಪರಶಿವಬ್ರಹ್ಮ ರೂಪವಾದ ಈ ಮಹಾಲಿಂಗವು ಚಿದಾಕಾಶವೆಂಬುದಾಗಿ ಕರೆಯಲ್ಪಡುತ್ತದೆ.

ಜೀವನ್ಮುಕ್ತನಾದ ಶಿವಯೋಗಿಯು ಚಿದಾಕಾಶಸ್ವರೂಪನಾಗಿರುವುದರಿಂದ ಅವನು ಕರ್ಮಬಂಧನದಿಂದ ಮುಕ್ತನಾಗಿರುತ್ತಾನೆ. ಆದ್ದರಿಂದ ಅವನಲ್ಲಿ ಪುಣ್ಯಾಧಿಕ್ಯದಿಂದ ಪ್ರಾಪ್ತವಾಗುವ ದೇವಭಾವವಾಗಲಿ, ಪುಣ್ಯ–ಪಾಪಗಳ ಮಿಶ್ರಣದಿಂದುಂಟಾಗುವ ಮನುಷ್ಯಭಾವವಾಗಲಿ, ಕೇವಲ ಪಾಪಕರ್ಮಗಳಿಂದುಂಟಾಗುವ ತಿರ್ಯಗ್‌ಭಾವವಾಗಲಿ ಅವನಲ್ಲಿ ಉಂಟಾಗುವುದಿಲ್ಲ. ಆದರೆ ಅವನು ಸರ್ವದರಲ್ಲಿಯೂ ಅನುಸ್ಯೂತನಾಗಿದ್ದರೂ ಸರ್ವರಿಂದ ಅಲಿಪ್ತನಾಗಿರುತ್ತಾನೆ (ಸಿ.ಶಿ., ೨೦. ೪೨–೪೭)

೯೯) ಸ್ವಪರಾಜ್ಞಸ್ಥಲ :

ತಾನು ತನಗಿಂತ ಭಿನ್ನನಲ್ಲ, ತನಗೆ ಭಿನ್ನರಾದವರು ಬೇರಾರೂ ಇರುವುದಿಲ್ಲ ಎಂಬುದಾಗಿ ತಿಳಿಸುವ ಸ್ಥಲವೇ ಸ್ವಪರಾಜ್ಞಸ್ಥಲವು. ಅಪ್ರಮೇಯುವೂ ಜ್ಞಾನರೂಪವೂ ಸ್ವಗತ, ಸಜಾತೀಯ, ವಿಜಾತೀಯ ಭೇದರಹಿತವೂ ಆದ ಪರಶಿವಬ್ರಹ್ಮದೊಂದಿಗೆ ಐಕ್ಯಸ್ಥಿತಿಯನ್ನು ಪಡೆದ ಶಿವಯೋಗಿಗೆ ತನ್ನ ಬಗ್ಗೆಯಾಗಲೀ, ಅನ್ಯರ ಬಗ್ಗೆಯಾಗಲಿ ತಿಳಿದುಕೊಳ್ಳುವುದೇನೂ ಇರುವುದಿಲ್ಲ. ಎಲ್ಲಿ ನಾನು ನೀನೆಂಬ ಭೇದಭ್ರಾಂತಿ ಇಲ್ಲದಾಗಿ ಹೋಗುವುದೋ ಅಲ್ಲಿ ಸಂಯೋಗವಾಗಲಿ, ವಿಯೋಗವಾಗಲಿ ಅಥವಾ ಜ್ಞೇಯ–ಜ್ಞಾತೃಗಳ ಕಲ್ಪನೆಗಳಾಗಲಿ ಇವಾವೂ ಇರುವುದಿಲ್ಲ. ಇಂತಹ ಐಕ್ಯಸ್ಥಿತಿಯನ್ನು ಪಡೆದ ಶಿವಯೋಗಿಗೆ ಬಂಧ–ಮೋಕ್ಷಗಳಾಗಲಿ, ಸುಖ–ದುಃಖಗಳಾಗಲಿ, ಉತ್ಕೃಷ್ಟ–ಹೀನತ್ವ ಭಾವನೆಗಳಾಗಲಿ, ಹಿಂದು–ಮುಂದೆಂಬ ತಿಳುವಳಿಕೆಗಳಾಗಲಿ, ದೂರ–ಸಮೀಪಗಳೆಂಬ ಭಾವನೆಗಳಾಗಲಿ ಅವನಿಗಿರುವುದಿಲ್ಲ. ದೇಶ–ಕಾಲಾದಿಗಳಿಂದ ಪರಿಚ್ಛಿನ್ನವಾಗದಿರುವ ತೇಜೋರೂಪವಾಗಿರುವ ತನ್ನ ಸ್ವ–ಸ್ವರೂಪ ಸ್ಥಿತಿಯಲ್ಲಿರುವ ಶಿವಯೋಗಿಗೆ ಸ್ವ ಮತ್ತು ಪರವೆಂಬ ಭಾವನೆಯು ಇಲ್ಲದಿರುವುದರಿಂದ ಈ ಸ್ಥಲಕ್ಕೆ 'ಸ್ವಪರಾಜ್ಞ ಸ್ಥಲ'ವೆಂದು ಕರೆಯುತ್ತಾರೆ. (ಸಿ.ಶಿ., ೨೦. ೪೮–೫೪)

೧೦೦) ಭಾವಾಭಾವಲಯಸ್ಥಲ :

ಶರೀರವೇ ಆತ್ಮವೆನ್ನುವ ಪರಿಚ್ಛಿನ್ನ ಭಾವನೆಯಾಗಲಿ ಅಥವಾ ಶರೀರವು ಆತ್ಮವಲ್ಲವೆಂಬ ಅಭಾವವಾಗಲಿ ಇವೆರಡೂ ಇಲ್ಲದಿರುವ ಸ್ಥಿತಿಯನ್ನು ತಿಳಿಸುವ ಸ್ಥಲವೇ ಭಾವಾಭಾವಲಯಸ್ಥಲವು. ನಾನು ನೀನೆಂಬ ಭಾವವಿಲ್ಲದಿರುವ ಶೂನ್ಯಸದೃಶವಾದ ಚಿದಾಕಾಶದಲ್ಲಿ ಸಮರಸನಾಗಿರುವ ಸಿದ್ಧ ಶಿವಯೋಗಿಗೆ ಭಾವಾಭಾವಗಳು ಅದು ಹೇಗೆ ತಾನೇ ಉತ್ಪನ್ನವಾದಾವು? ಅಂದರೆ ಅವನಲ್ಲಿ ಈ ತೆರನಾದ ಮನೋವೃತ್ತಿಗಳು ಉದಿಸುವುದಿಲ್ಲ ಎಂಬ ಭಾವವು. ನಿರ್ಲಿಪ್ತನೂ, ಜೀವನ್ಮುಕ್ತನೂ ಆದ ಈ ಶಿವಯೋಗಿಗೆ ಸುಖ ದುಃಖಾದಿಗಳ ಸಂಬಂಧದ ಭಾವವಾಗಲಿ ಅಥವಾ ಸಂಬಂಧವಿಲ್ಲವೆಂಬ ಅಭಾವವಾಗಲಿ ಅವನಲ್ಲಿರುವುದಿಲ್ಲ. ಅಂತೆಯೇ ಅವನಿಗೆ ಭಾವಾಭಾವಲಯಸ್ಥಲವೆಂದು ಕರೆಯುತ್ತಾರೆ. ಭಾವಾಭಾವಗಳೆರಡನ್ನೂ ತ್ಯಾಗಮಾಡಿದ ಆ ಶಿವಯೋಗಿಗೆ ಸದ್ರೂಪವಾದ ಶಿವಲಿಂಗದೊಂದಿಗೆ ಸಾಮರಸ್ಯ ಸ್ಥಿತಿಯನ್ನು ಪಡೆದುಕೊಂಡ ಆ ಶಿವಯೋಗಿಗೆ ಬಾಹ್ಯಪ್ರಪಂಚದಲ್ಲಿ ಅದೆಲ್ಲಿಯೂ ಭಾವಾಭಾವಗಳ ಪ್ರತೀತಿಯು ಆಗುವುದಿಲ್ಲ. ಶಿವಯೋಗಿಯ ಇಂಥ ಈ ಅವಸ್ಥೆಗೇನೇ ಭಾವಾಭಾವಲಯಸ್ಥಲವೆಂದು ಕರೆಯುತ್ತಾರೆ. (ಸಿ.ಶಿ., ೨೦. ೫೫–೫೯)

೧೦೧) ಜ್ಞಾನಶೂನ್ಯಸ್ಥಲ :

ಪರಸ್ಪರ ಸಾಪೇಕ್ಷವಾಗಿರುವ ಅಸ್ತಿ, ನಾಸ್ತಿರೂಪ ವಿವೇಚನಾತ್ಮಕವಾದ ಭೇದ ಜ್ಞಾನವು ಪರಶಿವಬ್ರಹ್ಮ ಸ್ವರೂಪನಾದ ಶಿವಯೋಗಿಗೆ ಇರುವುದಿಲ್ಲ. ಇಂತಹ ಭೇದಜ್ಞಾನ ಶೂನ್ಯತೆಯನ್ನು ಪ್ರತಿಪಾದಿಸುವ ಸ್ಥಲವೇ ಜ್ಞಾನಶೂನ್ಯಸ್ಥಲವು. ಜಲದಲ್ಲಿ ಜಲ, ಅಗ್ನಿಯಲ್ಲಿ ಅಗ್ನಿ, ಸಮರ್ಪಿತವಾಗಲು ಅವೆರಡೂ ಸಮರಸಗೊಂಡು ಒಂದೇ ಆಗಿ ಉಳಿಯುವಂತೆ ಪರಶಿವಬ್ರಹ್ಮನಲ್ಲಿ ಲೀನನಾದ ಶಿವಯೋಗಿಯು ಆ ಪರಶಿವಬ್ರಹ್ಮಕ್ಕಿಂತಲೂ ಭಿನ್ನವಾಗಿ ತೋರುವುದಿಲ್ಲ. ಭೇದಶಂಕಾ ವಿವರ್ಜಿತವಾದ ಸಕಲಚರಾಚರ ಪ್ರಪಂಚರೂಪವಾದ ಈ ಪರಮತತ್ತ್ವದಲ್ಲಿ ಜ್ಞಾತೃ–ಜ್ಞೇಯಾದಿ ವ್ಯವಹಾರದಿಂದುತ್ಪನ್ನವಾಗುವ ಭೇದಜ್ಞಾನವು ಅದು ಹೇಗೆ ತಾನೇ ಉಳಿಯಬಲ್ಲದು? ಹೇಯವಾದ ಆಕಾರವಿಲ್ಲದ ನಿತ್ಯ ಸೀಮಾತೀತವಾದ ಈ ಪರಶಿವಬ್ರಹ್ಮವು ಆಕಾಶದಂತೆ ನಿರ್ವಿಕಲ್ಪರೂಪವಾಗಿರುತ್ತದೆ. ಇಂತಹ ಕೇವಲ ಚಿದ್ರೂಪವಾದ ಈ ಪರಮತತ್ತ್ವದಲ್ಲಿ ಭೂತ, ಗ್ರಹ, ತಾರಕ, ದೇವ, ಮನುಷ್ಯ ಮತ್ತು ತಿರ್ಯಕ್ ಮುಂತಾದ ಪ್ರಾಣಿಗಳಾವುವೂ ಇರುವುದಿಲ್ಲ. ಅಂದಾಗ ಅದರಲ್ಲಿ ಭೇದಜ್ಞಾನವು ಅದೆಲ್ಲಿಂದ ಉತ್ಪನ್ನವಾದೀತು? ಅಂದರೆ ಈ ಪರಮತತ್ತ್ವದಲ್ಲಿ ನಾನು ನೀನೆಂಬ ಭೇದಜ್ಞಾನವೇ ಉಂಟಾಗುವುದಿಲ್ಲ. ತಿಳಿದುಕೊಳ್ಳುವ

ವಸ್ತುವೊಂದಿದ್ದಾಗಲೇ ಅಲ್ಲಿ ಜ್ಞಾನದ ಅಸ್ತಿತ್ವವಿರುತ್ತದೆ. ಜ್ಞೇಯವಿರದೇಯಿದ್ದಾಗ ಜ್ಞಾನವು ಶೂನ್ಯರೂಪವನ್ನು ತಾಳುತ್ತದೆ. ಆದ್ದರಿಂದ ಆ ಜ್ಞಾನವು ಜ್ಞಾತೃ–ಜ್ಞೇಯಾದಿ ತ್ರಿಪುಟಿಮಯ ಪ್ರಪಂಚ ಶೂನ್ಯವಾಗಿ, ಇಚ್ಛಾ–ಜ್ಞಾನಾದಿ ಗುಣಶೂನ್ಯವಾಗಿ, ಆದಿ–ಮಧ್ಯಾಂತಶೂನ್ಯವಾಗಿ, ಸರ್ವ ದಿಕ್ಕಾಲಶೂನ್ಯವಾದುದಾಗಿ ತೋರುತ್ತದೆ. ಅಂತೆಯೇ ಈ ಜ್ಞಾನಕ್ಕೆ ಶೂನ್ಯಜ್ಞಾನವೆಂದು ಕರೆಯುತ್ತಾರೆ. ಸಚ್ಚಿದಾನಂದ ಸ್ವರೂಪವೂ, ಅದ್ವಿತೀಯವೂ, ಮಹಾಕಾಶರೂಪವೂ ಆದ ಈ ಪರಶಿವಬ್ರಹ್ಮವು ಶೂನ್ಯಸದೃಶವಾಗಿ ಪ್ರತೀತವಾಗುತ್ತದೆ.

ಜ್ಞಾನ, ಇಚ್ಛಾ ಮತ್ತು ಸಂಕಲ್ಪ ರಹಿತವಾದ ಚತುರ್ವಿಧ ಪುರುಷಾರ್ಥದ ಅಪೇಕ್ಷೆಯಿಲ್ಲದ, ಅದ್ವಿತೀಯವಾದ, ಚಿತ್‌ಸ್ವರೂಪವಾದ ಜ್ಯೋತಿರ್ಲಿಂಗದಲ್ಲಿ ಐಕ್ಯವನ್ನು ಹೊಂದಿದ ಶಿವಯೋಗಿಗೆ ಅನ್ಯವಸ್ತುವಿನ ಜ್ಞಾನವು ಅದು ಹೇಗೆ ತಾನೇ ಉಂಟಾದೀತು? ಅಂದರೆ ಅವನಲ್ಲಿ ಸ್ವಸ್ವರೂಪ ಜ್ಞಾನದ ಹೊರತಾಗಿ ಬೇರಾವ ಜ್ಞಾನವೂ ಇರುವುದಿಲ್ಲ ಎಂಬುದಾಗಿ ತಿಳಿದುಕೊಳ್ಳಬೇಕು. ಇಂತಹ ಈ ಶಿವಯೋಗಿಗೆ ಕಾರ್ಯ–ಕಾರಣಗಳ ದೆಶೆಯಾಗಲಿ, ಶೇಷ–ಶೇಷೀಭಾವವಾಗಲಿ ಇರುವುದಿಲ್ಲ. ಆದರೆ ಅವನು ಪರಮುಕ್ತಿಯನ್ನು ಪಡೆದವನಾಗಿರುತ್ತಾನೆ. ಇಂತಹ ಈ ಶಿವಯೋಗಿಯ ಸ್ವಸ್ವರೂಪ ಜ್ಞಾನಕ್ಕಿಂತಲೂ ವ್ಯತಿರಿಕ್ತವಾದ ಬೇರೊಂದು ಜ್ಞಾನವಿಲ್ಲದೆಂಬುದಾಗಿ ತಿಳಿಸುವ ಸ್ಥಲವೇ ಜ್ಞಾನಶೂನ್ಯಸ್ಥಲವು. (ಸಿ.ಶಿ., ೨೦. ೬೦–೭೦)

ಹೀಗೆ ಈ ಲಿಂಗಷಟ್‌ಸ್ಥಲದಲ್ಲಿ ಕೊನೆಯದಾದ ಐಕ್ಯಸ್ಥಲದಲ್ಲಿ ಸ್ವೀಕೃತ ಪ್ರಸಾದಿಸ್ಥಲವನ್ನೇ ಮೊದಲುಗೊಂಡು ಜ್ಞಾನಶೂನ್ಯಸ್ಥಲದವರೆಗಿನ ಒಂಬತ್ತು ಅವಾಂತರಸ್ಥಲಗಳು ಪ್ರತಿಪಾದಿಸಲ್ಪಟ್ಟಿವೆ. ಈ ಎಲ್ಲ ಸ್ಥಲಗಳಿಂದ ಕೂಡಿದ ಮುಖ್ಯವಾದ ಸ್ಥಲವೇ ಐಕ್ಯಸ್ಥಲವು. ಈ ಪ್ರಕಾರವಾಗಿ ಅಂಗ ಹಾಗೂ ಲಿಂಗಷಟ್‌ಸ್ಥಲಗಳಲ್ಲಿ ಒಟ್ಟು ಪಿಂಡಸ್ಥಲದಿಂದ ಮೊದಲು ಮಾಡಿಕೊಂಡು ಜ್ಞಾನಶೂನ್ಯಸ್ಥಲದವರೆಗೆ ಒಂದು ನೂರು ಒಂದು ಸ್ಥಲಗಳ ಸೂಕ್ಷ್ಮಾತಿಸೂಕ್ಷ್ಮವಾದ ವಿಶ್ಲೇಷಣೆಯನ್ನು ಪೂಜ್ಯಪಾದರು ಮಾಡಿರುವುದನ್ನು ನೋಡಲಾಗಿದೆ. ವಾಚಕರು ಈ ಸ್ಥಲಗಳ ಸೂಕ್ಷ್ಮ ವ್ಯತ್ಯಾಸಗಳ ಬಗ್ಗೆ ಸ್ವಲ್ಪ ಲಕ್ಷ್ಯವಹಿಸಿದರೆ ಮನುಷ್ಯನ ಮಾನಸಿಕ ವಿಕಾಸದ ಹೆಜ್ಜೆಗಳು ತೋರಿಬರುವವು.

ಇಲ್ಲಿರುವ ಈ ನೂರೊಂದು ಸ್ಥಲಗಳು ಸಾಮಾನ್ಯ ಮನುಷ್ಯನನ್ನು ಮಹಾಮಾನವನನ್ನಾಗಿ ಮಾಡಿ ಕೊನೆಗೆ ಮಹಾದೇವನಲ್ಲಿ ಅರ್ಥಾತ್ ಮಹಾಲಿಂಗದಲ್ಲಿ ಸಮರಸಗೊಳಿಸುತ್ತವೆ. ಅಂತೆಯೇ ಪ್ರತಿಯೊಬ್ಬ ಮನುಷ್ಯರು

ಇದನ್ನಭ್ಯಸಿಸಿ ಅನುಭವಿಸಿ ಸುಖಿಗಳಾಗಬೇಕೆಂಬುವುದೇ ಈ ಗ್ರಂಥಕರ್ತರಾದ ಶ್ರೀ ಶಿವಯೋಗಿ ಶಿವಾಚಾರ್ಯರ ಹೃದ್ಗತಾಭಿಪ್ರಾಯವಾಗಿದೆ.

ಮಹರ್ಷಿಯಾದ ಅಗಸ್ತ್ಯನು ಶ್ರೀಜಗದ್ಗುರು ರೇಣುಕ ಭಗವತ್ಪಾದರಿಂದ ಒಂದು ನೂರಾ ಒಂದು ಸ್ಥಲಗಳ ಈ ಸೂಕ್ಷ್ಮ ವಿಚಾರವನ್ನರಿತು ಸಂಶಯಮುಕ್ತನಾಗಿ ತನ್ನನ್ನು ಕೃತಾರ್ಥನನ್ನಾಗಿ ಭಾವಿಸುತ್ತಾನೆ.

ಶ್ರೀ ಜಗದ್ಗುರು ರೇಣುಕರಿಂದ ತ್ರಿಕೋಟಿಲಿಂಗ ಸ್ಥಾಪನೆ

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಅಗಸ್ತ್ಯಮಹರ್ಷಿಗೆ ಶಿವಾದ್ವೈತ ಸಿದ್ಧಾಂತವನ್ನು ಅರ್ಥಾತ್ ವೀರಶೈವಸಿದ್ಧಾಂತವನ್ನು ಉಪದೇಶ ಮಾಡಿದ ಬಳಿಕ ಆಕಾಶಮಾರ್ಗವಾಗಿ ಶ್ರೀಲಂಕೆಗೆ ಆಗಮಿಸುತ್ತಾರೆ. ಆಗ ಲಂಕಾಧಿಪತಿಯಾಗಿದ್ದ ವಿಭೀಷಣನು ಅವರನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ಸಿಂಹಾಸನದ ಮೇಲೆ ಕುಳ್ಳಿರಿಸಿ ಪಾದಪೂಜಾದಿಗಳನ್ನುಗೈದು ತನ್ನ ಅಣ್ಣನಾದ ರಾವಣನ ಸಂಕಲ್ಪವನ್ನು ಪೂರ್ಣಗೊಳಿಸಬೇಕಾಗಿ ಬೇಡಿಕೊಂಡನು. ಆಗ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ತ್ರಿಕೋಟಿ ಆಚಾರ್ಯರ ರೂಪವನ್ನು ಧರಿಸಿ ಒಂದೇ ಮುಹೂರ್ತದಲ್ಲಿ ಮೂರು ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನ ಸಂಕಲ್ಪವನ್ನು ಪೂರ್ಣಗೊಳಿಸುವುದರ ಜೊತೆಗೆ ವಿಭೀಷಣನಿಗೂ ಪರಮ ಸಂತೋಷವನ್ನುಂಟು ಮಾಡಿದರು.

ಶ್ರೀ ಜಗದ್ಗುರು ರೇಣುಕರ ಲಿಂಗಾಂತರ್ಧಾನ

ಪೂರ್ವದಲ್ಲಿ ಹೇಳಿದಂತೆ ಲಂಕೆಯಲ್ಲಿ ತ್ರಿಕೋಟಿ ಶಿವಲಿಂಗಸ್ಥಾಪನೆಯ ಲೀಲೆಯನ್ನೆಸಗಿದ ಪೂಜ್ಯಪಾದರು ಲೋಕದಲ್ಲಿ ಸರ್ವತ್ರ ಸಂಚರಿಸಿ ಕೆಲವರನ್ನು ನೋಡಿ ಮತ್ತೆ ಕೆಲವರನ್ನು ಮುಟ್ಟಿ ಉದ್ಧಾರಗೈಯ್ಯುತ್ತ ಪ್ರಚ್ಛನ್ನವಾಗಿ ಮತ್ತು ಪ್ರಕಟವಾಗಿ ಅನೇಕ ಲೀಲೆಗಳನ್ನು ಮಾಡಿ ಕೊನೆಗೆ ತಾವು ಪ್ರಕಟಗೊಂಡ ಕೊಲ್ಲಿಪಾಕಿಯ ಸೋಮೇಶ್ವರ ದೇವಸ್ಥಾನಕ್ಕೆ ಬಂದು ಅಲ್ಲಿ ಶಿವನನ್ನುದ್ದೇಶಿಸಿ ತಾವು ಬಂದ ಪ್ರಯೋಜನವನ್ನು ಪೂರ್ಣಗೊಳಿಸಿದುದಾಗಿ ಪ್ರಾರ್ಥಿಸಿಕೊಂಡ ಮೇಲೆ ಶಿವನ ಆದೇಶದಂತೆ ಪುನಃ ಅವರು ಆ ಲಿಂಗದಲ್ಲಿಯೇ ಅಂತರ್ಧಾನರಾಗಿ ಶಿವಸಾನ್ನಿಧ್ಯವನ್ನು ಸೇರಿಕೊಂಡರು. ಹೀಗೆ ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಭೂಲೋಕದಲ್ಲಿ ಮಹರ್ಷಿಯಾದ ಅಗಸ್ತ್ಯನಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸಿ ಭೂಮಂಡಲದಲ್ಲಿ ಈ ಸಿದ್ಧಾಂತ ಪ್ರತಿಷ್ಠಾಪನೆಯನ್ನು ಮಾಡಿದರೆಂಬುದು ಈ ಗ್ರಂಥದಲ್ಲಿ ಬರುವ ವೃತ್ತಾಂತದಿಂದ ತಿಳಿದುಬರುತ್ತದೆ.

ಇದೇ ಪ್ರಕಾರವಾಗಿ ಉಳಿದ ಆಚಾರ್ಯರೂ ಸಹ ಬೇರೆ ಬೇರೆ ಮಹರ್ಷಿಗಳಿಗೆ ಅಂದರೆ ದಾರುಕರು ದಧೀಚಿಗೆ, ಘಂಟಾಕರ್ಣರು ವ್ಯಾಸರಿಗೆ, ಧೇನುಕರ್ಣರು ಸಾನಂದರಿಗೆ ಹಾಗು ವಿಶ್ವಕರ್ಣರು ದೂರ್ವಾಸರಿಗೆ ಶಿವಾದ್ವೈತಸಿದ್ಧಾಂತವನ್ನು ಬೋಧಿಸಿದ ವಿಷಯವು ಶಾಸ್ತ್ರ ಪ್ರಸಿದ್ಧವಾಗಿದೆ. ಹೀಗೆ ಜಗದ್ಗುರು ಪಂಚಾಚಾರ್ಯರು ವೀರಶೈವ ಮಹಾಮತವನ್ನು ಸಂಸ್ಥಾಪಿಸಿದರೆಂಬುದಾಗಿ ಸರ್ವರೂ ತಿಳಿದುಕೊಳ್ಳಬೇಕು.

ಉಪಸಂಹಾರ

"ಶ್ರೀ ಸಿದ್ಧಾಂತಶಿಖಾಮಣಿ ಪರಾಮರ್ಶೆ" ಎಂಬ ಈ ಗ್ರಂಥದಲ್ಲಿ ಶ್ರೀ ಸಿದ್ಧಾಂತಶಿಖಾಮಣಿಯನ್ನು ಅನೇಕ ದೃಷ್ಟಿಯಿಂದ ಅವಲೋಕಿಸಲಾಗಿದೆ. ಇದರ ಮೊದಲನೇ ಅಧ್ಯಾಯದಲ್ಲಿ ಈ ಗ್ರಂಥ ನಾಮ ರಹಸ್ಯ, ಶಿವಯೋಗಿ ಶಿವಾಚಾರ್ಯರ ದೇಶ–ಕಾಲ, ಶ್ರೀ ಅಗಸ್ತ್ಯ ಮಹರ್ಷಿಯ ವೃತ್ತಾಂತ, ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಲಿಂಗಾವತಾರ ಮತ್ತು ಅವರು ಬೋಧಿಸಿದ ಸಮನ್ವಯಾತ್ಮಕವಾದ ವೀರಶೈವಸಿದ್ಧಾಂತದ ಬಗ್ಗೆ ಮತ್ತು ವೀರಶೈವ ಪ್ರಭೇದಗಳ ಬಗ್ಗೆ ತಕ್ಕಮಟ್ಟಿಗೆ ವಿಮರ್ಶೆಯನ್ನು ಮಾಡಲಾಗಿದೆ.

ಇನ್ನು ಇದರ ದ್ವಿತೀಯ ಅಧ್ಯಾಯದಲ್ಲಿ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಪ್ರತಿಪಾದಿತವಾಗಿರುವ ಆವರಣ ವಿಜ್ಞಾನದ ಬಗ್ಗೆ ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ಶ್ರೀ ಗುರುವಿನ ಸ್ವರೂಪ, ಅವನಿಂದ ಕೊಡಲ್ಪಡುವ ದೀಕ್ಷೆಯ ಪ್ರಕಾರಗಳು ಮತ್ತು ದೀಕ್ಷೆಗೆ ಅತ್ಯಾವಶ್ಯಕವಾಗಿರುವ ಶಕ್ತಿಪಾತದ ಲಕ್ಷಣದ ಬಗ್ಗೆ ಪರಾಮರ್ಶಿಸಲಾಗಿದೆ. ಇದೂ ಅಲ್ಲದೆ ಎರಡನೆಯ ಆವರಣವಾದ ಲಿಂಗಸ್ವರೂಪದ ಬಗ್ಗೆ ನಿರೂಪಿಸುವಾಗ ಲಿಂಗತ್ರಯಗಳ ಪ್ರಕಾರ ಇಷ್ಟಲಿಂಗ ಶಬ್ದಾರ್ಥ ವಿಚಾರ, ಲಿಂಗ ನಿರ್ಮಾಣದ ದ್ರವ್ಯ ಇತ್ಯಾದಿಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿದೆ. ಇದೂ ಅಲ್ಲದೆ ವೀರಶೈವ ಆಚಾರ್ಯರು ಈ ಇಷ್ಟಲಿಂಗಧಾರಣೆಯ ಮೂಲಕ ಸಾಮಾಜಿಕ ಸಮಾನತೆಯನ್ನು ಸಾರಿ ಸಮಾಜದಲ್ಲಿ ಭೇದವನ್ನು ಹುಟ್ಟಿಸುವ ಜಾತಿ ನಿರ್ಮೂಲನೆಯ ಬಗ್ಗೆ ಚೆನ್ನಾಗಿ ಪರಾಮರ್ಶಿಸಲಾಗಿದೆ. ಇದೇ ಪ್ರಕಾರ ಸ್ತ್ರೀ–ಪುರುಷರೆಂಬ ಭೇದವಿಲ್ಲದೆ ಸರ್ವರಿಗೂ ಲಿಂಗಪೂಜೆಯಲ್ಲಿ ಸಮಾನಾಧಿಕಾರವನ್ನು ಕೊಟ್ಟಿರುವ ವೀರಶೈವ ಆಚಾರ್ಯರ ಉದಾತ್ತ ವಿಚಾರ ಮತ್ತು ಈ ಆಚಾರ್ಯ ಮಾರ್ಗವನ್ನು ಅನುಸರಿಸಿದ ಬಸವಾದಿ ಶರಣರ ವಚನ ಸಾಹಿತ್ಯವನ್ನೂ ಸಹ ಇಲ್ಲಿ ಕೂಲಂಕಷವಾಗಿ ಪರಾಮರ್ಶಿಸಲಾಗಿದೆ. ಇದಾದ ನಂತರ ಪ್ರಾಣಲಿಂಗ–ಭಾವಲಿಂಗಗಳ ಸ್ವರೂಪವನ್ನು

ಸಂಕ್ಷಿಪ್ತವಾಗಿ ತಿಳಿಯಪಡಿಸಿ ಜಂಗಮನ ಅವಸ್ಥಾತ್ರಯದ ಬಗ್ಗೆ, ಪಾದೋದಕ, ಪ್ರಸಾದ ಸೇವನೆಯ ಬಗ್ಗೆ ಮತ್ತು ವಿಭೂತಿ–ರುದ್ರಾಕ್ಷಿಗಳ ಧಾರಣೆಯ ಬಗ್ಗೆ ಅದರಂತೆ ಮಂತ್ರ ಜಪದ ಬಗ್ಗೆ ತಕ್ಕಮಟ್ಟಿಗೆ ವಿಮರ್ಶಿಸಲಾಗಿದೆ. ಈ ಅಧ್ಯಾಯದ ಕೊನೆಯ ಭಾಗದಲ್ಲಿ ಆವರಣಗಳ ಅಂತರಂಗ ಹಾಗೂ ಬಹಿರಂಗ ರೂಪವಾದ ಎರಡು ಸ್ವರೂಪಗಳ ಬಗ್ಗೆ ಸಂಕ್ಷಿಪ್ತವಾಗಿ ಪರಾಮರ್ಶಿಸಲಾಗಿದೆ.

ಇನ್ನು ಈ ಗ್ರಂಥದ ಮೂರನೆಯ ಅಧ್ಯಾಯದಲ್ಲಿ ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿತವಾಗಿರುವ ಪಂಚ ಆಚಾರಗಳನ್ನು ಮುಖ್ಯ ವಿಚಾರಣೀಯ ವಿಷಯವನ್ನಾಗಿ ಇಟ್ಟುಕೊಂಡು ಚಂದ್ರಜ್ಞಾನಾಗಮ, ಸೂಕ್ಷ್ಮಾಗಮ ಮತ್ತು ಕಾರಣಾಗಮಗಳ ಆಧಾರದ ಮೇಲಿಂದ ಪ್ರತಿಯೊಂದು ಆಚಾರಗಳನ್ನು ವಿಶ್ಲೇಷಿಸಲಾಗಿದೆ. ಪಂಚಾಚಾರದಲ್ಲಿ ಬರುವ ಸದಾಚಾರದ ಸಾಮಾಜಿಕ ಮೌಲ್ಯವನ್ನು ಕುರಿತು ಮತ್ತು ಗಣಾಚಾರದಲ್ಲಿ ಬರುವ ಅರವತ್ನಾಲ್ಕು ಶೀಲಗಳನ್ನು ಕುರಿತು ಬಹು ವಿಸ್ತಾರವಾಗಿ ಚರ್ಚಿಸಲಾಗಿದೆ. ಈ ಪಂಚಾಚಾರಗಳು ಮನುಷ್ಯನ ಶರೀರ, ವಾಣಿ ಮತ್ತು ಮನಸ್ಸುಗಳೆಂಬ ತ್ರಿಕರಣಗಳನ್ನು ಹೇಗೆ ಶುದ್ಧಗೊಳಿಸುತ್ತವೆ? ಎಂಬುದರ ವಿಮರ್ಶೆಯನ್ನು ಮಾಡುವುದರ ಜೊತೆಗೆ ಇಂದಿನ ದಿನಮಾನಗಳಲ್ಲಿ ಈ ಆಚಾರಗಳು ಎಷ್ಟು ಸಮಯೋಚಿತ ಎಂಬ ಬಗ್ಗೆಯೂ ತಕ್ಕಮಟ್ಟಿಗೆ ಪರಾಮರ್ಶಿಸಲಾಗಿದೆ.

ಈ ಗ್ರಂಥದ ನಾಲ್ಕನೆಯ ಅಧ್ಯಾಯದಲ್ಲಿ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಬರುವ ದಾರ್ಶನಿಕ ವಿಚಾರಧಾರೆಯನ್ನು ಕುರಿತು ಚರ್ಚಿಸಲಾಗಿದೆ. ಈ ಪ್ರಸಂಗದಲ್ಲಿ ಪರಶಿವನ ಸ್ವರೂಪ, ಆ ಪರಶಿವನಲ್ಲಿ ಅವಿನಾಭಾವ ಸಂಬಂಧಿನಿಯಾಗಿರುವ ಶಕ್ತಿಯ ಸ್ವರೂಪ ಮತ್ತು ಶಕ್ತಿಯ ಭೇದಗಳನ್ನು ಕುರಿತು ಚರ್ಚಿಸಲಾಗಿದೆ. ಇದೇ ಪ್ರಸಂಗದಲ್ಲಿ ಸೃಷ್ಟಿಯು ಶಿವನ ಲೀಲೆಯು, ಶಿವನು ಪಕ್ಷಪಾತಿಯೇ? ಎಂಬ ವಿಷಯದ ಮೇಲೆಯೂ ಚೆನ್ನಾಗಿ ಪರಾಮರ್ಶಿಸಲಾಗಿದೆ. ಇದೇ ಅಧ್ಯಾಯದಲ್ಲಿ ಜೀವಾತ್ಮನ ಸ್ವರೂಪ, ಅವನ ಅಣು ಪರಿಮಾಣತ್ವ, ಜೀವಾತ್ಮ–ಪರಮಾತ್ಮರಲ್ಲಿರುವ ಭೇದಾಭೇದ ಹಾಗೂ ಜೀವನ ಆತ್ಮ–ಅಂತರಾತ್ಮ ಮತ್ತು ಪರಮಾತ್ಮವೆಂಬ ಮೂರು ವಿಧ ಅವಸ್ಥೆಗಳ ಬಗ್ಗೆಯೂ ವಿವೇಚಿಸಲಾಗಿದೆ. ಇದೇ ಪ್ರಕಾರವಾಗಿ ಇಲ್ಲಿ ಸೃಷ್ಟಿ ಮೀಮಾಂಸೆಯನ್ನೂ ಸಹ ಮಾಡಲಾಗಿದ್ದು ಸೃಷ್ಟಿಯಲ್ಲಿ ಬರುವ ಮೂವತ್ತಾರು ತತ್ತ್ವಗಳ ಬಗ್ಗೆ ಸಂಕ್ಷಿಪ್ತವಾದ ವಿವರಣೆಯನ್ನು ಕೊಡಲಾಗಿದೆ. ಇದರಂತೆ ಜೀವಾತ್ಮನಿಗಿರುವ ಬಂಧ–ಮೋಕ್ಷಗಳ ಬಗ್ಗೆಯೂ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಸಂದರ್ಭದಲ್ಲಿ ಜೀವಾತ್ಮನ ಬಂಧನಕ್ಕೆ

ಕಾರಣಗಳಾಗಿರುವ ಆಣವ, ಮಾಯಾ ಮತ್ತು ಕಾರ್ಮಿಕಗಳೆಂಬ ಮಲತ್ರಯಗಳ ಸ್ವರೂಪವನ್ನು ವಿಮರ್ಶಿಸುವುದರ ಜೊತೆಗೆ ಈ ಮಲಬಂಧನದ ನಿವೃತ್ತಿಯು ದೀಕ್ಷಾಸಂಸ್ಕಾರದಿಂದ ಹೇಗೆ ಆಗುತ್ತದೆಯೆಂಬುದನ್ನು ವಿಚಾರಿಸಲಾಗಿದೆ. ಇದೂ ಅಲ್ಲದೆ ಮೋಕ್ಷಪ್ರಾಪ್ತಿಗೆ ಕೇವಲ ಶಿವಾದ್ವೈತ ಜ್ಞಾನವಾಗಲಿ ಅಥವಾ ಕೇವಲ ಲಿಂಗಪೂಜಾರೂಪ ಕರ್ಮವಾಗಲಿ ಕಾರಣವಾಗಿರದೆ ಎರಡರ ಸಮಸಮುಚ್ಚಯವೇ ಕಾರಣ ಎಂಬುದನ್ನು ಸಶಾಸ್ತ್ರೀಯವಾಗಿ ಸಿದ್ಧಪಡಿಸಲಾಗಿದೆ. ಈ ಸಂದರ್ಭದಲ್ಲಿ ಜ್ಞಾನ–ಕರ್ಮಗಳ ಜೊತೆಗೆ ಶಿವಾನುಗ್ರಹವೂ ಸಹ ಮುಕ್ತಿಗೆ ಕಾರಣವೆಂಬುದನ್ನು ನಿರೂಪಿಸಿ ಶಿವನು ಕರ್ತುಂ–ಅಕರ್ತುಂ–ಅನ್ಯಥಾ ಕರ್ತುಂ ಸಮರ್ಥನೆಂಬುದನ್ನು ಸಾಧಿಸಲಾಗಿದೆ.

ಈ ಗ್ರಂಥದ ಐದನೆಯ ಅಧ್ಯಾಯದಲ್ಲಿ ಶ್ರೀ ಸಿದ್ಧಾಂತಶಿಖಾಮಣಿಯಲ್ಲಿ ಬರುವ ಏಕೋತ್ತರಶತಸ್ಥಲದ ಬಗ್ಗೆ ಅತೀ ಸಂಕ್ಷಿಪ್ತವಲ್ಲದ ಸಮಗ್ರ ಗ್ರಂಥದ ಸಾರವನ್ನೇ ಸಂಗ್ರಹಿಸಲಾಗಿದೆ. ಇಲ್ಲಿ ಬರುವ ನಾಲ್ವತ್ನಾಲ್ಕು ಅಂಗಸ್ಥಲಗಳ ಬಗ್ಗೆ ಹಾಗೂ ಐವತ್ತೇಳು ಲಿಂಗಸ್ಥಲಗಳ ಬಗ್ಗೆ ವಿವರಿಸುವಾಗ ಆ ಸ್ಥಲದಲ್ಲಿ ಬರುವ ಒಂದೂ ಶ್ಲೋಕಗಳೊಂದನ್ನೂ ಉದಾಹರಿಸದೆ ಆ ಸ್ಥಲದಲ್ಲಿ ಬರುವ ಒಂದೂ ಶ್ಲೋಕವನ್ನು ಬಿಡದೆ ಎಲ್ಲ ಶ್ಲೋಕಗಳ ಭಾವಾರ್ಥವನ್ನು ಸಂಗ್ರಹಿಸಿ ಸಂಸ್ಕೃತ ಬಾರದಿರುವ ಪ್ರತಿಯೊಬ್ಬ ಕನ್ನಡಿಗನಿಗೆ ಗ್ರಂಥಸ್ಥವಾದ ಸಮಸ್ತ ವಿಷಯವನ್ನು ತಿಳಿದುಕೊಳ್ಳಲು ಯೋಗ್ಯವಾಗುವಂತೆ ಸರಳವಾದ ಗದ್ಯದಲ್ಲಿ ಪ್ರತಿಯೊಂದು ಸ್ಥಲಗಳ ಸ್ವರೂಪವನ್ನು ಆಮೂಲಾಗ್ರವಾಗಿ ಪ್ರತಿಪಾದಿಸಲಾಗಿದೆ. ಈ ಅಧ್ಯಾಯದಲ್ಲಿ ಬರುವ ಅಂದಾಜು ಎಪ್ಪತ್ತು ಪುಟಗಳಲ್ಲಿ ಹದಿನಾಲ್ಕು ನೂರು ಶ್ಲೋಕಗಳ ಸಾರವನ್ನೇ ಸಂಗ್ರಹಿಸಲಾಗಿದೆ. ವಾಚಕರು ಇದೊಂದು ಅಧ್ಯಾಯವನ್ನು ಲಕ್ಷಪೂರ್ವಕವಾಗಿ ಅಭ್ಯಾಸ ಮಾಡಿದರೆ ತನ್ನ ಮಾನಸಿಕ ವಿಕಾಸವನ್ನು ಹೇಗೆ ಮಾಡಿಕೊಳ್ಳಬಹುದು? ಎಂಬ ವಿಚಾರವು ಪ್ರತಿಯೊಬ್ಬರಿಗೂ ಅವಶ್ಯವಾಗಿ ಸ್ಫುರಿಸುವುದು.

ಶ್ರೀ ಜಗದ್ಗುರು ರೇಣುಕ ಭಗವತ್ಪಾದರು ಮಹಾಮಹಿಮಾಶಾಲಿಯಾದ ಅಗಸ್ತ್ಯ ಮಹರ್ಷಿಯನ್ನು ನಿಮಿತ್ತ ಮಾಡಿಕೊಂಡು ಉಪದೇಶಿಸಿದ ಈ ಗ್ರಂಥದಲ್ಲಿಯ ಏಕೋತ್ತರಶತಸ್ಥಲಗಳು ಪ್ರತಿಯೊಬ್ಬ ಮಾನವನಿಗೆ ಮುಕ್ತಿಯ ಸೋಪಾನಗಳಾಗಿರುತ್ತವೆ. ಆದ್ದರಿಂದ ಶ್ರೀ ಸಿದ್ಧಾಂತಶಿಖಾಮಣಿಯನ್ನು ಕೇವಲ ವೀರಶೈವ ಧರ್ಮಗ್ರಂಥವೆಂದು ಕರೆಯದೇ ಮಾವನಧರ್ಮ ಗ್ರಂಥವೆಂದು ಕರೆದರೆ ಸೂಕ್ತವೆನಿಸುವುದೆಂಬುದು ನಮ್ಮ ಅಭಿಪ್ರಾಯವಾಗಿದೆ.

ಈ ಗ್ರಂಥ ರಚನಾಕಾರರಾದ ಶ್ರೀ ಶಿವಯೋಗಿ ಶಿವಾಚಾರ್ಯರು ಇಂದಿಗೆ ಹನ್ನೆರಡು ನೂರು ವರ್ಷಕ್ಕಿಂತಲೂ ಪೂರ್ವದಲ್ಲಿ ಇದ್ದರೆಂಬುದು ಅವರ ಐತಿಹ್ಯದಿಂದ ತಿಳಿದು ಬರುತ್ತದೆ. ಅಂದರೆ ಕರ್ನಾಟಕದಲ್ಲಿ ಎಂಟುನೂರು ವರ್ಷಗಳ ಹಿಂದೆ ಆಗಿ ಹೋದ ಬಸವಾದಿ ಶರಣರ ವಚನ ವಾಙ್ಮಯಕ್ಕಿಂತಲೂ ಈ ಗ್ರಂಥವು ನಾಲ್ಕು ನೂರು ವರ್ಷಗಳ ಹಿಂದೆಯೇ ರಚಿತವಾಗಿತ್ತೆಂಬುದು ಖಚಿತವಾದ ವಿಷಯವು. ಅಂತೆಯೇ ಶರಣರ ವಚನಗಳಲ್ಲಿ ಈ ಗ್ರಂಥಸ್ಥವಾದ ಸ್ಥಲಕಟ್ಟಿನ ವಿಚಾರಧಾರೆಯ ಅನುಕರಣೆಯು ಕಂಡುಬರುತ್ತದೆ.

ಶ್ರೀ ಶಿವಯೋಗಿ ಶಿವಾಚಾರ್ಯರು ನಿಗಮಾಗಮಗಳ ಪ್ರಕಾಂಡ ಪಂಡಿತರಾಗಿದ್ದರು. ಅಂತೆಯೇ ಈ ಗ್ರಂಥದಲ್ಲಿ ಸಂದರ್ಭಕ್ಕೆ ತಕ್ಕಂತೆ ವೈದಿಕ ಮಂತ್ರಗಳನ್ನೂ ಹಾಗೂ ಆಗಮ ಶ್ಲೋಕಗಳನ್ನೂ ಪ್ರಮಾಣ ರೂಪದಲ್ಲಿ ಉದಾಹರಿಸಿದ್ದನ್ನಿಲ್ಲಿ ಕಾಣಬಹುದು. ಒಟ್ಟಿನ ಮೇಲೆ ವೀರಶೈವ ಧರ್ಮದರ್ಶನವು ಮೂಲತಃ ಆಗಮಶಾಸ್ತ್ರವನ್ನು ಆಧಾರವಾಗಿಟ್ಟುಕೊಂಡು ವಿಕಾಸಗೊಂಡುದಾಗಿದೆ. ಇದರ ಜೊತೆಗೆ ವೈದಿಕ ಮಂತ್ರಗಳಲ್ಲಿಯೂ ಸಹ ವೀರಶೈವಸಿದ್ಧಾಂತದ ಕೆಲ ವಿಷಯಗಳು ಪ್ರತಿಪಾದಿಸಲ್ಪಟ್ಟಿದ್ದನ್ನು ನೋಡಬಹುದು. ಅಂತೆಯೇ ಶ್ರೀ ಶಿವಯೋಗಿ ಶಿವಾಚಾರ್ಯರು ಈ ಶ್ರೀ ಸಿದ್ಧಾಂತಶಿಖಾಮಣಿ ಗ್ರಂಥದಲ್ಲಿ ನಿಗಮಾಗಮಗಳನ್ನು ಆಧಾರವಾಗಿಟ್ಟುಗೊಂಡೇ ವೀರಶೈವ ಧರ್ಮೋಚಿತಗಳಾದ ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲಗಳ ಬಗ್ಗೆ ವಿವೇಚಿಸುತ್ತ ದಾರ್ಶನಿಕ ವಿಚಾರಧಾರೆಯನ್ನು ಸಹ ಈ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ಮೂಲತಃ ಈ ಗ್ರಂಥವು ನೂರೊಂದು ಸ್ಥಲಗಳ ವಿಶ್ಲೇಷಣೆಗಾಗಿಯೇ ಮೀಸಲಾಗಿರುವಂಥಾದ್ದು. ಇದೊಂದು ಶ್ರೀ ಶಿವಯೋಗಿ ಶಿವಾಚಾರ್ಯರ ಆತ್ಮಾನುಭೂತಿಯ ವ್ಯಕ್ತರೂಪವೆಂದೇ ಹೇಳಬಹುದು. ನೂರೊಂದು ಸ್ಥಲಗಳ ವಿಶ್ಲೇಷಣೆಯು ಮೊಟ್ಟಮೊದಲು ಕಂಡು ಬರುವುದು ಶ್ರೀ ಸಿದ್ಧಾಂತಶಿಖಾಮಣಿಯಲ್ಲಿಯೇ. ಇದಕ್ಕಿಂತಲೂ ಪೂರ್ವದ ಶಿವಾಗಮಗಳಲ್ಲಿ ಷಟ್‌ಸ್ಥಲಗಳ ವಿಚಾರ ಬಂದಿದೆಯೇ ವಿನಹಾ ಆ ಸ್ಥಳಗಳಲ್ಲಿ ಬರುವ ಅವಾಂತರಸ್ಥಲಗಳ ವಿಶ್ಲೇಷಣೆಯು ಅದೆಲ್ಲಿಯೂ ಕಾಣುವುದಿಲ್ಲ. ಆದ್ದರಿಂದಲೇ ಷಟ್‌ಸ್ಥಲಗಳನ್ನು ನೂರೊಂದು ಸ್ಥಲಗಳ ರೂಪದಲ್ಲಿ ವಿಶ್ಲೇಷಿಸಿದ ಶ್ರೇಯವು ಶ್ರೀ ಶಿವಯೋಗಿ ಶಿವಾಚಾರ್ಯರಿಗೇನೇ ಸಲ್ಲತಕ್ಕದ್ದಾಗಿದೆ. ಇವರ ತರುವಾಯ ಮರಿತೋಂಟದಾರ್ಯರು ಬರೆದ ಕೈವಲ್ಯಸಾರದಲ್ಲಿ ಹಾಗೂ ಗುಬ್ಬಿಯ ಮಲ್ಲಣಾರ್ಯರು ಬರೆದ ಗಣಭಾಷಿತರತ್ನಮಾಲೆಯಲ್ಲಿ ಹಾಗೂ ಇನ್ನೂ ಅನೇಕ ಇತ್ತೀಚಿನ ಕೃತಿಗಳಲ್ಲಿ ನೂರೊಂದು ಸ್ಥಲಗಳ ವಿವರಣೆಯನ್ನು ಕಾಣಬಹುದು. ಇದೆಲ್ಲವನ್ನು ಪರ್ಯಾಲೋಚಿಸಲಾಗಿ ಶ್ರೀ ಶಿವಯೋಗಿ

ಶಿವಾಚಾರ್ಯರೇ ನೂರೊಂದು ಸ್ಥಲಗಳ ಹರಿಕಾರನೆಂಬುದರಲ್ಲಿ ಯಾವ ಸಂಶಯವಿರುವುದಿಲ್ಲ.

ಸಂಸ್ಕೃತದಲ್ಲಿರುವ ಶ್ರೀ ಸಿದ್ಧಾಂತಶಿಖಾಮಣಿಯ ನಿಗೂಢ ತತ್ತ್ವಗಳನ್ನು ಪ್ರತಿಯೊಬ್ಬ ಕನ್ನಡಿಗರಿಗೆ ಸರಳವಾಗಿ ತಿಳಿಸುವ ಉದ್ದೇಶದಿಂದ ಈ "ಶ್ರೀ ಸಿದ್ಧಾಂತಶಿಖಾಮಣಿ ಪರಾಮರ್ಶೆ" ಎಂಬ ಗ್ರಂಥವನ್ನು ಅತಿ ಸಂಕ್ಷೇಪಗೊಳಿಸಿ ರಚಿಸಲಾಗಿದೆ. ಕಾರಣ ಪ್ರತಿಯೊಬ್ಬ ಕನ್ನಡಿಗನು ಈ ಪರಾಮರ್ಶೆಯನ್ನು ಅಭ್ಯಸಿಸಿ ಮೂಲ ಗ್ರಂಥವನ್ನು ಅಧ್ಯಯನಗೈಯುವ ಅಭಿರುಚಿಯುಳ್ಳವನಾಗಲೆಂಬುದೇ ನಮ್ಮ ಆಶಯವಾಗಿದೆ. ಇನ್ನು ಇದನ್ನೋದಿದ ಬಳಿಕ ಮತ್ತೆ ಮೂಲದ ಗೊಡವೆ ಏಕೆ? ಎಂಬುವವರು ಇದಿಷ್ಟರಿಂದಲೇ ಗ್ರಂಥದ ತತ್ತ್ವವನ್ನು ತಿಳಿದುಕೊಳ್ಳಲು ಸಮರ್ಥರಾಗುವರಲ್ಲದೆ ಸದ್ಗತಿಯನ್ನು ಸಹ ಪಡೆಯುವರು.

॥